ಹುಬ್ಬಳ್ಳಿ
ಗುರುವಾರ, 14 ಮೇ 2026
ಸಂಪುಟ 16, ಸಂಚಿಕೆ 50, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ಕೇರಳ ಮುಖ್ಯಮಂತ್ರಿ ಘೋಷಣೆ | ೦೭
ಚೀನಾಗೆ ಬಂದಿಳಿದ ಅಧ್ಯಕ್ಷ ಟ್ರಂಪ್ | ೦೭
ಏನಾಸಂ ಕರಡು: ಅಸ್ಸಾಂ ಸಂಪುಟ ಅಸ್ತು | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ರೇವತಿ

ದಿನದ ಮಾತು

ಬುದ್ಧಿಗೆ, ಹೃದಯಕ್ಕೆ ಸಮ್ಮತವಾಗದಿದ್ದ ಯಾವುದನ್ನೂ ಯಾರೂ ಅನುಸರಿಸಬೇಕಾಗಿಲ್ಲ.

▲ ಗಾಂಧೀಜಿ

ಸಂಕಷ್ಟದ ಕಾಲದಲ್ಲಿ ಇಷ್ಟೇ ಕೇಳೋದು, ದೇಶದ ಜತೆ ನಿಲ್ಲಿ

ಗುರುತರ

◆ಸೋಮಶೇಖರ ಸಿ.ಜಿ.

◆ಪುಟ ೬


ಶುದ್ಧ ಪ್ರೀತಿಗೆ ವಿರೋಧವಿಲ್ಲ, ಲವ್ ಜಿಹಾದ್ ಆತಂಕಕಾರಿ

◆**ಹೊಸದಿಲ್ಲಿ:** ಬೇರೆ ಧರ್ಮಗಳ ವ್ಯಕ್ತಿಗಳ ನಡುವೆ ನಡೆಯುವ 'ನಿಷ್ಕಳಂಕ ಪ್ರೀತಿ'ಗೆ ಯಾವುದೇ ವಿರೋಧವಿಲ್ಲ. ಆದರೆ ಹಿಂದು ಯುವತಿಯರನ್ನು ಗುರಿಯಾಗಿಸಿಕೊಂಡು ನಡೆಯುವ ಸಂಘಟಿತ ಸಂಚು ಅಥವಾ ಮೋಸದ ಪ್ರಯತ್ನಗಳು ಆತಂಕಕಾರಿ ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಪ್ರತಿಪಾದಿಸಿದ್ದಾರೆ.

ಪಿಟಿಐ ವಿಡಿಯೋಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಸಂಘದ ಅನೇಕ ಸ್ವಯಂಸೇವಕರು ಜಾತಿ, ಧರ್ಮ ಹಾಗೂ ರಾಷ್ಟ್ರೀಯತೆಯ ಗಡಿಗಳನ್ನು ಮೀರಿ ವಿವಾಹವಾಗಿರುವ ಉದಾಹರಣೆಗಳಿದ್ದು, ಸಂಘವು ಅದನ್ನು ಸಹಜ ಪ್ರಕ್ರಿಯೆಯಾಗಿ ಸ್ವೀಕರಿಸಿದೆ ಎಂದು ಹೇಳಿದರು.

ಅದು ಶುದ್ಧ ಪ್ರೀತಿಯಾಗಿದ್ದರೆ ಯಾವುದೇ ಪ್ರಶ್ನೆಯೇ ಇಲ್ಲ. ಆದರೆ ಅದು ಜಿಹಾದ್ ಆಗಿದ್ದರೆ ಪ್ರಶ್ನೆ ಉದ್ಭವಿಸುತ್ತದೆ ಎಂದು ಅವರು ತಿಳಿಸಿದರು. ಲವ್ ಜಿಹಾದ್ ಎಂಬ ಪದದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹೊಸಬಾಳೆ, ಈ ಪದವನ್ನು ಮೊದಲು ಕೆಲ ಹೈಕೋರ್ಟ್ ನ್ಯಾಯಮೂರ್ತಿಗಳು ಬಳಸಿದ್ದರು; ಅದು ಸಂಘದ ಕೊಡುಗೆ ಅಲ್ಲ ಎಂದು ಸ್ಪಷ್ಟಪಡಿಸಿದರು.

➡ಪುಟ ೪



ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಅಂತರಧರ್ಮ ವಿವಾಹಗಳನ್ನು ಸಂಘ ಸ್ವೀಕರಿಸಿದೆ

ಹಿಂದುಯುವತಿಯರನ್ನು ಗುರಿಯಾಗಿಸುವ ಪ್ರಯತ್ನ ಸಮಸ್ಯೆ

ರಾಷ್ಟ್ರದ ಭದ್ರತೆಗಾಗಿ ಹೆಚ್ಚು ಮಕ್ಕಳು ಮುಖ್ಯ

ಇದೇ ವೇಳೆ, ಹಿಂದುಗಳು ಹೆಚ್ಚು ಮಕ್ಕಳು ಹೊಂದಬೇಕು ಎಂಬ ಮೋಹನ್ ಭಾಗವತ್ ಅವರ ಹೇಳಿಕೆ ಕುರಿತು ಮಾತನಾಡಿದ ಹೊಸಬಾಳೆ ಅವರು, ಇದು ಕುಟುಂಬ ಮತ್ತು ರಾಷ್ಟ್ರದ ಭದ್ರತೆಗಾಗಿ ಅಗತ್ಯ ಎಂದು ಪ್ರತಿಪಾದಿಸಿದರು. ಜಪಾನ್ ಉದಾಹರಣೆ ನೀಡಿದ ಅವರು, ಆರ್ಥಿಕತೆ ಬೆಳೆಯುತ್ತಿದ್ದರೂ ದೇಶ ವೃದ್ಧರ ರಾಷ್ಟ್ರವಾದರೆ ಭವಿಷ್ಯದಲ್ಲಿ ಸಮಸ್ಯೆ ಎದುರಾಗುತ್ತದೆ. ಭಾರತವು ಯುವ ರಾಷ್ಟ್ರವಾಗಿಯೇ ಉಳಿಯಬೇಕು ಎಂದರು.

20 ಸಾವಿರ ಪ್ರಕರಣ

ಆದರೆ, ಲವ್ ಜಿಹಾದ್ ಎಂದು ಕರೆಯಲಾಗುತ್ತಿರುವ ಪ್ರಕರಣಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಹೇಳಿದ ಅವರು, ಪ್ರತಿ ತಿಂಗಳು ನ್ಯಾಯಾಲಯಗಳಲ್ಲಿ ಇಂತಹ ಪ್ರಕರಣಗಳು ಕೇಳಿಬರುತ್ತಿವೆ. ಅನೇಕ ಯುವತಿಯರು ಮರಳಿ ಬಂದು ತಮ್ಮ ದುಃಖದ ಕಥೆಗಳನ್ನು ಹಂಚಿಕೊಂಡಿದ್ದಾರೆ. ಸುಮಾರು 20 ಸಾವಿರ ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದರು. ಎಲ್ಲಾ ಪ್ರಕರಣಗಳೂ ಹಿಂದು ಯುವತಿಯರು ಮತ್ತು ಮುಸ್ಲಿಂ ಯುವಕರದ್ದೇ ಆಗಿದ್ದರೆ ಅದು ಕೇವಲ ಪ್ರೀತಿ ಅಲ್ಲ, ಅದರ ಹಿಂದೆ ಸಂಚಿನ ಪ್ರಶ್ನೆ ಉದ್ಭವಿಸುತ್ತದೆ ಎಂದರು.

ಪ್ರಧಾನಿ ಘೋಷಣೆ ಬಳಿಕ ಸಿಎಂಗಳು, ಸಚಿವರ ಕ್ರಮ

ಮಿತವ್ಯಯ ಅಲೆ

◆**ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧಸಂಕಷ್ಟ, ಜಾಗತಿಕ ಮಟ್ಟದಲ್ಲಿ ಏರಿಕೆಯಾಗುತ್ತಿರುವ ಕಚ್ಚಾತೈಲ ದರ ಹಾಗೂ ವಿದೇಶಿ ವಿನಿಮಯದ ಮೇಲಿನ ಒತ್ತಡದ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ದೇಶಕ್ಕೆ ಮಿತವ್ಯಯದ ಸಂದೇಶ ನೀಡಿದ್ದಾರೆ. ಆದರೆ ಕೇವಲ ಕರೆ ನೀಡಿ ನಿಲ್ಲದೇ, ಮೊದಲ ಹೆಜ್ಜೆಯನ್ನು ಸ್ವತಃ ತಾವೇ ಇಟ್ಟಿರುವುದು ಇದೀಗ ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ತಮ್ಮ ಭದ್ರತಾ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಪ್ರಧಾನಿ ಗಮನಾರ್ಹವಾಗಿ ಕಡಿತಗೊಳಿಸಿದ್ದು, ಸಾಧ್ಯವಾದಷ್ಟು ವಿದ್ಯುತ್ ವಾಹನ ಬಳಕೆಗೆ ಸೂಚನೆ ನೀಡಿದ್ದಾರೆ.

ಸಾಮಾನ್ಯವಾಗಿ ಪ್ರಧಾನಿಯವರ ಸಂಚಾರದ ವೇಳೆ ಭದ್ರತಾ ಕಾರಣಗಳಿಂದ ಅನೇಕ ವಾಹನಗಳು ಸೇರಿಕೊಂಡಿರುತ್ತವೆ. ಆದರೆ, ಈ ಬಾರಿ ದೇಶ ಮೊದಲು, ಮಿತವ್ಯಯ ಅಗತ್ಯ ಎಂಬ ಸಂದೇಶವೇ ಪ್ರಧಾನಿಯವರ ಕ್ರಮದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದೆ.

ಹೈದರಾಬಾದ್‌ನಲ್ಲಿ ನಡೆದ ಸಭೆಯಲ್ಲಿ ಪ್ರಧಾನಿ, ಪೆಟ್ರೋಲ್, ಡೀಸೆಲ್ ಬಳಕೆ ಕಡಿಮೆ ಮಾಡಬೇಕು. ಕಾರ್ ಪೂಲಿಂಗ್‌ಗೆ ಉತ್ತೇಜನ ನೀಡಬೇಕು. ಸಾರ್ವಜನಿಕ ಸಾರಿಗೆ ಹೆಚ್ಚಾಗಿ ಬಳಸಬೇಕು. ಸಾಧ್ಯವಾದಲ್ಲಿ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು. ಅನಗತ್ಯ ವಿದೇಶ ಪ್ರವಾಸಗಳನ್ನು ತಗ್ಗಿಸಬೇಕು ಎಂದು ಕರೆ ನೀಡಿದ್ದರು.

ಸಿಎಂಗಳಿಂದ ಮಿತ ವ್ಯಯ: ಪ್ರಧಾನಿಯವರ ಈ ಕರೆಗೆ ಬಿಜೆಪಿ ಆಡಳಿತದ ಹಲವು ರಾಜ್ಯಗಳು ತಕ್ಷಣ ಸ್ಪಂದಿಸಿವೆ.

➡ಪುಟ ೪



ಅನಗತ್ಯ ವೆಚ್ಚ ಕಡಿತ ಮಾಡಿ; ಸಚಿವರಿಗೆ ಪ್ರಧಾನಿ ಸೂಚನೆ

◆**ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಉದ್ವಿಗ್ನತೆ ಹಿನ್ನೆಲೆಯಲ್ಲಿ ಇಂಧನ ಬಳಕೆ ಕಡಿಮೆ ಮಾಡಿ, ಚಿನ್ನ ಖರೀದಿ ತಗ್ಗಿಸಿ ಎಂದು ಸಾರ್ವಜನಿಕರಿಗೆ ಕರೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಇದೀಗ ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳಿಗೂ ಅನಗತ್ಯ ವೆಚ್ಚ ಕಡಿತಗೊಳಿಸುವಂತೆ ಸೂಚನೆ ನೀಡಿದ್ದಾರೆ. ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಸಂಪನ್ಮೂಲಗಳ ಬಳಕೆಯಲ್ಲಿ ಮಿತವ್ಯಯ ಪಾಲಿಸಿ, ವಿಶೇಷವಾಗಿ ಪೆಟ್ರೋಲ್ ವೆಚ್ಚವನ್ನು ಕಡಿಮೆ ಮಾಡಲು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ.

➡ಪುಟ ೪

ಮುಖ್ಯಾಂಶಗಳು

- ತಮ್ಮದೇ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಿದ ಪ್ರಧಾನಿ
- ವಿದ್ಯುತ್ ಚಾಲಿತ ವಾಹನ ಬಳಕೆಗೆ ಒತ್ತು
- ಪೆಟ್ರೋಲ್, ಡೀಸೆಲ್ ಬಳಕೆ ತಗ್ಗಿಸಲು ರಾಷ್ಟ್ರವ್ಯಾಪಿ ಕರೆ
- ಉತ್ತರ ಪ್ರದೇಶದಲ್ಲಿ ಶೇ.50 ವಾಹನ ಕಡಿತ
- ಮಧ್ಯಪ್ರದೇಶದಲ್ಲಿ ವಾಹನ ರ್‍ಯಾಲಿಗಳಿಗೆ ಬ್ರೇಕ್
- ಮಹಾರಾಷ್ಟ್ರದಲ್ಲಿ ಅಧಿಕೃತ ವಿಮಾನ ಪ್ರಯಾಣಕ್ಕೆ ನಿಯಂತ್ರಣ
- ಗುಜರಾತ್ ರಾಜ್ಯಪಾಲರಿಂದ ರೈಲು-ಬಸ್ ಪ್ರಯಾಣ ನಿರ್ಧಾರ
- ಕಾರ್‌ಪೂಲಿಂಗ್, ಸಾರ್ವಜನಿಕ ಸಾರಿಗೆ ಬಳಕೆಗೆ ಉತ್ತೇಜನ

6ನೇ ಗ್ಯಾರಂಟಿ ಯೋಜನೆ ಘೋಷಿಸಿದ ಡಿಸಿಎಂ

ಭೂ ಗ್ಯಾರಂಟಿಯಲ್ಲಿ ವಿನಾಯ್ತಿ, ರಿಯಾಯ್ತಿ



- ಪ್ರತಿಯೊಂದು ಆಸ್ತಿ ದಾಖಲೆಗಳಲ್ಲಿ ಜಿಪಿಎಸ್, ಮಾಲೀಕರ ಫೋಟೋ ಇರಲಿದೆ
- ಲಂಚ ಇಲ್ಲದೆ ಮನೆ ಬಾಗಿಲಿಗೆ ದಾಖಲೆ ತಲುಪಿಸುವ ವ್ಯವಸ್ಥೆ
- ಗ್ಯಾರಂಟಿ ಅನುಷ್ಠಾನ ಸಮಿತಿ, ಅಧಿಕಾರಿಗಳಿಗೆ ಜವಾಬ್ದಾರಿ
- ಆನ್‌ಲೈನ್‌ನಲ್ಲೂ ಡೌನ್‌ಲೋಡ್‌ಗೆ ಅವಕಾಶ

◆**ಬೆಂಗಳೂರು:** ನಗರದ ನಾಗರಿಕರಿಗೆ ರಾಜ್ಯ ಸರ್ಕಾರದ 6ನೇ ಗ್ಯಾರಂಟಿಯಾದ ಭೂ ಗ್ಯಾರಂಟಿಯಲ್ಲಿ ಮಹತ್ವದ ಯೋಜನೆಗಳನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ ಮಾಡಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಕೇಂದ್ರ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಮಾಧ್ಯಮಗೋಷ್ಠಿ ನಡೆಸಿದ ಅವರು, ಭೂ ಗ್ಯಾರಂಟಿ ಮೂಲಕ ಬೆಂಗಳೂರು ನಾಗರಿಕರಿಗೆ ಇ ಖಾತಾ ವಿತರಣೆ, ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಶೇ.5ರಿಂದ ಶೇ.15ಕ್ಕೆ ಹೆಚ್ಚಳ, 100 ದಿನದಲ್ಲಿ ಎ ಯಿಂದ ಬಿ ಖಾತಾ ಶುಲ್ಕ ಪಾವತಿಸಿದರೆ ಶೇ.60ರಷ್ಟು ರಿಯಾಯಿತಿ ಘೋಷಿಸಿದರು.

ಬೃಹತ್ ಅಭಿಯಾನ: ನನ್ನ ಖಾತೆ, ನನ್ನ ಹಕ್ಕು ಅಭಿಯಾನ ಮೂರು ತಿಂಗಳ ಕಾಲ ಪ್ರತಿ ಶನಿವಾರ ನಡೆಯಲಿದೆ. ಪ್ರತಿ ಶನಿವಾರ ಬೆಂಗಳೂರಿನ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 10ರಂತೆ 50 ಸ್ಥಳಗಳಲ್ಲಿ ಈ ಅಭಿಯಾನ(ಇ-ಖಾತಾ ಸಿಟಿಜನ್ ಓಪನ್ ಹೌಸ್) ನಡೆಯಲಿದೆ.

➡ಪುಟ ೪

ಬೆಂಗಳೂರು ಅಭಿವೃದ್ಧಿಗೆ ಸುಮಾರು 150 ಯೋಜನೆಗಳಿದ್ದು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಈ ಬಗ್ಗೆ ಪ್ರತ್ಯೇಕ ಮಾಹಿತಿ ನೀಡಲಾಗುವುದು. ನಾವು ಅಕ್ರಮ ಸಕ್ರಮ ಮಾಡುತ್ತಿಲ್ಲ. ಗರಿಷ್ಟ ಶೇ.50 ರಷ್ಟು ಸೆಟ್ ಬ್ಯಾಕ್ ರಿಯಾಯಿತಿ ನೀಡಲು ಕಾಯ್ದೆಯಲ್ಲಿ ಅವಕಾಶವಿದೆ.

■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಕಿರುಸುದ್ದಿ

ನಟ, ನಿರ್ಮಾಪಕ ದಿಲೀಪ್‌ರಾಜ್ ವಿಧಿವಶ

◆**ಬೆಂಗಳೂರು:** ಕನ್ನಡ ನಟ ಹಾಗೂ ನಿರ್ಮಾಪಕ ದಿಲೀಪ್‌ರಾಜ್ ತೀವ್ರ ಹೃದಯಘಾತದಿಂದ ನಿಧನರಾಗಿದ್ದಾರೆ. ಆರೋಗ್ಯವಾಗಿಯೇ ಇದ್ದ 47 ವರ್ಷದ ನಟ ಹೃದಯಾಘಾತವಾಗಿ ಕೊನೆಯುಸಿರೆಳೆದಿದ್ದಾರೆ. ಕನ್ನಡದ ಹಲವು ಸಿನಿಮಾ, ಸೀರಿಯಲ್‌ಗಳಲ್ಲಿ ನಾಯಕ, ಖಳನಾಯಕ, ಪೋಷಕ ಪಾತ್ರಗಳಲ್ಲಿ ನಟಿಸಿದ್ದರು. ಇಷ್ಟೇ ಅಲ್ಲದೇ ಕಿರುತೆರೆಯ ಹಿಟ್ಲರ್ ಕಲ್ಯಾಣ, ಕೃಷ್ಣ ರುಕ್ಕು ಸೇರಿದಂತೆ ಅನೇಕ ಧಾರಾವಾಹಿಗಳನ್ನು ನಿರ್ಮಾಣ ಸಹ ಮಾಡಿದ್ದರು. ಬುಧವಾರ ಬೆಳಗಿನ ಜಾವ ದಿಲೀಪ್ ರಾಜ್‌ಗೆ ತೀವ್ರ ಹೃದಯಾಘಾತವಾಗಿದ್ದು, ತಕ್ಷಣ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಯಿತಾದರೂ, ಅವರನ್ನು ಬದುಕಿಸಿಕೊಳ್ಳಲು ಸಾಧ್ಯವಾಗಿಲ್ಲ.



➡ಪುಟ ೪

ನೀಟ್ ತನಿಖೆ ಚುರುಕು; ಐವರ ಬಂಧಿಸಿದ ಸಿಬಿಐ

◆**ಜೈಪುರ:** ನೀಟ್-ಯುಜಿ 2026 ವೈದ್ಯಕೀಯ ಪ್ರವೇಶ ಪರೀಕ್ಷೆಯ ಅಕ್ರಮ ಮತ್ತು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ(ಸಿಬಿಐ) ಬುಧವಾರ ದೇಶದ ವಿವಿಧೆಡೆ ಐವರು ಆರೋಪಿಗಳನ್ನು ಬಂಧಿಸಿದೆ. ಬಂಧಿತರಲ್ಲಿ ಮೂವರನ್ನು ಜೈಪುರದಲ್ಲಿ ಹಾಗೂ ತಲಾ ಒಬ್ಬರನ್ನು ಗುರುಗ್ರಾಮ ಮತ್ತು ನಾಸಿಕ್‌ನಲ್ಲಿ ಬಂಧಿಸಲಾಗಿದೆ. ಕೇಂದ್ರ ಶಿಕ್ಷಣ ಸಚಿವಾಲಯದ ದೂರಿನ ಮೇರೆಗೆ 2026ರ ಮೇ 12ರಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು.

➡ಪುಟ ೪

ಶೀಘ್ರವೇ ಪ್ರಥಮ ಸೆಮಿ-ಸ್ಪೀಡ್ ರೈಲು

◆ಪುಟ ೭

ಮುಲಾಯಂ ಪುತ್ರ ಪ್ರತೀಕ್ ಯಾದವ್ ದಿಢೀರ್ ನಿಧನ

◆ಪುಟ ೭



ರಕ್ಷಾ ಸೈತಾನನ ಆರ್ಭಟ!


◆ಪುಟ ೭

ಸುದ್ದಿ ಸಮಗ್ರ

ಬಿಜೆಪಿ ಕಾಲದ ಆದೇಶ ಹಿಂಪಡೆದ ಸರ್ಕಾರ

ಹಿಜಾಬ್ ನಿಷೇಧ ವಾಪಸ್

◆**ಬೆಂಗಳೂರು:** ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧಿಸಿ ಈ ಹಿಂದಿನ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಶಾಲಾ ಶಿಕ್ಷಣ ಇಲಾಖೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಿಂಪಡೆದಿದೆ. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿಗದಿತ ಸಮವಸ್ತ್ರದ ಜತೆಗೆ ಹಿಜಾಬ್ ಸೇರಿದಂತೆ ಸೀಮಿತವಾದ ಸಾಂಪ್ರದಾಯಿಕ ಆಧಾರಿತ ಸಂಕೇತಗಳನ್ನು ಧರಿಸಲು ಅವಕಾಶ ನೀಡಿ ಹೊಸ ಆದೇಶ ಹೊರಡಿಸಿದೆ.



ಶಿಕ್ಷಣ ಇಲಾಖೆಯು ತನ್ನ ಆದೇಶದಲ್ಲಿ, 2022ರ ಫೆ.5ರಂದು ಹೊರಡಿಸಲಾಗಿದ್ದ ಸಮವಸ್ತ್ರ ಸಂಹಿತೆಯ ಆದೇಶವನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ. ಶಿಕ್ಷಣವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಮತ್ತು ಸಾಂವಿಧಾನಿಕ ಮೌಲ್ಯಗಳ ವೃದ್ಧಿಗೆ ಪೂರಕವಾಗಿರಬೇಕು.

➡ಪುಟ ೪

ಭವಿಷ್ಯದ ದೃಷ್ಟಿಯಿಂದ ಈ ಆದೇಶ

ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಯ ಜನಿವಾರ ತೆಗೆಸಿದ್ದ ವಿಚಾರದಲ್ಲಿ ಸಾಕಷ್ಟು ನೋವು ಉಂಟಾಯಿತು. ವಿದ್ಯಾರ್ಥಿಗಳ ಮನೋಸ್ಥೈರ್ಯ ಕುಗ್ಗಿಸುವ ಕೆಲಸ ಆಗಬಾರದು. ಈ ತೀರ್ಮಾನ ಮಕ್ಕಳಲ್ಲಿ ಸಾಮರಸ್ಯ ಮೂಡಿಸಲು ಸಹಕಾರಿಯಾಗಲಿದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಈ ಆದೇಶ ಹೊರಡಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಭತ್ತ, ತೊಗರಿ ಸೇರಿ 14 ಬೆಳೆಗಳ ಎಂಎಸ್‌ಪಿ ಹೆಚ್ಚಳ

◆**ಹೊಸದಿಲ್ಲಿ:** ಖಾರಿಫ್ ಹಂಗಾಮು ಆರಂಭಕ್ಕೂ ಮುನ್ನ ರೈತರಿಗಾಗಿ ಕೇಂದ್ರ ಸರ್ಕಾರ ಮಹತ್ವದ ಘೋಷಣೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಭತ್ತ, ಹತ್ತಿ, ತೊಗರಿ, ಜೋಳ, ಎಣ್ಣೆಕಾಳುಗಳು ಸೇರಿದಂತೆ 14 ಪ್ರಮುಖ ಬೆಳೆಗಳ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ.




ಆಮದು ಅವಲಂಬನೆಯನ್ನು ಕಡಿಮೆ ಮಾಡಿ, ರೈತರು ಬೆಳೆ ವೈವಿಧ್ಯೀಕರಣದತ್ತ ಮುಖ ಮಾಡುವಂತೆ ಉತ್ತೇಜಿಸುವ ಉದ್ದೇಶದಿಂದ ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಹತ್ತಿಗೆ ಹೆಚ್ಚಿನ ಪ್ರಮಾಣದಲ್ಲಿ ಎಂಎಸ್‌ಪಿ ಏರಿಕೆ ಮಾಡಲಾಗಿದೆ.

2026-27ರ ಖಾರಿಫ್ ಹಂಗಾಮಿಗೆ ಸಾಮಾನ್ಯ ಭತ್ತದ ಎಂಎಸ್‌ಪಿಯನ್ನು ಕ್ವಿಂಟಾಲ್‌ಗೆ 72 ರೂ. ಹೆಚ್ಚಿಸಿ 2,441 ರೂ.ಗೆ ನಿಗದಿ ಮಾಡಲಾಗಿದೆ. ಎ-ಗ್ರೇಡ್ ಭತ್ತಕ್ಕೆ 2,461 ರೂ. ಬೆಂಬಲ ಬೆಲೆ ಘೋಷಿಸಲಾಗಿದೆ.

➡ಪುಟ ೪

ಚಿನ್ನ, ಬೆಳ್ಳಿಯ ಆಮದು ಸುಂಕ ಶೇ.15ಕ್ಕೆ ಹೆಚ್ಚಳ

◆**ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿ ಹಾಗೂ ಹೆಚ್ಚುತ್ತಿರುವ ತೈಲ ಮತ್ತು ರಸಗೊಬ್ಬರ ಆಮದು ವೆಚ್ಚದ ನಡುವೆ ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸಿಕೊಳ್ಳಲು ಕೇಂದ್ರ, ಸರ್ಕಾರ ಚಿನ್ನ ಮತ್ತು ಬೆಳ್ಳಿಯ ಆಮದು ಸುಂಕವನ್ನು ಶೇ.6 ರಿಂದ ಶೇ.15ಕ್ಕೆ ಏರಿಸಿದೆ. ಮೇ 13ರ ಮಧ್ಯರಾತ್ರಿಯಿಂದ ಪರಿಷ್ಕೃತ ದರ ಜಾರಿಗೆ ಬಂದಿದೆ. ಪ್ಲಾಟಿನಂ ಮೇಲಿನ ಸುಂಕವನ್ನೂ ಶೇ.6.4 ರಿಂದ ಶೇ.15.4ಕ್ಕೆ ಹೆಚ್ಚಿಸಲಾಗಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ಅನಗತ್ಯ ಚಿನ್ನ ಖರೀದಿ ಹಾಗೂ ವಿದೇಶಿ ಪ್ರವಾಸಗಳನ್ನು ತಪ್ಪಿಸಲು ಕರೆ ನೀಡಿದ ಕೆಲವೇ ದಿನಗಳಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಭಾರತವು ವಿಶ್ವದ ಎರಡನೇ ಅತಿ ದೊಡ್ಡ ಚಿನ್ನ ಬಳಕೆದಾರ ರಾಷ್ಟ್ರವಾಗಿದ್ದು, ಹೆಚ್ಚುತ್ತಿರುವ ಆಮದು ದೇಶದ ವಿದೇಶಿ ವಿನಿಮಯದ ಮೇಲೆ ಒತ್ತಡ ತಂದಿದೆ. ಬುಧವಾರ ರೂಪಾಯಿ ಮೌಲ್ಯವು ಡಾಲರ್ ಎದುರು 95.71ಕ್ಕೆ ಕುಸಿದೆ.

ಚಿನ್ನ, ಬೆಳ್ಳಿ ದುಬಾರಿ: ಹೊಸ ಸುಂಕದಿಂದ ಚಿನ್ನ ಮತ್ತು ಬೆಳ್ಳಿಯ ದೇಶೀಯ ಬೆಲೆಗಳಲ್ಲಿ ಭಾರೀ ಏರಿಕೆ ಕಂಡುಬಂದಿದೆ. ದಿಲ್ಲಿ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆ 8,550 ರೂ. ಏರಿಕೆಗೊಂಡು 1.65 ಲಕ್ಷ ರೂ. ದಾಟಿದರೆ, ಬೆಳ್ಳಿ ಬೆಲೆ ಕೆಜಿಗೆ 20,500 ರೂ. ಹೆಚ್ಚಾಗಿ 2.97 ಲಕ್ಷ ರೂ. ತಲುಪಿದೆ. ಉದ್ಯಮ ವಲಯದ ಪ್ರಕಾರ, ಆಮದು ಸುಂಕ ಏರಿಕೆಯಿಂದ 10 ಗ್ರಾಂ ಚಿನ್ನದ ಬೆಲೆ ಸುಮಾರು 27,000 ರೂ.ವರೆಗೆ ಹೆಚ್ಚಾಗಬಹುದು.

➡ಪುಟ ೪

ವಿಶ್ವಾಸಮತ ಪರೀಕ್ಷೆ ಗೆದ್ದ ಸಿಎಂ ವಿಜಯ್

◆**ಹೊಸದಿಲ್ಲಿ:** ಹರಸಾಹಸಪಟ್ಟು 144 ಶಾಸಕರ ಬೆಂಬಲ ಗಳಿಸುವಲ್ಲಿ ಯಶಸ್ವಿಯಾಗಿರುವ ತಮಿಳುನಾಡು ಮುಖ್ಯಮಂತ್ರಿ, ಟಿವಿಕೆ ನಾಯಕ ಜೋಸೆಫ್ ವಿಜಯ್, ಬುಧವಾರ ವಿಧಾನಸಭೆಯಲ್ಲಿ ವಿಶ್ವಾಸ ಮತ ಪರೀಕ್ಷೆಯಲ್ಲಿ ತೇರ್ಗಡೆಯಾದರು.



144 ಶಾಸಕರ ಬೆಂಬಲ ಗಳಿಸುವಲ್ಲಿ ಟಿವಿಕೆ ಯಶಸ್ವಿ

ಚುನಾವಣೆಯಲ್ಲಿ 108 ಸ್ಥಾನ ಗೆದ್ದಿರುವ ಟಿವಿಕೆ ನಾಯಕ ವಿಜಯ್ ಸರ್ಕಾರ ರಚನೆಗೆ ಎರಡು ಬಾರಿ ವಿಫಲ ಯತ್ನ ನಡೆಸಿದ್ದರು. ಕನಿಷ್ಠ ಪಕ್ಷ 118 ಶಾಸಕರ ಬೆಂಬಲವನ್ನು ಮೇ 13ರಂದು ಸದನದಲ್ಲಿ ಸಾಬೀತುಪಡಿಸುವಂತೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಆರ್ಲೇಕರ್ ವಿಜಯ್‌ಗೆ ಸೂಚಿಸಿದ್ದರು. ಅಂತೆಯೇ ತನಗೆ 144 ಶಾಸಕರ ಬೆಂಬಲವಿರುವುದನ್ನು ಸಿಎಂ ವಿಜಯ್ ಬುಧವಾರ ಸದನದಲ್ಲಿ ಸಾಬೀತುಪಡಿಸಿದ್ದಾರೆ. ಈ ಮುನ್ನ ವಿಡುತಲೈ ಚಿರುತ್ತೈಗಳ್ ಕಚ್ಚಿ, ಇಂಡಿಯನ್ ಮುಸ್ಲಿಂಲೀಗ್, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ದ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸಿಸ್ಟ್) ಪಕ್ಷಗಳ ತಲಾ ಇಬ್ಬರು ಶಾಸಕರ ಬೆಂಬಲ ಮತ್ತು ಕಾಂಗ್ರೆಸ್‌ನ ಐದು ಶಾಸಕ ಬೆಂಬಲದೊಂದಿಗೆ ತನ್ನ ಮಿತ್ರಕೂಟ ಬಲವನ್ನು ವಿಜಯ್ 121ಕ್ಕೇರಿಸಿದ್ದರು.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **3,10,000**(2,90,000) ಅಪರಂಜಿ ಚಿನ್ನ: **1,62,000**(1,53,980) ಆಭರಣ ಚಿನ್ನ: **1,48,500**(1,41,150) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) ಷೇರು ಸೂಚ್ಯಂಕ ಬಿಎಸ್‌ಇ **74,608**(49↑) ಎನ್‌ಎಸ್‌ಇ **23,412**(33↑) $1 = ₹95.66

ಕಿರುಸುದ್ದಿ

ಕನ್ನಡ ಶಾಲೆ ಮುಚ್ಚದಿರಿ

◆ **ಹುಬ್ಬಳ್ಳಿ:** ಕೇಂದ್ರ ಸ್ಥಾನ ಗುರುತಿಸಿ ಅಲ್ಲೊಂದು ಸುಸಜ್ಜಿತ ಶಾಲೆ ತೆರೆದು ಅದರ ಸುತ್ತಲೂ ಇರುವ ಹತ್ತಾರು ಗ್ರಾಮೀಣ ಪ್ರದೇಶದ ಕನ್ನಡ ಶಾಲೆಗಳನ್ನು ಮುಚ್ಚುವ ರಾಜ್ಯ ಸರ್ಕಾರದ ವ್ಯವಸ್ಥೆ ಖಂಡನೀಯ ಎಂದು ಚಿಂತನ ವೇದಿಕೆ ಹೇಳಿದೆ.

ಹಾವೇರಿ ಜಿಲ್ಲೆಯೊಂದರಲ್ಲಿ ಸುಮಾರು 60ಕ್ಕೂ ಹೆಚ್ಚು ಕನ್ನಡ ಗ್ರಾಮೀಣ ಪ್ರದೇಶದ ಶಾಲೆಗಳ ಮೇಲೆ ಚಪ್ಪಡಿ ಎಳೆದು ಕೇಂದ್ರ ಸ್ಥಾನದಲ್ಲಿ ಒಂದು ಮಾದರಿಯ ಶಾಲೆ ಆರಂಭಿಸಲು ವ್ಯವಸ್ಥಿತ ಹುನ್ನಾರವನ್ನು ತಕ್ಷಣ ರಾಜ್ಯ ಸರ್ಕಾರ ಕೈ ಬಿಡುವಂತೆ ವೇದಿಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಮೇಲ್ ಮೂಲಕ ಮನವಿ ಮಾಡಿದೆ. ಇನ್ನು ರಾಜ್ಯದ ಎಷ್ಟು ಶಾಲೆಗಳು ಮುಚ್ಚಲಿವೆ ಎಂದು ಆತಂಕ ವ್ಯಕ್ತಪಡಿಸಿದೆ. ಹೀಗೆ ಗ್ರಾಮೀಣ ಶಾಲೆಗಳು ಮುಚ್ಚುವುದರಿಂದ ಅಲ್ಲಿರುವ ಕಟ್ಟದ ಶಾಲೆಯ ಆಸ್ತಿ ಯಾರದೋ ಕೈ ಸೇರುತ್ತದೆ. ಇದೆಲ್ಲ ಜೊತೆ ಗ್ರಾಮೀಣ ಪ್ರದೇಶದ ಮಕ್ಕಳು ಅತಂತ್ರ ಸ್ಥಿತಿ ಸೇರುವ ಧಾರುಣ ಸ್ಥಿತಿಯಲ್ಲಿ ಕೊರಗಬೇಕಿದೆ. ತಕ್ಷಣ ಮೊದಲಿದ್ದ ವ್ಯವಸ್ಥೆ ಉಳಿಸುವಂತೆ ವೇದಿಕೆಯ ಕೃಷ್ಣಮೂರ್ತಿ ಕುಲಕರ್ಣಿ, ಪ್ರೊ. ಡಿ.ಡಿ.ಮುತಾಲಿಕ ದೇಸಾಯಿ, ಚನ್ನಬಸಪ್ಪ ಧಾರವಾಡಶೆಟ್ರು ಒತ್ತಾಯಿಸಿದ್ದಾರೆ.

ಕಾರ್ಯಕಾರಿಣಿ ಸಭೆ



◆ **ಹುಬ್ಬಳ್ಳಿ:** ವಿದ್ಯಾನಗರ ಖಾಸಗಿ ಹೋಟೆಲ್‌ನಲ್ಲಿ ಹು-ಧಾ ಸೆಂಟ್ರಲ್ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಪದಾಧಿಕಾರಿಗಳ ಕಾರ್ಯಕಾರಿಣಿ ಸಭೆ ನಡೆಯಿತು. ಮಹಾನಗರ ಜಿಲ್ಲಾ ಅಧ್ಯಕ್ಷ ಅಲ್ತಾಫ್ ಹಳ್ಳೂರ ಚಾಲನೆ ನೀಡಿ ಮಾತನಾಡಿ, ಪಕ್ಷದ ಬಲವರ್ಧನೆಗೆ ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತನಿಗೂ ನ್ಯಾಯ ಒದಗಿಸುವುದು ಮತ್ತು ಅವರ ನಾಯಕತ್ವದ ಗುಣಗಳನ್ನು ಗುರುತಿಸಿ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಪಕ್ಷದ ಸಿದ್ಧಾಂತ ನಂಬಿ, ಯಾವುದೇ ಫಲಾಪೇಕ್ಷೆಯಿಲ್ಲದೆ ತಳಮಟ್ಟದಲ್ಲಿ ಕೆಲಸ ಮಾಡಿದ ಪ್ರಾಮಾಣಿಕ ಕಾರ್ಯಕರ್ತರೇ ನಮ್ಮ ಶಕ್ತಿ. ಅಂತಹ ನಿಷ್ಠಾವಂತರಿಗೆ ಹೆಚ್ಚಿನ ಅವಕಾಶ ನೀಡಲಾಗುವುದು. ಅಧಿಕಾರ ಎಂಬುದು ಕೇವಲ ಕೆಲವರಿಗೆ ಮಾತ್ರ ಸೀಮಿತವಾಗಬಾರದು ಎಂದರು. ನೂತನ ಪಾಲಿಕೆ ಸದಸ್ಯ ಸಾದಿಕ್ ಯಕ್ಕುಂಡಿ ಅವರನ್ನು ಸನ್ಮಾನಿಸಲಾಯಿತು. ವೀರೇಶ ಉಂಡಿ, ಷರೀಫ್ ಗರಗದ, ಸುವರ್ಣ ಕಲ್ಲಕುಂಟ್ಲ, ಆರಿಫ್ ಭದ್ರಾಪುರ, ಮೇಘನಾ ಹಿರೇಮಠ್, ಸಂಧಿಲಕುಮಾರ್, ಇಕ್ಬಾಲ್ ನವಲೂರು, ಶಿವಕುಮಾರ್ ರಾಯನಗೌಡರ್, ಸಂಗಮೇಶ್ ಗೌರಕ್ಕನವರ, ವೀರೇಶ್ ಕಡಕೋಳಮಠ, ಸಂತೋಷ್ ಚಲವಾದಿ, ಬಾಳಮ್ಮ ಜಂಗನವರ್, ಕಾಶಿಂ ಕೂಡಲಗಿ ಇದ್ದರು.

ನ್ಯಾಯ ಒದಗಿಸಲು ಆಗ್ರಹ



◆ **ಧಾರವಾಡ:** ನಗರದಲ್ಲಿ ಪೊಲೀಸರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಆನಂದ ಮೇಲೆ ನಗರದ ವಿದ್ಯಾಗಿರಿ ಪೊಲೀಸ್ ಠಾಣಾ ಪೊಲೀಸರು ಸುಳ್ಳು ಗಾಂಜಾ ಆರೋಪದಡಿ ಅವನನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದ್ದು, ಯಾವುದೇ ಗಾಂಜಾ ಡ್ರಗ್ಸ್ ತೆಗೆದುಕೊಂಡಿರುವುದಿಲ್ಲ ಎಂದು ವೈದ್ಯರು ವರದಿ ನೀಡಿದ್ದಾಗಿ ತಿಳಿಸಿದರು. ವಿದ್ಯಾಗಿರಿ ಪೊಲೀಸರು ವಿದ್ಯಾರ್ಥಿಗೆ ಸಾಕಷ್ಟು ಕಿರುಕುಳ ನೀಡಿ ಹಣ ಕೊಡಲು ಒತ್ತಾಯಿಸಿದ್ದರಿಂದ ವಿದ್ಯಾರ್ಥಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದ್ದರಿಂದ ಆತನ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಮಹಾಸಭಾ ಜಿಲ್ಲಾ ಅಧ್ಯಕ್ಷ ಪ್ರದೀಪ ಪಾಟೀಲ, ಪದಾಧಿಕಾರಿಗಳಾದ ಶಿವಶರಣ ಕಲಬಶೆಟ್ಟರ್, ಮುರಿಗೆಪ್ಪ ಶಿರಿಯಣ್ಣವರ, ಸವಿತಾ ಅಮರಶೆಟ್ಟಿ, ಬಸವರಾಜ ಗೋಲಪ್ಪನವರ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ್, ಬಿ.ಎಂ.ಸೂರಗೊಂಡ, ಮಂಜುನಾಥ ಮುಗ್ಗನವರ, ವೀರೇಶ ಕೆಲಗೇರಿ, ವೀರಯ್ಯ ಚಿಕ್ಕಮಠ ಇತರರಿದ್ದರು.

ನಿಧನ ಸುದ್ದಿ

ಲಲಿತಾ ದೇಸಾಯಿ



◆ **ಧಾರವಾಡ:** ನಗರದ ನಾರಾಯಣಪೂರ 4ನೇ ಕ್ರಾಸ್ ನಿವಾಸಿ ಲಲಿತಾ ಸುಧೀಂದ್ರ ದೇಸಾಯಿ (76) ನಿಧನರಾದರು. ಇವರಿಗೆ ಪತಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಳಗವಿದೆ.



ಹುಬ್ಬಳ್ಳಿ: ಧಾರವಾಡ ಜಿಲ್ಲೆ ಕಲಘಟಗಿ ತಾಲೂಕು ಉಗ್ಗಿನಕೇರಿ ಗ್ರಾಮದಲ್ಲಿ ಗ್ರಾಮ ದೇವತೆಯವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರಗಿತು. ಶ್ರೀ ಉಡಚಮ್ಮ ಮೂರು ಮುಕದಮ್ಮ ಗುಳಲಕಮ್ಮ ಹರಿಜನಕೇರಿ ಕರಿಯಮ್ಮ ನಾಗಮ್ಮ ಕರಿಯಮ್ಮ ದೇವಿಯರ ಜಾತ್ರಾ ಮಹೋತ್ಸವ ನಡೆಯಿತು. ಶ್ರೀ ಕಾಲಕಾಲೇಶ್ವರ ಸಂಗೀತ ಹಾಗೂ ಜಾನಪದ ಭಕ್ತಿ ಗೀತೆಗಳು ಮೆಲೋಡಿಸ್ ಆರ್ಕೆಸ್ಟ್ರಾ ರಸಮಂಜರಿ ಕಾರ್ಯಕ್ರಮ ನಡೆಸಿಕೊಟ್ಟಿತು. ಕಲಾವಿದರಾದ ಕಿರಣಗೌಡ ತುಪ್ಪದಗೌಡ್ರ, ಪ್ರಕಾಶ ಮಾದರಿಬಾವಿ, ಪ್ರಸನ ಸಿಂದಗಿ, ಮೈತ್ರಿ ಚೆಲ್ಲೂರ್ ಚೆಲ್ಲೂರ, ಪವಿತ್ರಾ ಕಟ್ಟಿಮನಿ, ಉಮೇಶ ಅಮರಗೋಳ ಇದ್ದರು.

ಸದೃಢ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

◆ **ಧಾರವಾಡ:** ದೈಹಿಕ ಮತ್ತು ಮಾನಸಿಕ ಸದೃಢ ಆರೋಗ್ಯಕ್ಕೆ ಕ್ರೀಡೆ ಬಹಳ ಸಹಾಯಕವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ಡೀನ್ ಪ್ರೊ. ಬಿ.ಎಂ.ಪಾಟೀಲ ಹೇಳಿದರು.

ನಗರದ ಕೆಸಿಡಿ ಭೌತಶಾಸ್ತ್ರ ವಿಭಾಗದ ಮೈದಾನದಲ್ಲಿ ಬುಧವಾರ ನಡೆದ ಕರ್ನಾಟಕ ವಿಶ್ವವಿದ್ಯಾಲಯ ಅಂತರ್ ಕಾಲೇಜು ಏಕ ವಲಯ ಪುರುಷರ ಫುಟ್‌ಬಾಲ್ ಟೂರ್ನಾಮೆಂಟ್ ಕ್ರೀಡೆ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದರ ಮೂಲಕ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿ ಇರಲು ಸಾಧ್ಯ. ಒಳಾಂಗಣ ಅಥವಾ ಹೊರಾಂಗಣದ ಒಂದಿಲ್ಲೊಂದು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಕ್ರೀಡೆಯ ಮೂಲಕ ನಿರಂತರವಾಗಿ ಪ್ರಾಯೋಗಿಕ ಪ್ರಯತ್ನದಿಂದ ವ್ಯಕ್ತಿತ್ವವನ್ನು ಬೆಳಸಿಕೊಳ್ಳಿ ಎಂದರು.

ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಂ.ಎಸ್.ಸಾಳುಂಕೆ ಮಾತನಾಡಿ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯರಾದ ರಾಬರ್ಟ್ ದದ್ದಾಪೂರಿ, ಶ್ಯಾಮ್ ಮಲ್ಲನಗೌಡರ, ಡಾ.ಬಸವರಾಜ ಗೊರವರ, ಡಾ.ಜಗದೀಶ ಗುಡಗೂರ, ಡಾ.ಬಿ.ಪರ್ವತಾಲು, ಪ್ರೊ. ಗೋವಿಂದಪ್ಪ, ಡಾ.ಸಮೀರ ಛಬ್ಬಿ ಭಾಗವಹಿಸಿದ್ದರು.



ಧಾರವಾಡ: ನಗರದ ಕೆಸಿಡಿ ಭೌತಶಾಸ್ತ್ರ ವಿಭಾಗದ ಮೈದಾನದಲ್ಲಿ ಬುಧವಾರ ನಡೆದ ಕರ್ನಾಟಕ ವಿಶ್ವವಿದ್ಯಾಲಯ ಅಂತರ್ ಕಾಲೇಜು ಏಕ ವಲಯ ಪುರುಷರ ಫುಟ್‌ಬಾಲ್ ಟೂರ್ನಾಮೆಂಟ್ ಕ್ರೀಡೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ಡೀನ್ ಪ್ರೊ. ಬಿ.ಎಂ.ಪಾಟೀಲ ಉದ್ಘಾಟಿಸಿದರು.

ಗ್ರಾಪಂ ಸದಸ್ಯರ ಅವಧಿ ಮುಕ್ತಾಯ | ಘೋಷಣೆಯಾಗದ ಚುನಾವಣಾ ದಿನಾಂಕ

ಅಭಿವೃದ್ಧಿ ಕಾರ್ಯಗಳು ಕುಂಠಿತ

▶ ವಿಜಯಕುಮಾರ ಬೆಳ್ಳೇರಿಮಠ

◆ **ಹುಬ್ಬಳ್ಳಿ:** ಧಾರವಾಡ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರ ಅವಧಿ ಪೂರ್ಣಗೊಂಡು ನಾಲ್ಕೈದು ತಿಂಗಳು ಗತಿಸಿದೆ. ಇಲ್ಲಿವರೆಗೂ ಚುನಾವಣಾ ದಿನಾಂಕ ಘೋಷಣೆಯಾಗಿಲ್ಲ, ಜನಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಆಡಳಿತಾಧಿಕಾರಿಗಳು ಆಡಳಿತ ನಡೆಸುತ್ತಿದ್ದು, ಸ್ಥಳೀಯ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿವೆ ಎಂದು ಗ್ರಾಮೀಣ ಭಾಗದ ಜನರಿಂದ ದೂರುಗಳು ಕೇಳಿ ಬರುತ್ತಿವೆ.

ಈಗಾಗಲೇ ಗ್ರಾಮ ಪಂಚಾಯಿತಿ ಸದಸ್ಯರ ಅವಧಿ ಮುಗಿದಿರುವ ಹಾಗೂ ಮುಕ್ತಾಯ ಅವಧಿ ಸನಿಹದಲ್ಲಿರುವ ಗ್ರಾಪಂಗಳಿಗೆ 272 ಆಡಳಿತಾಧಿಕಾರಿಗಳ ನೇಮಿಸಲಾಗಿದೆ. ಆದರೆ ಸರ್ಕಾರಿ ಅಧಿಕಾರಿಗಳು ಹೆಚ್ಚುವರಿಯಾಗಿ ಆಡಳಿತಾಧಿಕಾರಿಯಾಗಿ ಜವಾಬ್ದಾರಿ ನಿಭಾಯಿಸುತ್ತಿರುವ ಕಾರಣ ಅವರಿಗೆ ಹಳ್ಳಿಯ ಸಮಸ್ಯೆಗಳನ್ನು ಅರಿಯಲು ಸಮಯದ ಅಭಾವವಿರುತ್ತದೆ. ಜೊತೆಗೆ ಜನಸಾಮಾನ್ಯರಿಗೆ ಆಡಳಿತಾಧಿಕಾರಿಗಳು ಸುಲಭಕ್ಕೆ ಸಿಗುವುದಿಲ್ಲ, ಇದರಿಂದಾಗಿ ತಮ್ಮ ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವವರೇ ಇಲ್ಲದಂತಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಳ್ಳುತ್ತಿದ್ದಾರೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಪ್ರತಿನಿಧಿಗಳು ಇಲ್ಲದೆ ಗ್ರಾಮಸಭೆಗಳ ಮೂಲಕ ಕ್ರಿಯಾಯೋಜನೆ ಸಿದ್ಧಪಡಿಸಿ, ಅನುಮೋದನೆ ಪಡೆಯುವ ಪ್ರಕ್ರಿಯೆ ನಿಧಾನವಾಗುತ್ತಿದೆ. ಇದರಿಂದ ಕುಡಿಯುವ ನೀರು, ಸ್ವಚ್ಛತೆ, ರಸ್ತೆ ದುರಸ್ತಿ ಮತ್ತು ಬೀದಿ ದೀಪಗಳಂಥ ತುರ್ತು ಕೆಲಸಗಳು ಬಾಕಿ ಉಳಿಯುತ್ತಿವೆ ಎಂಬುವುದು ಸಾರ್ವಜನಿಕರ ದೂರು.

ದಿಗಂತ ವಿಶೇಷ

> ಗ್ರಾಮ ಪಂಚಾಯಿತಿ ಚುನಾವಣೆಗಳ ವಿಳಂಬವು ಕೇವಲ ರಾಜಕೀಯ ವಿಷಯವಲ್ಲ, ಅದು ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿ ಪ್ರಶ್ನೆಯಾಗಿದೆ.
> ■ ಮೋಹನ ಬಡಿಗೇರ, ಬಂಡಿವಾಡ ಗ್ರಾಮಸ್ಥ

> ಗ್ರಾಪಂ ವ್ಯಾಪ್ತಿಯಲ್ಲಿ ಯಾವುದೇ ಕೆಲಸಗಳು ವಿಳಂಬವಾಗದಂತೆ ಅಧಿಕಾರಿಗಳಿಗೆ ಸೂಚಿಸುತ್ತೇನೆ. ನಾವು ಸಹ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತೇವೆ.
> ■ ಭುವನೇಶ ಪಾಟೀಲ, ಸಿಇಒ ಧಾರವಾಡ ಜಿಲ್ಲಾ ಪಂಚಾಯಿತಿ

ವಿಬಿ ಜಿ ರಾಮ್‌ಜಿ ಯೋಜನೆಗೆ ಸಮಸ್ಯೆ

ಜುಲೈ 1 ರಿಂದ ವಿಬಿ ಜಿ ರಾಮ್‌ಜಿ ಯೋಜನೆ ಅನುಷ್ಠಾನವಾಗಲಿದೆ. ಈ ಯೋಜನೆ ಅಡಿ ಕೆಲಸ ಒದಗಿಸುವುದು ಅಥವಾ ವಸತಿ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವಲ್ಲಿ ಸ್ಥಳೀಯ ಸದಸ್ಯರ ಪಾತ್ರ ದೊಡ್ಡದಿರುತ್ತದೆ. ಆದರೆ ಸದಸ್ಯರಿಲ್ಲದ ಕಾರಣ ಅರ್ಹ ಬಡವರಿಗೆ ಸೌಲಭ್ಯಗಳು ತಲುಪುವಲ್ಲಿ ತಾರತಮ್ಯ ಅಥವಾ ವಿಳಂಬವಾಗುವ ಆತಂಕವಿದೆ ಎಂದು ಗ್ರಾಮಸ್ಥರು ಅಲವತ್ತುಕೊಂಡರು.



- ಇದೇ ತಿಂಗಳು ಮಳೆಗಾಲ ಆರಂಭವಾಗುವುದರಿಂದ ವಾರ್ಡ್‌ಗಳಲ್ಲಿ ಗಟಾರ್, ಒಳಚರಂಡಿ, ಕುಡಿಯುವ ನೀರಿನ ಕೆರೆ ಸ್ವಚ್ಛಗೊಳಿಸುವ ಕಾರ್ಯ ನಡೆಯಬೇಕಿದೆ. ಸದಸ್ಯರು ಅಧಿಕಾರದಲ್ಲಿದ್ದರೆ ಸ್ಥಳೀಯ ಜನರು ಅವರ ಗಮನಕ್ಕೆ ತಂದು ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಈಗ ಅಧಿಕಾರಿಗಳ ಆಡಳಿತ ಇರುವುದರಿಂದ ಅದು ಕಷ್ಟಸಾಧ್ಯ
- ಪಂಚಾಯಿತಿಗಳಲ್ಲಿ ಆಡಳಿತಾಧಿಕಾರಿಗಳ ನೇಮಕದಿಂದ ಆಡಳಿತವು ಸಂಪೂರ್ಣ ಅಧಿಕಾರಿಗಳ ಹಿಡಿತದಲ್ಲಿದೆ. ಇಲ್ಲಿ ಸಾಮಾನ್ಯ ಜನರ ಧ್ವನಿಗಿಂತ ನಿಯಮಗಳಿಗೇ ಹೆಚ್ಚು ಒತ್ತು ಸಿಗುವುದರಿಂದ ಜನಸಾಮಾನ್ಯರು ಕಚೇರಿಗಳಿಗೆ ಅಲೆಯುವ ಅನಿವಾರ್ಯತೆ ಎದುರಾಗಿದೆ
- ಸ್ಥಳೀಯ ಮಟ್ಟದಲ್ಲಿ ಬೆಳೆಯುತ್ತಿರುವ ಯುವ ನಾಯಕತ್ವಕ್ಕೆ ಇದು ಹಿನ್ನಡೆಯಾಗಿದೆ. ಚುನಾವಣೆಯ ಮೂಲಕ ಹೊಸ ನಾಯಕರು ಹೊರಹೊಮ್ಮುವ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ದೂರಿದ ಕಿರೇಸೂರ ಗ್ರಾಮಸ್ಥ ಚಂದ್ರಶೇಖರ ಪೂಜಾರ

ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ

◆ **ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಯುವ ಕಾಂಗ್ರೆಸ್ ಕಾರ್ಯಕರ್ತರು ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯ(ನೀಟ್) ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ ನಗರದ ರಮೇಶ ಭವನದ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಮುಂದಾದಾಗ ಪೊಲೀಸರು ಅವರನ್ನು ಮಾರ್ಗ ಮಧ್ಯದಲ್ಲಿಯೇ ತಡೆದರು. ಬಳಿಕ ಪ್ರತಿಭಟನಾ ಕಾರರು ಹಾಗೂ ಪೊಲೀಸರ ಮಧ್ಯೆ ಕೆಲ ಸಮಯ ಮಾತಿನ ಚಕಮುಖಿ ನಡೆಯಿತು. ಈ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಗೊಳಿಸಿದರು. ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹುಬ್ಬಳ್ಳಿ-ಧಾರವಾಡ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ್ ಪಾಟೀಲ್ ಮಾತನಾಡಿ, ಪರೀಕ್ಷೆ ರದ್ದುಪಡಿಸಲಾಗಿದ್ದು, ಮರು ಪರೀಕ್ಷೆ ನಡೆಸಲಾಗುವುದು ಎಂದು ಹೇಳಲಾಗಿದೆ. ಇದರಿಂದ ಪ್ರಾಮಾಣಿಕವಾಗಿ ಓದಿದ್ದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಲಿದೆ. ಇದು ದೇಶದ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿದೆ. ನೀಟ್ ಬದಲು ಪರ್ಯಾಯ ಪರೀಕ್ಷೆ ನಡೆಸಲು ಚಿಂತನೆ ನಡೆಸಬೇಕು. ಧರ್ಮೇಂದ್ರ ಪ್ರಧಾನ್ ಅವರು ಕೇಂದ್ರ ಸಚಿವರಾದ ನಂತರ ಎರಡನೇ ಬಾರಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ನಾಗರಾಜ ಕೊಟಗಿ, ಕಾಸಿಂ ಕೂಡಲಗಿ, ವಸೀಂ, ಶಾನು ಖಾನ್, ಸಂತೋಷ್ ನಾಯಕ್, ಮಂಜುನಾಥ ಉಪ್ಪಾರ್, ಸತೀಶ್ ಬಡಿಗೇರ ಇದ್ದರು.



ಸಂಸ್ಕೃತಿಯ ಪಾವಿತ್ರ್ಯತೆ ಕಾಪಾಡುವುದು ಅವಶ್ಯ

◆ **ನವಲಗುಂದ:** ಭಾರತೀಯ ಪುಣ್ಯಭೂಮಿಯಲ್ಲಿ ಹಲವಾರು ಧರ್ಮಗಳು ಮತ್ತು ಆಚರಣೆಗಳು ಬೆಳೆದುಕೊಂಡು ಬಂದಿವೆ. ಅವುಗಳು ಜನ ಸಮುದಾಯದ ಮೇಲೆ ಅಪಾರ ಪ್ರಭಾವ ಬೀರಿವೆ. ಈ ನಾಡಿನ ಜನರು ಸಂಸ್ಕೃತಿಯ ಪಾವಿತ್ರ್ಯತೆಯತೆಯನ್ನು ಕಾಪಾಡಿಕೊಂಡು ಬರುವ ಅವಶ್ಯಕತೆಯಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಅವರು ಸ್ಥಳೀಯ ಪಂಚಗೃಹ ಹಿರೇಮಠದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಮಾತನಾಡಿ, ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳೆರಡೂ ಇವೆ. ಒಳ್ಳೆಯವರ ಒಡನಾಟದಲ್ಲಿ ಬಾಳಿದರೆ ಜೀವನ ವಿಕಾಸಗೊಳ್ಳುತ್ತದೆ ಎಂದರು. ಶ್ರೀಶೈಲ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರುಗಳು ಮಾತನಾಡಿ, ಮನುಷ್ಯ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾನೆ. ಆದರೆ ದೊಡ್ಡವನಾಗಿ ಬಾಳಲು ಸಾಧ್ಯವಾಗುತ್ತಿಲ್ಲ, ದೊಡ್ಡ ಮನಸ್ಸು ದೊಡ್ಡ ಗುಣದಿಂದ ದೊಡ್ಡಸ್ತಿಕೆ ಸಿಗುತ್ತದೆ ಎಂದರು. ಮತ್ತಾಶೀ ಡಾ. ಚಂದ್ರಶೇಖರ ಜಗದ್ಗುರುಗಳು ಮಾತನಾಡಿ, ಶ್ರದ್ಧೆ ನಿಷ್ಠೆ ಮತ್ತು ಅನುಭಾವದಿಂದ ಬದುಕು ನಿರಾಳ. ಸಮರಸದ ನುಡಿ ನಡೆ ಚೆಂದ. ಸಮರಸವೇ ಸರ್ವ ಸೌಭಾಗ್ಯಕ್ಕೆ ಸೋಪಾನ ಎಂದರು. ಕಾಶೀ ನೂತನ ಡಾ.ವಿಶ್ವಾರಾಧ್ಯ ಮಲ್ಲಿಕಾರ್ಜುನ ಜಗದ್ಗುರುಗಳು ಮಾತನಾಡಿ, ನೆಮ್ಮದಿಯ ಬದುಕಿಗೆ ಧರ್ಮವೊಂದೇ ಆಶಯ. ಧರ್ಮ ಸಂಸ್ಕೃತಿ ಸಭ್ಯತೆ ಸದ್ಗುಣ ಸಂಸ್ಕಾರ ಜನರ ನಿಜವಾದ ಆಸ್ತಿ ಎಂದರು. ಶಾಸಕ ಎನ್.ಎಚ್.ಕೋನರೆಡ್ಡಿ ಮಾತನಾಡಿ, ದುಷ್ಟ ಜನರ ಸಹವಾಸದಿಂದ ದೂರವಿದ್ದು ಭವ ಬಂಧನ ಪರಿಹರಿಸುವ ಗುರುವನ್ನು ಕೂಡಿ ಬಾಳಬೇಕು ಎಂದರು. ಮಾಜಿ ಶಾಸಕ ಶಂಕರ ಪಾಟೀಲ ಮುನೇನಕೊಪ್ಪ ಮಾತನಾಡಿ, ಧರ್ಮ ಮತ್ತು ಜಾತಿಗಳ ಮಧ್ಯೆ ನಡೆಯುತ್ತಿರುವ ಸಂಘರ್ಷ ನಿಲ್ಲಲು ಧರ್ಮ ಪೀಠಗಳ ಮಾರ್ಗದರ್ಶನದ ಅವಶ್ಯಕತೆಯಿದೆ ಎಂದರು.

ನೇತೃತ್ವ ವಹಿಸಿದ್ದ ಪಂಚಗೃಹ ಹಿರೇಮಠದ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನಮ್ಮ ಪಟ್ಟಾಧಿಕಾರಕ್ಕೂ 5 ಜನ ಜಗದ್ಗುರುಗಳು ದಯಮಾಡಿಸಿ ಆಶೀರ್ವದಿಸಿದ್ದರು. ಇಂದು ಮತ್ತೆ ನಮ್ಮ ಮಠದ ಪಟ್ಟಾಧಿಕಾರ ಸಮಾರಂಭಕ್ಕೆ ಜಗದ್ಗುರುಗಳೈವರು ಆಗಮಿಸಿರುವುದು ಮತ್ತೊಂದು ದಾಖಲೆ ಎಂದರು. ಸಮಾರಂಭಕ್ಕೂ ಮುನ್ನ ನವಲಗುಂದ ರಾಜ ಬೀದಿಯಲ್ಲಿ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಿತು.



ಬಸ್ ತಂಗುದಾಣಕ್ಕೆ ಭೂಮಿಪೂಜೆ



◆ **ಹುಬ್ಬಳ್ಳಿ:** ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಮಿಡ್ ಟೌನ್ ಹಾಗೂ ರೋಟರಿ ಸರಸ್ವತಿ ವಿದ್ಯಾಲಯದ ಸಹಯೋಗದಲ್ಲಿ ಗೋಕುಲ್ ರಸ್ತೆಯಲ್ಲಿರುವ ಕುಮಾರ್ ಪಾರ್ಕ್‌ನ ಸುತ್ತಮುತ್ತಲಿನ ಬಡಾವಣೆಗಳ ನಾಗರಿಕರ ಬೇಡಿಕೆಯ ಮೇರೆಗೆ ಸುಸಜ್ಜಿತವಾದ ಬಸ್ ತಂಗು ನಿಲ್ದಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು.

ರೋಟರಿ ಕ್ಲಬ್ ಅಧ್ಯಕ್ಷ ಗುಲ್ಜಾರ್ ಅಹಮದ್ ಭೂಮಿಪೂಜೆ ನೆರವೇರಿಸಿ ಮಾತನಾಡಿ, ರೋಟರಿ ಒಂದು ಸೇವಾ ಸಂಸ್ಥೆಯಾಗಿದ್ದು , ವಿವಿಧ ಸಮಾಜ ಸೇವೆಗಳ ಜೊತೆಗೆ ರೇಣುಕಾ ನಗರ , ಗಾಂಧಿನಗರ, ಕುಮಾರ್ ಪಾರ್ಕ್ ಹಾಗೂ ರಾಧಾಕೃಷ್ಣ ನಗರಗಳ ನಾಗರಿಕರ ಬೇಡಿಕೆಗೆ ಅನುಗುಣವಾಗಿ ಈ ಭಾಗದಲ್ಲಿ ಅತೀ ಅವಶ್ಯವಿದ್ದ ಬಸ್ ತಂಗು ನಿಲ್ದಾಣವನ್ನು ಇಂದು ನಮ್ಮ ಕ್ಲಬ್ ವತಿಯಿಂದ ಕಟ್ಟಿಕೊಡುತ್ತಿದ್ದೇವೆ. ಇದನ್ನು ಸಾರ್ವಜನಿಕರು ಸರಿಯಾಗಿ ನಿರ್ವಹಣೆ ಮಾಡಿ ಎಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಸತೀಶ ಹಾನಗಲ್, ರೋಟರಿ ಕಾರ್ಯದರ್ಶಿ ವಿಶ್ವನಾಥ ಅಂಗಡ್ಕಿ, ಸರಸ್ವತಿ ವಿದ್ಯಾಲಯದ ಅಧ್ಯಕ್ಷ ಲಿಂಗರಾಜ ಪಾಟೀಲ, ರೋಟರಿ ಸದಸ್ಯರುಗಳಾದ ವಿವೇಕ ನಾಯಕ, ಪ್ರಕಾಶ ಕಣ್ಣೂರ್, ಪ್ರವೀಣ ಬನ್ಸಾಲಿ , ಕೌಸ್ತುಬ್ ಸಂಶೇಕರ್, ರಮೇಶ ಬೋರಾ, ಬುಜಬಲಿ ಮಾಲಗತ್ತಿ, ಪ್ರದೀಪ ಶೆಟ್ಟಿ , ಗುರು ಸುಖಾಲಿ, ಕೀರ್ತಿ ದೇಶಪಾಂಡೆ ಹಾಗೂ ನಾಗರಿಕ ವೇದಿಕೆಯ ಶರತ ಕುಮಾರ ಅಡಿಗುಡಿ, ಡಾ. ವಿ.ಎಸ್. ಶಾಸ್ತ್ರಿಮಠ ಹಾಗೂ ಇತರರಿದ್ದರು.

ಧರ್ಮಗಳಲ್ಲಿ ಸಾಮರಸ್ಯ ಅಡಕ

◆ **ಧಾರವಾಡ:** ಕನ್ನಡ ನಾಡಿನಲ್ಲಿ ಹಲವಾರು ಧರ್ಮಗಳು ಸಾಮರಸ್ಯದ ಬಾಳ್ವೆಯ ಅರಿವು ಮತ್ತು ಅನುಭಾವ ನೀಡಿದ್ದಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಬಸವರಾಜ ಕಲ್ಗುಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಪೀಠವು ಕವಿವಿ ಸುವರ್ಣ ಮಹೋತ್ಸವ ಭವನದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಎಂಬ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ಸಾಮರಸ್ಯ ಹೊಂದಿದ ಜೀವನ ನಡೆಸಲು ಅನೇಕ ಧರ್ಮಗಳು ತಾತ್ವಿಕ ಚಿಂತನೆ ಹೊಂದಿವೆ. ಜೈನ ಮತ್ತು ಬೌದ್ಧ ಧರ್ಮಗಳು ಕನ್ನಡ ನಾಡಿನಲ್ಲಿ ಸಮರಸದ ಬಾಳ್ವೆಯ ಅರಿವು ನೀಡಿದವು. ಅಲ್ಲಮ ಮತ್ತು ಮಧುರ ಚೆನ್ನರ ಜ್ಞಾನ-ಅರಿವಿನ ಸಾಮರಸ್ಯ ವಿಶೇಷ ಸಂದೇಶ ನೀಡಿವೆ. ಕೇರಳದಲ್ಲಿ ನಾರಾಯಣ ಗುರು ಅವರು ಅದ್ವೈತ ಸಿದ್ಧಾಂತ ಬಳಸಿ ನಡೆಸಿದ ಆಂದೋಲನ ಮತ್ತು ಕಾಂತ್ರಿಯ ಅಮಾನವೀಯ ಕೃತ್ಯವನ್ನೂ ಸ್ಮರಿಸಿದರು.

ಕವಿವಿ ಪ್ರಭಾರ ಕುಲಸಚಿವ ಪ್ರೊ. ಎ.ಎಚ್.ಅಗಡಿ ಮಾತನಾಡಿ, 12ನೇ ಶತಮಾನದಲ್ಲಿ ವಚನಕಾರರು ತಮ್ಮ ವಚನಗಳ ಮೂಲಕ ಸತ್ಯ, ಕಾಯಕ ಸೇರಿದಂತೆ ಜೀವನದ ಸಂದೇಶ ಮೌಲ್ಯಗಳನ್ನು ಹಾಗೂ ಸೌಹಾರ್ದತೆ ಸಂದೇಶ ನೀಡಿದ್ದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್ ಮಾತನಾಡಿ, ಭಾರತದ ವಿಭಿನ್ನ ಪರಂಪರೆಗಳು ಮನುಷ್ಯನಲ್ಲಿ ಅನುಭಾವ ಬೆಳೆಸುವಲ್ಲಿ ಸಹಕಾರಿಯಾಗಿವೆ. ಮನುಷ್ಯನಲ್ಲಿ ಸಹಬಾಳ್ವೆ ನಡೆಸಲು ಅನೇಕ ಮಹಾತ್ಮರು ವಚನಗಳ ದಾರಿದೀಪ ಎಂದರು.

ಪ್ರಾಧ್ಯಾಪಕ ಡಾ.ಜಯದೇವಿ ಜಂಗಮಶೆಟ್ಟಿ ವಚನ ಸಂಗೀತ ನಡೆಸಿಕೊಟ್ಟರು. ಡಾ. ಎ.ಎಂ.ಕಡಕೋಳ, ಡಾ.ನಿಜಲಿಂಗಪ್ಪಮಟ್ಟಿಹಾಳ, ಡಾ.ವೀರಣ್ಣ ರಾಜೂರ, ಡಾ. ಕೆ.ಆರ್.ದುರ್ಗಾದಾಸ, ಡಾ.ಈರಣ್ಣ ಇಂಜನಗೇರಿ, ಪ್ರೊ. ಶಿರಾಳಶೆಟ್ಟಿ ಅನೇಕರು ಪಾಲ್ಗೊಂಡಿದ್ದರು. ಅನುಭಾವದ ಪರಿಕಲ್ಪನೆ ಮತ್ತು ಪರಂಪರೆ ಕುರಿತು ಪ್ರೊ. ಬಸವರಾಜ ಕಲ್ಗುಡಿ, ದಾಸ ಸಾಹಿತ್ಯದಲ್ಲಿ ಅನುಭಾವ ಕುರಿತು ಡಾ.ಅವಿನಾಶ ಕವಿ ಹಾಗೂ ಪ್ರಾಧ್ಯಾಪಕಿ ಡಾ.ಗೀತಾ ವಸಂತ, ತಳಸಮುದಾಯದ ಸಾಹಿತ್ಯದಲ್ಲಿ ಅನುಭಾವ ಕುರಿತು ಪ್ರೊ. ವೆಂಕಟಗಿರಿ ದಳವಾಯಿ ವಿಷಯ ಮಂಡಿಸಿದರು.



ತನಿಖೆ ನಡೆಯುತ್ತಿರುವ ಸಮಯದಲ್ಲಿಯೂ ದೇಣಿಗೆ ಸಂಗ್ರಹ: ಮುತಾಲಿಕ್

◆ **ಹುಬ್ಬಳ್ಳಿ:** ನಗರದ ಹಳೇ ಕೋರ್ಟ್ ವೃತ್ತದಲ್ಲಿರುವ ಸಾಯಿ ಮಂದಿರದ ಅವ್ಯಾವಹಾರ ಆರೋಪದ ಹಿನ್ನಲೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ಈ ವೇಳೆ ಭಕ್ತರ ಹಣ ಲೂಟಿ ಹಾಗೂ ಅನೈತಿಕತೆ ಮಾಡಲಾಗುತ್ತಿದೆ. ಇದನ್ನು ಖಂಡಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಬುಧವಾರ ಸಾಯಿ ಮಂದಿರ ಎದುರು ಶ್ರೀರಾಮ ಸೇನೆ ಪ್ರಮೋದ ಮುತಾಲಿಕ್ ನೇತೃತ್ವದಲ್ಲಿ ಸಮಾವೇಶಗೊಂಡ ಕಾರ್ಯಕರ್ತರು ಸಾಯಿ ಮಂದಿರದ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಕಾರ್ಯಕರ್ತರು ಹಾಗೂ ಮಂಡಳಿಯ ಸದಸ್ಯರ ನಡುವೆ ಮಾತಿನ ಚಕಾಮುಖಿ ನಡೆದಿದ್ದು, ಆಡಳಿತ ಮಂಡಳಿಯ ಅಧ್ಯಕ್ಷ ಮಹದೇವ ಮಾಶ್ಯಾಲ ಮೇಲೆ ಹಲ್ಲೆ ನಡೆಸಲು ಯತ್ನಿಸಿದರು. ಪೊಲೀಸರು ಮಧ್ಯ ಪ್ರವೇಶಿಸಿ ಘಟನೆ ತಪ್ಪಿಸಿದರು. ತನಿಖೆ ಮುಗಿಯುವವರೆಗೆ ಕಾಣಿಕೆ ಪೆಟ್ಟಿಗೆಯನ್ನು ತೆರೆಯಬಾರದು ಎಂದು ಮಂದಿರದ ಆವರಣದಲ್ಲಿದ್ದ 2 ಕಾಣಿಕೆ ಪೆಟ್ಟಿಗೆಗಳಿಗೆ ಬೀಗ ಜಡಿದು, ಸೀಜ್ ಮಾಡಿದರು. ಮಂದಿರದಲ್ಲಿ ಯಾವುದೇ ಕಾರ್ಯಕ್ರಮ ನಡೆಸಬಾರದು ಎಂದು ಆಗ್ರಹಿಸಿದರು. ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಮಾತನಾಡಿ, ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. 2 ತಿಂಗಳಲ್ಲಿ ತನಿಖಾ ವರದಿ ಹೊರ ಬರಲಿದೆ. ಆದರೆ ತನಿಖೆ ನಡೆಯುತ್ತಿರುವ ಸಮಯದಲ್ಲಿಯೂ ದೇಣಿಗೆಯನ್ನೂ ಸಂಗ್ರಹಿಸಲಾಗುತ್ತಿದೆ. ಹುಂಡಿಗೆ ಬಿದ್ದ ಹಣವನ್ನು ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಆರೋಪಿಸಿದರು. ಮಂದಿರದ ಪಾವಿತ್ರ್ಯತೆ ಉಳಿಯಬೇಕು ಎಂಬ ಕಳಕಳಿ ನಮ್ಮದು. ಯಾರ ಮೇಲೂ ವೈಯಕ್ತಿಕ ದ್ವೇಶವಿಲ್ಲ, ಭಕ್ತರಿಗೆ, ಪೂಜಾ ಕೈಂಕರ್ಯ, ಅನ್ನದಾನಕ್ಕೆ ತೊಂದರೆಯಾಗಬಾರದು. ಇದೇ ರೀತಿ ಅನೈತಿಕತೆ ನಡೆಸಿದರೆ ಮಂದಿರಕ್ಕೆ ಬೀಗ ಜಡೆಯಲಾಗುವುದು ಎಂದು ಎಚ್ಚರಿಕೆ ನೀಡಿದರು. ಶ್ರೀರಾಮ ಸೇನೆಯ ಕಾರ್ಯಕರ್ತರಾದ ಮಂಜುನಾಥ ಕಾಟಕರ್, ರಘು ಯಲ್ಲಕ್ಕನವರ, ಗುಣಧರ ದಡೂತಿ, ಅಣ್ಣಪ್ಪ ದಿವಟಗಿ, ಮಹಾಂತೇಶ ತೊಂಗಳಿ, ಬಸು ದುರ್ಗದ್, ಪ್ರವೀಣ ಮಾಳದಕರ್ ಇದ್ದರು.



ಮಂದಿರಕ್ಕೆ ನುಗ್ಗಿ ಗೂಂಡಾವರ್ತನೆ

ಮಂದಿರ ವಿರುದ್ಧ ದೂರಿನ ಕುರಿತು ತನಿಖೆ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರು ಮಂದಿರಕ್ಕೆ ನುಗ್ಗಿ ಗೂಂಡಾವರ್ತನೆ ತೋರಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ ಎಂದು ಆಡಳಿತ ಮಂಡಳಿ ಅಧ್ಯಕ್ಷ ಮಹಾದೇವ ಮಾಶ್ಯಾಳ ಪ್ರಕಟಣೆಗೆ ತಿಳಿಸಿದ್ದಾರೆ. ಆಡಳಿತಾಧಿಕಾರಿ, ಜಿಲ್ಲಾಧಿಕಾರಿಗಳು, ವಿಚಾರಣಾಧಿಕಾರಿಗಳು ಯಾವುದಕ್ಕೂ ತಡೆ ನೀಡಿಲ್ಲ, ಸಂಬಂಧಪಟ್ಟ ಅಧಿಕಾರಿಗಳು ಸೂಚನೆ ನೀಡಿದರೆ ಅದನ್ನು ಚಾಚೂ ತಪ್ಪದೇ ಪಾಲನೆ ಮಾಡಲಾಗುವುದು. ಭಕ್ತರ ಹಣದಿಂದ ದೇವಸ್ಥಾನ ನಡೆಯುತ್ತಿದೆ. ನಮ್ಮಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ, ತನಿಖೆಗೆ ಸಂಪೂರ್ಣವಾಗಿ ಸಹಕರಿಸುತ್ತಿದ್ದೇವೆ ಎಂದರು.

ಒಡೆದ ಮನಸ್ಸು ಬೆಸೆಯುವುದೇ ಧರ್ಮದ ಗುರಿ: ರಂಭಾಪುರಿ ಶ್ರೀ

◆ **ನವಲಗುಂದ:** ಸಮಾಜದ ಎಲ್ಲ ರಂಗಗಳಲ್ಲಿ ಹೆಚ್ಚುತ್ತಿರುವ ಸಂಘರ್ಷ ನಿಂತು ಶಾಂತಿ ಸಾಮರಸ್ಯ ಮೂಡಿಸುವ ಕೆಲಸ ಮಠಗಳಿಂದ ನಡೆಯಬೇಕು. ಒಡೆದ ಮನಸ್ಸುಗಳನ್ನು ಬೆಸೆಯುವುದೇ ನಿಜವಾದ ಧರ್ಮದ ಗುರಿಯಾಗಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಅವರು ಬುಧವಾರ ನಗರದ ಪಂಚಗೃಹ ಹಿರೇಮಠದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು. ನವಲಗುಂದ ಪಂಚಗೃಹ ಹಿರೇಮಠಕ್ಕೆ ಇಂದು ಇಮ್ಮಡಿ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ನೂತನ ಶ್ರೀಗಳಾಗಿ ಗುರುತ್ವಾಧಿಕಾರ ಸ್ವೀಕರಿಸಿದ್ದಾರೆ. ನೂತನ ಶ್ರೀಗಳು ಧರ್ಮ ಮತ್ತು ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಲೆಂದರು.

ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಮಾತನಾಡಿ, ಸತ್ಯ ಶಾಂತಿ, ಸಾಮರಸ್ಯ ಸೌಹಾರ್ದತೆ, ಧರ್ಮನಿಷ್ಠೆ ದೇಶ ಭಕ್ತಿ ಬೆಳೆಸುವ ನಿಟ್ಟಿನಲ್ಲಿ ಮಠಗಳು ಕಾರ್ಯ ಮಾಡುತ್ತಾ ಬಂದಿವೆ ಎಂದರು. ಶ್ರೀಶೈಲ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರುಗಳು ಮಾತನಾಡಿ, ಮಠಗಳು ಸಂಸ್ಕಾರ ಸಚ್ಚಾರಿತ್ರ ಬೋಧಿಸುವ ಕೇಂದ್ರಗಳಾಗಬೇಕು ಎಂದರು. ಕಾಶೀ ಡಾ. ಚಂದ್ರಶೇಖರ ಜಗದ್ಗುರುಗಳು ಮಾತನಾಡಿ, ಅರಿವಿನ ಕಣ್ಣು ತೆರೆಸಲು ಅಜ್ಞಾನ ದೂರ ಮಾಡಲು ಗುರು ಆವಶ್ಯಕ ಎಂದರು. ಕಾಶೀ ನೂತನ ಡಾ.ವಿಶ್ವಾರಾಧ್ಯ ಮಲ್ಲಿಕಾರ್ಜುನ ಜಗದ್ಗುರುಗಳು ಮಾತನಾಡಿ, ಮನುಷ್ಯನ ಮನಸ್ಸೆಂಬ ಆವೇಶದ ಚಂಚಲದ ಹೊಯ್ದಾಟವನ್ನು ಶಾಂತ ಪ್ರಶಾಂತಗೊಳಿಸಿ ಸನ್ಮಾರ್ಗಕ್ಕೆ ಕರೆದೊಯ್ಯುವುದೇ ಗುರುವಿನ ಧರ್ಮವಾಗಿದೆ ಎಂದರು. ನೂತನ ಶ್ರೀಗಳವರಿಗೆ ಹಿರಿಯ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಷಟಸ್ಥಲ ಬ್ರಹ್ಮೋಪದೇಶ ನೀಡಿ ಗುರುತ್ವ ಅಧಿಕಾರ ಅನುಗ್ರಹಿಸಿದರು. ನವಲಗುಂದ ಪಂಚಗೃಹ ಹಿರೇಮಠದ ನೂತನ ಇಮ್ಮಡಿ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪೂರ್ವ ಜನ್ಮದ ಸುಕೃತ ಮತ್ತು ಸಿದ್ಧೇಶ್ವರ ಶಿವಾಚಾರ್ಯರ ಆಶೀರ್ವಾದದಿಂದ ಶ್ರೀ ಮಠದ ಪಟ್ಟಾಧ್ಯಕ್ಷನಾಗಿರುವೆ. ವೀರಶೈವ ಧರ್ಮ ಪರಂಪರೆಯ ಆದರ್ಶ ಮೌಲ್ಯಗಳ ಸಂರಕ್ಷಣೆ-ಗುರುಸ್ಥಲದ ಮಹತ್ವವನ್ನು ಅರಿತು ಭಕ್ತ ಸಂಕುಲಕ್ಕೆ ಮಾರ್ಗದರ್ಶನ ಮಾಡುವೆ ಎಂದರು. ಪಂಚಗೃಹ ಹಿರೇಮಠದ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರಮಾಚಾರ್ಯರ ಆಶೀರ್ವಾದ ಮತ್ತು ಭಕ್ತರ ಸಹಕಾರ ದೊಡ್ಡದು ಎಂದರು. ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿ, ಪಂಚಗೃಹ ಹಿರೇಮಠ ಭಕ್ತರಿಗೆ ಶ್ರದ್ಧಾ ಕೇಂದ್ರವಾಗಿದೆ. ನೂತನ ಶ್ರೀಗಳು ಶ್ರೀಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಜೊತೆಗೆ ಹಿರಿಯ ಶ್ರೀಗಳ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು ಎಂದರು. ನರಗುಂದ ಪಂಚಗೃಹ ಹಿರೇಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯರು ನಿರೂಪಿಸಿದರು.



ಕಿರುಸುದ್ದಿ

ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳ ರಕ್ಷಣೆ: ಮೂವರ ವಿರುದ್ಧ ಪ್ರಕರಣ

ಕಲಬುರಗಿ: ಅಕ್ರಮವಾಗಿ ಗೋವುಗಳನ್ನು ಸಾಗಣೆ ಮಾಡುತ್ತಿದ್ದ ಪಿಕ್‌ಅಪ್ ವಾಹನವನ್ನು ಚೌಕ್ ಪೊಲೀಸರು ವಶಪಡಿಸಿಕೊಂಡು, ವಾಹನದಲ್ಲಿದ್ದ 7 ಜಾನುವಾರುಗಳನ್ನು ರಕ್ಷಿಸಿದ ಘಟನೆ ಕಲಬುರಗಿ ನಗರದ ಆಳಂದ ಚೆಕ್‌ಪೋಸ್ಟ್ ಸಮೀಪ ಮಂಗಳವಾರ ಮಧ್ಯರಾತ್ರಿ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ಮೇಲೆ ದೂರು ದಾಖಲಾಗಿದೆ.

ಶಹಾಬಜಾರ್ ನಿವಾಸಿ ರಮೇಶ್ ಲೋಕರಾಸ್ (42) ಅವರ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ದೂರಿನ ಪ್ರಕಾರ ಮಂಗಳವಾರ ರಾತ್ರಿ ಸುಮಾರು 2.15 ಗಂಟೆ ವೇಳೆಗೆ ರಮೇಶ್ ಹಾಗೂ ಅವರೊಂದಿಗೆ ಇದ್ದ ಶರಣು ಸಾಗರ, ವಿನೋದ್ ಮತ್ತು ಸಾಯಿಕುಮಾರ್ ಆಳಂದ ಚೆಕ್‌ಪೋಸ್ಟ್ ಹತ್ತಿರ ಸಂಶಯಾಸ್ಪದವಾಗಿ ಸಂಚರಿಸುತ್ತಿದ್ದ ಬಿಳಿ ಬಣ್ಣದ ಪಿಕ್‌ಅಪ್ ವಾಹನ ತಡೆದು ಪರಿಶೀಲಿಸಿದ್ದಾರೆ .ಈ ವೇಳೆ ವಾಹನದಲ್ಲಿ 7 ಗೋವುಗಳನ್ನು ತುಂಬಿಕೊಂಡು ಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ. ವಾಹನ ಚಾಲಕನನ್ನು ಜಾನುವಾರುಗಳ ಸಾಗಣೆ ಕುರಿತು ದಾಖಲೆಗಳನ್ನು ಕೇಳಿದಾಗ ಯಾವುದೇ ದಾಖಲಾತಿ ಇಲ್ಲ ಎಂದು ತಿಳಿಸಿದ್ದಾನೆ ಎನ್ನಲಾಗಿದೆ. ತಕ್ಷಣ ಚೌಕ್ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದ್ದು, ಠಾಣೆಯ ಸಿಬ್ಬಂದಿ ಶಿವಲೀಲಾವತಿ ಪಿಎಸ್‌ಐ, ರಾಜು ಪಿಎಸ್‌ಐ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ವಾಹನ ವಶಪಡಿಸಿಕೊಂಡಿದ್ದಾರೆ. ವಾಹನದಲ್ಲಿ 7 ಜಾನುವಾರುಗಳನ್ನು ಕಟ್ಟಿ ಸಾಗಣೆ ಮಾಡಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ವಾಹನ ಚಾಲಕನು ತನ್ನ ಹೆಸರನ್ನು ಮಹತಾಬ್ ಅಲಿಯಾಸ್ ಖುರ್ಷೀದ್ (45) ಎಂದು ಹೇಳಿಕೊಂಡಿದ್ದು, ಮುಂಬರುವ ಬಕ್ರೀದ್ ಹಬ್ಬದ ನಿಮಿತ್ತ ಮಾರಾಟಕ್ಕಾಗಿ ಜಾನುವಾರುಗಳನ್ನು ಸಾಗಣೆ ಮಾಡುತ್ತಿರುವುದಾಗಿ ವಿಚಾರಣೆಯಲ್ಲಿ ತಿಳಿಸಿದ್ದಾನೆ ಎನ್ನಲಾಗಿದೆ.ಜಾನುವಾರುಗಳ ಮಾಲೀಕ ಮಹತಾಬ್ ಸಿರಾಜ್ ಮಜ್ಗರ್ ಎಂಬಾತನಾಗಿದ್ದು, ವಾಹನದ ಮಾಲೀಕ ಶಫೀಕ್ ಎಂದು ತಿಳಿದುಬಂದಿದೆ. ಈ ಸಂಬಂಧ ಚೌಕ್ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ. 88/2026 ಅಡಿಯಲ್ಲಿ ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ–2020ರ ವಿವಿಧ ಕಲಂಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

24 ಗಂಟೆಯಲ್ಲೆ ಪತ್ತೆ ಹಚ್ಚಿದ ಪೊಲೀಸರು

ಬೆಳಗಾವಿ: ಎಪಿಎಂಸಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ 29,00,000 ಲಕ್ಷ ರೂ ಮೌಲ್ಯದ ಎರಡು ಕಾರುಗಳನ್ನು ವಶಕ್ಕೆ ಪಡೆದಿದ್ದಾರೆ. ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಿಯಾಂಕಾ ಚೇತನ ಅಜರೇಕರ ಅವರು ತಮ್ಮ ಕಾರು ಕಳ್ಳತನವಾದ ಬಗ್ಗೆ ದೂರು ನೀಡಿದ್ದರು. ಪ್ರಕರಣವನ್ನು ಪತ್ತೆ ಹಚ್ಚಲು ತನಿಖೆ ನಡೆಸಿದ ಪೊಲೀಸರು ಕಳ್ಳತನವಾದ ಕಾರನ್ನು ಮಹಾರಾಷ್ಟ್ರದ ಮುಂಬೈನಿಂದ 24 ಗಂಟೆಯಲ್ಲಿ ಪತ್ತೆ ಮಾಡಿದ್ದಾರೆ.

ಬೆಳಗಾವಿ–ಮುಂಬೈ ಕಾರ್ ಕಳ್ಳತನ

ಅಲ್ಲದೇ ಧಾರವಾಡ ಸಬ್ ಅರ್ಬನ ಪೊಲೀಸ್ ಠಾಣೆಯಲ್ಲಿ ಕಳ್ಳತನವಾದ ಹುಂಡೈ ಕಂಪನಿಯ ಕಾರನ್ನು ಸಹ ಪತ್ತೆ ಮಾಡಲಾಗಿದೆ. ಈ ಎರಡು ಕಾರಗಳನ್ನು ಕಳ್ಳತನ ಮಾಡಿದ ಆರೋಪಿತರು ಎರಡು ಕಾರಗಳನ್ನು ಬಿಟ್ಟು ಪರಾರಿಯಾಗಿದ್ದು ಅವರನ್ನು ಪತ್ತೆ ಮಾಡುವ ತನಿಖೆಯ ಕೆಲಸ ಮುಂದುವರಿದಿದೆ.

ಸಿಲಿಂಡರ್ ಸ್ಫೋಟ: ತಪ್ಪಿದ ಅನಾಹುತ

ರಾಯಚೂರು: ಮಂತ್ರಾಲಯದ ರಾಘವೇಂದ್ರಸ್ವಾಮಿ ಮಠದಲ್ಲಿನ ಕಟ್ಟಡ ನಿರ್ಮಾಣ ಕಾರ್ಯ ಮಾಡುತ್ತಿದ್ದ ಕಾರ್ಮಿಕರಿದ್ದ ಶೆಡ್‌ನಲ್ಲಿದ್ದ ಅಡುಗೆ ಅನಿಲದ ಒಂದು ಸಿಲಿಂಡರ್ ಸ್ಫೋಟಗೊಂಡಿದ್ದು, ಇನ್ನೆರಡು ಸಿಲೆಂಡರುಗಳನ್ನು ಸುರಕ್ಷಿತವಾಗಿ ಹೊರತಗೆಯಲಾಗಿದೆ.ಈ ಸಿಲೆಂಡರ ಸ್ಫೋಟದಿಂದ ಯಾವುದೇ ಕಾರ್ಮಿಕರಿಗೆ ಹಾನಿಯಾಗಿಲ್ಲ. ಭಕ್ತರ ವಸತಿ ಗೃಹಗಳ ಬಳಿಯಿದ್ದ ಐದು ಶೆಡ್‌ಗಳಲ್ಲಿ ಈ ಘಟನೆ ಸಂಭವಿಸಿದೆ. ಕಾರ್ಮಿಕರು ಕಟ್ಟಡ ನಿರ್ಮಾಣ ಕಾರ್ಯಕ್ಕೆ ತೆರಳಿದ್ದ ಸಂದರ್ಭದಲ್ಲಿ ಸಿಲಿಂಡರ್ ಸ್ಫೋಟಗೊಂಡಿದೆ. ಸಿಲೆಂಡರ ಸ್ಫೋಟಗೊಂಡ ತಕ್ಷಣ ಅಗ್ನಿ ಶಾಮಕ ದಳ, ಮಂತ್ರಾಲಯ ಪೊಲೀಸರು ಬೆಂಕಿಯನ್ನು ನಂದಿಸಿದ್ದಾರೆ. ಉಳಿದ ಎರಡು ಸಿಲೆಂಡರ್‌ಗಳು ಹಾನಿಗೊಳಗಾಗುವುದಕ್ಕೂ ಪೂರ್ವದಲ್ಲಿ ಹೊರ ತಗೆದು ಹೆಚ್ಚಿನ ಅನಾಹುತ ಸಂಭವಿಸುವುದನ್ನು ತಪ್ಪಿಸಿದ್ದಾರೆ. ಬಿಸಿಲಿನ ತಾಪ ಇಲ್ಲವೆ ಶಾರ್ಟ್ ಸರ್ಕ್ಯೂಟ್ ನಿಂದ ಸಿಲಿಂಡರ ಸ್ಫೋಟಗೊಂಡಿರಬೇಕೆಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಮಂತ್ರಾಲಯ ಮಠದ ಸುಬುಧೇಂದ್ರತೀರ್ಥ ಸ್ವಾಮೀಜಿ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಈ ಅವಘಡದಿಂದ ಕಾರ್ಮಿಕರು ಸಂಗ್ರಹಿಸಿದ್ದ ಆಹಾರ ಧಾನ್ಯಗಳು ಹಾಳಾಗಿದ್ದು 20 ಜನರಿಗೆ ಬೇಕಾದ ಆಹಾರ ಧಾನ್ಯಗಳನ್ನು ನೀಡುವುದಾಗಿ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

12 ದಿನಗಳಲ್ಲಿ 3.66 ಲಕ್ಷಕ್ಕೂ ಅಧಿಕ ಬಾರಿ ಟ್ರಾಫಿಕ್ ರೂಲ್ಸ್ ಬ್ರೇಕ್

ಎಐ ಕಣ್ಗಾವಲಿನಲ್ಲೂ ನಿಲ್ಲದ ಸಂಚಾರಿ ನಿಯಮ ಉಲ್ಲಂಘನೆ

ರಾಚಪ್ಪಾ ಜಂಬಗಿ

ಕಲಬುರಗಿ: ಸಾರ್ವಜನಿಕರ ಸುರಕ್ಷತೆ ಹಾಗೂ ಸಂಚಾರಿ ನಿಯಮಗಳ ಕಡ್ಡಾಯ ಪಾಲನೆಗಾಗಿ ನಗರದಲ್ಲಿ ವಿವಿಧೆಡೆ ಅಳವಡಿಸಿರುವ ಎಐ ಆಧಾರಿತ ಅತ್ಯಾಧುನಿಕ ಕ್ಯಾಮೆರಾಗಳಿದ್ದರೂ ಸಂಚಾರಿ ನಿಯಮ ಉಲ್ಲಂಘನೆಗಳು ಮಾತ್ರ ಕಡಿಮೆಯಾಗದಿರುವುದು ಕಳವಳಕ್ಕೆ ಕಾರಣವಾಗಿದೆ.

ದಿಗಂತ ವಿಶೇಷ

ಕಳೆದ ಮೇ 1ರಿಂದ ಮೇ 12ರವರೆಗೆ ನಗರ ವ್ಯಾಪ್ತಿಯಲ್ಲಿ 3.66 ಲಕ್ಷಕ್ಕೂ ಅಧಿಕ ಬಾರಿ ವಿವಿಧ ರೀತಿಯ ಸಂಚಾರಿ ನಿಯಮ ಉಲ್ಲಂಘನೆಗಳು ನಡೆದಿರುವುದು ನಗರ ಪೊಲೀಸ್ ಇಲಾಖೆಯ ಅಂಕಿ ಅಂಶಗಳಿಂದ ತಿಳಿದುಬಂದಿದೆ.

ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ಸಿಗ್ನಲ್ ಜಂಪ್, ಅತಿವೇಗ, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ, ವಾಹನ ಚಾಲನೆ ವೇಳೆ ಮೊಬೈಲ್ ಫೋನ್ ಬಳಕೆ ಹಾಗೂ ಟ್ರಿಪಲ್ ರೈಡಿಂಗ್ ಪ್ರಕರಣಗಳು ಹೆಚ್ಚಾಗಿ ದಾಖಲಾಗಿವೆ. ಸಂಚಾರ ನಿಯಮಗಳ ಬಗ್ಗೆ ಸಾರ್ವಜನಿಕರಲ್ಲಿ ಇನ್ನೂ ಸಮರ್ಪಕ ಜಾಗೃತಿ ಮೂಡದಿರುವುದು ಸ್ಪಷ್ಟವಾಗುತ್ತಿದೆ.

4 ವಿಶೇಷ ಎಐ ಕ್ಯಾಮೆರಾ ! ನಗರದ 58 ಪ್ರಮುಖ ಸ್ಥಳಗಳಲ್ಲಿ ಒಟ್ಟು 180 ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಇದರಲ್ಲಿ ನಾಲ್ಕು ವಿಶೇಷ ಎಐ ಕ್ಯಾಮೆರಾ ಸೇರಿವೆ. ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಈ ಕ್ಯಾಮೆರಾಗಳು ರಾತ್ರಿ ಹೊತ್ತಿನಲ್ಲೂ ವಾಹನಗಳ ಚಲನವಲನಗಳ ಮೇಲೆ ಹದ್ದಿನ ಕಣ್ಣಿಟ್ಟಿವೆ. ವಾಹನಗಳ ನೋಂದಣಿ ಸಂಖ್ಯೆ ಗುರುತಿಸುವ ಸಾಮರ್ಥ್ಯ ಹೊಂದಿರುವ ಈ ವ್ಯವಸ್ಥೆ ನಿಯಮ ಉಲ್ಲಂಘನೆಗಳನ್ನು ತಕ್ಷಣ ಪತ್ತೆಹಚ್ಚಿ ದಂಡ ವಿಧಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

6 ದಿನಗಳಲ್ಲಿ 18.36 ಲಕ್ಷ ರೂ. ದಂಡ



12 ದಿನಗಳಲ್ಲಿ 3,66,089 ಬಾರಿ ಉಲ್ಲಂಘನೆ

ಸಂಚಾರಿ ನಿಯಮಗಳನ್ನು ಪಾಲಿಸುವ ಮೂಲಕ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಹಕರಿಸಬೇಕು ಎಂದು ನಗರ ಪೊಲೀಸ್ ಆಯುಕ್ತಾಲಯ ಮನವಿ ಮಾಡಿದ್ದರೂ, ಮೇ 1ರಿಂದ ಮೇ 12ರವರೆಗೆ ನಗರದಲ್ಲಿ ಇಲ್ಲಿಯವರೆಗೆ 3,66,089 ಬಾರಿ ಸಂಚಾರಿ ನಿಯಮ ಉಲ್ಲಂಘನೆ ದಾಖಲಾಗಿದೆ. ಹೆಲ್ಮೆಟ್ ಇಲ್ಲದೇ ವಾಹನ ಚಾಲನೆ, ಮೊಬೈಲ್ ಬಳಸುತ್ತಾ ವಾಹನ ಚಲಾಯಿಸುವುದು, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ ಹಾಗೂ ಟ್ರಿಪಲ್ ರೈಡಿಂಗ್ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿವೆ.

ದಿನಾಂಕ	ಪ್ರಕರಣ ಸಂಖ್ಯೆ	ದಂಡ
ಮೇ 7	436	₹2,84,000
ಮೇ 8	178	₹10,8500
ಮೇ 9	368	₹22,9000
ಮೇ 10	221	₹1,43,500
ಮೇ 11	629	₹3,74,500
ಮೇ 12	1192	₹6,97,000

ಸಾರ್ವಜನಿಕರು ಕಡ್ಡಾಯವಾಗಿ ಸಂಚಾರಿ ನಿಯಮ ಪಾಲನೆ ಮಾಡುತ್ತಿಲ್ಲ. ನೆಪ ಹೇಳಿ ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆ. ಈಗೇನೂ ಉಲ್ಲಂಘನೆಯಾಗಿದೆ ಅದರಲ್ಲಿ ನಿಧಾನವಾಗಿ ಚಲನ್ ಜನರೇಟ್ ಮಾಡ್ತಾ ಇದಿವಿ.ಮುಂದಿನ ದಿನಗಳಲ್ಲಿ ಕಂಪ್ಲೀಟ್ ಸ್ವಯಂಚಾಲಿತ ಆಗಲಿದೆ. ನಮ್ಮ ಕಳಕಳಿ ಸಾರ್ವಜನಿಕರು ಯಾರು ಸಹ ದಂಡ ಕಟ್ಟಬಾರದು ಅಂತ.ಬದಲಾಗಿ ಸಂಚಾರಿ ನಿಯಮ ಪಾಲಿಸಬೇಕು.ಸಾರ್ವಜನಿಕರು ನಿರ್ಲಕ್ಷ್ಯ ತೋರಿದರೆ ದಂಡ ಅನಿವಾರ್ಯ. ಜೂನ್ ತಿಂಗಳಿಂದ ನಿಯಮ ಮತ್ತಷ್ಟು ಬಿಗಿಗೊಳ್ಳಲಿವೆ.

■ **ಡಾ.ಶರಣಪ್ಪ ಎಸ್ ಡಿ, ನಗರ ಪೋಲಿಸ್ ಆಯುಕ್ತರು, ಕಲಬುರಗಿ**

ಇಂದಿರಾ ಹೇಳಿಕೆ ಮರೆತ ಕಾಂಗ್ರೆಸ್: ಶಾಸಕ ಪಾಟೀಲ



ಗದಗ: ವಿದೇಶಿ ವಿನಿಮಯ ಕೊರತೆ ಆಗಬಾರದು ಮತ್ತು ದೇಶದ ಹಿತದೃಷ್ಟಿಯಿಂದ ಕೆಲ ಸಂಪನ್ಮೂಲಗಳ ಬಳಕೆಯಲ್ಲಿ ಮಿತವ್ಯಯ ಅನುಸರಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಅದನ್ನೇ ದಿಕ್ಕು ತಪ್ಪಿಸುವ ರೀತಿಯಲ್ಲಿ ಕೇಂದ್ರದ ವಿಪಕ್ಷ ಕಾಂಗ್ರೆಸ್ ಹೇಳಿಕೆ ನೀಡುತ್ತಿರುವುದು ಅಪಹಾಸ್ಯ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಈ ಹಿಂದೆ ದೇಶದ ಹಿತ ಕಾಪಾಡುವ ದೃಷ್ಟಿಯಿಂದ 1967 ರಲ್ಲಿ ಇಂದಿರಾ ಗಾಂಧಿ ಅವರು ಕೂಡ ಇಂತಹದ್ದೇ ಹೇಳಿಕೆ ನೀಡಿದ್ದರು. ಕಾಂಗ್ರೆಸ್ ಪ್ರಧಾನಿ ಆಗಿದ್ದ ಮನಮೋಹನ್ ಸಿಂಗ್, ವೀರಪ್ಪ ಮೊಯ್ಲಿ, ಕಪಿಲ್ ಸಿಬಲ್ ಅವರು ಹಲವು ಸಂದರ್ಭಗಳಲ್ಲಿ ತೈಲದ ಮಿತ ಬಳಕೆ ಕುರಿತು ಹೇಳಿಕೆ ನೀಡಿದ್ದರು.

ಇಂಧಿರಾ ಗಾಂಧಿ ಅವರು ಆರ್ಥಿಕ ಶಿಸ್ತು ಕಾಪಾಡಲು ಚಿನ್ನ ಖರೀದಿಸಬೇಡಿ ಎಂದು ಹೇಳಿಕೆ ನೀಡಿದ್ದನ್ನು ಇಂದಿನ ಕಾಂಗ್ರೆಸ್ ಮುಖಂಡರು ಮರೆತಿದ್ದಾರೆ. ರಾಹುಲ್ ಗಾಂಧಿ ಇನ್ನೂ ಹುಡುಗನಿದ್ದಾನೆ. ಚುನಾವಣಾ ಫಲಿತಾಂಶದ ದಿನ ವಿದೇಶ ಪ್ರಯಾಣ ಬೆಳೆಸುತ್ತಾರೆ. ಇಂತವರು ಪೂರ್ವಾಪರ ಆಲೋಚನೆ ಇಲ್ಲದೇ ಮಾತನಾಡುತ್ತಿದ್ದಾರೆ. ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ, ಹಲವು ಬಾರಿ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ಹೇಳಿಕೆ ಆಲೋಚಿಸದೇ ವಿರೋಧಿಸುತ್ತಿದ್ದಾರೆ. ದೇಶದ ಭದ್ರತೆ ವಿಷಯದಲ್ಲಿ ರಾಜಕಾರಣ ಮಾಡಬಾರದು ಎಂದು ಹೇಳಿದರು.

ಮಧ್ಯ ಪ್ರಾಚ್ಯದಲ್ಲಿ ಯುದ್ಧ ನಡೆದಾಗ ಅದರ ಪರಿಣಾಮ ಭಾರತದ ಮೇಲೂ ಆಗಲಿದೆ. ಪ್ರಧಾನಿ ಮೋದಿ ಅವರು ತಮ್ಮ ಸ್ವಂತಕ್ಕಾಗಿ ಹೇಳಿಲ್ಲ. ತಮಿಳುನಾಡಿನ ಸಿಎಂ ವಿಜಯ್ ಅವರು, ಚುನಾವಣೆ ಮೊದಲು ಕೇವಲ ವಿಜಯ್ ಆಗಿದ್ದರು. ಚುನಾವಣೆ ನಂತರ ಜೋಸೆಫ್ ವಿಜಯ ಆದರು. ಸನಾತನ ಹಿಂದೂಗಳು ಇದೆಲ್ಲವನ್ನು ಅರ್ಥ ಮಾಡಿಕೊಳ್ಳಬೇಕು. ಸ್ಟ್ಯಾಲಿನ ಅವರು ಸನಾತನ ಧರ್ಮ ನಾಶ ಮಾಡಬೇಕು ಎಂದು ಹೇಳಿದ್ದಾರೆ. ಸನಾತನ ವಿರೋಧಿಸಿದರು ಎಲ್ಲರೂ ಒಂದಿಲ್ಲೊಂದು ಕಾರಣದಿಂದ ನಾಶ ಆಗಿದ್ದಾರೆ. ಹಾಗೆಯೇ ಸ್ಟ್ಯಾಲಿನ ಅವರು ರಾಜಕಾರಣದಿಂದ ನಾಶ ಆಗಲಿದ್ದಾರೆ ಎಂದರು.

ನಗರಸಭೆಯ ಬಿಜೆಪಿ ಮೂವರ ಸದಸ್ಯರ ಅನರ್ಹತೆ ಆದೇಶವನ್ನು ಹೈಕೋರ್ಟ್ ರದ್ದು ಮಾಡಿದೆ. ಈಗ ಬಿಜೆಪಿ ಮೂವರು ಸದಸ್ಯರು ಅರ್ಹ ಸದಸ್ಯರಾಗಿದ್ದಾರೆ ಎಂಬುದು ವಿಶೇಷ. ರಾಜಕೀಯ ದುರುದ್ದೇಶದಿಂದ ಬಿಜೆಪಿ ಸದಸ್ಯರಿಗೆ ತೊಂದರೆ ಕೊಟ್ಟಿದ್ದಾರೆ ಎಂದರು.ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಎಂ.ಎಂ.ಹಿರೇಮಠ, ಎಂ.ಎಸ್.ಕರೀಗೌಡ್ರ, ಉಷಾ ದಾಸರ, ನಿರ್ಮಲಾ ಕೊಳ್ಳಿ, ಲಿಂಗರಾಜ ಪಾಟೀಲ, ಪ್ರಶಾಂತ ನಾಯ್ಕ ಇತರರು ಇದ್ದರು.

ಪ್ರಧಾನಿ ಮೋದಿ ಸಲಹೆ ಟೀಕಿಸುತ್ತಿರುವ ಕಾಂಗ್ರೆಸ್ ನಡೆ ಖಂಡನೀಯ

ರಾಹುಲ್ ಕಾಲೇಜ್ ಹುಡುಗ?

ರಾಹುಲ್ ಗಾಂಧಿ ಒಬ್ಬ ಕಾಲೇಜು ಹುಡುಗ. ದೇಶದ ಆರ್ಥಿಕ ಭದ್ರತೆ, ಮುಂದಾಲೋಚನೆ ತಿಳಿದಿಲ್ಲ. ಪ್ರಧಾನಿ ದೇಶದ ಹಿತಕ್ಕಾಗಿ ಸಂಪನ್ಮೂಲ ಬಳಕೆ ಕಡಿಮೆ ಮಾಡಿ ಅಂದಿದ್ದಾರೆ. ರಾಜಕೀಯಕ್ಕಾಗಿ ಹುಡುಗನ ರೀತಿ ಹೇಳಿಕೆ ಮಾತನಾಡಿದ್ದಾರೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಫೋನ್ ಬೆಳಗ್ಗೆ 10 ರಿಂದ 5 ರ ವರೆಗೆ ಮಾತ್ರ ಆನ್ ಆಗಿರುತ್ತಾರೆ. 10 ಗಂಟೆಗೂ ಮೊದಲು, 5 ಗಂಟೆ ನಂತರ ಅವರ ಫೋನ್ ಸ್ವಿಚ್ ಆಫ್ ಆಗಿರುತ್ತದೆ. ಈ ಬಗ್ಗೆ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರ ಗಮನಕ್ಕೆ ತಂದಿದ್ದೇನೆ. ಇನ್ನೂ ಕೆಲವೇ ತಿಂಗಳಲ್ಲಿ ಅವರು ನಿವೃತ್ತ ಆಗಲಿದ್ದಾರೆ. ಅದಕ್ಕಾಗಿ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಶಾಸಕರಿಗೆ ಈ ರೀತಿ ಆದರೆ ಜನ ಸಾಮಾನ್ಯರ ಗತಿ ಏನು ಎಂದು ಸಿ.ಸಿ. ಪಾಟೀಲ ಅವರು ಜಿಲ್ಲಾಧಿಕಾರಿ ಮೇಲೆ ಅಸಮಾಧಾನ ವ್ಯಕ್ತ ಪಡಿಸಿದರು.

ಮೇ 15ಕ್ಕೆ ಪಶ್ಚಿಮ ಘಟ್ಟಗಳ ಪ್ರಭಾವದ ಸಭೆ–ಚರ್ಚೆ

ಧಾರವಾಡ: ಇಕೋ ವಾಚ್ ಮತ್ತು ಕೃಷಿ ವಿವಿಯ ಸಹಯೋಗದಲ್ಲಿ ಕೃಷಿ ಮತ್ತು ಆರ್ಥಿಕತೆಯ ಮೇಲೆ ಪಶ್ಚಿಮ ಘಟ್ಟಗಳ ಪ್ರಭಾವದ ಕುರಿತು ಪರಿಸರ ತಜ್ಞರ ಸಭೆ ಹಾಗೂ ಚರ್ಚೆಯನ್ನು ಮೇ 15ರಂದು ಬೆಳಗ್ಗೆ 10ಕ್ಕೆ ನಗರದ ಕೃಷಿ ವಿವಿಯ ಕಮ್ಯುನಿಟಿ ಸೈನ್ಸ್ ಆಡಿಟೋರಿಯಂನಲ್ಲಿ ಜರುಗಲಿದೆ ಎಂದು ಪರಿಸರವಾದಿ, ಇಕೊ ವಾಚ್ ಮುಖ್ಯಸ್ಥ ಸುರೇಶ ಹೆಬ್ಳೀಕರ ಹೇಳಿದರು.



ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ರಾಜ್ಯ ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಶ್ರೀನಿವಾಸಲು ಉದ್ಘಾಟಿಸಲಿದ್ದು, ಕೃವಿವಿ ಕುಲಪತಿ ಡಾ. ಪಿ.ಎಲ್. ಪಾಟೀಲ್ ಅಧ್ಯಕ್ಷತೆ ವಹಿಸುವರು. ಪರಿಸರ ತಜ್ಞ ತಾಣ ಪ್ರೊ. ಎಂ.ಡಿ. ಸುಭಾಷ ಚಂದ್ರನ್, ಕ್ಯಾ. ಧೋಂಡ್, ಡಾ. ಮಂದಾರ್ ದತರ್, ಮಂಜುನಾಥ ಟಿ.ವಿ., ಡಾ. ಕೃಷ್ಣರಾಜ್ ಪಿ.ಯು., ಉಲ್ಲಾಸ ಕುಮಾರ, ವಸಂತ ರೆಡ್ಡಿ, ಡಾ. ಆರ್. ವಾಸುದೇವ ಹಾಗೂ ಮಂಜುನಾಥ ಚವ್ಹಾಣ ಮುಖ್ಯ ಭಾಷಣ ಮಾಡುವರು ಎಂದರು.

ಹಚ್ಚಹಸುರಿನ ಹೊಲಗಳು ಇಂದು ರಿಯಲ್ ಎಸ್ಟೇಟ್ ಪ್ರಾಪರ್ಟಿಗಳಾಗಿ ಮಾರ್ಪಟ್ಟಿವೆ. ಔದ್ಯಮಿಕ ಬೆಳವಣಿಗೆ ನಿರಂತರ ಸಾಗಿದೆ. ಸರ್ಕಾರಗಳು ಜಿ.ಡಿ.ಪಿ. ಏರಿಸಲು ಉದ್ಯಮಗಳತ್ತ ಮುಖಮಾಡುತ್ತಿವೆ. 800 ಕೋಟಿ ಜನಸಂಖ್ಯೆಯ ಜಗತ್ತಿನಲ್ಲಿ ಸುಮಾರು 450 ಕೋಟಿ ಜನ ಇವತ್ತು ನಗರಗಳಲ್ಲಿ ವಾಸಿಸುತ್ತಿದ್ದಾರೆ ಎಂದರು.

ಪ್ರಾಕೃತಿಕ ಮೌಲ್ಯಗಳು ಉತ್ತುಂಗವಾಗಿ ಬೆಳೆದು ಪ್ರಾಣಿ, ಪಕ್ಷಿ, ಮಾನವರಿಗೆ ನಿರಂತರ ಆಸರೆಯಾದ ನಮ್ಮ ಸಿರಿವಂತ ನದಿ, ಬೆಟ್ಟ, ಕಾಡುಗಳನ್ನು ಮನಸ್ಸಿಗೆ ಬಂದಂತೆ ನಾಶ ಮಾಡುತ್ತಿದ್ದೇವೆ. ಪ್ರಾಕೃತಿಕ ಪರಿಸರದ ಮೌಲ್ಯಗಳು ನಮ್ಮ ಜೀವನದ ಪ್ರಸ್ತುತ ಮತ್ತು ಭವಿಷ್ಯದ ಬದುಕಿಗೆ ಅವಶ್ಯ ಎಂಬ ಚಿಂತೆ ನಮ್ಮಲ್ಲಿ ಬರುತ್ತಿಲ್ಲ ಎಂದು ಬೇಸರಿಸಿದರು.

ಮಳೆ, ಮೋಡ, ನದಿ, ಬೆಟ್ಟ, ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳು, ನಿರಂತರವಾಗಿ, ದಾರಾಳವಾಗಿ ಸುರಿಯುತ್ತಿರುವ ಮಳೆಗಾಲದ ನೀರು, ಅದರ ಮೇಲೆ ಬದುಕಿರುವ ಲಕ್ಷಾಂತರ ರೈತರು, ಅವರ ಮೇಲೆ ಅವಲಂಬಿಸಿರುವ ಇಡೀ ಮಾನವ ಜನಾಂಗ ಹಾಗೂ ಪಶ್ಚಿಮಘಟ್ಟಗಳು ಯಾವ ರೀತಿ ಆರ್ಥಿಕ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತವೆ ಎಂಬ ವಿಷಯಗಳನ್ನು ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಾ. ಶ್ರೀಪಾದ ಕುಲಕರ್ಣಿ, ಅಕ್ಷಯ ಹೆಬ್ಳೀಕರ ಇದ್ದರು.

ಕಪ್ಪೆಕೆರೆ ಸುಬ್ರಾಯ ಹೆಗಡೆ ವಿಧಿವಶ

ಹೊನ್ನಾವರ: ಯಕ್ಷಗಾನ ಲೋಕದ ಕಪ್ಪೆಕೆರೆ ಸುಬ್ರಾಯ ಹೆಗಡೆ (79) ಅವರು ಬುಧವಾರ ವಿಧಿವಶರಾಗಿದ್ದಾರೆ. ಅವರ ಅಗಲಿಕೆಯಿಂದ ಬಡಗುತಿಟ್ಟು ಯಕ್ಷಗಾನರಂಗದಒಂದುಸುವರ್ಣ ಯುಗ ಅಂತ್ಯಗೊಂಡಂತಾಗಿದೆ.



1947ರಲ್ಲಿ ಹೊನ್ನಾವರ ತಾಲೂಕಿನ ಹಡಿನಬಾಳದಲ್ಲಿ ಈಶ್ವರ ಹೆಗಡೆ ಮತ್ತು ಗೋಪಿ ಹೆಗಡೆ ದಂಪತಿಗಳ ಪುತ್ರನಾಗಿ ಜನಿಸಿದ ಸುಬ್ರಾಯರು, ಮೂಲತಃ ಯಕ್ಷಗಾನದ ಮನೆಯಿಂದಲೇ ಬಂದವರು. ಹಿರಿಯ ಸಹೋದರ ಕಪ್ಪೆಕೆರೆ ಮಹಾದೇವ ಹೆಗಡೆಯವರ ಹಾದಿಯಲ್ಲೇ ಸಾಗಿದ ಇವರು, ಕೆರೆಮನೆ ಮಹಾಬಲ ಹೆಗಡೆ ಮತ್ತು ಗಣಪತಿ ಹೆಗಡೆಯವರಲ್ಲಿ ಕಲೆ ಅಭ್ಯಾಸ ಮಾಡಿದರು. ಅರ್ಜುನ, ಬಲರಾಮ, ನಾರದನಂತಹ ಪ್ರಮುಖ ಪಾತ್ರಗಳಿಗೆ ಜೀವ ತುಂಬಿದ ಮುಮ್ಮೇಳದ ಸಮರ್ಥ ಕಲಾವಿದರಾಗಿದ್ದರು.

ಇಡಗುಂಜಿ, ಗುಂಡಬಾಳ, ಸಾಲಿಗ್ರಾಮ, ಬಚ್ಚಗಾರು ಹಾಗೂ ಅಮೃತೇಶ್ವರಿ ಮೇಳಗಳಲ್ಲಿ ಸುಮಾರು 45 ವರ್ಷಗಳ ಕಾಲ ನಿರಂತರವಾಗಿ ತಿರುಗಾಟ ನಡೆಸಿದ ಇವರು, ಯಕ್ಷಗಾನದ ಪೌರಾಣಿಕ ಚೌಕಟ್ಟನ್ನು ಕಾಪಾಡಿಕೊಂಡು ಬಂದವರು. ಕೇವಲ ಪ್ರದರ್ಶನ ನೀಡದೆ, ರಂಗನಿರ್ದೇಶಕರಾಗಿ ಪ್ರಸಂಗದ ಗತಿ–ಸ್ಥಿತಿಯನ್ನು ನಿರ್ಧರಿಸುವಲ್ಲಿ ಅವರದ್ದು ಎತ್ತಿದ ಕೈ.

ಗುರುಗಳಾಗಿ ನೂರಾರು ಶಿಷ್ಯರನ್ನು ರಂಗಕ್ಕೆ ಅರ್ಪಿಸಿದ ಸುಬ್ರಾಯ ಹೆಗಡೆಯವರಿಗೆ ಅನೇಕ ಗೌರವಗಳು ಸಂದಿವೆ.

ಕರ್ನಾಟಕ ಯಕ್ಷಗಾನ ಬಯಲಾಟ ಪ್ರಶಸ್ತಿ,ಉಡುಪಿ ಯಕ್ಷಗಾನ ಕಲಾರಂಗ ಪ್ರಶಸ್ತಿ,ಯಕ್ಷ ದೇಗುಲ ಪ್ರಶಸ್ತಿ, ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ ದೊರೆತಿವೆ.ಪೌರಾಣಿಕ ಜ್ಞಾನದ ಭಂಡಾರವಾಗಿದ್ದ ಸುಬ್ರಾಯ ಭಾಗವತರ ನಿಧನಕ್ಕೆ ಯಕ್ಷಗಾನದ ಅಭಿಮಾನಿಗಳು, ಮೇಳದ ಯಜಮಾನರು ಹಾಗೂ ಕಲಾಬಂಧುಗಳು ತೀವ್ರ ಸಂತಾಪ ಸೂಚಿಸಿದ್ದಾರೆ. ಅವರ ತಾಳಗತಿಯ ಶುದ್ಧತೆ ಮತ್ತು ಲಯಬದ್ಧತೆ ಮುಂದಿನ ತಲೆಮಾರಿನ ಭಾಗವತರಿಗೆ ಸದಾ ದಾರಿದೀಪ.

ಗೃಹಸಚಿವರು ಅಹವಾಲು ಆಲಿಸಲು ಅನ್ನನಿರಶನ ಸತ್ಯಾಗ್ರಹ

ನಾಗರಾಜ ನಾಯಕರ ಆರೋಗ್ಯದಲ್ಲಿ ಏರುಪೇರು

ಅಂಕೋಲಾ: ರಾಜ್ಯದ ಗೃಹ ಮಂತ್ರಿಗಳು ತಮ್ಮ ಅಹವಾಲು ಆಲಿಸಬೇಕು ಎಂದು ಬಿಜೆಪಿಯ ಮಾಧ್ಯಮ ವಕ್ತಾರ ವಕೀಲ ನಾಗರಾಜ ನಾಯಕ ಅವರು ನಡೆಸುತ್ತಿರುವ ಧರಣಿ ಸತ್ಯಾಗ್ರಹ ಏಳು ದಿನಗಳನ್ನು ಪೂರೈಸಿದ್ದು, ಕಳೆದ ಐದು ದಿನಗಳಿಂದ ಅನ್ನನಿರಶನ ನಡೆಸುತ್ತಿರುವ ಅವರ ಆರೋಗ್ಯದಲ್ಲಿ ಏರುಪೇರು ಆದ ಕಾರಣ ತಾಲೂಕು ಆರೋಗ್ಯಾಧಿಕಾರಿ ಡಾ.ಜಗದೀಶ ನಾಯ್ಕ ಮತ್ತು ಕಣ್ಣಿನ ತಜ್ಞ ವೈದ್ಯರು ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ನೀಡಿದರು.



ಜಾತ್ಯತೀತ ಜನತಾ ದಳದ ಜಿಲ್ಲಾಧ್ಯಕ್ಷ ಸೂರಜ ನಾಯ್ಕ ಸೋನಿ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ನಾಗರಾಜ ನಾಯಕ ಅವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾನೂನಿನ ಅರಿವು ಇರುವ ವ್ಯಕ್ತಿಯೋರ್ವ ಐದು ದಿನಗಳಿಂದ ಉಪವಾಸ ಸತ್ಯಾಗ್ರಹದಲ್ಲಿ ತೊಡಗಿ ಕೊಂಡಿರುವಾಗ ಅವರ ಅಹವಾಲುಗಳನ್ನು ಕೇಳುವ ಸೌಜನ್ಯ ಸರ್ಕಾರಕ್ಕೆ ಇರಬೇಕು ಅವರ ಧರಣಿ ನಡೆಸುತ್ತಿರುವ ಅವರನ್ನು ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾಗಿ ಕಾಣಬಾರದು ಎಂದರು.

ನಾಗರಾಜ ನಾಯಕ ಅವರ ಹೋರಾಟದ ಕುರಿತಂತೆ ಮಾಹಿತಿ ಪಡೆದು ಸ್ಪಂದಿಸುವ ಕೆಲಸ ಸರ್ಕಾರದಿಂದ ನಡೆಯಬೇಕು

ಸರ್ಕಾರ ಮತ್ತು ಗೃಹ ಸಚಿವರಿಗೆ ವಿಷಯದ ಕುರಿತಂತೆ ಮನವರಿಕೆ ಮಾಡಿಕೊಡುವ ಕೆಲಸ ಜಿಲ್ಲಾಽಕಾರಿ ಮತ್ತು ಪೊಲೀಸ್ ವರಿಷ್ಠರು ಮಾಡಬೇಕು ಅನ್ಯಾಯ ಅಕ್ರಮಗಳು ನಡೆಯುತ್ತಿದ್ದರೆ ತನಿಖೆಯಾಗಲಿ ತಪ್ಪಿತಸ್ಥರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಿ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ವಿಧಾನ ಪರಿಷತ್ ಸದಸ್ಯ ಮತ್ತು ಮುಖ್ಯ ಸಚೇತಕ ರವಿಕುಮಾರ್ ಅವರು ನಾಗರಾಜ ನಾಯಕ ಅವರಿಗೆ ಸೂಕ್ತ ರಕ್ಷಣೆ ನೀಡಿ ನ್ಯಾಯ ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಅಭಿವೃದ್ಧಿ ಹೆಸರಲ್ಲಿ ಆರ್ಥಿಕತೆ ಪಾತಾಳಕ್ಕೆ : ಲಾಡ್

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಕಳೆದ 10 ವರ್ಷದ ಸಾಧನೆ ಶೂನ್ಯ. ಜನರಿಗೆ ಸುಳ್ಳು ಭರವಸೆಗಳ ಮೂಲಕ ಅಭಿವೃದ್ಧಿಯ ಹೆಸರಲ್ಲಿ ದೇಶದ ಆರ್ಥಿಕತೆ ಪಾತಾಳಕ್ಕೆ ತಳ್ಳಿದೆ ಎಂದು ಸಚಿವ ಸಂತೋಷ ಲಾಡ್ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಮತ್ತು ವಿಫಲ ಯೋಜನೆಗಳ ವಿರುದ್ಧ ವಾಗ್ದಾಳಿ ನಡೆಸಿದ ಲಾಡ್, ಕರ್ಮಕಾಂಡಗಳ ಕುರಿತು ಸಿನೆಮಾ ಮಾಡಲು ನಿರ್ದೇಶಕ ಆದಿತ್ಯ ಧಾರ್‌ಗೆ ಮನವಿ ಮಾಡಿದರು.

2015ರಲ್ಲಿ ಮೋದಿ ಅವರು ಸಾರ್ವಭೌಮ ಚಿನ್ನದ ಬಾಂಡ್ ಯೋಜನೆ ಜಾರಿಗೆ ತಂದು ಚಿನ್ನ ಖರೀದಿಸುವಂತೆಯೂ ಜನರನ್ನು ಪ್ರೇರೇಪಿಸಿದ್ದರು. ಈ ಯೋಜನೆ 2034ರವರೆಗೆ ಚಾಲ್ತಿಯಲ್ಲಿರಬೇಕಿತ್ತು. ಆದರೆ, ಇದೀಗ ಬದಲಾದ ಪರಿಸ್ಥಿತಿ ಬಗ್ಗೆ ಪ್ರಶ್ನಿಸಿದರು. ಡಾಲರ್ ಎದುರಿಗೆ ರೂಪಾಯಿ ಮೌಲ್ಯ ಕುಸಿದು ಈ ಯೋಜನೆಗೆ ಅಂದಾಜು ರೂ.1.50 ಲಕ್ಷ ಕೋಟಿ ರೂಪಾಯಿಗಳ ನಷ್ಟದಲ್ಲಿದೆ. ಈ ನಷ್ಟ ಮುಚ್ಚಿ ಹಾಕಲು ಪ್ರಧಾನಿಗಳಿಗ ಚಿನ್ನ ಖರೀದಿಸದಂತೆ ಹೇಳುವುದು ಹಾಸ್ಯಾಸ್ಪದ ಎಂದು ಲೇವಡಿ ಮಾಡಿದರು.

'ಮೇಕ್ ಇನ್ ಇಂಡಿಯಾ' ಯೋಜನೆ ಯಾರಿಗೆ ಉಪಯೋಗವಾಗಿದೆ? ಸಣ್ಣ ಸೂಜಿಯಿಂದ ಹಿಡಿದು ದೊಡ್ಡ ಯಂತ್ರಗಳವರೆಗೆ ಎಲ್ಲವೂ ಸಹ ವಿದೇಶದಿಂದ ಆಮದು ಮಾಡಿಕೊಂಡು, ಇಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪ ಮಾಡಿದರು. ಉದ್ಯೋಗವಿಲ್ಲ, ಅಭಿವೃದ್ಧಿಯಿಲ್ಲ; ಕೇವಲ ಚುನಾವಣೆ ಗೆಲ್ಲುವುದೇ ಮೋದಿ ಅವರ ಏಕೈಕ ಗುರಿ. ದೇಶದ ಅಭಿವೃದ್ಧಿ ಅವರಿಂದ ಅಧ್ಯವಿಲ್ಲ. ವರ್ಷಕ್ಕೆ 2 ಕೋಟಿ ಉದ್ಯೋಗವನ್ನೂ ನೀಡಿಲ್ಲ. ದೇಶದ ಸಂಪತ್ತನ್ನು ಕಾರ್ಪೊರೇಟ್ ಮಿತ್ರರಿಗೆ ಧಾರೆ ಎರೆಯಲಾಗುತ್ತಿದೆ ಎಂದು ಅವರು ಕಿಡಿಕಾರಿದರು.

ವಿಡಿಐಟಿಗೆ ಪ್ಲಾಟಿನಂ ಸುಸ್ಥಿರ ಕ್ಯಾಂಪಸ್ ಗೌರವ

ಹಳಿಯಾಳ: ಪಟ್ಟಣದ ಕೆಎಲ್ ಎಸ್ ವಿಡಿಐಟಿ ಮಹಾವಿದ್ಯಾಲಯವು ಪರಿಸರ ಸಂರಕ್ಷಣೆ ಹಾಗೂ ಹಸಿರು ಆವರಣ ನಿರ್ಮಾಣ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ್ದು, ರಿಸರ್ಚ್ ಹೈಟ್ಸ್ ಫೌಂಡೇಶನ್ ವತಿಯಿಂದ ಇಪಿಟಿಆರ್‌ಐ ಸಹಯೋಗದಲ್ಲಿ ಭೂಮಿ ವಾರದ ಅಂಗವಾಗಿ ಏಪ್ರಿಲ್ 22 ರಿಂದ 29ರ ವರೆಗೆ ಆಯೋಜಿಸಲಾದ ''ಭಾರತ ಎನ್ವಿರಾನ್‌ಮೆಂಟ್ ಪ್ರೋಗ್ರಾಂ ಎ ಭಾರತ ಸಸ್ಟೇನಬಿಲಿಟಿ ಕ್ಯಾಂಪಸ್ ಮಿಷನ್ 2026'' ಅಡಿಯಲ್ಲಿ ''ಪ್ಲಾಟಿನಂ ಸಸ್ಟೇನಬಲ್ ಕ್ಯಾಂಪಸ್'' ಎಂಬ ಪ್ರತಿಷ್ಠಿತ ಮಾನ್ಯತೆ ಪಡೆದಿದೆ.



ಮಹಾವಿದ್ಯಾಲಯವು ಪರಿಸರ ಸಂರಕ್ಷಣೆ, ಜೈವವೈವಿಧ್ಯತೆ,ಪರಿಸರ ಜಾಗೃತಿ ಹಾಗೂ ಹಸಿರು ಆವರಣ ಅಭಿವೃದ್ಧಿಗೆ ಕೈಗೊಂಡಿರುವ ನಿರಂತರ ಪ್ರಯತ್ನಗಳನ್ನು ಪರಿಗಣಿಸಿ ಆರ್ ಎಚ್ ಎಫ್ ಸಂಸ್ಥೆಯು ಈ ಮಾನ್ಯತೆಯನ್ನು ಅಧಿಕೃತವಾಗಿ ಘೋಷಿಸಿದೆ.

ಜೂನ್ 1ರಂದು ಹೈದರಾಬಾದ್ ನಲ್ಲಿನಡೆಯಲಿರುವಸಮಾರಂಭದಲ್ಲಿ ಮಹಾವಿದ್ಯಾಲಯವು ''ಪ್ಲಾಟಿನಂ ಸಸ್ಟೇನಬಲ್ ಕ್ಯಾಂಪಸ್'' ಪ್ರಶಸ್ತಿಯನ್ನು ಸ್ವೀಕರಿಸಲಿದೆ.

ಸಂಸ್ಥೆಯ ಆವರಣದಲ್ಲಿ 310ಕ್ಕೂ ಹೆಚ್ಚು ಸಸ್ಯ ಹಾಗೂ ಮರಗಳ ಜಾತಿಗಳು ಇದ್ದು, ವಿವಿಧ ಔಷಧೀಯ ಸಸ್ಯಗಳ ಸಂರಕ್ಷಣೆ ಮೂಲಕ ಜೈವ ವೈವಿಧ್ಯತೆಯನ್ನು ಉತ್ತೇಜಿಸಲಾಗುತ್ತಿದೆ.

ಕೆಎಲ್‌ಎಸ್ ವಿಡಿಐಟಿ ಸಂಸ್ಥೆಯು ಹಸಿರು ಮತ್ತು ಸುಸ್ಥಿರ ಆವರಣ ನಿರ್ಮಾಣದ ಉದ್ದೇಶದಿಂದ ಹಲವಾರು ಪರಿಸರ ಸ್ನೇಹಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

ಸಂಸ್ಥೆಯಲ್ಲಿ ನೀರಿನ ಸಂರಕ್ಷಣೆ ಮತ್ತು ಮರುಬಳಕೆಗೆ ಎಸ್‌ಟಿಪಿ (Sewage Treatment Plant) ವ್ಯವಸ್ಥೆ ಹಾಗೂ ಭೂಗರ್ಭ ಜಲಮಟ್ಟ ಹೆಚ್ಚಿಸಲು ಡೀಪ್ ರೇನ್ ವಾಟರ್ ಹಾರ್ವೆಸ್ಟಿಂಗ್ (dRWH) ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ.

ಮಹಾವಿದ್ಯಾಲಯ ಪರಿಸರ ಸಂರಕ್ಷಣೆಗೆ ವನಮಹೋತ್ಸವ, ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್, ಮಳೆ ಕೊಯ್ಲು, ಕಲುಷಿತ ನೀರನ್ನು ಶುದ್ಧೀಕರಿಸಿ ಮರುಬಳಕೆ ಘಟಕ, ನೀರು ಮಿತ ಬಳಕೆಗೆ ಸೆನ್ಸರ್ ಆಧಾರಿತ ನಳ, ಸೌರಶಕ್ತಿ ಬಳಕೆ ಮತ್ತು ಪರಿಸರ ಸ್ನೇಹಿ ಕ್ರಮಗಳು, ಸಸ್ಟೇನಬಲ್ ಡೆವಲಪ್‌ಮೆಂಟ್ ಗೋಲ್ಸ್ ಅನುಷ್ಠಾನ, ಪರಿಸರ ಸ್ನೇಹಿ ಬಯೋಕಲ್ಚರ್ ಬಳಕೆ, ನೈಸರ್ಗಿಕ ಕೆರೆಗಳ ಸಂರಕ್ಷಣೆ ಮುಂತಾದ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ.

ಮಹಾವಿದ್ಯಾಲಯಕ್ಕೆ ಈ ಪ್ರಶಸ್ತಿ ದೊರಕಿರುವುದು ಹೆಮ್ಮೆಯ ವಿಷಯ ವೆಂದು ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ. ಇಕೋ ಕ್ಲಬ್ ಸಂಯೋಜಕ ಪ್ರೊ ರಾಕೇಶ್ ಪಾಟೀಲ್, ಸದಸ್ಯರಾದ ಪ್ರೊ ರೋಹಿಣಿ ಕಲ್ಲೂರ, ಪ್ರೊ ನವೀನ ಹಿರೇಮಠ, ಪ್ರೊ ಸುನೀತಾ ಕಲ್ಲು, ಡಾ. ಸ್ನೇಹಾ ಕುಲಕರ್ಣಿ, ಪ್ರೊ ಅಮರನಾಥ ಸ್ವಾಮಿ ಮತ್ತು ಗದಿಗೆಪ್ಪಾ ಯಳ್ಳೂರ ಮತ್ತು ವಿದ್ಯಾರ್ಥಿ ಗಳು ಸಂತಸ ವ್ಯಕ್ತ ಪಡಿಸಿದ್ದಾರೆ.

ರಾಮ ಬಾಣ



ಮಿತವ್ಯಯ ಅಲೆ

ಪುಟ 1➡ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಮ್ಮ ಹಾಗೂ ಸಚಿವರ ಬೆಂಗಾವಲು ವಾಹನಗಳನ್ನು ಶೇ.50ರಷ್ಟು ಕಡಿತಗೊಳಿಸುವಂತೆ ಆದೇಶಿಸಿದ್ದಾರೆ. ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ವಾಹನ ರ್‍ಯಾಲಿಗಳಿಗೆ ಬ್ರೇಕ್ ಹಾಕಿದ್ದು, ಸಚಿವರಿಗೆ ಕನಿಷ್ಠ ವಾಹನ ಬಳಕೆಯ ಸೂಚನೆ ನೀಡಿದ್ದಾರೆ.

ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಸಚಿವರು ಹಾಗೂ ಶಾಸಕರ ಅಧಿಕೃತ ವಾಹನ ಬಳಕೆಗೆ ಮಿತಿ ವಿಧಿಸಿದ್ದು, ಸಾರ್ವಜನಿಕ ಸಾರಿಗೆ ಹಾಗೂ ಕಾರ್‌ಪೂಲಿಂಗ್‌ಗೆ ಉತ್ತೇಜನ ನೀಡಿದ್ದಾರೆ. ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಸಹ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಸೂಚಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಪೂರ್ವಾನುಮತಿ ಇಲ್ಲದೆ, ಅಧಿಕೃತ ವಿಮಾನ ಪ್ರಯಾಣ ನಡೆಸಬಾರದು ಎಂದು ಸಚಿವರಿಗೆ ಸೂಚಿಸಿದ್ದಾರೆ. ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ವಿದ್ಯುತ್ ವಾಹನ ಬಳಕೆಗೆ ಮುಂದಾಗಿದ್ದು, ಶಿವಸೇನೆ ಸಚಿವರಿಗೆ ಅನಗತ್ಯ ಪ್ರವಾಸಗಳನ್ನು ಕಡಿಮೆ ಮಾಡಲು ಸೂಚಿಸಲಾಗಿದೆ. ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಹೆಲಿಕಾಪ್ಟರ್, ವಿಮಾನಗಳ ಬದಲು ರೈಲು ಹಾಗೂ ಸಾರ್ವಜನಿಕ ಸಾರಿಗೆ ಬಳಸುವುದಾಗಿ ಘೋಷಿಸಿದ್ದಾರೆ. ಗುಜರಾತ್ ಉಪ ಮುಖ್ಯಮಂತ್ರಿ ಹರ್ಷ ಸಂಘವಿ ಅಮೆರಿಕ ಪ್ರವಾಸವನ್ನೇ ರದ್ದು ಮಾಡಿದ್ದಾರೆ. ಬಿಹಾರ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಚೌಧರಿ ತಮ್ಮ ವಾಹನ ಬಳಕೆಯ ನ್ನು ಅರ್ಧಕ್ಕಿಳಿಸಿದ್ದರೆ, ಛತ್ತೀಸ್‌ಗಢ ಮುಖ್ಯಮಂತ್ರಿ ವಿಷ್ಣುದೇವ ಸಾಯಿ ಬೆಂಗಾವಲು ವಾಹನಗಳನ್ನು ಕಡಿತಗೊಳಿಸಿ ವಿದ್ಯುತ್ ವಾಹನ ಬಳಕೆಗೆ ಆದ್ಯತೆ ನೀಡಿದ್ದಾರೆ. ಹಿಮಾಚಲ ಪ್ರದೇಶ ರಾಜ್ಯಪಾಲ ಕವಿಂದರ್ ಗುಪ್ತಾ ರಾಜಭವನವನ್ನು 'ಇಂಧನ ಸಂರಕ್ಷಣಾ ವಲಯವೆಂದು ಘೋಷಿಸಿ ವಿಶೇಷ ಅಭಿಯಾನ ಆರಂಭಿಸಿದ್ದಾರೆ.

ಕೇಂದ್ರ ಸಚಿವರ ಮಟ್ಟದಲ್ಲಿಯೂ ಮಿತವ್ಯಯ ಕ್ರಮಗಳು ಆರಂಭವಾಗಿವೆ. ಅನೇಕ ಸಚಿವರು ತಮ್ಮ ವಾಹನಪಡೆಗಳನ್ನು ಕಡಿಮೆ ಮಾಡಿಕೊಂಡಿದ್ದು, ಅನಗತ್ಯ ವಿದೇಶ ಪ್ರವಾಸಗಳನ್ನು ಮುಂದೂಡಲು ತೀರ್ಮಾನಿಸಿರುವ ಮಾಹಿತಿ ಹೊರಬಿದ್ದಿದೆ. ಕೇಂದ್ರ ಸರ್ಕಾರದ ಈ ಸಂದೇಶವು ಇದೀಗ ಆಡಳಿತ ಯಂತ್ರದ ಮೂಲಕ ಜನಸಾಮಾನ್ಯರಿಗೂ ತಲುಪುವ ಪ್ರಯತ್ನ ನಡೆಯುತ್ತಿದೆ.

ಅನಗತ್ಯ ವೆಚ್ಚ ಕಡಿತ ಮಾಡಿ; ಸಚಿವರಿಗೆ ಪ್ರಧಾನಿ ಸೂಚನೆ

ಪುಟ 1➡ ಸಚಿವರು ತಮ್ಮ ಬೆಂಗಾವಲು ಪಡೆ ಗಾತ್ರವನ್ನು ಕಡಿಮೆ ಮಾಡುವುದು, ಅಗತ್ಯವಿಲ್ಲದ ವಿದೇಶಿ ಪ್ರವಾಸಗಳನ್ನು ತಗ್ಗಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಅವರು ಸಲಹೆ ನೀಡಿದರು. ಸರ್ಕಾರದ ಮೂಲಗಳ ಪ್ರಕಾರ, ಇದು ಮಿತವ್ಯಯ ನೀತಿ ಅಲ್ಲ; ಬದಲಾಗಿ ಇಂಧನ ಉಳಿತಾಯ, ಆಮದು ಅವಲಂಬನೆ ಕಡಿತ ಹಾಗೂ ವಿದೇಶಿ ವಿನಿಮಯ ವ್ಯಯವನ್ನು ನಿಯಂತ್ರಿಸುವ ಉದ್ದೇಶ ಹೊಂದಿದೆ. ಮೂಲಸೌಕರ್ಯ, ಕಲ್ಯಾಣ ಯೋಜನೆಗಳು ಅಥವಾ ಸಬ್ಸಿಡಿಗಳ ವೆಚ್ಚದಲ್ಲಿ ಯಾವುದೇ ಕಡಿತ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.



ಕಿಡಿ ನುಡಿ

•ವಾಸುದೇವರಾವ್ ಕಕ್ಕನೇಜಿ

◈ ರಾಜ್ಯದಲ್ಲಿ ಕುರ್ಚಿಗಳು ಅಲುಗಾಡುತ್ತಿವೆ ಎನ್ನುವುದು ಸರಿಯಲ್ಲ -ಡಿಕೆಶಿ

-ಹೌದು, ಹಾಗೆ ಹೇಳೋ ಬದಲು ಕುರ್ಚಿಯ ಕೆಳಗಿನ ನೆಲವೇ ನಡುಗುತ್ತಿದೆ ಅಂತ ಹೇಳಿದರೆ ಹೆಚ್ಚು ಸರಿಯಾದೀತು!

ದಿನ ಭವಿಷ್ಯ

ಮೇಷ ಕೆಲ ದಿನಗಳ ಅಡೆತಡೆ ಬಳಿಕ ಇಂದು ದಿನವು ಸುಗಮವಾಗಿ ಸಾಗಲಿದೆ. ಕೆಲಸ ನಿರ್ವಿಘ್ನವಾಗಿ ಪೂರ್ಣ. ನಿಮ್ಮ ಸುತ್ತಲಿನ ಪರಿಸರ ಶಾಂತಿಯುತ.

ವೃಷಭ ವೃತ್ತಿಯಲ್ಲಿ ಸಫಲತೆ. ಹಿರಿಯರು ನಿಮ್ಮ ಕಾರ್ಯ ಮೆಚ್ಚಿಕೊಳ್ಳುವರು. ಮಾನಸಿಕ ತುಮುಲ ಇಂದು ನಿವಾರಣೆ ಕಾಣಲಿದೆ. ನಿರಾಳತೆ.

ಮಿಥುನ ಮಾನಸಿಕ ಬೇಗುದಿ. ಅದಕ್ಕೆ ನಿರ್ದಿಷ್ಟ ಕಾರಣ ವೆಂಬುದಿಲ್ಲ. ಎಲ್ಲರೂ ನಿಮಗೆ ವಿರೋಧಿಗಳು ಎಂಬಂಥ ಭಾವ. ಮನೋನಿಗ್ರಹ ಇರಲಿ.

ಕಟಕ ಲಾಭ-ನಷ್ಟ ಎರಡೂ ಉಂಟಾಗಲಿದೆ. ಕೆಲ ವಿಷಯ ಉದ್ವಿಗ್ನತೆ ಸೃಷ್ಟಿ. ಆಪ್ತರ ಅಸಹಕಾರ. ಉಷ್ಣ ಸಂಬಂಧಿ ಬಾಧೆ ಉಂಟಾದೀತು.

ಸಿಂಹ ನೀವು ಕೈಗೊಳ್ಳುವ ಕ್ರಮ ಉತ್ತಮ ಫಲ ನೀಡುವುದು. ವೃತ್ತಿಯಲ್ಲಿ ತೃಪ್ತಿ. ಕೌಟುಂಬಿಕ ಭಿನ್ನಮತ ನಿವಾರಣೆ. ಮೃದು ಮಾತು ಒಳಿತು.

ಕನ್ಯಾ ವೃತ್ತಿಯೊತ್ತಡ ಹೆಚ್ಚು. ಕೆಲವರ ಅಸಹಕಾರ. ಮನೆಯಲ್ಲಿ ಸಣ್ಣ ವಿಷಯಕ್ಕೆ ವಾಗ್ವಾದ ನಡೆದೀತು. ಸಹನೆಯಿಂದ ನಡೆಕೊಳ್ಳಿ. ಧ್ಯಾನ ಸಹಕಾರಿ.

ತುಲಾ ನಿಮ್ಮ ಪಾಲಿಗೆ ಅತ್ಯಂತ ಯಶಸ್ವೀ ದಿನ. ಆಪ್ತರಿಂದ ಅಚ್ಚರಿಯ ವಿಷಯ ಕೇಳುವಿರಿ. ಹಳೆಯ ಹೂಡಿಕೆ ಈಗ ಲಾಭ ತರಬಹುದು.

ವೃಶ್ಚಿಕ ಸಹನೆ ಅತಿ ಮುಖ್ಯ. ನಿಮಗೆ ಪಥ್ಯವಾಗದ ಬೆಳವಣಿಗೆ ನಡೆದೀತು. ವಿರೋಧಿಸದೆ ಹೊಂದಿಕೊಂಡು ಸಾಗಿ. ಆಪ್ತರ ಅಸಹಕಾರ.

ಧನು ನಿಮ್ಮ ಕುರಿತಾದ ತಪ್ಪುಕಲ್ಪನೆ ನೀಗಲು ಆದ್ಯತೆ ಕೊಡಿ. ಇಲ್ಲವಾದರೆ ಅದು ಸಂಬಂಧದ ಮೇಲೆ ಪರಿಣಾಮ ಬೀರಬಹುದು. ಟೀಕೆ ಕಡೆಗಣಿಸಿ.

ಮಕರ ವೃತ್ತಿಯಲ್ಲಿ ಅಡ್ಡಿ. ವೃತ್ತಿಗೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳದಿರಿ. ಆತ್ಮೀಯರ ಜತೆ ಮನ ಬಿಚ್ಚಿ ಮಾತಾಡಿ. ಮುಚ್ಚುಮರೆ ಬೇಡ.

ಕುಂಭ ಹೊಸ ವ್ಯವಹಾರ ಆರಂಭಕ್ಕೆ ಸಕಾಲ. ಎಲ್ಲ ನಿಮಗೆ ಪೂರಕವಾಗಿ ಸಾಗುವುದು. ಅಜೀರ್ಣ ಸಮಸ್ಯೆ. ಮಿತಾಹಾರ ಒಳ್ಳೆಯದು.

ಮೀನ ಸಕಾಲದಲ್ಲಿ ಕಾರ್ಯ ಮುಗಿಸಿ. ಮುಂದೆ ಹಾಕುತ್ತಾ ಹೋಗಬೇಡಿ. ಅನಿರೀಕ್ಷಿತ ಧನಗಳಿಕೆ. ಬಂಧು ಜತೆಗಿನ ಮನಸ್ತಾಪ ಅಂತ್ಯ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ :3,8,2,7

ಕೇಂದ್ರಕ್ಕೆ ಸಚಿವ ದಿನೇಶ್ ಗುಂಡೂರಾವ್ ಪ್ರಸ್ತಾವನೆ ಸಲ್ಲಿಕೆ
ಮೈಸೂರು ಯೋಗ ಜಿಲ್ಲೆ

•**ಬೆಂಗಳೂರು:** ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲೆಯನ್ನು ಯೋಗ ಜಿಲ್ಲೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟಿದೆ. ಶೀಘ್ರದಲ್ಲೇ ಯೋಗ ಜಿಲ್ಲೆಯನ್ನಾಗಿ ಮೈಸೂರು ಘೋಷಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬುಧವಾರ ನಗರದ ಆರೋಗ್ಯ ಸೌಧದಲ್ಲಿ ಆಯುಷ್ ಇಲಾಖೆ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗದ ರಾಜಧಾನಿ ಮೈಸೂರು. ಇಲ್ಲಿ ಅತಿ ಹೆಚ್ಚು ಜನ ವಿಶ್ವಮಟ್ಟದ ಪ್ರಖ್ಯಾತಿಯಾಗಿದ್ದಾರೆ. ಅಲ್ಲದೇ, ಯೋಗಾಭ್ಯಾಸದ ಬಗ್ಗೆ ತಿಳಿದುಕೊಳ್ಳಲು ಜನ ಮೈಸೂರು ಬರುತ್ತಾರೆ. ಇದು ಕರ್ನಾಟಕ ರಾಜ್ಯದ ಹೆಮ್ಮೆಯ ವಿಚಾರವಾಗಿದೆ ಎಂದರು.

ತಾಲೂಕು ಮಟ್ಟದಲ್ಲಿ ವಿವಿಧ ಪ್ರತಿ ಮನೆಗೆ ಯೋಗ ತಲುಪಿಸಲಾಗುತ್ತಿದೆ. ಯೋಗ ಜಿಲ್ಲೆಯ ನ್ನಾಗಿ ಮೈಸೂರು ಘೋಷಿಸುವುದಾಗಿ ಪ್ರಸ್ತಾವನೆ ನೀಡಿದ್ದೆವು. ಅದಕ್ಕೆ ಇದೀಗ ಕೇಂದ್ರ ಅನುಮೋದನೆ ನೀಡಿದ್ದು, ಒಟ್ಟು 1 ಕೋಟಿ ರೂ. ಅನುದಾನವೂ ಲಭ್ಯವಾಗಿದೆ. ಯೋಗ ಜಿಲ್ಲೆಯಾಗಿ ಮೈಸೂರು ಘೋಷಣೆಯಾದ ಬಳಿಕ ದರ ಪರಿಣಾಮ ನೋಡಿಕೊಂಡು ರಾಜ್ಯದ ಇತರೆ ಜಿಲ್ಲೆಗಳಿಗೂ ಯೋಗವನ್ನು ವಿಸ್ತರಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಮಾಹಿತಿ ನೀಡಿದರು.

ಪ್ರತಿ ವರ್ಷ ಜೂ 21ಕ್ಕೆ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿ ಆರೋಗ್ಯ, ಜ್ಞಾನ ಮತ್ತು ವಿಶ್ವಶಾಂತಿಗಾಗಿ ಯೋಗ ಪರಿಕಲ್ಪನೆ ಅಡಿ ಆಯುಷ್ ಇಲಾಖೆಯಿಂದ ವಿಧಾನಸೌಧ ಆವರಣದಲ್ಲಿ ಜೂ. 21 ರ ಬೆಳಗ್ಗೆ 6 ರಿಂದ 8 ಗಂಟೆವರೆಗೆ ಯೋಗ ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಜ್ಯಪಾಲ ಥಾವರ ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಅಂದಾಜು 5 ಸಾವಿರಕ್ಕೂ ಅಧಿಕ ಯೋಗಪಟುಗಳು ಆಗಮಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯವು ಯೋಗ ಆಚರಿಸಲು ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಆಯುಷ್ ಇಲಾಖೆಯು ಆರೋಗ್ಯ, ಜ್ಞಾನ ಮತ್ತು ವಿಶ್ವಶಾಂತಿಗಾಗಿ ಯೋಗ ಘೋಷವಾಕ್ಯದ ಅಡಿ ಅನೇಕ ವಿನೂತನ ಕಾರ್ಯಕ್ರಮದ ಮೂಲಕ ಯೋಗೋತ್ಸವ ಆಚರಿಸಲು ಸಂಕಲ್ಪ ಮಾಡಿದ್ದೇವೆ ಎಂದು ಸಚಿವರು ವಿವರಿಸಿದರು. ಇದೇ ವೇಳೆ ಸಚಿವರು ಯೋಗ ಅಂಚೆ ಚೀಟಿ ಮತ್ತು ಕೈಪಿಡಿ ಬಿಡುಗಡೆ ಮಾಡಿದರು. ಇಲಾಖೆ ಆಯುಕ್ತ ಸುನೀಲ್ ಪನ್ವಾರ್, ಭಾರತೀಯ ಅಂಚೆ ಇಲಾಖೆಯ ಹಿರಿಯ ಸೂಪರಿಂಟೆಂಡೆಂಟ್ ಹರೀಶ್ ಇದ್ದರು.



ಯೋಗಕಾರ್ಯಕ್ರಮಗಳು ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಗ್ರಾಮೀಣ ಯೋಗ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಯೋಗ, ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯಲ್ಲಿ ಕಾರ್ಸಿನೋ ಯೋಗ, ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಕಾರ್ಡಿಯೋ ಯೋಗ, ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ಯೋಗ ಮತ್ತು ವಿದ್ಯಾರ್ಥಿ ಯೋಗ ಕಾರ್ಯಕ್ರಮಗಳು ನಡೆಯಲಿವೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಸ್ಪೀಕರ್‌ಗೆ ಘೇರಾವ್: ದೂರು ದಾಖಲು

•**ಉಳ್ಳಾಲ:** ಕುತ್ತಾರು ಜಂಕ್ಷನ್‌ನಲ್ಲಿ ಕೊರಗಜ್ಜನ ವೃತ್ತ ನಿರ್ಮಾಣದ ವಿಚಾರದಲ್ಲಿ ಭದ್ರತಾ ಸಿಬ್ಬಂದಿಯನ್ನು ತಳ್ಳಿ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಘೇರಾವ್ ಹಾಕಿ ತರಾಟೆಗೈದ ಮದನಿ ನಗರದ ಜುನೈದ್ ಮತ್ತು ಆತನ ಹತ್ತು ಜನ ಸಹಚರರ ವಿರುದ್ಧ ಉಳ್ಳಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸ್ಪೀಕರ್ ಯು.ಟಿ.ಖಾದರ್ ಅವರ ಅಂಗ ರಕ್ಷಕ ಸಿಎಸ್‌ಆರ್ ಘಟಕದ ಸಿಬ್ಬಂದಿ ಮೊಹಮ್ಮದ್ ಯಾಸೀನ ಇನಾಮದಾರ ನೀಡಿರುವ ದೂರಿನ ಆಧಾರದಡಿ ಉಳ್ಳಾಲ ಠಾಣೆಯಲ್ಲಿ ಹನ್ನೊಂದು ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಕಳೆದ ಮೇ 7 ರ ಗುರುವಾರ ರಾತ್ರಿ 10 ಗಂಟೆ ವೇಳೆ ಸ್ಪೀಕರ್ ಯು.ಟಿ.ಖಾದರ್ ಅವರು ಉಳ್ಳಾಲ ಮಾಸ್ತಿಕಟ್ಟೆಯ ರೆಸಾರ್ಟ್ ಒಂದರಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಿಂತಿರುಗುವ ವೇಳೆ ಮದನಿ ನಗರದ ಜುನೈದ್ ಹಾಗೂ ಇತರ ಹತ್ತು ಮಂದಿ ಏಕಾಏಕಿ ಸ್ಪೀಕರ್ ಬಳಿ ಹೋಗುವಾಗ ಅಂಗರಕ್ಷಕರಾದ ಮೊಹಮ್ಮದ್ ಯಾಸೀನ ಅವರನ್ನು ತಡೆದಿದ್ದು, ಈಗಾಗಲೇ ಬಹಳ ತಡವಾಗಿದೆ ಎಂದು ಹೇಳಿ ಸ್ಪೀಕರ್ ಭೇಟಿಗೆ ಅವಕಾಶ ನಿರಾಕರಿಸಿದ್ದರು. ಈ ವೇಳೆ ಜುನೈದ್ ಹಾಗೂ ಸಹಚರರು ಅಂಗರಕ್ಷಕ ಯಾಸೀನ್ ಅವರನ್ನು ತಳ್ಳಿ ಮುನ್ನುಗ್ಗಿದ್ದು, ಸ್ಪೀಕರ್ ಖಾದರ್ ಅವರನ್ನು ಘೇರಾವ್ ಹಾಕಿ ಏರು ಧ್ವನಿಯಲ್ಲಿ ಕುತ್ತಾರು ಕೊರಗಜ್ಜನ ವೃತ್ತದ ವಿಚಾರದಲ್ಲಿ ತರಾಟೆಗೈದಿದ್ದಲ್ಲದೆ, ಅದರ ವೀಡಿಯೋವನ್ನು ಆಕ್ಷೇಪಾರ್ಹ ಬರಹಗಳೊಂದಿಗೆ ಜಾಲತಾಣಗಳಲ್ಲಿ ಹರಿಯಬಿಟ್ಟಿರುವುದಾಗಿ ಗನ್ ಮ್ಯಾನ್ ಮೊಹಮ್ಮದ್ ಯಾಸೀನ ಅವರು ತನ್ನ ಮೇಲಾಧಿಕಾರಿಗಳ ಸೂಚನೆಯಂತೆ ಮೇ 9 ರಂದು ತಡವಾಗಿ ಉಳ್ಳಾಲ ಠಾಣೆಗೆ ದೂರು ನೀಡಿದ್ದಾರೆ.

ಚಿನ್ನ, ಬೆಳ್ಳಿಯ ಆಮದು ಸುಂಕ ಶೇ.15ಕ್ಕೆ ಹೆಚ್ಚಳ

ಪುಟ 1➡ ಆದರೆ, ಈ ಕ್ರಮದಿಂದ ಕಳ್ಳಸಾಗಣೆ ಹಾಗೂ ಬೂದು ಮಾರುಕಟ್ಟೆ ಚಟುವಟಿಕೆ ಹೆಚ್ಚುವ ಸಾಧ್ಯತೆಯಿದೆ ಎಂದು ಆಭರಣ ಉದ್ಯಮ ಎಚ್ಚರಿಸಿದೆ. ಸರ್ಕಾರದ ಮೂಲಗಳ ಪ್ರಕಾರ, ಇದು ತಾತ್ಕಾಲಿಕ ಮತ್ತು ಮುನ್ನೆಚ್ಚರಿಕಾ ಕ್ರಮವಾಗಿದ್ದು, ಅನಗತ್ಯ ಆಮದು ಕಡಿಮೆ ಮಾಡಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು ಇದರ ಉದ್ದೇಶವಾಗಿದೆ.

ಭೂ ಗ್ಯಾರಂಟಿಯಲಿ ವಿನಾಯ್ತಿ, ರಿಯಾಯ್ತಿ

ಪುಟ 1➡ ಮೇ 16 ರಿಂದ ಇದಕ್ಕೆ ಚಾಲನೆ ನೀಡಲಾಗುವುದು. ಬೆಳಗ್ಗೆ 10ಕ್ಕೆ ಪ್ರಾರಂಭವಾಗಿ ಸಂಜೆಯವರೆಗೆ ನಡೆಯುವ ಈ ಅಭಿಯಾನದ ಸ್ಥಳಗಳನ್ನು ಮುಂಚಿತವಾಗಿ ತಿಳಿಸಲಾಗುವುದು ಎಂದರು.

ಸುರಕ್ಷಿತ ಡಿಜಿಟಲ್ ಆಸ್ತಿ ಹಕ್ಕು: ಇ ಖಾತಾ ಆಂದೋಲನ ಭಾರತದ ಅತಿದೊಡ್ಡ ಸಮಗ್ರ ಡಿಜಿಟಲ್ ನಗರ ಆಸ್ತಿ ದಾಖಲೆ ವ್ಯವಸ್ಥೆಯಾಗಿದೆ. 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಆನ್‌ಲೈನ್ ಮೂಲಕ ನೇರವಾಗಿ ನಾಗರಿಕರ ಕೈಗೆ ತಲುಪಿಸಲಾಗಿದೆ. ನಗರದಲ್ಲಿ ದಾಖಲೆಗಳು ಸರಿ ಇರುವ ಸುಮಾರು 16 ಲಕ್ಷ ಎ ಖಾತೆಗಳಿವೆ. 7 ಲಕ್ಷ ಬಿ ಖಾತೆಗಳಿವೆ. ಭೂ ಗ್ಯಾರಂಟಿ ಮೂಲಕ ಬೆಂಗಳೂರಿನ ಪ್ರತಿಯೊಬ್ಬ ನೈಜ ಆಸ್ತಿ ಮಾಲೀಕರಿಗೂ ಸುರಕ್ಷಿತ, ವಿಶ್ವಾಸಾರ್ಹ ಹಾಗೂ ಎಲ್ಲೆಡೆಯೂ ಲಭ್ಯವಾಗುವ ಡಿಜಿಟಲ್ ಆಸ್ತಿ ದಾಖಲೆಗಳನ್ನು ಒದಗಿಸಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಹೆಚ್ಚಳ: ಕಟ್ಟಡದ ಉಲ್ಲಂಘನೆ ವಿನಾಯಿತಿ ಮಿತಿಯನ್ನು ಶೇ.5 ರ ಬದಲಾಗಿ ಶೇ.15ಕ್ಕೆ ಹೆಚ್ಚಿಸಲಾಗಿದೆ. ಶೇ.15ರಷ್ಟು ಪ್ರಮಾಣದ ಉಲ್ಲಂಘನೆಗಳಿಗೆ ದಂಡ ಪಾವತಿಸಿಕೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

100 ದಿನಗಳಲ್ಲಿ ಶುಲ್ಕ ಪಾವತಿ ಮಾಡಿದರೆ ಶೇ.60 ರಿಯಾಯ್ತಿ

ಬಿ ಖಾತೆಯಿಂದ ಎ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದವರು ಗೈಡನ್ಸ್ ವ್ಯಾಲ್ಯೂನ ಶೇ.5 ರಷ್ಟು ಕಟ್ಟಬೇಕಿದೆ. ಆದರೆ ಮೇ 16ರಿಂದ ಅನ್ವಯವಾಗುವಂತೆ 100 ದಿನಗಳ ಒಳಗಾಗಿ ಶುಲ್ಕ ಪಾವತಿಸಿದರೆ ಶೇ.2ರಷ್ಟು ಕಟ್ಟಿದರೆ ಸಾಕು. ಅಂದರೆ ಶೇ.60 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. 1 ಕೋಟಿ ರೂ. ಆಸ್ತಿಯ ಬೆಲೆ ಇದ್ದರೆ 5 ಲಕ್ಷ ರೂ. ಶುಲ್ಕ ಪಾವತಿ ಮಾಡಬೇಕಿತ್ತು. ಈಗ 2 ಲಕ್ಷ ರೂ. ಕಟ್ಟಿದರೆ ಸಾಕು. ಇದರಿಂದ 7 ಲಕ್ಷ ರೂ. ಆಸ್ತಿ ಮಾಲೀಕರಿಗೆ ಉಪಯೋಗವಾಗಲಿದೆ. 100 ದಿನಗಳಲ್ಲಿ ಇದರ ಉಪಯೋಗ ಪಡೆಯಲಿಲ್ಲ ಎಂದರೆ ನಂತರ ಶೇ.5 ರಷ್ಟೇ ಶುಲ್ಕ ಪಾವತಿ ಮಾಡಬೇಕಾಗುತ್ತದೆ ಎಂದು ಶಿವಕುಮಾರ್ ತಿಳಿಸಿದರು.

ನೀಟ್ ತನಿಖೆ ಚುರುಕು; ಐವರನ್ನು ಬಂಧಿಸಿದ ಸಿಬಿಐ

ಪುಟ 1➡ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್), ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಸಾರ್ವಜನಿಕ ಪರೀಕ್ಷೆಗಳ ಕಾಯ್ದೆ 2024ರ ಅನ್ವಯ ಕ್ರಿಮಿನಲ್ ಪಿತೂರಿ ಮತ್ತು ವಂಚನೆ ಪ್ರಕರಣ ದಾಖಲಿಸಲಾಗಿದೆ. ಸಿಬಿಐ ಅಧಿಕಾರಿಗಳು ಬುಧವಾರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಪ್ರಧಾನ ಕಚೇರಿಗೆ ಭೇಟಿ ನೀಡಿ ಪರೀಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ, ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಪತ್ರಿಕೆ ಸೋರಿಕೆಗೆ ಬಳಸಲಾದ ಮೆಸೇಜಿಂಗ್ ಆ್ಯಪ್‌ಗಳ ಗುಂಪುಗಳನ್ನು ಏಜೆನ್ಸಿ ಪರಿಶೀಲಿಸುತ್ತಿದೆ. ರಾಜಸ್ಥಾನ ಪೊಲೀಸರ ಎಸ್‌ಒಜಿ ವರದಿಯ ಪ್ರಕಾರ, ಪರೀಕ್ಷೆಗೂ ಮೊದಲು ಹಂಚಿಕೆಯಾದ ಗೆಸ್ ಪೇಪರ್‌ನಲ್ಲಿದ್ದ ಸುಮಾರು 120 ಪ್ರಶ್ನೆಗಳು ಅಸಲಿ ಪತ್ರಿಕೆಯೊಂದಿಗೆ ತಾಳೆಯಾಗಿವೆ. ದೇಶದ 551 ನಗರಗಳು ಮತ್ತು ವಿದೇಶದ 14 ಕೇಂದ್ರಗಳಲ್ಲಿ ನಡೆದ ನೀಟ್-ಯುಜಿ 2026 ಪರೀಕ್ಷೆಗೆ ಸುಮಾರು 23 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು.

ಯಾರಿದು ಶುಭಂ ಖೈರ್ನಾರ್?

30 ವರ್ಷದ ಶುಭಂ ಖೈರ್ನಾರ್ ನಾಸಿಕ್ ಜಿಲ್ಲೆಯ ನಂದಗಾಂವ್ ನಿವಾಸಿಯಾಗಿದ್ದು, ಬಿಎಎಂಎಸ್ ವಿದ್ಯಾರ್ಥಿ. ಈತ ಸೋರಿಕೆಯಾದ ನೀಟ್ ಪ್ರಶ್ನೆಪತ್ರಿಕೆಯನ್ನು 10 ಲಕ್ಷ ರೂ.ಗೆ ಖರೀದಿಸಿ, ಅಭ್ಯರ್ಥಿಗಳಿಗೆ 15 ಲಕ್ಷ ರೂ.ಗೆ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಈತ ತನ್ನ ಕೂದಲನ್ನು ಕತ್ತರಿಸಿ ಗುರುತು ಮರೆಮಾಚಲು ಯತ್ನಿಸಿದ್ದರೂ, ಹಳೆಯ ಫೋಟೋಗಳ ಸಹಾಯದಿಂದ ಇಂದ್ರನಗರದಲ್ಲಿ ಈತನನ್ನು ಬಂಧಿಸಿದ್ದಾರೆ. ನ್ಯಾಯಾಲಯ ಈತನನ್ನು ಸಿಬಿಐ ಟ್ರಾನ್ಸಿಟ್ ರಿಮಾಂಡ್‌ಗೆ ಒಪ್ಪಿಸಿದೆ.

ಶುದ್ಧ ಪ್ರೀತಿಗೆ ವಿರೋಧವಿಲ್ಲ, ಲವ್ ಜಿಹಾದ್ ಆತಂಕಕಾರಿ

ಪುಟ 1➡ ಎರಡು ವ್ಯಕ್ತಿಗಳ ನಡುವೆ ನಿಜವಾದ ಪ್ರೀತಿ ಇದ್ದರೆ ಅಲ್ಲಿ ಧರ್ಮ, ಜಾತಿ ಅಥವಾ ರಾಷ್ಟ್ರೀಯತೆ ಅಡ್ಡಿಯಾಗುವುದಿಲ್ಲ, ಆದರೆ ಅದು ನಿರ್ದಿಷ್ಟ ಕಾರ್ಯಸೂಚಿ ಅಥವಾ ಸಂಚಿನ ರೂಪ ಪಡೆದರೆ ಸಮಸ್ಯೆಯಾಗುತ್ತದೆ ಎಂದರು.

ಹಿಂದು-ಮುಸ್ಲಿಮರು ಒಂದೇ ಡಿಎನ್‌ಎ ಹೊಂದಿದ್ದಾರೆ ಎಂಬ ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ಒಂದೇ ಡಿಎನ್‌ಎ ಎಂದು ಹೇಳಿ ಹುಡುಗಿಯರನ್ನು ಅಪಹರಿಸುವುದನ್ನು ಸಮರ್ಥಿಸಲಾಗುವುದಿಲ್ಲ. ಅದು ಪ್ರೀತಿ ಅಲ್ಲ ಎಂದು ಹೇಳಿದರು. ತಾವು ಕೇವಲ ಹಿಂದು ಯುವತಿಯರ ಕುರಿತು ಮಾತ್ರ ಮಾತನಾಡುತ್ತಿಲ್ಲ ಎಂದು ಹೇಳಿದ ಹೊಸಬಾಳೆ, ಯಾವುದೇ ಸಮುದಾಯದ ಹುಡುಗಿಯ ಮೇಲಾದರೂ ಬಲವಂತ ಅಥವಾ ಮೋಸ ಸರಿಯಾದುದಲ್ಲ, ಸ್ವೀಕಾರ ಮಾಡಲು ಸಾಧ್ಯವಿಲ್ಲ ಎಂದರು.

ಅಂತರಧರ್ಮ ವಿವಾಹಗಳ ಕುರಿತು ಸ್ಪಷ್ಟನೆ ನೀಡಿದ ಅವರು, ಸಂಘದ ಅನೇಕ ಕುಟುಂಬಗಳಲ್ಲಿ ಜಾತಿ, ಸಮುದಾಯ ಮತ್ತು ಧರ್ಮ ಮೀರಿ ವಿವಾಹಗಳು ನಡೆದಿವೆ. ನಾವು ಅದನ್ನು ಪ್ರಚಾರ ಮಾಡಿಲ್ಲ, ಸಹಜ ವಿಷಯವಾಗಿ ಸ್ವೀಕರಿಸಿದ್ದೇವೆ ಎಂದು ಹೇಳಿದರು.

ವಿಶ್ವಾಸಮತ ಪರೀಕ್ಷೆ ಗೆದ್ದ ಸಿಎಂ ವಿಜಯ್

ಪುಟ 1➡ ಇಂದೀಗ ಬಹುತೇಕ ಎಐಎಡಿಎಂಕೆಯ ಶಾಸಕರ ಬೆಂಬಲದಿಂದ ಸಂಖ್ಯೆ 144 ದಾಟಿದೆ. ಮುಖ್ಯಮಂತ್ರಿ ವಿಜಯ್ ಮತ್ತು ಇವರ ಸಂಪುಟದ ಕೆಲವು ಸಚಿವರು ಮೇ 10ರಂದು ಪ್ರಮಾಣವಚನ ಸ್ವೀಕರಿಸಿದ್ದರು. 22 ಶಾಸಕರು ವಿಜಯ್ ವಿರುದ್ಧ ಮತ ಹಾಕಿದ್ದಾರೆ. ಐವರು ಶಾಸಕರು ವಿಶ್ವಾಸ ಮತಯಾಚನೆ ಪರೀಕ್ಷೆಯಿಂದ ದೂರ ಉಳಿದಿದ್ದರು.

ಡಿಎಂಕೆ ಸಭಾತ್ಯಾಗ: ವಿಜಯ್ ವಿಶ್ವಾಸ ಮತ ಸಾಬೀತು ವೇಳೆ ಡಿಎಂಕೆಯ 59 ಶಾಸಕರು ಸದನದಿಂದ ಹೊರ ನಡೆದಿದ್ದರು. ನಮ್ಮ 47 ಶಾಸಕರು ವಿಜಯ್ ವಿರುದ್ಧ ಮತ ಚಲಾಯಿಸುವರು ಎಂದು ಎಐಎಡಿಎಂಕೆ ಹೇಳಿತ್ತಾದರೂ, ಪಕ್ಷದ 24 ಶಾಸಕರು ವಿಜಯ್ ಪರ ಮತ ಹಾಕಿದ್ದಾರೆಂದು ವರದಿಗಳು ತಿಳಿಸಿವೆ.



ನಟ, ನಿರ್ಮಾಪಕ ದಿಲೀಪ್‌ರಾಜ್ ವಿಧಿವಶ

ಪುಟ 1➡ ಬುಧವಾರ ಸಂಜೆ ರಾಮನಗರ ಮತ್ತು ಕನಕಪುರ ಮುಖ್ಯ ರಸ್ತೆಯಲ್ಲಿರುವ ಅವರದೇ ಫಾರಂ ಹೌಸ್‌ನಲ್ಲಿ ಲಿಂಗಾಯತ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳನ್ನು ಅವರ ಅಣ್ಣನ ಮಗ ನೆರವೇರಿಸಿದರು. ದಿಲೀಪ್ ರಾಜ್ ಕನ್ನಡದಲ್ಲಿ 25ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. 2005ರಲ್ಲಿ ತೆರೆಕಂಡ ಬಾಯ್ ಫ್ರೆಂಡ್ ಅವರ ಮೊದಲ ಚಿತ್ರ. ಪುನೀತ್ ರಾಜಕುಮಾರ್ ಜತೆ ಮಿಲನ ಚಿತ್ರದಲ್ಲಿ ಅವರು ಖಳನಾಯಕನಾಗಿ ನಟಿಸಿದ್ದರು. ಇದರೊಂದಿಗೆ ಯು ಟರ್ನ್, ಆರ್ಕೆಸ್ಟ್ರಾ ಮೈಸೂರು, ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು, 7 ಒ ಕ್ಲಾಕ್, ಕ್ಷಣ ಕ್ಷಣ, ಲವ್ ಮಾಕ್ಟೇಲ್ 3 ಇವರು ನಟಿಸಿದ ಪ್ರಮುಖ ಚಿತ್ರಗಳು, ಕಂಬದಮನೆ ದಿಲೀಪ್ ರಾಜ್ ನಟಿಸಿದ ಮೊದಲ ಧಾರಾವಾಹಿ. ಹಿಟ್ಲರ್ ಕಲ್ಯಾಣದಲ್ಲಿ ಅವರೇ ನಾಯಕನಾಗೂ ನಟಿಸಿದ್ದರು, ಹಾಗೇ ಪಾರು, ನಾ ನಿನ್ನ ಬಿಡಲಾರೆ, ಬ್ರಹ್ಮಗಂಟು ಅಲ್ಲದೆ ಇತ್ತೀಚೆಗಷ್ಟೇ ಕೃಷ್ಣ ರುಕ್ಕು ಎಂಬ ಹೊಸ ಸೀರಿಯಲ್ ಆರಂಭಿಸಿದ್ದರು. 1978ರ ಸೆ.2ರಂದು ಜನಿಸಿದ ದಿಲೀಪ್ ರಾಜ್ ಮೂಲತಃ ಅರಸೀಕೆರೆಯವರು. ಹುಟ್ಟಿದ್ದು ಬೆಳೆದದ್ದು ಮಾತ್ರ ಬೆಂಗಳೂರಲ್ಲಿ. ದಿಲೀಪ್ ರಾಜ್ ಅವರ ನಿಧನಕ್ಕೆ ಸುಧಾರಾಣಿ, ಅಭಿನಯ, ಅನುಶ್ರೀ, ವಿಜಯ ರಾಘವೇಂದ್ರ ಸೇರಿದಂತೆ ಕನ್ನಡ ಚಿತ್ರರಂಗ ಹಾಗೂ ಕಿರುತೆರೆಯ ಹಲವಾರು ಕಲಾವಿದರು ಕಂಬನಿ ಮಿಡಿದಿದ್ದಾರೆ.



ಭತ್ತ, ತೊಗರಿ ಸೇರಿ 14 ಬೆಳೆಗಳ ಎಂಎಸ್‌ಪಿ ಹೆಚ್ಚಳ

ಪುಟ 1➡ ಹತ್ತಿಗೆ ಈ ಬಾರಿ ದೊಡ್ಡ ಮಟ್ಟದ ಏರಿಕೆ ಸಿಕ್ಕಿದ್ದು, ಮಧ್ಯಮ ತಳಿಯ ಹತ್ತಿಗೆ ಕ್ವಿಂಟಾಲ್‌ಗೆ 557 ರೂ. ಹೆಚ್ಚಳದೊಂದಿಗೆ 8,267 ರೂ. ಹಾಗೂ ಉತ್ತಮ ತಳಿಗೆ 8,667 ರೂ. ಎಂಎಸ್‌ಪಿ ನಿಗದಿಯಾಗಿದೆ. ಸೂರ್ಯಕಾಂತಿ ಬೀಜಕ್ಕೆ ಅತಿ ಹೆಚ್ಚು 622 ರೂ. ಏರಿಕೆ ದೊರೆತು, ಕ್ವಿಂಟಾಲ್‌ಗೆ 8,343 ರೂ. ಆಗಿದೆ.

ಗುರೆಳ್ಳು (ನೈಜರ್‌ಸೀಡ್) ಬೆಲೆ 515 ರೂ. ಏರಿಕೆಯಾಗಿ 10,052 ರೂ.ಗೆ, ಎಳ್ಳು 500 ರೂ. ಹೆಚ್ಚಳದೊಂದಿಗೆ 10,346 ರೂ.ಗೆ ತಲುಪಿದೆ. ಸೋಯಾಬೀನ್(ಹಳದಿ) ಬೆಲೆ 380 ರೂ. ಹೆಚ್ಚಳದೊಂದಿಗೆ 5,708 ರೂ. ಆಗಿದ್ದರೆ, ನೆಲಗಡಲೆ 254 ರೂ. ಏರಿಕೆಯಾಗಿ 7,517 ರೂ. ನಿಗದಿಯಾಗಿದೆ.

ದ್ವಿದಳ ಧಾನ್ಯಗಳಲ್ಲಿ ತೊಗರಿಗೆ 450 ರೂ. ಹೆಚ್ಚಳದೊಂದಿಗೆ 8,450 ರೂ., ಉದ್ದಿನ ಬೇಳೆಗೆ 400 ರೂ. ಹೆಚ್ಚಳದೊಂದಿಗೆ 8,200 ರೂ. ಎಂಎಸ್‌ಪಿ ಘೋಷಿಸಲಾಗಿದೆ. ಹೆಸರುಬೇಳೆ ಬೆಲೆಯಲ್ಲಿ 12 ರೂ. ಏರಿಕೆ ಮಾಡಿ 8,780 ರೂ.ಗೆ ನಿಗದಿಪಡಿಸಲಾಗಿದೆ.

ಇತರೆ ಧಾನ್ಯಗಳಲ್ಲಿ ಜೋಳ(ಹೈಬ್ರಿಡ್) ಬೆಲೆ 324 ರೂ. ಹೆಚ್ಚಳದೊಂದಿಗೆ 4,023 ರೂ. ಹಾಗೂ ಮಾಲ್ದಂಡಿ ಜೋಳಕ್ಕೆ 4,073 ರೂ. ನಿಗದಿಯಾಗಿದೆ. ಸಜ್ಜೆ ಕ್ವಿಂಟಾಲ್‌ಗೆ 125 ರೂ. ಹೆಚ್ಚಳದೊಂದಿಗೆ 2,900 ರೂ., ರಾಗಿ 319 ರೂ. ಏರಿಕೆಯೊಂದಿಗೆ 5,205 ರೂ. ಮತ್ತು ಮೆಕ್ಕೆಜೋಳ 10 ರೂ. ಹೆಚ್ಚಳದೊಂದಿಗೆ 2,410 ರೂ. ಆಗಿದೆ.

ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರಕಾರ, ರೈತರಿಗೆ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ.50 ದೊರೆಯುವಂತೆ ಮಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಹೆಸರುಕಾಳಿಗೆ ಶೇ.61, ಸಜ್ಜೆ ಹಾಗೂ ಮೆಕ್ಕೆಜೋಳಕ್ಕೆ ಶೇ.56 ಮತ್ತು ತೊಗರಿಗೆ ಶೇ.54ರಷ್ಟು ಲಾಭ ಸಿಗಲಿದೆ ಎಂದು ಅಂದಾಜಿಸಲಾಗಿದೆ.

ಈ ಬೆಳೆಗಳ ಖರೀದಿಗಾಗಿ ಕೇಂದ್ರ ಸರ್ಕಾರ ಸುಮಾರು 2.60 ಲಕ್ಷ ಕೋಟಿ ರೂಪಾಯಿ ಮೀಸಲಿಟ್ಟಿದ್ದು, ವಾರ್ಷಿಕ ಸಂಗ್ರಹಣೆ 824.41 ಲಕ್ಷ ಟನ್ ತಲುಪುವ ನಿರೀಕ್ಷೆಯಿದೆ.

ಹಿಜಾಬ್ ನಿಷೇಧ ವಾಪಸ್

ಪುಟ 1➡ ಯಾವುದೇ ಧರ್ಮ ಅಥವಾ ಸಂಪ್ರದಾಯದ ಆಚರಣೆಯು ವಿದ್ಯಾರ್ಥಿಯ ಶಿಕ್ಷಣದ ಹಕ್ಕಿಗೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬುಧವಾರ ಸಮಗ್ರ ಶಿಕ್ಷಣ ಕರ್ನಾಟಕದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಅವರೊಂದಿಗಿನ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಕಳೆದ ಏ.24ರಂದು ಸಿಇಟಿಯಲ್ಲಿ ಅಧಿಕಾರಿಗಳು ವಿದ್ಯಾರ್ಥಿಯ ಜನಿವಾರ ತೆಗೆಸಿದ್ದು ಸರಿಯಲ್ಲ. ಮುಖ್ಯಮಂತ್ರಿಗಳು ಕೂಡ ಈ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದರು. ಮಕ್ಕಳ ಹಿತದೃಷ್ಟಿಯಿಂದ ಜನಿವಾರ ವಿಚಾರದಲ್ಲಿ ಕಠಿಣ ಕಾನೂನು ತರಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಏಕರೂಪ ನಿಯಮ ತಂದಿದ್ದೇವೆ. ಜನಿವಾರ, ಪೇಟ, ಹಿಜಾಬ್, ಸ್ಕಾರ್ಫ್ ಎಲ್ಲದರ ಬಗ್ಗೆ ನಿಯಮ ಮಾಡಿದ್ದೇವೆ ಎಂದರು.

> **ಶಾಲೆಗಳಲ್ಲಿ ಸಂಪ್ರದಾಯದ ವಿಚಾರದಲ್ಲಿ ಆಗುತ್ತಿದ್ದ ತಾರತಮ್ಯಕ್ಕೆ ಈ ಆದೇಶ ಕಡಿವಾಣ ಹಾಕಲಿದ್ದು, ಎಲ್ಲ ಧರ್ಮಕ್ಕೆ ಸೇರಿದ ಆದೇಶವಾಗಿದೆ.**
> ■ ರಿಜ್ವಾನ್ ಅರ್ಷದ್, ಶಾಸಕ

ರಾಜ್ಯದಲ್ಲಿ ಹಿಜಾಬ್ ವಿವಾದ ತಾರಕಕ್ಕೆ ಏರಿದಾಗ ಹಿಂದು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜ್‌ಗೆ ಬರಲು ಆರಂಭಿಸಿದ್ದರು. ಕೇಸರಿ ಶಾಲು, ಮುಸಲ್ಮಾನರು ಧರಿಸುವ ಟೋಪಿಯ ಧಾರಣೆಯ ಬಗ್ಗೆ ಆದೇಶದಲ್ಲಿ ಅವಕಾಶ ಉಲ್ಲೇಖವಿಲ್ಲ. ಈ ಹಿನ್ನೆಲೆಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಸಚಿವರುಗಳು ಸ್ಪಷ್ಟ ಉತ್ತರ ನೀಡದೆ ನುಣುಚಿಕೊಂಡರು. ಆದರೆ, ನಿಯಮಗಳಲ್ಲಿ ಅಗತ್ಯಬಿದ್ದರೆ ಮುಖ್ಯಮಂತ್ರಿಗಳ ಜತೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಆದೇಶದಲ್ಲಿ ಏನೆಲ್ಲಾ ಧಾರಣೆಗೆ ಅವಕಾಶ

ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳ ಅನ್ವಯ ಸಾಮಾನ್ಯವಾಗಿ ಧರಿಸುವ ಪೇಟ/ ಟರ್ಬನ್, ಜನಿವಾರ, ಪವಿತ್ರ ದಾರ, ಶಿವದಾರ, ರುದ್ರಾಕ್ಷಿ, ತಲೆವಸ್ತ್ರ/ಹಿಜಾಬ್ ಮುಂತಾದವನ್ನು ಸರ್ಕಾರ ಸೇರಿಸಿದೆ. ಜತೆಗೆ ಇತರೆ ಯಾವುದೇ ಸಮಾನ ಸ್ವರೂಪದ ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳು ಸೇರಿರಬಹುದು ಎಂದು ಹೇಳಿದೆ. ಆದರೆ ಇವು ಶಿಸ್ತು, ಸುರಕ್ಷತೆ ಮತ್ತು ವಿದ್ಯಾರ್ಥಿಯ ಗುರುತಿಸುವಿಕೆಗೆ ಅಡ್ಡಿಯಾಗಬಾರದು ಎಂದು ಹೇಳಿದೆ. ಉಳಿದಂತೆ ನಾಮ, ತಿಲಕ ಧಾರಣೆಗೆ ಅವಕಾಶ ನೀಡಲಾಗಿದೆ. ಯಾವುದೇ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆ ಹಾಗೂ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನಿರಾಕರಿಸುವಂತಿಲ್ಲ. ಧಾರ್ಮಿಕ ಸಂಕೇತ ಧರಿಸುವಂತೆ ವಿದ್ಯಾರ್ಥಿಯನ್ನ ಒತ್ತಾಯಿಸುವಂತಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಧರ್ಮ ಬದಲಾದರೂ ರಾಷ್ಟ್ರೀಯತೆ ಬದಲಾಗುವುದಿಲ್ಲ

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸಂದರ್ಶನ

ಭಾರತ ಹಿಂದು ರಾಷ್ಟ್ರವೇ, ನಾವು ಹೊಸದಾಗಿ ನಿರ್ಮಿಸುತ್ತಿಲ್ಲ



ಭಾರತವನ್ನು ಹಿಂದು ರಾಷ್ಟ್ರವನ್ನಾಗಿ ಮಾಡಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎನ್ನುವುದು ತಪ್ಪು. ಭಾರತ ಎಂದಿಗೂ ಹಿಂದು ರಾಷ್ಟ್ರವೇ ಆಗಿತ್ತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಹೇಳಿದ್ದಾರೆ. ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಇಲ್ಲಿ ಬ್ರಿಟಿಷರ ಆಳ್ವಿಕೆ ಇತ್ತು. ಆಗಲೂ ಇದು ಹಿಂದು ರಾಷ್ಟ್ರವೇ ಆಗಿತ್ತು, ಬ್ರಿಟಿಷ್ ರಾಷ್ಟ್ರವಾಗಿರಲಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಪಸಂಖ್ಯಾತ ಸಮುದಾಯಗಳಿಗೆ ಭಯ ಹುಟ್ಟಿಸುವಂತ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ಹೊಸಬಾಳೆ ಅವರು, ಎಲ್ಲರಿಗೂ ಒಂದೇ ಮೂಲ, ಒಂದೇ ಪೂರ್ವಜರು, ಒಂದೇ ಡಿಎನ್‌ಎ. ಹೀಗಿರುವಾಗ ಯಾರು ಬೇರೆ ಬೇರೆ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ವಸುಧೈವ ಕುಟುಂಬಕಂ ಹೇಳುವವರು ಭೇದ ಮಾಡುವುದಿಲ್ಲ

ಲೋಕವೇ ಒಂದು ಕುಟುಂಬ ಎಂದು ನಂಬುವವರು ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸಲು ಸಾಧ್ಯವೇ ಇಲ್ಲ ಎಂದರು. ಬೇರೆ ಧರ್ಮ ಆಚರಿಸುವ ವ್ಯಕ್ತಿ, ಇನ್ನೊಬ್ಬರ ನಂಬಿಕೆಗೆ ಅಡ್ಡಿಯಾಗಬಾರದು ಅಷ್ಟೇ ಎಂದು ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಮಿತವ್ಯಯ ದೇಶದ ಹಿತಕ್ಕಾಗಿ

ಪ್ರಧಾನಿ ಕರೆ ನೀಡಿರುವ ಮಿತವ್ಯಯ ಕ್ರಮಗಳ ಕುರಿತು ಪ್ರತಿಕ್ರಿಯಿಸಿದ ಹೊಸ ಬಾಳೆ ಅವರು, ಇಂತಹ ಕ್ರಮಗಳನ್ನು ಹಿಂದೆ ಕೂಡ ಜಾರಿಗೆ ತರಲಾಗಿತ್ತು. ದೇಶದ ಹಿತದೃಷ್ಟಿಯಿಂದ ಪ್ರಧಾನಿ ಮಿತವ್ಯಯಕ್ಕೆ ಕರೆ ನೀಡಿರುವುದು ಸರಿಯಾದ ನಿರ್ಧಾರ ಎಂದರು.

ಅಲ್ಪಸಂಖ್ಯಾತ ಪರಿಕಲ್ಪನೆಗೆ ಆಧಾರವೇ ಇಲ್ಲ

ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರೆಂಬ ಪರಿಕಲ್ಪನೆಗೆ ದೃಢವಾದ ಆಧಾರವಿಲ್ಲ ಎಂದು ಹೊಸಬಾಳೆ ಅವರು ಅಭಿಪ್ರಾಯಪಟ್ಟರು. ಒಬ್ಬ ವ್ಯಕ್ತಿ ತನ್ನ ಆರಾಧನೆಯ ವಿಧಾನವನ್ನು ಬದಲಾಯಿಸಿಕೊಂಡಿದ್ದಾನೆ ಅಷ್ಟೇ. ಧರ್ಮ ಬದಲಾದರೆ ರಾಷ್ಟ್ರೀಯತೆ ಬದಲಾಗುವುದಿಲ್ಲ, ನಾವು ಎಲ್ಲರೂ ಒಂದೇ ಜನ, ಒಂದೇ ಪರಂಪರೆ ಹೊಂದಿರುವವರು ಎಂದು ಹೇಳಿದರು. ಆರ್‌ಎಸ್‌ಎಸ್‌ನಲ್ಲಿ ವಿವಿಧ ಧಾರ್ಮಿಕ ಸಮುದಾಯಗಳವರೂ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದೂ ಅವರು ತಿಳಿಸಿದರು. ಅವರು ನಮ್ಮಲ್ಲಿ ಕೇವಲ ಪ್ರದರ್ಶನದ ವಸ್ತುಗಳಲ್ಲ, ಸಮಾನವಾಗಿ ಸಂಘದ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಿದರು.

ಭಯ ಎಲ್ಲಿ? ಸಂಖ್ಯೆಯೇನು ಕಡಿಮೆಯಾಯಿತೇ?: ಹಿಂದುತ್ವ ಹಾಗೂ ಹಿಂದು ರಾಷ್ಟ್ರದ ವಿಚಾರಗಳಿಂದ ಅಲ್ಪಸಂಖ್ಯಾತರಲ್ಲಿ ಭಯ ಉಂಟಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಈ ಪ್ರಶ್ನೆಯನ್ನು ಸಂಘ ಸ್ಥಾಪನೆಯಾದ ನೂರು ವರ್ಷಗಳಿಂದ ಕೇಳಲಾಗುತ್ತಿದೆ ಎಂದರು. ಮುಸ್ಲಿಮರ ಸಂಖ್ಯೆ ಕಡಿಮೆಯಾಯಿತೇ? ಅವರು ದೇಶ ಬಿಟ್ಟು ಓಡಿಹೋಗಬೇಕಾಯಿತೇ? ಅವರನ್ನು ಎರಡನೇ ದರ್ಜೆ ಪ್ರಜೆಗಳಂತೆ ನಡೆಸಲಾಗುತ್ತಿದೆಯೇ? ಎಂದು ಪ್ರತಿಪ್ರಶ್ನೆ ಹಾಕಿದರು. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶದಂತಹ ಬಿಜೆಪಿ ಆಡಳಿತದ ರಾಜ್ಯಗಳನ್ನು ಉಲ್ಲೇಖಿಸಿದ ಅವರು, ಸರ್ಕಾರದ ಯೋಜನೆಗಳು ಬೇರೆ ಧರ್ಮದವರಿಗೆ ತಲುಪುತ್ತಿಲ್ಲವೇ? ಎಂದು ಪ್ರಶ್ನಿಸಿದರು.

ಧರ್ಮ ಆಧಾರಿತ ರಾಜಕೀಯ ಪಕ್ಷಗಳ ಬಗ್ಗೆ

ಮುಸ್ಲಿಮರಿಗೆ ಪ್ರತ್ಯೇಕ ನಾಯಕತ್ವ ಅಗತ್ಯವಿಲ್ಲವೆಂದು ಭಾವಿಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತಿ ಸಮುದಾಯಕ್ಕೂ ತನ್ನದೇ ನಾಯಕತ್ವ ಇರಬಹುದು. ಆದರೆ ರಾಜಕೀಯ ಪಕ್ಷಗಳು ಧರ್ಮದ ಆಧಾರದ ಮೇಲೆ ನಿರ್ಮಾಣವಾಗಬಾರದು ಎಂದು ಹೇಳಿದರು. ಭಾರತೀಯ ಸಂವಿಧಾನವು ವಿವಿಧ ರೀತಿಯ ಸಂಘಟನೆಗಳಿಗೆ ಅವಕಾಶ ನೀಡುತ್ತದೆ. ಆದರೆ ಧರ್ಮದ ಆಧಾರದ ಮೇಲೆ ರಾಜಕೀಯ ನಡೆಯಲು ಆರಂಭವಾದಾಗ ಸಮಸ್ಯೆಗಳು ಉದ್ಭವಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ಕೇರಳದಲ್ಲಿ ಕ್ರೈಸ್ತ ಸಮುದಾಯ ಕೇಂದ್ರೀಕೃತ ಪಕ್ಷಗಳಿವೆ. ಸಿಖ್ ಧರ್ಮ ಆಧಾರಿತ ಪಕ್ಷವೂ ಇದೆ. ಜನಪ್ರತಿನಿಧಿತ್ವ ಕಾಯ್ದೆಯ ನಿಯಮಗಳನ್ನು ಪಾಲಿಸಿದರೆ ಯಾವುದೇ ರಾಜಕೀಯ ಪಕ್ಷ ಸ್ಥಾಪಿಸಬಹುದು. ಮುಸ್ಲಿಂ ಲೀಗ್ ಕೂಡ ಇದೆ. ಹಿಂದು ಮಹಾಸಭೆಯೂ ಇತ್ತು ಎಂದು ಹೇಳಿದರು.

ಅಲ್ಪಸಂಖ್ಯಾತ ನಾಯಕರೊಂದಿಗೆ ಸಂವಾದ

ಅಲ್ಪಸಂಖ್ಯಾತ ಸಮುದಾಯಗಳ ನಾಯಕರೊಂದಿಗೆ ಆರ್‌ಎಸ್‌ಎಸ್ ನಿರಂತರ ಸಂವಾದ ನಡೆಸುತ್ತಿದೆ ಎಂದು ಹೊಸಬಾಳೆ ಹೇಳಿದರು. ರಾಷ್ಟ್ರ-ರಾಜ್ಯದ ಪರಿಕಲ್ಪನೆ ಕುರಿತು ದೇಶದ ಬೌದ್ಧಿಕ ವಲಯ ಹಾಗೂ ಅಕಾಡೆಮಿಕ್ ಕ್ಷೇತ್ರದಲ್ಲಿ ಸಮಗ್ರ ಚರ್ಚೆ ನಡೆಯಬೇಕು ಎಂದೂ ಅಭಿಪ್ರಾಯಪಟ್ಟರು.

ಮುಸ್ಲಿಮರಲ್ಲಿ ರಾಷ್ಟ್ರೀಯತಾವಾದಿ ನಾಯಕತ್ವ ಅಪರೂಪ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮುಸ್ಲಿಂ ಸಮುದಾಯದಲ್ಲಿ ರಾಷ್ಟ್ರೀಯತಾವಾದಿ ನಾಯಕತ್ವ ಇತ್ತಾದರೂ, ಈಗ ಅಂತಹ ನಾಯಕತ್ವ ಅಪರೂಪದ ವಸ್ತುವಾಗಿದೆ ಎಂದು ಹೊಸಬಾಳೆ ಅವರು ಹೇಳಿದ್ದಾರೆ. ಇಂದಿಗೂ ಕೆಲ ರಾಷ್ಟ್ರೀಯತಾವಾದಿ ಮುಸ್ಲಿಂ ನಾಯಕರು ಇದ್ದರೂ ಅವರಿಗೆ ಸಮುದಾಯದ ಬೆಂಬಲ ದೊರೆಯುತ್ತಿಲ್ಲ ಎಂದು ಹೇಳಿದರು. ಎಐಎಂಐಎಂ ನಾಯಕ ಅಸಾದುದ್ದೀನ್ ಓವೈಸಿ ಅವರು, ಇತ್ತೀಚೆಗೆ ಮುಸ್ಲಿಮರು ತಮ್ಮದೇ ನಾಯಕತ್ವ ಹಾಗೂ ರಾಜಕೀಯ ಪಕ್ಷ ರೂಪಿಸಬೇಕಾದ ಕಾಲ ಬಂದಿದೆ ಎಂದು ಹೇಳಿದ್ದ ಬಗ್ಗೆ ಪ್ರಶ್ನಿಸಿದಾಗ, ಅದು ಅವರ ಅಭಿಪ್ರಾಯ. ಅವರ ಸಮುದಾಯ ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ ಎಂದು ಹೊಸಬಾಳೆ ಅವರು ಪ್ರತಿಕ್ರಿಯಿಸಿದರು. ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಮುಸ್ಲಿಂ ಸಮುದಾಯದಲ್ಲಿ ರಾಷ್ಟ್ರಭಕ್ತ ನಾಯಕತ್ವವಿತ್ತು. ಆದರೆ ಪಾಕಿಸ್ತಾನ ರಚನೆಯ ಬಳಿಕ ದೇಶದ ರಾಜಕೀಯದಲ್ಲಿ ಕ್ರಮೇಣ ಬದಲಾವಣೆಗಳು ನಡೆದವು. ಅದರ ಪರಿಣಾಮವಾಗಿ ಹುಸಿ-ಧರ್ಮನಿರಪೇಕ್ಷ ನೀತಿಗಳು ಬಲ ಪಡೆದವು ಎಂದು ಅವರು ಆರೋಪಿಸಿದರು. ಇದೀಗ ರಾಷ್ಟ್ರೀಯತಾವಾದಿ ಮುಸ್ಲಿಂ ನಾಯಕರು ಇದ್ದರೂ ಅವರಿಗೆ ಬೆಂಬಲ ಸಿಗುತ್ತಿಲ್ಲ, ಪ್ರತ್ಯೇಕತಾವಾದಿ ಮನೋಭಾವ ಹೊಂದಿದವರಿಗಷ್ಟೇ ಸಮುದಾಯದ ಬೆಂಬಲ ದೊರೆಯುತ್ತಿದೆ ಎಂದು ಹೊಸಬಾಳೆ ಅವರು ಹೇಳಿದರು.

ರಾಷ್ಟ್ರದ ಮೂಲ ಮೌಲ್ಯಗಳ ಬಗ್ಗೆ ಒಮ್ಮತ ಅಗತ್ಯ

ದೇಶದ ರಾಷ್ಟ್ರೀಯತೆ ಮತ್ತು ಮೂಲಭೂತ ಮೌಲ್ಯಗಳ ವಿಚಾರದಲ್ಲಿ ಸಾಮರಸ್ಯ ಮುಖ್ಯ ಎಂದು ಹೊಸಬಾಳೆ ಅವರು ಒತ್ತಿ ಹೇಳಿದರು. ಈ ದೇಶದ ರಾಷ್ಟ್ರೀಯತೆ, ರಾಷ್ಟ್ರದ ಮೂಲ ಮೌಲ್ಯಗಳ ಬಗ್ಗೆ ಒಮ್ಮತ ಇರಬೇಕಾಗಿದೆ. ಈ ವಿಷಯಗಳನ್ನು ಜವಾಹರಲಾಲ್ ನೆಹರು, ಮಹಾತ್ಮಾ ಗಾಂಧಿ ಹಾಗೂ ಸಂಪೂರ್ಣಾನಂದಜೀ ಮೊದಲಾದವರು ಕೂಡ ಪ್ರಸ್ತಾಪಿಸಿದ್ದರು ಎಂದರು. ಆಧ್ಯಾತ್ಮಿಕ ಕ್ಷೇತ್ರದ ಶ್ರೀಅರವಿಂದೋ ಅಥವಾ ಸ್ವಾಮಿ ವಿವೇಕಾನಂದ ಅವರ ಬಗ್ಗೆ ಅಲ್ಲ, ರಾಜಕೀಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ನಾಯಕರ ವಿಚಾರವನ್ನು ಉಲ್ಲೇಖಿಸುತ್ತಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು.

ಧರ್ಮ ಚರ್ಚೆ ಅಪವಿತ್ರ ಎನ್ನುವ ಮನೋಭಾವ ತಪ್ಪು

ಧರ್ಮ ಅಥವಾ ರಾಷ್ಟ್ರೀಯ ಮೌಲ್ಯಗಳ ಬಗ್ಗೆ ಚರ್ಚೆ ಮಾಡುವುದು ಧರ್ಮನಿರಪೇಕ್ಷತೆಯ ವಿರುದ್ಧ ಎಂಬ ಮನೋಭಾವ ದೇಶದಲ್ಲಿ ದೀರ್ಘಕಾಲ ಬೆಳೆಸಲ್ಪಟ್ಟಿದೆ ಎಂದು ಹೊಸಬಾಳೆ ಅವರು ಟೀಕಿಸಿದರು. ಧರ್ಮ ಸೇರಿದಂತೆ ಇಂತಹ ವಿಚಾರಗಳ ಬಗ್ಗೆ ಚರ್ಚಿಸುವುದೇ ಅಪವಿತ್ರ, ಕಳಂಕ ಎನ್ನುವ ವಾತಾವರಣ ನಿರ್ಮಾಣವಾಗಿದೆ. ಅದು ಇರಬಾರದು ಎಂದು ಅವರು ಹೇಳಿದರು.

ವಿಶ್ವಶಾಂತಿಗೆ ಭಾರತದಿಂದ ಸಕಾರಾತ್ಮಕ ಪಾತ್ರ

ಕಳೆದ ಒಂದು ದಶಕದಲ್ಲಿ ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನಮಾನವು ಬಹಳವಾಗಿ ಬದಲಾಗಿದ್ದು, ಇಂದು ಭಾರತವನ್ನು ವಿಶ್ವ ರಾಷ್ಟ್ರಗಳು ಗೌರವದಿಂದ ಕಾಣುತ್ತಿವೆ. ಇದೇ ಕಾರಣಕ್ಕೆ ವಿಶ್ವಶಾಂತಿ, ಜವಾಬ್ದಾರಿ ಹಾಗೂ ರಾಷ್ಟ್ರಗಳ ನಡುವೆ ಸಕಾರಾತ್ಮಕ ಸಂವಾದಕ್ಕೆ ಭಾರತ ಮಹತ್ವದ ಪಾತ್ರ ವಹಿಸಬಹುದಾಗಿದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ಆರ್‌ಎಸ್‌ಎಸ್ ಭಾರತದ ವಿದೇಶಾಂಗ ನೀತಿಗೆ ಅಧಿಕೃತವಾಗಿ ಸಲಹೆ ನೀಡುವುದಿಲ್ಲ, ಆದರೆ ಪ್ರಧಾನಿ ನರೇಂದ್ರ ಮೋದಿ ಅನುಸರಿಸುತ್ತಿರುವ ನೀತಿಗಳಲ್ಲಿ ಆರ್‌ಎಸ್‌ಎಸ್‌ನ ಚಿಂತನೆಗಳ ಅಂಶಗಳು ಕಂಡುಬರುತ್ತವೆ ಎಂದು ಹೇಳಿದರು.

ವಿಶ್ವದಲ್ಲಿ ಭಾರತದ ಮಾತಿಗೆ ಮೌಲ್ಯ

ಭಾರತದ ಜಾಗತಿಕ ಪ್ರಭಾವದ ಕುರಿತು ಮಾತನಾಡಿದ ಅವರು, ಇಂದು ವಿಶ್ವ ನಕ್ಷೆಯಲ್ಲಿ ಭಾರತವನ್ನು ಗಮನದಿಂದ ಕೇಳಲಾಗುತ್ತಿದೆ, ಗುರುತಿಸಲಾಗುತ್ತಿದೆ ಹಾಗೂ ಗೌರವಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಗಳು ಮತ್ತು ನಾಯಕರಲ್ಲಿ ಸದುದ್ದೇಶ, ಸಂವಾದ ಹಾಗೂ ಶಾಂತಿಯ ಮನೋಭಾವ ಮೂಡಿಸಲು ಭಾರತ ಪ್ರಮುಖ ಪಾತ್ರವಹಿಸಬಹುದು ಎಂದು ಹೇಳಿದರು. ಜನರನ್ನು ಸಕಾರಾತ್ಮಕ ಚರ್ಚೆ ಮತ್ತು ಸಂವಾದದಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಎಂದೂ ಅವರು ಅಭಿಪ್ರಾಯಪಟ್ಟರು.

ವಿದೇಶಗಳಲ್ಲಿ ದೇವಾಲಯ ನಿರ್ಮಾಣ ವಿವಾದ ಅಲ್ಲ

ವಿದೇಶಗಳಲ್ಲಿ ಭಾರತೀಯರು ದೇವಸ್ಥಾನಗಳನ್ನು ನಿರ್ಮಿಸುತ್ತಿರುವುದು ಸ್ಥಳೀಯರೊಂದಿಗೆ ಘರ್ಷಣೆಗೆ ಕಾರಣವಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಅವರು ದೇವಸ್ಥಾನ ಅಥವಾ ಹನುಮಾನ್ ಪ್ರತಿಮೆ ನಿರ್ಮಿಸಿರುವುದು ಕಾನೂನುಬಾಹಿರವಾಗಿ ಅಲ್ಲ. ಭಾರತದ ಜನರು ಸಾಮಾನ್ಯವಾಗಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಿಲ್ಲ. ಅವರ ಅಪರಾಧ ಪ್ರಮಾಣವೂ ಅತ್ಯಂತ ಕಡಿಮೆ ಇದೆ ಎಂದು ಸ್ಪಷ್ಟಪಡಿಸಿದರು.

ವಿದೇಶದಲಿದ್ದರೂ ಸ್ಥಳೀಯ ಸಮಾಜದ ಬಗ್ಗೆ ಹೊಣೆಗಾರಿಕೆ ಇರಲಿ

ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಸಂದೇಶ ನೀಡಿದ ಹೊಸಬಾಳೆ ಅವರು, ಯಾವ ದೇಶದಲ್ಲಿ ಜೀವನ ಸಾಗಿಸುತ್ತೀರೋ ಆ ಸಮಾಜದ ಬಗ್ಗೆ ಜವಾಬ್ದಾರಿ ಇರಬೇಕು. ಆ ದೇಶದ ಮೇಲಿನ ನಿಷ್ಠೆ ಪ್ರಶ್ನೆಗೆ ಒಳಪಡುವಂತಿರಬಾರದು. ಭಾರತ ಜತೆಗಿನ ನಂಟು ಸಹಜ, ಆದರೆ ತಾವು ಬದುಕುತ್ತಿರುವ ಸಮಾಜದ ಕಲ್ಯಾಣದ ಕುರಿತೂ ಕಾಳಜಿ ಇರಬೇಕು ಎಂದು ಹೇಳಿದರು.

ಶಿಕ್ಷಣದ ಮೂಲಕ ಜಾಗೃತಿ ಅಗತ್ಯ

ಸಾವಿರ ವರ್ಷಗಳಿಂದ ಬಂದಿರುವ ಸಮಸ್ಯೆಗಳನ್ನು 10 ವರ್ಷಗಳಲ್ಲಿ ಸರಿಪಡಿಸಲಾಗುವುದಿಲ್ಲ, ಶಿಕ್ಷಣ ಸಂಸ್ಥೆಗಳು, ಕುಟುಂಬಗಳು ಹಾಗೂ ಸ್ಥಳೀಯ ಸಮುದಾಯಗಳ ಮೂಲಕ ಮೌಲ್ಯಗಳನ್ನು ಬೆಳೆಸಬೇಕು. ಪರಿಸರದತ್ತ ಹೊಣೆಗಾರಿಕೆ ಬಗ್ಗೆ ಜಾಗೃತಿ ಮೂಡಿಸಬೇಕು. ಇದಕ್ಕೆ ಸಮಯ ಬೇಕಾಗುತ್ತದೆ ಎಂದು ಹೇಳಿದರು.

ಬಿಜೆಪಿ ಬೆಳವಣಿಗೆ ಸ್ವೀಕೃತಿಯ ಸಂಕೇತ

ಹಿಮಂತ ಬಿಸ್ವಾ ಶರ್ಮಾ, ಸಾಮ್ರಾಟ್ ಚೌಧರಿ ಹಾಗೂ ಸುವೇಂದು ಅಧಿಕಾರಿ ಮೊದಲಾದವರು ಬೇರೆ ಪಕ್ಷಗಳಿಂದ ಬಂದು ಬಿಜೆಪಿ ನೇತೃತ್ವಕ್ಕೆ ಏರಿರುವುದು ಆರ್‌ಎಸ್‌ಎಸ್‌ಗೆ ಅಸಮಾಧಾನವೇ ಅಥವಾ ಸಂತೋಷವೇ ಎಂಬ ಪ್ರಶ್ನೆಗೆ, ನಾವು ಸಂತೋಷದಲ್ಲಿದ್ದೇವೆ. ಬಿಜೆಪಿ ಬೆಳೆಯುತ್ತಿದೆ. ಅಂದರೆ ಅದರ ಸ್ವೀಕೃತಿ ಹೆಚ್ಚುತ್ತಿದೆ ಎಂಬುದೇ ಅರ್ಥ ಎಂದು ಹೇಳಿದರು. ಹೊಸ ನಾಯಕರು ಕಾಲಕ್ರಮೇಣ ಆರ್‌ಎಸ್‌ಎಸ್‌ನ ಚಿಂತನೆ ಮತ್ತು ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಇವರು ಈಗಾಗಲೇ ವೈಚಾರಿಕ ಕುಟುಂಬದ ಭಾಗ

ಬಿಜೆಪಿಗೆ ಸೇರುವ ಹೊಸ ಮುಖಗಳನ್ನು ಆರ್‌ಎಸ್‌ಎಸ್‌ಗೆ ಸೇರಲು ಪ್ರೋತ್ಸಾಹಿಸುವಿರಾ ಎಂಬ ಪ್ರಶ್ನೆಗೆ, ಅವರು ಈಗಾಗಲೇ ನಮ್ಮ ವೈಚಾರಿಕ ಕುಟುಂಬದ ಭಾಗವೇ ಆಗಿದ್ದಾರೆ ಎಂದು ಹೊಸಬಾಳೆ ಅವರು ಹೇಳಿದರು. ಆರ್‌ಎಸ್‌ಎಸ್‌ನಲ್ಲಿ ಯಾವುದೇ ಅಧಿಕೃತ ಸದಸ್ಯತ್ವವಿಲ್ಲ, ನಾನು ಕೂಡ ಯಾವುದೇ ಫಾರ್ಮಲ್ ಸದಸ್ಯತ್ವ ಪಡೆದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಬಂಗಾಳದಲ್ಲಿ ಹಿಂದು ಸಮಾಜದ ಹೋರಾಟ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜಯದಲ್ಲಿ ಆರ್‌ಎಸ್‌ಎಸ್ ಮತ್ತು ಸ್ವಯಂಸೇವಕರ ಪಾತ್ರ ಕುರಿತು ಮಾತನಾಡಿದ ಅವರು, ಪ್ರಜೆಗಳಾಗಿ ಅವರು ಮಾಡಬೇಕಾದದ್ದನ್ನೆಲ್ಲ ಮಾಡಿದ್ದಾರೆ ಎಂದರು. ಕಮ್ಯುನಿಸ್ಟ್ ಆಡಳಿತದ ಕಾಲದಿಂದಲೇ, ನಂತರ ತೃಣಮೂಲ ಕಾಂಗ್ರೆಸ್ ಆಡಳಿತದಲ್ಲಿಯೂ ಸ್ವಯಂಸೇವಕರು ದಾಳಿಗೆ ಒಳಗಾಗುತ್ತಿದ್ದರು. ಸನಾತನ ಹಿಂದೂ ಮೌಲ್ಯಗಳ ಬಗ್ಗೆ ಮಾತನಾಡುವುದು, ಶಾಖೆಗಳನ್ನು ನಡೆಸುವುದು, ರಾಷ್ಟ್ರಭಕ್ತರನ್ನು ಬೆಳೆಸುವವರ ಮೇಲೆ ಸರ್ಕಾರ ಅಥವಾ ಸರ್ಕಾರಪೋಷಿತ ಗುಂಪುಗಳಿಂದ ಹಲ್ಲೆ ನಡೆಯುತ್ತಿತ್ತು ಎಂದು ಆರೋಪಿಸಿದರು. ಇದು ಕೇವಲ ಸ್ವಯಂಸೇವಕರ ಹೋರಾಟವಲ್ಲ, ಸಂಪೂರ್ಣ ಹಿಂದು ಸಮಾಜದ ಹೋರಾಟವಾಗಿತ್ತು ಎಂದ ಅವರು, ಬಂಗಾಳದಲ್ಲಿ ಪ್ರತಿಯೊಬ್ಬ ಹಿಂದು ಮತದಾರನೇ ಹಿಂದು ಕಾರ್ಯಕರ್ತನಾದ. ಅದು ನಾಗರಿಕತೆಯ ಪ್ರಶ್ನೆಯಾಗಿತ್ತು ಎಂದು ಹೇಳಿದರು.

ಆರ್‌ಎಸ್‌ಎಸ್ ಶತಮಾನೋತ್ಸವದ ಜಾಗತಿಕ ಸಂಪರ್ಕ

ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನೆಲೆಯಲ್ಲಿ ಕೈಗೊಂಡ ಜಾಗತಿಕ ಸಂಪರ್ಕ ಕಾರ್ಯಕ್ರಮಗಳ ಬಗ್ಗೆ ಹೊಸಬಾಳೆ ಅವರು ಮಾಹಿತಿ ನೀಡಿದರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರಭಾವಿ ವ್ಯಕ್ತಿಗಳನ್ನು ಹಾಗೂ ಸ್ಥಳೀಯ ಜನರನ್ನು ಭೇಟಿಯಾಗುವ ಉದ್ದೇಶದಿಂದ ಹಲವು ದೇಶಗಳಿಗೆ ಭೇಟಿ ನೀಡಿದ್ದೆ. ಆರ್‌ಎಸ್‌ಎಸ್‌ನ ತತ್ವಚಿಂತನೆ ಭಾರತದ ಪೌರಾಣಿಕ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯಿಂದ ಪ್ರೇರಿತವಾಗಿದೆ ಎಂಬುದನ್ನು ವಿವರಿಸುವ ಅವಕಾಶ ದೊರಕಿತು ಎಂದು ಹೇಳಿದರು.

ಭಾರತೀಯರ ಯಶಸ್ಸಿನ ಮೇಲಿನ ಆತಂಕವೇ ಕಾರಣ

ಕೆಲವು ದೇಶಗಳಲ್ಲಿ ಭಾರತೀಯರ ಪರಿಶ್ರಮ ಮತ್ತು ಸಾಧನೆಗಳಿಂದ ಸ್ಥಳೀಯರಿಗೆ ಉದ್ಯೋಗ ಕಳೆದುಕೊಳ್ಳುವ ಭಯ ಉಂಟಾಗುತ್ತಿದೆ. ಭಾರತೀಯರ ಆರ್ಥಿಕ ಯಶಸ್ಸೇ ಕೆಲವೊಮ್ಮೆ ಇಂಥ ಅಸಮಾಧಾನಕ್ಕೆ ಕಾರಣವಾಗುತ್ತಿದೆ ಎಂದು ಹೇಳಿದರು. ಗಲ್ಫ್ ರಾಷ್ಟ್ರಗಳಲ್ಲಿ ನಿರ್ಮಾಣವಾಗಿರುವ ಭವ್ಯ ಸ್ವಾಮಿನಾಥನ್ ದೇವಾಲಯವನ್ನು ಉಲ್ಲೇಖಿಸಿದ ಅವರು, ಅದು ಅಲ್ಲಿನ ಸರ್ಕಾರದ ಸಹಕಾರದಿಂದ ನಿರ್ಮಾಣವಾಗಿದೆ ಎಂದರು.

ಪಾಶ್ಚಾತ್ಯೀಕರಣದ ನಡುವೆ ಕುಟುಂಬ ಮೌಲ್ಯ ಕಳೆದುಕೊಳ್ಳಬಾರದು


ಪಾಶ್ಚಾತ್ಯೀಕರಣ ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ಭಾರತೀಯ ಕುಟುಂಬ ಮೌಲ್ಯಗಳು ಹಾಗೂ ಸಾಮಾಜಿಕ ಹೊಣೆಗಾರಿಕೆ ಕುಗ್ಗಬಾರದು ಎಂದು ಹೊಸಬಾಳೆ ಅವರು ಅಭಿಪ್ರಾಯಪಟ್ಟಿದ್ದಾರೆ. ಇಂದು ನಾವು ಹೆಚ್ಚು ಹೆಚ್ಚು ಪಾಶ್ಚಾತ್ಯೀಕರಣದತ್ತ ಸಾಗುತ್ತಿದ್ದೇವೆ. ಆದರೆ ಮುಖ್ಯವಾದುದು ಮನುಷ್ಯನ ಮೌಲ್ಯಗಳು. ಕುಟುಂಬದಿಂದ ಸಮಾಜದವರೆಗೆ ಇತರರೊಂದಿಗೆ ಹೇಗೆ ನಡೆದುಕೊಳ್ಳಬೇಕು, ಪ್ರಕೃತಿಯೊಂದಿಗೆ ಹೇಗೆ ವರ್ತಿಸಬೇಕು ಎಂಬುದೇ ನಿಜವಾದ ಸಂಸ್ಕೃತಿ ಎಂದು ಹೇಳಿದರು. ಉಡುಗೆ, ಜೀವನಶೈಲಿ, ಹೊರಗಿನ ಆಚಾರ-ವಿಚಾರ ಬದಲಾಗಬಹುದು. ಆದರೆ ಹಿರಿಯರಿಗೆ ಗೌರವ ನೀಡುವುದು, ಕುಟುಂಬವನ್ನು ಒಗ್ಗೂಡಿಸಿಕೊಂಡು ಹೋಗುವುದು, ಸಮಾಜದತ್ತ ಹೊಣೆಗಾರಿಕೆ ಹೊಂದಿರುವುದು, ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವುದು ಇವು ಉಳಿಯಲೇಬೇಕು ಎಂದು ಅವರು ತಿಳಿಸಿದರು.

ವಿವೇಕಾನಂದರ ಉದಾಹರಣೆ

100 ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರಿಗೆ ಪಾಶ್ಚಾತ್ಯ ದೇಶಗಳಿಂದ ಏನು ಕಲಿಯಬೇಕು ಎಂದು ಕೇಳಿದಾಗ ಅವರು ಸಂಘಟನೆ ಎಂದು ಉತ್ತರಿಸಿದ್ದರು ಎಂದು ಹೊಸಬಾಳೆ ಅವರು ನೆನಪಿಸಿದರು. ಭಾರತದಲ್ಲಿ ರಸ್ತೆ ಸಂಸ್ಕೃತಿ ಕುರಿತು ಮಾತನಾಡಿದ ಅವರು, ದೊಡ್ಡ ವಾಹನ ಹೊಂದಿದವರಿಗೇ ರಸ್ತೆ ಸೇರಿದೆ ಎನ್ನುವ ಮನೋಭಾವ ಇದೆ. ಇದು ಬದಲಾಗಬೇಕು. ಪಾದಚಾರಿಗಳಿಗೆ ಗೌರವ ನೀಡುವ ಸಂಸ್ಕೃತಿ ಬೆಳೆಯಬೇಕು ಎಂದರು.

ಕುಟುಂಬಕ್ಕೆ ಸೇರಲು ಸದಸ್ಯತ್ವ ಫಾರ್ಮ್ ಬೇಕಿಲ್ಲ

ಇನ್ನು ಪಶ್ಚಿಮ ಬಂಗಾಳದ ನೂತನ ಸಿಎಂ ಸುವೇಂದು ಅಧಿಕಾರಿ ಅವರನ್ನು ದತ್ತಾತ್ರೇಯ ಹೊಸಬಾಳೆ ಅವರು ನಮ್ಮ ಮಗ ಎಂದು ಬಣ್ಣಿಸಿದ್ದು, ಆರ್‌ಎಸ್‌ಎಸ್ ಕುಟುಂಬಕ್ಕೆ ಸೇರಲು ಯಾವುದೇ ಅಧಿಕೃತ ಸದಸ್ಯತ್ವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಅಂದರೆ, ಕುಟುಂಬಕ್ಕೆ ಸೊಸೆ ಬಂದರೆ ಫಾರ್ಮ್ ತುಂಬಬೇಕಾಗುವುದಿಲ್ಲ, ಸಹಜವಾಗಿಯೇ ಆಕೆ ಕುಟುಂಬದ ಭಾಗವಾಗುತ್ತಾಳೆ. ಆರ್‌ಎಸ್‌ಎಸ್ ಕೂಡ ಅಂತಹ ಕುಟುಂಬ ವ್ಯವಸ್ಥೆಯಂತೆಯೇ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಬೇರೆ ಪಕ್ಷಗಳಿಂದ ಬಿಜೆಪಿ ಸೇರ್ಪಡೆಗೊಂಡು ಮುಖ್ಯಮಂತ್ರಿಗಳಾದ ನಾಯಕರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಎಲ್ಲರೂ ಬಾಲ್ಯದಲ್ಲೇ ಆರ್‌ಎಸ್‌ಎಸ್‌ಗೆ ಸೇರುತ್ತಾರೆ ಎನ್ನುವುದಿಲ್ಲ, ಅನೇಕರು ನಂತರದ ಹಂತದಲ್ಲಿ ಕೂಡ ಸೇರುತ್ತಾರೆ ಎಂದರು. ಸುವೇಂದು ಅಧಿಕಾರಿ ಅಳಿಯ ರೀತಿಯವರೇ ಎಂಬ ಪ್ರಶ್ನೆಗೆ ನಗುತ್ತಲೇ ಪ್ರತಿಕ್ರಿಯಿಸಿದ ಹೊಸಬಾಳೆ ಅವರು, ನಾವು ಈ ಮಗನ ಬಗ್ಗೆ ಹೆಮ್ಮೆಪಡುತ್ತೇವೆ ಎಂದರು.



ವಿದೇಶದಲ್ಲಿದ್ದರೂ ಭಾರತೀಯ ಮೌಲ್ಯ ಮರೆಯಬೇಡಿ

ವಿದೇಶಗಳಲ್ಲಿ ವಾಸಿಸುವ ಭಾರತೀಯರು ಭಾರತೀಯ ಸಂಸ್ಕೃತಿ ಹಾಗೂ ಮೌಲ್ಯಗಳಿಗೆ ಬದ್ಧರಾಗಿಯೇ ಅಲ್ಲಿನ ಸ್ಥಳೀಯ ಸಮಾಜದೊಂದಿಗೆ ಇನ್ನಷ್ಟು ಬೆರೆತು ಬದುಕಬೇಕು ಎಂದು ಹೊಸಬಾಳೆ ಅವರು ಕರೆ ನೀಡಿದ್ದಾರೆ. ವಿದೇಶದಲ್ಲಿರುವ ಭಾರತೀಯರು ತಮ್ಮ ಧಾರ್ಮಿಕ, ಭಾಷಾ ಹಾಗೂ ಜಾತಿ ವೈಮನಸ್ಸುಗಳನ್ನು ಅಲ್ಲಿಗೂ ಕೊಂಡೊಯ್ಯಬಾರದು ಎಂದು ಸಲಹೆ ನೀಡಿದರು. ತೆಲುಗು, ಪಂಜಾಬಿ, ತಮಿಳು ಎಂಬ ಪ್ರತ್ಯೇಕ ಗುಂಪುಗಳ ಬದಲು ಒಗ್ಗಟ್ಟಿನ ಭಾರತೀಯ ಸಮುದಾಯವಾಗಿ ಗುರುತಿಸಿಕೊಳ್ಳಬೇಕು ಎಂದರು. ರೋಮ್‌ನಲ್ಲಿದ್ದರೆ ರೋಮನ್ನರಂತೆ ನಡೆದುಕೊಳ್ಳಬೇಕು ಎಂಬ ಮಾತಿದೆ. ಅದನ್ನು ಪಾಲಿಸಲೇಬೇಕು ಎಂದು ಹೊಸಬಾಳೆ ಅವರು ಹೇಳಿದರು.

ಅಮೆರಿಕದಲ್ಲಿ 175 ಶಾಖೆಗಳು

ವಿದೇಶಗಳಲ್ಲಿ ಆರ್‌ಎಸ್‌ಎಸ್ ಮಾದರಿಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಹಿಂದು ಸ್ವಯಂಸೇವಕ ಸಂಘ (ಎಚ್‌ಎಸ್‌ಎಸ್) ಅಮೆರಿಕದ ವಿವಿಧ ಭಾಗಗಳಲ್ಲಿ ಸುಮಾರು 175 ಶಾಖೆಗಳನ್ನು ನಡೆಸುತ್ತಿದೆ ಎಂದು ಹೊಸಬಾಳೆ ಅವರು ಹೇಳಿದರು. ಅಲ್ಲಿ ಸಂಘದ ಶಾಖೆಗೆ ಬಂದಾಗ ಭಾಷೆ, ಜಾತಿ ಮೊದಲಾದ ಭೇದಗಳು ಮಾಯವಾಗುತ್ತವೆ. ಅದನ್ನೇ ನಾವು ಪ್ರಯತ್ನಿಸಿದ್ದೇವೆ ಎಂದರು. ಅಮೆರಿಕದಲ್ಲಿರುವ ಸುಮಾರು 54 ಲಕ್ಷ ಭಾರತೀಯರನ್ನು ಎಚ್‌ಎಸ್‌ಎಸ್‌ಗೆ ಸೇರಿಸುವ ಉದ್ದೇಶವಿದೆಯೇ ಎಂಬ ಪ್ರಶ್ನೆಗೆ, ಎಲ್ಲರನ್ನು ಸಂಘಟನೆಯೊಳಗೆ ತರಲು ಸಾಧ್ಯವಿಲ್ಲ. ಅದು ಪ್ರಾಯೋಗಿಕವೂ ಅಲ್ಲ, ಆದರೆ ಪ್ರಭಾವ ಬೀರುವ ಸಾಮರ್ಥ್ಯ ಎಚ್‌ಎಸ್‌ಎಸ್‌ಗೆ ಇದೆ. ಪರಸ್ಪರ ಜಾಲತಾಣ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಸನಾತನ ಧರ್ಮವನ್ನು ಅಳಿಸಲಾಗದು

ಸನಾತನ ಧರ್ಮವನ್ನು ನಿರ್ಮೂಲನ ಮಾಡಬೇಕು ಎಂದು ಪದೇ ಪದೇ ಕರೆ ನೀಡುತ್ತಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ಸ್ಟಾಲಿನ್ ಅವರು ಸನಾತನ ಧರ್ಮ ಕೊನೆಗೊಳ್ಳಬೇಕು ಎಂದು ಬಯಸಿದ ಮಾತ್ರಕ್ಕೆ ಅದು ಮಾಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸನಾತನ ಧರ್ಮ ಎನ್ನುವುದು ರಾಜಕೀಯ ಟೀಕೆಗಳಿಂದ ಅಳಿಸಿಹಾಕಲಾಗದ ನಾಗರಿಕತೆಯ ಶಾಶ್ವತ ಮೌಲ್ಯವಾಗಿದೆ. ಅದು ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಭಾರತದ ಆತ್ಮ ಮತ್ತು ವಿಶ್ವದೃಷ್ಟಿಯ ಪ್ರತಿನಿಧಿ ಎಂದು ಹೊಸಬಾಳೆ ಬಣ್ಣಿಸಿದರು. ಬೆಳಕು ಇರಬಾರದು ಅಥವಾ ನೆರಳುಗಳು ಇರಬಾರದು ಎಂದು ನಾನು ಭಾವಿಸಿದ ಮಾತ್ರಕ್ಕೆ ಅವು ಮಾಯವಾಗುವುದಿಲ್ಲ ಎಂದು ಅವರು ಮಾರ್ಮಿಕವಾಗಿ ನುಡಿದರು.



ಪಾಕ್ ನಾಯಕತ್ವದ ಮೇಲೆ ವಿಶ್ವಾಸ ಉಳಿದಿಲ್ಲ

ಭಾರತ-ಪಾಕಿಸ್ತಾನ ಸಂಬಂಧಗಳ ಕುರಿತು ಮಾತನಾಡಿದ ಹೊಸಬಾಳೆ ಅವರು, 26/11 ಮುಂಬೈ ಮಾರಣಹೋಮ, ಪುಲ್ವಾಮಾ ಹಾಗೂ ಪಹಲ್ಗಾಮ್ ದಾಳಿ ಸೇರಿದಂತೆ ಪುನರಾವರ್ತಿತ ಭಯೋತ್ಪಾದಕ ಕೃತ್ಯಗಳ ಕಾರಣದಿಂದಾಗಿ ಪಾಕಿಸ್ತಾನದ ರಾಜಕೀಯ ಮತ್ತು ಸೇನಾ ನಾಯಕತ್ವದ ಮೇಲೆ ಭಾರತಕ್ಕೆ ಯಾವುದೇ ವಿಶ್ವಾಸ ಉಳಿದಿಲ್ಲ ಎಂದು ಸ್ಪಷ್ಟಪಡಿಸಿದರು. ಭಾರತದ ಭದ್ರತೆ ಮತ್ತು ಆತ್ಮಗೌರವವನ್ನು ಯಾವುದೇ ಕಾರಣಕ್ಕೂ ಕಾಪಾಡಿಕೊಳ್ಳಬೇಕು ಎಂದು ಒತ್ತಿಹೇಳಿದ ಅವರು, ಆದರೂ ಸಂವಾದದ ಮಾರ್ಗಗಳು ಸಂಪೂರ್ಣವಾಗಿ ಮುಚ್ಚಿಹೋಗಬಾರದು ಎಂದು ಅಭಿಪ್ರಾಯಪಟ್ಟರು. ಇದಕ್ಕಾಗಿ ನೆರೆಯ ರಾಷ್ಟ್ರದೊಂದಿಗೆ ವ್ಯಾಪಾರ, ವೀಸಾ ಮತ್ತು ರಾಜತಾಂತ್ರಿಕ ಸಂಪರ್ಕ ಮುಂದುವರಿಯಬೇಕು. ಆ ಮೂಲಕ ಸಂವಹನದ ಬಾಗಿಲುಗಳು ಸಂಪೂರ್ಣ ಮುಚ್ಚಿಹೋಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯುದ್ಧಗಳ ಹಿಂದೆ ದುರಾಸೆ, ಅಹಂಕಾರ

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕುರಿತು ಮಾತನಾಡಿದ ಹೊಸಬಾಳೆ ಅವರು, ಯುದ್ಧಗಳು ಸಾಮಾನ್ಯವಾಗಿ ದುರಾಸೆ, ಅಹಂಕಾರ ಮತ್ತು ಸಂಪನ್ಮೂಲಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಬಯಕೆಯಿಂದ ಉದ್ಭವಿಸುತ್ತವೆ ಎಂದರು. ಪ್ರಸ್ತುತ ಉದ್ವಿಗ್ನತೆಗಳು ನಾಗರಿಕತೆಗಳ ಸಂಘರ್ಷಕ್ಕಿಂತಲೂ ಹೆಚ್ಚಾಗಿ ತೈಲ ಸೇರಿದಂತೆ ಕಾರ್ಯತಂತ್ರಾತ್ಮಕ ಹಾಗೂ ಆರ್ಥಿಕ ಹಿತಾಸಕ್ತಿಗಳಿಂದ ನಡೆಯುತ್ತಿವೆ ಎಂದು ಅವರು ವಿಶ್ಲೇಷಿಸಿದರು. ಮುಂದಿನ ದಿನಗಳಲ್ಲಿ ನೀರಿಗಾಗಿ ಯುದ್ಧಗಳಾಗಬಹುದು ಎಂಬ ಭವಿಷ್ಯವಾಣಿಗಳನ್ನು ಉಲ್ಲೇಖಿಸಿದ ಅವರು, ಯುದ್ಧಗಳು ಮಾನವ ಜೀವನವನ್ನು ಪುನರ್ರೂಪಿಸುತ್ತಲೇ ಇರುತ್ತವೆ, ಆದರೆ ಅವು ಮಾನವತೆಯನ್ನು ಸಂಪೂರ್ಣವಾಗಿ ನಾಶ ಮಾಡಲಾರವು ಎಂದು ಎಚ್ಚರಿಸಿದರು.

ಸಂಪಾದಕೀಯ

ಏನಾಸಂ ದಿಕ್ಕಿನಲ್ಲಿ ಅಸ್ಸಾಂ ಹೆಜ್ಜೆ

ಭಾರತದ ಸಂವಿಧಾನದಲ್ಲಿ ರಾಜ್ಯದ ನಿರ್ದೇಶಕ ತತ್ವಗಳ ಅಡಿಯಲ್ಲಿ ಉಲ್ಲೇಖಗೊಂಡಿರುವ ಏಕರೂಪ ನಾಗರಿಕ ಸಂಹಿತೆ (ಏನಾಸಂ) ವಿಚಾರವು ದಶಕಗಳಿಂದ ರಾಜಕೀಯ, ಸಾಮಾಜಿಕ ಹಾಗೂ ವೈಚಾರಿಕ ಚರ್ಚೆಯ ಕೇಂದ್ರಬಿಂದುವಾಗಿಯೇ ಉಳಿದಿದೆ. ಇದೀಗ ಅಸ್ಸಾಂ ಸರ್ಕಾರ ತನ್ನ ಸಚಿವ ಸಂಪುಟ ಸಭೆಯಲ್ಲಿ ಯುಸಿಸಿ ಜಾರಿಗೆ ಒಪ್ಪಿಗೆ ನೀಡಿರುವುದು ಕೇವಲ ಆಡಳಿತಾತ್ಮಕ ನಿರ್ಧಾರವಾಗಿರದೇ ಅದು ರಾಷ್ಟ್ರದ ಕಾನೂನು ಸಮಾನತೆಯ ಚರ್ಚೆಗೆ ಹೊಸ ಚೈತನ್ಯ ನೀಡಿದ ಹೆಜ್ಜೆಯಾಗಿದೆ. ಮುಖ್ಯವಾಗಿ, ಬುಡಕಟ್ಟು ಸಮುದಾಯಗಳನ್ನು ಇದರ ವ್ಯಾಪ್ತಿಯಿಂದ ಹೊರಗಿಟ್ಟಿರುವ ಅಸ್ಸಾಂ ಮಾದರಿ, ವೈವಿಧ್ಯತೆಯ ಗೌರವ ಮತ್ತು ಕಾನೂನು ಸಮಾನತೆಯ ನಡುವಿನ ಸಾಧ್ಯತೆಯನ್ನು ತೋರಿಸುತ್ತಿದೆ.

ಇದುವರೆಗೆ ಭಾರತದಲ್ಲಿ ವೈಯಕ್ತಿಕ ಕಾನೂನುಗಳು ಧರ್ಮಾಧಾರಿತವಾಗಿ ವಿಭಜಿತವಾಗಿದ್ದವು. ವಿವಾಹ, ವಿಚ್ಛೇದನ, ಆಸ್ತಿ ಹಂಚಿಕೆ, ದತ್ತು, ಜೀವನಾಂಶ ಮೊದಲಾದ ವಿಷಯಗಳಲ್ಲಿ ವಿಭಿನ್ನ ಸಮುದಾಯಗಳಿಗೆ ವಿಭಿನ್ನ ಕಾನೂನು ವ್ಯವಸ್ಥೆಗಳಿದ್ದವು. ಇದರಿಂದ ನಾಗರಿಕರ ಮೂಲಭೂತ ಹಕ್ಕುಗಳ ವಿಷಯದಲ್ಲಿ ಸಮಾನತೆಯ ಪ್ರಶ್ನೆ ಅನೇಕ ಬಾರಿ ಉದ್ಭವಿಸಿತು. ವಿಶೇಷವಾಗಿ ಮಹಿಳೆಯರ ಹಕ್ಕುಗಳು, ಬಹುಪತ್ನಿತ್ವ, ಅಪ್ರಾಪ್ತ ವಯಸ್ಸಿನ ವಿವಾಹ, ಆಸ್ತಿ ಹಕ್ಕುಗಳ ವಿಚಾರಗಳಲ್ಲಿ ಕಾನೂನು ವೈಷಮ್ಯ ಸ್ಪಷ್ಟವಾಗಿ ಗೋಚರಿಸಿತು.

ಅಸ್ಸಾಂ ಸರ್ಕಾರ ಪ್ರಸ್ತಾಪಿಸಿರುವ ಯುಸಿಸಿಯ ವ್ಯಾಪ್ತಿಯಲ್ಲಿ ಕನಿಷ್ಠ ವಿವಾಹ ವಯಸ್ಸು, ಬಹುಪತ್ನಿತ್ವ ನಿಷೇಧ, ಪುತ್ರ-ಪುತ್ರಿಯರಿಗೆ ಸಮಾನ ಆಸ್ತಿ ಹಕ್ಕು ಹಾಗೂ ಲಿವ್-ಇನ್ ಸಂಬಂಧಗಳ ನಿಯಂತ್ರಣ ಮೊದಲಾದ ಅಂಶಗಳು ಸೇರಿವೆ. ಇವುಗಳಲ್ಲಿ ಯಾವುದೂ ಧಾರ್ಮಿಕ ಆಚರಣೆಗಳ ಮೇಲೆ ದಾಳಿ ಮಾಡುವ ಸ್ವರೂಪದ್ದಲ್ಲ, ಬದಲಾಗಿ, ನಾಗರಿಕ ಹಕ್ಕುಗಳನ್ನು ಸಮಾನವಾಗಿ ಪರಿಗಣಿಸುವ ಆಧುನಿಕ ಕಾನೂನು ವ್ಯವಸ್ಥೆಯ ಭಾಗವಾಗಿದೆ. ವಿವಾಹದ ಧಾರ್ಮಿಕ ವಿಧಿವಿಧಾನಗಳಿಗೆ ಯಾವುದೇ ಧಕ್ಕೆಯಾಗುವುದಿಲ್ಲವೆಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸ್ಪಷ್ಟಪಡಿಸಿರುವುದು ಈ ಕುರಿತು ಹರಡಲಾಗುತ್ತಿರುವ ಭೀತಿಗಳಿಗೆ ಉತ್ತರವಾಗಿದೆ. ವಾಸ್ತವವಾಗಿ, ಯುಸಿಸಿ ವಿರುದ್ಧದ ಪ್ರಮುಖ ಆಕ್ಷೇಪಣೆಯೇ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಎಂಬುದು. ಆದರೆ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯ ಎಂದರೆ ಕಾನೂನು ಸಮಾನತೆಯನ್ನು ನಿರಾಕರಿಸುವ ಹಕ್ಕು ಅಲ್ಲ. ಸಂವಿಧಾನದ ಮೂಲಭೂತ ತತ್ವವೇ ಎಲ್ಲ ನಾಗರಿಕರಿಗೂ ಸಮಾನ ನ್ಯಾಯ. ಒಂದು ಸಮುದಾಯದ ಮಹಿಳೆಗೆ ದೊರೆಯುವ ಹಕ್ಕು ಮತ್ತೊಂದು ಸಮುದಾಯದ ಮಹಿಳೆಗೆ ದೊರೆಯುತ್ತಿಲ್ಲವೆಂದರೆ, ಅದನ್ನು ನ್ಯಾಯಯುತ ವ್ಯವಸ್ಥೆ ಎಂದು ಹೇಗೆ ಕರೆಯಲು ಸಾಧ್ಯ? ಧರ್ಮದ ಹೆಸರಿನಲ್ಲಿ ಸಾಮಾಜಿಕ ಅನ್ಯಾಯ ಮುಂದುವರಿಯಬಾರದು ಎಂಬುದು ಪ್ರಜಾಸತ್ತಾತ್ಮಕ ರಾಷ್ಟ್ರದ ಮೂಲಭೂತ ಬದ್ಧತೆ. ಇಲ್ಲಿ ಇನ್ನೊಂದು ಮುಖ್ಯ ಸಂಗತಿ ಗಮನಿಸಬೇಕಿದೆ. ಯುಸಿಸಿ ವಿಚಾರವನ್ನು ಅನೇಕ ರಾಜಕೀಯ ಪಕ್ಷಗಳು ಮತಬ್ಯಾಂಕ್ ರಾಜಕಾರಣದ ಕಣ್ಣಿನಿಂದ ಮಾತ್ರ ನೋಡುತ್ತಿವೆ. ಸಮಾಜದ ದುರ್ಬಲ ವರ್ಗಗಳಿಗೆ ಸಮಾನ ಹಕ್ಕು ಸಿಗಬೇಕೇ ಎಂಬ ಪ್ರಶ್ನೆಗಿಂತ, ಧಾರ್ಮಿಕ ಧ್ರುವೀಕರಣದ ಲಾಭ-ನಷ್ಟಗಳ ಲೆಕ್ಕಾಚಾರವೇ ಹೆಚ್ಚಾಗಿ ನಡೆಯುತ್ತಿದೆ. ಆದರೆ ಅಸ್ಸಾಂ ಸರ್ಕಾರ ತೆಗೆದುಕೊಂಡಿರುವ ಕ್ರಮವು ಈ ಚರ್ಚೆಯನ್ನು ಹೊಸ ದಿಕ್ಕಿಗೆ ಕೊಂಡೊಯ್ಯುವ ಸಾಧ್ಯತೆಯಿದೆ.

ಕೆಲಸದಲ್ಲಿ ಶ್ರದ್ಧೆ ಇರಲಿ

ಯೋ ಲಂಬ್ಯಮಾನಂ ಸತತಂ ಗಗನೇ ಹಿಮಾಂಶುಃ।
ಯೋ ಜಾಜ್ವಲಂತಿ ಸೂನಕೋಷು ಚ ಹವ್ಯವಾಹಃ।
ಯಾ ವಾವಹೀತಿ ಜನಕೋಟಿಶು ವಿಲಾಸ ಸಮೀರಣಾ।
ತೇಷಾಂ ನ ವಿಶ್ರಮ ಕಥಾಸ್ತಿ ಸದಾ ಕ್ರಿಯಾಸ್ತು।। -ಸುಭಾಷಿತಶತಕಮ್

ಯಾವ ಚಂದ್ರನು ಬಾನಿನಲ್ಲಿ ಸತತವಾಗಿ ಸಂಚರಿಸುವನೋ, ಹೋಮಗಳಲ್ಲಿ ಯಾವ ಅಗ್ನಿಯು ಪ್ರಜ್ವಲಿಸುವನೋ, ಯಾವ ಭೂಮಿಯು ಕೋಟ್ಯಂತರ ಜನರನ್ನು ಹೊತ್ತುಕೊಂಡಿರುವುದೋ ಅವರಾರಿಗೂ ವಿಶ್ರಾಂತಿಯ ಕಥೆಯೇ ಇಲ್ಲ, ಯಾವಾಗಲೂ ಅವರಿಗೆ ಕೆಲಸದಲ್ಲಿ ಶ್ರದ್ಧೆ - ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

'ಶ್ರದ್ಧಾಂ ಹಿ ಪರಮಾ ಗತಿ' ಶ್ರದ್ಧೆಯೇ ಪರಮ ಗತಿ ಅರ್ಥಾತ್ ಶ್ರೇಷ್ಠ ಮಾರ್ಗ ಎಂಬುದು ಸೂಕ್ತಿಯ ಅರ್ಥ. ನಾವು ಮಾಡುವ ಕೆಲಸಗಳಿಗೆ ಆಧಾರವಾದ ಶ್ರದ್ಧೆ ಇದ್ದರೆ ಅದು ಮುಂದಿನ ಸುಖಮಯ ಬದುಕಿಗೆ ನಾಂದಿಯಾಗುತ್ತದೆ. ಅದ್ದರಿಂದ ಹಿಡಿದ ಕೆಲಸವನ್ನು ಶ್ರದ್ಧೆಯಿಂದ ಪೂರ್ಣಗೊಳಿಸಬೇಕು.

ಶ್ರೀಮದ್ ಭಗವದ್ಗೀತೆಯಲ್ಲಿ 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬುದಾಗಿ ಗೀತಾಚಾರ್ಯನೇ ಉಪದೇಶಿಸಿದ್ದಾನೆ. ಶ್ರದ್ಧೆಯುಳ್ಳವನಿಗೆ ಜ್ಞಾನ ಲಭಿಸುತ್ತದೆ ಎಂಬುದು ಇದರ ಅರ್ಥ. ಸಂಯತೇಂದ್ರಿಯನಾಗಿ ಶ್ರದ್ಧೆಯಿಂದ ಕರ್ತವ್ಯ ಪಥದಲ್ಲಿ ಸಾಗಿದರೆ ಸೋಲೆಂಬುದಿಲ್ಲ. ಒಟ್ಟಿನಲ್ಲಿ ನಾವು ಮಾಡುವ ಕೆಲಸದಲ್ಲಿ ಶ್ರದ್ಧೆ ಇರಬೇಕು. ಶ್ರದ್ಧೆಯಿದ್ದಲ್ಲಿ ಆಲಸ್ಯ ಸುಳಿಯುವುದಿಲ್ಲ, ಶ್ರಮ ಬಾಧಿಸುವುದಿಲ್ಲ, ಶ್ರದ್ಧಾಳುಗಳಿಗೆ ವಿಶ್ರಾಂತಿಯ ಕಲ್ಪನೆ ಇರುವುದಿಲ್ಲ, ಪೂರಕವಾದ ಕೆಲಸಗಳನ್ನು ಒಂದಾದ ನಂತರ ಇನ್ನೊಂದನ್ನು ಮಾಡುತ್ತ ವಿಶ್ರಾಂತಿಯ ಪರಿಕಲ್ಪನೆ ಇಲ್ಲದಂತೆ ನೆಮ್ಮದಿಯಿಂದ ಬದುಕನ್ನು ನಿರ್ವಹಿಸುತ್ತಾರೆ.

ಶ್ರದ್ಧೆಯಿಂದ ಕೆಲಸ ಮಾಡುವವ ಪರಿಯನ್ನು ಮೂರು ದೃಷ್ಟಾಂತಗಳ ಮೂಲಕ ಪ್ರಕೃತ ಸುಭಾಷಿತದಲ್ಲಿ ಸೂಚಿಸಲಾಗಿದೆ. ಚಂದ್ರನದು ಮೊದಲ ದೃಷ್ಟಾಂತ. ಒಂದು ಕ್ಷಣವನ್ನೂ ಆಲಸ್ಯದಿಂದ ಕಳೆಯದೇ ಬಾನಿನ ಉದ್ದಗಲಕ್ಕೆ ನಿತ್ಯವೂ ಸಂಚರಿಸುತ್ತಾನೆ. ಆತನು ವಿರಾಮ ಪಡೆದ ದಾಖಲೆಯಾಗಲಿ, ಆಲಸ್ಯದಿಂದ ಕುಳಿತ ಕ್ಷಣವಾಗಲಿ ಇಲ್ಲವೇ ಇಲ್ಲ, ಯಾವಾಗಲೂ ಕರ್ತವ್ಯ ನಿರತ. ತಾನು ಮಾಡುವ ಕೆಲಸದಲ್ಲಿ ಅನನ್ಯವಾದ ಶ್ರದ್ಧೆಯಿರುವುದರಿಂದಲೇ ಲೋಕ ಪೂಜ್ಯನಾಗಿದ್ದಾನೆ. ಸರ್ವಮಾನ್ಯನಾಗಿದ್ದಾನೆ.

ಹೋಮಾದಿಗಳಲ್ಲಿ ಅಗ್ನಿಯು ಹವನಗೈದ ಹವಿರ್ದ್ರವ್ಯಗಳನ್ನು ಶ್ರದ್ಧೆಯಿಂದ ಉರಿಯುತ್ತಾನೆ. ಪ್ರಜ್ವಲಿಸುತ್ತಾನೆ. ತನ್ನ ಕರ್ತವ್ಯವನ್ನು ತಪ್ಪದೇ ನೆರವೇರಿಸುತ್ತಾನೆ. ತನ್ನ ಕೆಲಸದಲ್ಲಿ ಆಲಸ್ಯವೆಂಬುದು ಲೇಶಮಾತ್ರವೂ ಇಲ್ಲ. ಅದ್ದರಿಂದಲೇ 'ಶ್ರದ್ಧಯಾಗ್ನಿಃ ಸಮಿಧ್ಯತೇ' ಎಂದು ವೇದದಲ್ಲಿ ಕೊಂಡಾಡಿದ್ದಾರೆ. ಒಂದೇ ಒಂದು ಕ್ಷಣ ಅಗ್ನಿಯು ಕರ್ತವ್ಯ ವಿಮುಖನಾದರೆ ಲೋಕ ವ್ಯವಹಾರ ನಿಂತೇ ಹೋಗುತ್ತದೆ.

ಕೋಟ್ಯಂತರ ಜನರನ್ನು, ಪ್ರಾಣಿ, ಪಕ್ಷಿಗಳನ್ನು, ನಗ ನದಿಗಳನ್ನು ಹೊತ್ತುಕೊಂಡ ಭೂಮಿತಾಯಿಗೆ ವಿಶ್ರಾಂತಿ ಎಂಬುದಿಲ್ಲ. ಆಲಸ್ಯತನದ ಮಾತೇ ಇಲ್ಲ. ಒಂದರೆಕ್ಷಣ ಆಲಸ್ಯ ಆದರೆ ಏನೂ ಉಳಿಯಲಾರದು.

ಶ್ರಮವಹಿಸಿ ನಿರತರ ಕರ್ತವ್ಯದ ಮಾರ್ಗದಲ್ಲಿ ನಡೆಯುವ ಸಂದೇಶವಿತ್ತ ಈ ದೃಷ್ಟಾಂತಗಳು ನಮಗೆ ಪ್ರೇರಣೆಯಾಗಬೇಕು. ಅಲಸ್ಯವಿಲ್ಲದ ಕರ್ತವ್ಯವನ್ನು ಕೈಗೊಳ್ಳುವ ಆಸಕ್ತಿಯನ್ನು ಪಡೆದುಕೊಳ್ಳಬೇಕು. ಶ್ರದ್ಧೆಯೇ ನಮ್ಮೆಲ್ಲ ಬಯಕೆಗಳ ತಾಯಿ. ಅದ್ದರಿಂದ ಶ್ರದ್ಧೆಯನ್ನು ಉಳಿಸಿಕೊಳ್ಳೋಣ, ಬೆಳೆಸಿಕೊಳ್ಳೋಣ.

ಅಸಾಧಾರಣ ನೇತಾರನಿಗೆ ಶತಕಯೋಗ ಸಿದ್ಧಿಸಲಿ

ಇದೀಗ ರಾಜಕೀಯದಲ್ಲಿ ಜೀವನದ ಐವತ್ತು ಸಂವತ್ಸರ ಪೂರೈಸುತ್ತಿರುವ ನಾಡಿನ ರಾಜಕೀಯದ ಮಹಾ ನೇತಾರ ಬಿ.ಎಸ್ ಯಡಿಯೂರಪ್ಪ ನವರು ಹಲವು ನೆಲೆಗಳಲ್ಲಿ ಪ್ರತ್ಯಕ್ಷಿಕೆ ಪ್ರಭಾವಿ ನಾಯಕನಾಮನ. ಸತತ ಕ್ರಿಯಾಶೀಲತೆ, ಹೋರಾಟದ ಮನೋಧರ್ಮ, ಆಶ್ಚರ್ಯಕರ ಆರೋಗ್ಯ, ಸದಾಕಾಲವೂ ಜನಪರ ಚಿಂತನೆ, ಸೋಲೊಪ್ಪದ ಛಲಗಳಲ್ಲಿ ಒಂದು ರಾಷ್ಟ್ರೀಯ ಮಾದರಿ. ಗ್ರಹಣ ಶಕ್ತಿಯ ಅಚ್ಚು ಅಚ್ಚರಿ.

ಪತ್ರ ಮಿತ್ರ

ಮುಖಮುದ್ರೆ, ಗಂಭೀರ, ವಿಚಿತ್ರ, ಮೌನ್ಯಗ್ರಹದ, ಅಬ್ಬು, ನೆನಪು, ಕಂಪ್ಯೂಟರ್ ಮಿದುಳು... ಯಾರನ್ನು ಒಲ್ಲಿಸಿ ಒಲಿಸುವ ದೋಷಗಳೇ, ಮಾತು ಕಡಿಮೆ. ಇವರನು ಹೀಗೆ ಎಂದು ಕಾಣುವುದು ವಿಚಿತ್ರ. ಆದರೆ ಮುಂದಿನ ವರ್ತನೆಯೇ ಸಂದೇಶ. ಒಬ್ಬನನ್ನು ಗುರುತಿಸುವಾಗಲೇ ಹಾಗೆಯೇ. ವೈಷ್ಣವಗಳನ್ನಾಗಿ ಸಿದ್ಧ ರುತು ಬರುವ ಆತ ಇಲ್ಲದ ಮಟ್ಟಕ್ಕೆ...ಇದು ನನ್ನ ಸ್ವಾನುಭವ.

ಅವರು ವಿಧಾನಸಭೆಯಲ್ಲಿ ಮಾಡಿದ ವಿದಾಯ ಭಾಷಣ.... ಅದು ಕಾವ್ಯ... ಆಯಾಸವಿರದ ಈ ನಾಯಕನಿಗೆ ದಣಿವಿರದ ವಿಶ್ರಾಂತಿ ಇಲ್ಲದ ಸಂತಸದ ದುಡಿಮೆಯ ಶತಕ ಸಿದ್ಧಿಸಲಿ. ಯಡಿಯೂರು ಶ್ರೀ ಸಿದ್ಧಲಿಂಗೇಶ್ವರ, ಕ್ಷಾತ್ರಬ್ರಾಹ್ಮ ವರ್ಚಸ್ಸಿನ ಕಡಲತಡಿ ಕೊಡಲಿರಾಮ ಶಕ್ತಿ ಕೊಡಲಿ.

-ಡಾ.ಎಂ. ಪ್ರಭಾಕರಜೋಶಿ, ಮಂಗಳೂರು

ಸಂಕಷ್ಟದ ಕಾಲದಲ್ಲಿ ಇಷ್ಟೇ ಕೇಳೋದು, ದೇಶದ ಜತೆ ನಿಲ್ಲಿ

ಗುರುತರ
•ಸೋಮಶೇಖರ ಸಿ.ಜಿ.
sompreethi@gmail.com

ಕೆಲವೊಮ್ಮೆ ತಪ್ಪುಗಳು ನಮ್ಮವು ಆಗದಿದ್ದರೂ, ಆದರಿಂದಾಗುವ ಪರಿಣಾಮಗಳಿಗೆ ಮಾತ್ರ ನಾವು ತಲೆಕೊಡುವ ಪ್ರಸಂಗಗಳು ಎದುರಾಗುತ್ತವೆ. ಈಗ ಆಗಿರುವುದು ಅದೇ, ಅಲ್ಲೆಲ್ಲೋ ಆಗುತ್ತಿರುವ ಯುದ್ಧಗಳಿಂದಾಗಿ ನಾವು ಕಷ್ಟ ಅನುಭವಿಸುತ್ತಿದ್ದೇವೆ. ಈಗಾಗಲೇ ಅಡುಗೆ ಅನಿಲ, ಎಲ್‌ಪಿಜಿ ಕೊರತೆ ಈಗಾಗಲೇ ಭಾರತವನ್ನು ಕಾಡಿದೆ. ಹಾಗೆಯೇ ಮುಂದಿನ ದಿನಗಳಲ್ಲಿ ತೈಲದ ಕೊರತೆ ಕೂಡ ತಲೆದೋರುವ ಎಲ್ಲ ಲಕ್ಷಣಗಳು ಇವೆ.

ಇಂಥ ಕ್ಷಣಗಳಲ್ಲಿ ಆಡಳಿತ ನಡೆಸುವಂಥವರು ಜನಪ್ರಿಯತೆಯ ರಾಜಕಾರಣವನ್ನು ಬದಿಗಿಟ್ಟು ಕಠಿಣ ಸತ್ಯಗಳನ್ನು ಹೇಳಬೇಕಾಗುತ್ತದೆ. ಜನರು ಸಹ ಸೌಲಭ್ಯಗಳ ಮೋಹವನ್ನು ತ್ಯಜಿಸಿ ರಾಷ್ಟ್ರಹಿತಕ್ಕಾಗಿ ಸ್ವಲ್ಪ ಅಡ್ಡಿ - ತೊಂದರೆಗಳನ್ನು ಸ್ವೀಕರಿಸಬೇಕಾಗುತ್ತದೆ. ಯುದ್ಧ, ಜಾಗತಿಕ ಆರ್ಥಿಕ ಅಸ್ಥಿರತೆ, ಇಂಧನ ಸಂಕಷ್ಟ, ಆಹಾರ ಕೊರತೆ, ಇವೆಲ್ಲವೂ ಕೇವಲ ಅಂಕಿ-ಅಂಶಗಳ ವಿಷಯಗಳಲ್ಲ, ಅವು ರಾಷ್ಟ್ರದ ಮನೋಬಲವನ್ನು ಪರೀಕ್ಷಿಸುವ ಕಾಲಗಳು.

ಇಂತಹ ಸಂದರ್ಭಗಳಲ್ಲಿ ಸರ್ಕಾರಗಳು ತೆಗೆದುಕೊಳ್ಳುವ ನಿಯಂತ್ರಣ ಕ್ರಮಗಳು ಕೆಲವರಿಗೆ ಅಸಹಜವಾಗಿ ಕಾಣಬಹುದು. ಆದರೆ ಇತಿಹಾಸದ ಪುಟಗಳನ್ನು ತೆರೆಯುವುದಾದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಭಾರತದ ಪ್ರತಿಯೊಂದು ಸರ್ಕಾರವೂ ಸಂಕಷ್ಟದ ಸಂದರ್ಭದಲ್ಲಿ ಜನರಿಗೆ ಶಿಸ್ತು, ತ್ಯಾಗ ಮತ್ತು ನಿಯಂತ್ರಣದ ಪಾಠವನ್ನೇ ಹೇಳಿದೆ. ಇಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ನೀಡಿರುವ ಕರೆ ಸಹ ಅದೇ ಪರಂಪರೆಯ ಮುಂದುವರಿಕೆ. ಇದನ್ನೇನು ಹೊಸದಾಗಿ ಮಾಡಿದ್ದಾರೆ ಅಂತೇನೂ ಭಾವಿಸಬೇಕಾಗಿಲ್ಲ.

ಅನಗತ್ಯ ಇಂಧನಬಳಕೆಕಡಿಮೆಮಾಡಿ, ಅವಶ್ಯಕತೆಇಲ್ಲದಪ್ರಯಾಣಗಳನ್ನು ತಗ್ಗಿಸಿ, ವರ್ಕ್ ಫ್ರಮ್ ಹೋಮ್ ಮಾದರಿಯನ್ನು ಸಾಧ್ಯವಾದಷ್ಟು ಬಳಸಿ, ಚಿನ್ನದ ಖರೀದಿಯನ್ನು ನಿಯಂತ್ರಿಸಿ ಎಂಬಂಥ ಪ್ರಧಾನಿ ಅವರ ಈ ಕರೆಗಳನ್ನು ಕೆಲವರು ರಾಜಕೀಯ ಕಣ್ಣಿನಿಂದ ನೋಡುತ್ತಿದ್ದಾರೆ. ಆದರೆ ರಾಷ್ಟ್ರಜೀವನದ ದೊಡ್ಡ ಪರಿಧಿಯಲ್ಲಿ ನೋಡಿದರೆ ಇದು ಕೇವಲ ಆರ್ಥಿಕ ಸಲಹೆಯಲ್ಲ, ಇದು ರಾಷ್ಟ್ರೀಯ ಹೊಣೆಗಾರಿಕೆಯ ಘೋಷಣೆ.

ಪಶ್ಚಿಮ ಏಷ್ಯಾದ ಉದ್ವಿಗ್ನತೆ ಏರಿದಾಗ ಅದರ ಹೊಡೆತ ಮೊದಲು ತೈಲ ಮಾರುಕಟ್ಟೆಗೆ ಬೀಳುತ್ತದೆ. ಭಾರತವು ತನಗೆ ಬೇಕಾದ ಕಚ್ಚಾ ತೈಲದ ಶೇ.85ರಷ್ಟನ್ನು ಆಮದು ಮಾಡಿಕೊಳ್ಳುವ ದೇಶವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲದ ಬೆಲೆ ಏರಿದರೆ ಅದರ ಪ್ರತಿಧ್ವನಿ ದೇಶದ ಪ್ರತಿಯೊಂದು ಅಡುಗೆಮನೆಗೆ ತಲುಪುತ್ತದೆ. ಸಾರಿಗೆ ದುಬಾರಿಯಾಗುತ್ತದೆ. ಆಹಾರ ಪದಾರ್ಥಗಳ ಬೆಲೆ ಏರುತ್ತದೆ. ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ಸರ್ಕಾರದ ಹಣಕಾಸು ಸಮತೋಲನ ಕುಸಿಯುತ್ತದೆ. ಇಂತಹ ಸಂದರ್ಭದಲ್ಲಿ ಆಡಳಿತದ ಮೊದಲ ಕರ್ತವ್ಯ ಜನರನ್ನು ಮುಂಚಿತವಾಗಿ ಎಚ್ಚರಿಸುವುದೇ ಹೊರತು ಸಮಸ್ಯೆ ಬಾಗಿಲು ಒಡೆದು ಒಳಬಂದ ನಂತರ ಕೈಕಟ್ಟಿ ಕುಳಿತುಕೊಳ್ಳುವುದಲ್ಲ.

ಆದರೆ ವಿಷಾದದ ಸಂಗತಿ ಏನೆಂದರೆ, ಭಾರತದಲ್ಲಿ ರಾಷ್ಟ್ರೀಯ ಸಂಕಷ್ಟಗಳನ್ನೂ ರಾಜಕೀಯ ವ್ಯಂಗ್ಯದ ವಿಷಯವನ್ನಾಗಿ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ಪ್ರಧಾನಿಯ ಮುನ್ನೆಚ್ಚರಿಕೆ ಕ್ರಮಗಳನ್ನು 'ವಿಫಲತೆಯ ಒಪ್ಪಿಗೆ' ಎಂದು ಕರೆಯುವವರು ಇತಿಹಾಸವನ್ನು ಓದಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದರಲ್ಲೂ ಹಿಂದಿನ ಕ್ರಮ ತೆಗೆದುಕೊಂಡವರಲ್ಲಿ ಇಬ್ಬರು ತಮ್ಮದೇ ಪಕ್ಷದ ಮತ್ತು ಕುಟುಂಬಕ್ಕೆ ಸೇರಿದವರು ಎಂಬುದನ್ನೂ ಮರೆತಿದ್ದಾರೆ.

1962ರ ಚೀನಾ ಯುದ್ಧವನ್ನು ನೆನಪಿಸಿಕೊಳ್ಳಿ. ದೇಶದ ಆರ್ಥಿಕತೆ ನಡುಗಿತ್ತು. ವಿದೇಶಿ ವಿನಿಮಯದ ಸ್ಥಿತಿ ದುರ್ಬಲವಾಗಿತ್ತು. ಆಗಿನ ಪ್ರಧಾನಿ ಜವಾಹರ್ ಲಾಲ್ ನೆಹರು ಅವರು ದೇಶದ ಜನರಿಗೆ ಚಿನ್ನದ ದೇಣಿಗೆ ನೀಡುವಂತೆ ಮನವಿ ಮಾಡಿದರು. ಅದು ಕೇವಲ ಆರ್ಥಿಕ ಕ್ರಮವಾಗಿರಲಿಲ್ಲ, ಅದು ರಾಷ್ಟ್ರೀಯ ಮನೋಭಾವದ ಪರೀಕ್ಷೆಯಾಗಿತ್ತು. ಭಾರತದ ಮಹಿಳೆಯರು ತಮ್ಮ ಮಂಗಳಸೂತ್ರಗಳವರೆಗೂ ರಾಷ್ಟ್ರರಕ್ಷಣೆಗೆ ಸಮರ್ಪಿಸಿದರು. ಇಂದಿನ ಪೀಳಿಗೆಗೆ ಅದು ಕಥೆಯಂತೆ ಕಾಣಬಹುದು. ಆದರೆ ಆ ಕಾಲದಲ್ಲಿ ಜನರು ರಾಷ್ಟ್ರವನ್ನು ತಮ್ಮ ವೈಯಕ್ತಿಕ ಸಂಪತ್ತಿಗಿಂತ ಮೇಲಾಗಿ ನೋಡಿದ್ದರು. ಆಗಿನ ಕೇಂದ್ರ ಸರ್ಕಾರ ಇದನ್ನು ರಾಷ್ಟ್ರಭಕ್ತಿಯ ಆಂದೋಲನ ಎಂದು ಕರೆದಿತ್ತು.

ಅದರ ಜೊತೆಗೆ ಗೋಲ್ಡ್ ಕಂಟ್ರೋಲ್ ಆ್ಯಕ್ಟ್ ಜಾರಿಗೊಂಡಿತು. ಚಿನ್ನದ ವ್ಯಾಪಾರಕ್ಕೆ ಮಿತಿ ವಿಧಿಸಲಾಯಿತು. ಚಿನ್ನದ ಸಾಲಗಳನ್ನು ವಾಪಸ್ ಪಡೆಯಲು ಬ್ಯಾಂಕುಗಳಿಗೆ ಸೂಚನೆ ನೀಡಲಾಯಿತು. ಹೆಚ್ಚಿನ ಕ್ಯಾರೆಟ್ ಆಭರಣಗಳ ಉತ್ಪಾದನೆಗೆ ನಿರ್ಬಂಧ ಹೇರಲಾಯಿತು. ನಂತರ ಸಾಮಾನ್ಯ ನಾಗರಿಕರು ಚಿನ್ನದ ಬಾರ್ ಮತ್ತು ನಾಣ್ಯಗಳನ್ನು ಹೊಂದುವುದಕ್ಕೂ ಮಿತಿ ಬಂತು. ಒಂದು ವೇಳೆ 14 ಕ್ಯಾರೆಟ್ ಗಿಂತ ಹೆಚ್ಚು ಚಿನ್ನದ ಆಭರಣವನ್ನು ಮಾಡಿದರೆ ಅದನ್ನು ಅಪರಾಧ ಕೃತ್ಯ ಎಂದು ಕರೆಯಲಾಗುತ್ತಿತ್ತು. ಚಿನ್ನ ಬೆಳ್ಳಿ ಕೆಲಸಗಾರರೂ 100 ಗ್ರಾಂಗಿಂತ ಹೆಚ್ಚು ಬಂಗಾರ ಇರಿಸಿಕೊಳ್ಳುವಂತೆ ಇರಲಿಲ್ಲ. ಇವೆಲ್ಲವೂ ಜನಪ್ರಿಯ ಕ್ರಮಗಳಾಗಿರಲಿಲ್ಲ. ಆದರೆ ರಾಷ್ಟ್ರದ ವಿದೇಶಿ ವಿನಿಮಯ ಉಳಿಸಬೇಕಾದ ಅನಿವಾರ್ಯತೆ ಇತ್ತು. ಸರ್ಕಾರ ಜನರಿಗೆ ಸತ್ಯ ಹೇಳಿತು. ಜನರು ಸಹಕರಿಸಿದರು. ಪರಿಣಾಮವಾಗಿ ಆರ್ಥಿಕ ಒತ್ತಡವನ್ನು ಒಂದು ಮಟ್ಟಿಗೆ ತಡೆಯಲು ಸಾಧ್ಯವಾಯಿತು.

1965ರ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ದೇಶಕ್ಕೆ ನೀಡಿದ ಸಂದೇಶ ಇನ್ನೂ ಭಾರತೀಯ ರಾಜಕೀಯ ಇತಿಹಾಸದ ನೈತಿಕ ಶಿಖರಗಳಲ್ಲಿ ಒಂದಾಗಿದೆ. ಪ್ರತಿ ಸೋಮವಾರ ಒಂದು ಊಟ ಬಿಟ್ಟುಬಿಡಿ ಎಂಬ ಅವರ ಮನವಿ ಕೇವಲ ಆಹಾರ ಉಳಿಸುವ ಕ್ರಮವಾಗಿರಲಿಲ್ಲ, ಅದು ರಾಷ್ಟ್ರದೊಂದಿಗೆ ಆತ್ಮೀಯ ಸಂಬಂಧ ಬೆಳೆಸುವ ಕರೆಯಿತ್ತು. ದೇಶ ಆಹಾರ ಕೊರತೆಯಿಂದ ಬಳಲುತ್ತಿದ್ದಾಗ ಅವರು ಜನರಿಗೆ ಉಪದೇಶ ಕೊಟ್ಟು ತಾವು ವೈಭವದಲ್ಲಿ ಬದುಕಲಿಲ್ಲ. ತಮ್ಮ ಕುಟುಂಬದಲ್ಲೂ ಅದೇ ನಿಯಮ ಅನುಸರಿಸಿದರು. ಇದೇ ನಾಯಕತ್ವದ ನೈತಿಕ ಶಕ್ತಿ.

ಇದೇ ರೀತಿ 2013ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ ಗಂಭೀರ ಸವಾಲಿನಲ್ಲಿತ್ತು. ಕರೆಂಟ್ ಅಕೌಂಟ್ ಡೆಫಿಸಿಟ್ ಅಪಾಯದ ಮಟ್ಟ ತಲುಪಿತ್ತು. ಚಿನ್ನದ ಆಮದು ದೇಶದ ಹಣಕಾಸಿನ ಮೇಲೆ ಭಾರೀ ಒತ್ತಡ ತರುತ್ತಿತ್ತು. ಆಗಿನ ಹಣಕಾಸು ಸಚಿವ ಪಿ.ಚಿದಂಬರಂ ಜನರಿಗೆ ಚಿನ್ನದ ಖರೀದಿಯನ್ನು ಕಡಿಮೆ ಮಾಡಲು ಮನವಿ ಮಾಡಿದರು. ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು 'ಹಣ ಮರಗಳಲ್ಲಿ ಬೆಳೆಯುವುದಿಲ್ಲ' ಎಂದು ಹೇಳಿ ಸಬ್ಸಿಡಿಗಳ ಮಿತಿಯ ಬಗ್ಗೆ ಸ್ಪಷ್ಟಪಡಿಸಿದ್ದರು. ಹಾಗಾದರೆ ಇಂದು ಪ್ರಧಾನಿ ಮೋದಿ ನೀಡುತ್ತಿರುವ ಸಲಹೆಗಳು ಏಕೆ ಏಕಾಏಕಿ 'ಆರ್ಥಿಕ ತುರ್ತು ಪರಿಸ್ಥಿತಿ'ಯ ಸಂಕೇತಗಳಾಗಿ ಚಿತ್ರಿಸಲ್ಪಡುತ್ತಿವೆ? ಕಾರಣ ಸ್ಪಷ್ಟ, ಭಾರತೀಯ ರಾಜಕೀಯದಲ್ಲಿ ಪ್ರತಿಪಕ್ಷಗಳ ಒಂದು ಭಾಗವು ರಾಷ್ಟ್ರೀಯ ಪ್ರಶ್ನೆಗಳನ್ನೂ ತಾತ್ಕಾಲಿಕ ರಾಜಕೀಯ ಲಾಭದ ಕಣ್ಣಿನಿಂದ ನೋಡಲು ಆರಂಭಿಸಿದೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸರ್ಕಾರವನ್ನು ಪ್ರಶ್ನಿಸುವುದು ಅವರ ಹಕ್ಕು ಮಾತ್ರವಲ್ಲ, ಕರ್ತವ್ಯವೂ ಹೌದು. ಆದರೆ ಸಂಕಷ್ಟದ ಸಂದರ್ಭದಲ್ಲಿ ಜನರ ಮನಸ್ಸಿನಲ್ಲಿ ಭಯ ಮತ್ತು ಅವಿಶ್ವಾಸ ಹುಟ್ಟಿಸುವುದು ಜವಾಬ್ದಾರಿಯುತ ಪ್ರತಿಪಕ್ಷದ ಲಕ್ಷಣವಲ್ಲ. ಯುದ್ಧದ ನೆರಳು ಕಾಣುವಾಗ ದೇಶದೊಳಗೆ ಮಾನಸಿಕ ಸ್ಥೈರ್ಯ ಉಳಿಸುವುದು ಅತ್ಯಗತ್ಯ. ರಾಷ್ಟ್ರದ ಆತ್ಮವಿಶ್ವಾಸ ಕುಸಿದರೆ ಆರ್ಥಿಕತೆಯೂ ಕುಸಿಯುತ್ತದೆ.

ಇಂತಹ ಸಂದರ್ಭಗಳಲ್ಲಿ ಜನರ ಪಾತ್ರವೂ ಅಷ್ಟೇ ಮಹತ್ವದ್ದು. ನಾಗರಿಕತೆ ಅಂದರೆ ಕೇವಲ ಹಕ್ಕುಗಳ ಪಟ್ಟಿ ಅಲ್ಲ, ಅದು ಕರ್ತವ್ಯಗಳ ಸಂಸ್ಕೃತಿ. ಅನಗತ್ಯ ಇಂಧನ ಬಳಕೆ ಕಡಿಮೆ ಮಾಡುವುದು, ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡುವುದು, ಅತಿಯಾದ ಉಪಭೋಗದ ಜೀವನಶೈಲಿಯನ್ನು ಮರುಪರಿಶೀಲಿಸುವಂಥ ಕ್ರಮಗಳು ದೇಶಸೇವೆಯೇ ಪರಿಧಿಯೊಳಗೇ ಬರುತ್ತವೆ ಎಂಬುದನ್ನು ಮನಸ್ಸಿನೊಳಗೆ ಗಟ್ಟಿಯಾಗಿ ಅಳವಡಿಸಿಕೊಳ್ಳಬೇಕು.

ಒಂದು ಸಮಾಜ ಯಾವಾಗ ದುರ್ಬಲವಾಗುತ್ತದೆ ಗೊತ್ತೇ? ಅದು ತ್ಯಾಗದ ಮೌಲ್ಯವನ್ನು ಮರೆತಾಗ. ಸ್ವಾತಂತ್ರ್ಯವನ್ನು ಕೇವಲ ಉಪಭೋಗದ ಹಕ್ಕು ಎಂದು ಅರ್ಥೈಸಿದಾಗ. ಆದರೆ ಭಾರತ ಎಂಬ ನಾಗರಿಕತೆ ಸಾವಿರಾರು ವರ್ಷಗಳಿಂದ ಸಂಕಷ್ಟಗಳನ್ನು ತಾಳಿರುವುದು ಅದರ ತ್ಯಾಗದ ಸಂಸ್ಕೃತಿಯಿಂದಲೇ. ಯುದ್ಧಗಳ ಕಾಲದಲ್ಲಿ ಭಾರತೀಯ ಸಮಾಜ ತನ್ನ ವೈಯಕ್ತಿಕ ಸೌಲಭ್ಯಕ್ಕಿಂತ ಸಮೂಹ ಹಿತವನ್ನು ಮೇಲುಗೈಗೊಳಿಸಿದೆ.

ಇಂದು ಭಾರತ ವಿಶ್ವಶಕ್ತಿಯಾಗುವ ಕನಸು ಕಾಣುತ್ತಿದೆ. ವಿಶ್ವಶಕ್ತಿಯಾಗುವುದು ಕೇವಲ ದೊಡ್ಡ ಜಿಡಿಪಿಯಿಂದ ಸಾಧ್ಯವಲ್ಲ. ಸಂಕಷ್ಟದ ಸಮಯದಲ್ಲಿ ಶಿಸ್ತು ಪಾಲಿಸುವ ಸಮಾಜವೇ ನಿಜವಾದ ಶಕ್ತಿರಾಷ್ಟ್ರವಾಗುತ್ತದೆ. ಪೆಟ್ರೋಲ್ ದರ ಏರಿದಾಗ ಗದ್ದಲ ಮಾಡುವ ಸಮಾಜಕ್ಕಿಂತ, ಸ್ವಲ್ಪ ದೂರ ನಡೆದು ರಾಷ್ಟ್ರದ ಮೇಲಿನ ಹೊರೆ ಕಡಿಮೆ ಮಾಡುವ ಸಮಾಜವೇ ಬಲಿಷ್ಠ.

ಆದ್ದರಿಂದ ಪ್ರಧಾನಿ ಮೋದಿ ನೀಡಿರುವ ಕರೆಗಳನ್ನು ಕೇವಲ ಆಡಳಿತಾತ್ಮಕ ಸೂಚನೆಗಳೆಂದು ನೋಡಬಾರದು. ಅವು ಭಾರತೀಯ ಸಮಾಜದ ರಾಷ್ಟ್ರೀಯ ಪ್ರೌಢತೆಯನ್ನು ಪರೀಕ್ಷಿಸುವ ಕ್ಷಣಗಳು. ನೆಹರು ಕಾಲದಲ್ಲಿ ಜನರು ಚಿನ್ನ ಕೊಟ್ಟರು. ಶಾಸ್ತ್ರಿ ಕಾಲದಲ್ಲಿ ಊಟ ಬಿಟ್ಟರು. ಮನಮೋಹನ್ ಸಿಂಗ್ ಕಾಲದಲ್ಲಿ ನಿಯಂತ್ರಣಗಳನ್ನು ಒಪ್ಪಿಕೊಂಡರು. ಇಂದು ಮೋದಿ ಕಾಲದಲ್ಲಿ ದೇಶ ಮತ್ತೆ ಒಂದು ಪ್ರಶ್ನೆ ಕೇಳುತ್ತಿದೆ, 'ರಾಷ್ಟ್ರಹಿತಕ್ಕಾಗಿ ಸ್ವಲ್ಪ ತ್ಯಾಗ ಮಾಡಲು ನಾವು ಸಿದ್ಧವೇ?'

ಏಕೆಂದರೆ, ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಹುತೇಕ ಆಡಳಿತ ಪಕ್ಷದ ನಾಯಕರು ತಮ್ಮ ಬೆಂಗಾವಲು ವಾಹನ ಕಡಿತ ಮಾಡಿಕೊಂಡಿದ್ದಾರೆ, ಹೆಲಿಕಾಪ್ಟರ್ ಸಂಚಾರ ಬಿಟ್ಟಿದ್ದಾರೆ. ಅನಗತ್ಯ ವಿದೇಶಿ ಸಂಚಾರವನ್ನೂ ತ್ಯಜಿಸಿದ್ದಾರೆ. ಇನ್ನೂ ಕೆಲವರು ಬಸ್‌ನಲ್ಲೇ ಓಡಾಡುವುದಾಗಿ ಹೇಳಿದ್ದಾರೆ. ಈಗ ಮುಂದೆ ತಾನೇನು ಮಾಡಬೇಕು ಎಂಬುದನ್ನು ನಾಗರಿಕ ನಿರ್ಧರಿಸಬೇಕು.

ಇನ್ನೂ ಸತ್ಯ ಅರಗಿಸಿಕೊಳ್ಳದ 'ಲಿಬರಲ್' ಮಾಧ್ಯಮಗಳು

ಕೆಲವು ರಾಜಕೀಯ ವಿಶ್ಲೇಷಕರು, ಲಿಬರಲ್ ಮಾಧ್ಯಮಗಳು ಮಮತಾ ಸೋಲಿನ ನೈಜ ಕಾರಣ ಅರಿಯುವ ಪ್ರಯತ್ನ ಇನ್ನೂ ಮಾಡಿಲ್ಲ. ಅವರಿನ್ನೂ ತಾವೇ ಸೃಷ್ಟಿಸಿದ ಭ್ರಮೆಯಲ್ಲೇ ಇದ್ದಾರೆ.

ಶೆಫಾಲಿ ವೈದ್ಯ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿ ಟಿಎಂಸಿ ನಾಮಾವಶೇಷಗೊಂಡರೂ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡಲು ನಿರಾಕರಿಸಿದರು. ರಾಜ್ಯದ ಶೇ.92 ಜನರು ಮತ ಚಲಾಯಿಸಿ, ಮಮತಾ ಸರಕಾರವನ್ನು ಕಿತ್ತೊಗೆಯುವ ತೀರ್ಪು ನೀಡಿದ್ದರೂ, ಈ ಫಲಿತಾಂಶವು ಜನಾಭಿಪ್ರಾಯವಲ್ಲ, ಇದು ಚುನಾವಣಾ ವಂಚನೆ ಎಂದು ಅವರು ಪ್ರಲಾಪಿಸುತ್ತಿದ್ದಾರೆ.

ಈ ಬಗೆಯ ಫಲಿತಾಂಶವು ಟಿಎಂಸಿಯಲ್ಲಿ ಹಾಗೂ ಟಿಎಂಸಿಯನ್ನು ಬೆಂಬಲಿಸುವ ಮಾಧ್ಯಮಗಳು ಮತ್ತು ರಾಜಕೀಯ ವಿಶ್ಲೇಷಕರಲ್ಲಿ ಆತ್ಮವಿಶ್ಲೇಷಣೆಗೆ ಕಾರಣವಾದೀತು ಎಂದು ನೀವು ಭಾವಿಸಿದ್ದರೆ ಅದು ತಪ್ಪು. ಚುನಾವಣಾ ಫಲಿತಾಂಶದ ಬಳಿಕ ಕೆಲವಾರು ಪತ್ರಿಕೆಗಳಲ್ಲಿನ ಲೇಖನಗಳನ್ನು, ಟಿವಿಗಳಲ್ಲಿನ ಸಂದರ್ಶನಗಳನ್ನು ಮತ್ತು ಸಂವಾದಗಳನ್ನು ವೀಕ್ಷಿಸಿದರೆ ಅವರೆಲ್ಲಾ ಇನ್ನೂ ವಸ್ತುಸ್ಥಿತಿ ಅರಿಯಲು ನಿರಾಕರಿಸುತ್ತಿರುವುದು ಕಂಡುಬರುತ್ತದೆ. ಬಿಜೆಪಿ ಚುನಾವಣಾ ಆಯೋಗವನ್ನು ಬಳಸಿಕೊಂಡು ಗೆಲುವು ಸಾಧಿಸಿದೆ, ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಮಮತಾ ಪಕ್ಷದ ಸೋಲಿಗೆ ಕಾರಣ, ಹಿಂದು ಮತ ಧ್ರುವೀಕರಣಗೊಂಡದ್ದು ಟಿಎಂಸಿಯನ್ನು ಸೋಲಿಸಿತು, ಚುನಾವಣಾ ಆಯೋಗ ಮತ್ತು ಕೇಂದ್ರ ಮೀಸಲು ಪಡೆಗಳು ನ್ಯಾಯಯುತ ಮತದಾನ ನಡೆಯಲು ಬಿಡಲಿಲ್ಲ ಮುಂತಾಗಿ ಅವರೆಲ್ಲಾ ಬಣ್ಣಿಸುತ್ತಿದ್ದಾರೆ. ಮಮತಾ ಪಕ್ಷದ ಸೋಲಿಗೆ ನಿಜವಾದ ಕಾರಣವೊಂದನ್ನು ಬಿಟ್ಟು ಉಳಿದೆಲ್ಲಾ ಕುಂಟು ನೆಪಗಳನ್ನು ಅವರು ನೀಡುತ್ತಿದ್ದಾರೆ. ಇವರ ಈ ವಿವರಣೆಗಳೆಲ್ಲ ಖಂಡಿತ ರಾಜಕೀಯ ವಿಶ್ಲೇಷಣೆಯಲ್ಲ, ಇವೆಲ್ಲ ಮಮತಾ ದುರಾಡಳಿತವನ್ನು ಬಣ್ಣದ ಮಾತುಗಳಿಂದ ಸಮರ್ಥಿಸುವ ಪರಿ.

ಮಮತಾ ಅವರ ಟಿಎಂಸಿ ಸೋಲಲು ಒಂದೆರಡು ಕಾರಣಗಳಿದ್ದುದಲ್ಲ, ಹಲವಾರು ಕಾರಣಗಳಿದ್ದವು.... ಈ ಹಲವಾರು ಕಾರಣಗಳಿಂದಾಗಿ ಜನರು ಮಮತಾ ಪಕ್ಷವನ್ನು ತಿರಸ್ಕರಿಸಿದರೆಂಬುದು ಸತ್ಯ.

ಭ್ರಷ್ಟಾಚಾರ

ಮಮತಾ ಸರಕಾರ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿತ್ತು. ಅದರಲ್ಲಿ ಅನುಮಾನವೇ ಇಲ್ಲ. 2022ರಲ್ಲಿ ಮಮತಾರ ಬಲಗೈ ಬಂಟ ಹಾಗೂ ಶಿಕ್ಷಣ ಸಚಿವ ಪಾರ್ಥ ಚಟರ್ಜಿಯನ್ನು ಅನುಷ್ಠಾನ ನಿರ್ದೇಶನಾಲಯವು ಶಾಲಾ ಸಿಬ್ಬಂದಿ ನೇಮಕಾತಿ ಹಗರಣದಲ್ಲಿ ಬಂಧಿಸಿತ್ತು. ಅವರ ಆಪ್ತ ಸಹಾಯಕನ ಮನೆಯಲ್ಲಿ 27.9 ಕೋಟಿ ರೂ. ನಗದು ಹಾಗೂ ಕೋಟ್ಯಂತರ ಮೌಲ್ಯದ ಚಿನ್ನಾಭರಣಗಳು ಪತ್ತೆಯಾಗಿದ್ದವು. ಈ ಹಗರಣದ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ 2016ರ ನೇಮಕಾತಿ ಪ್ರಕ್ರಿಯೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿ 25,752 ನೇಮಕಾತಿಗಳನ್ನು ತಕ್ಷಣವೇ ರದ್ದುಪಡಿಸಿತು. ಮಮತಾ ಸರಕಾರವು ಉದ್ಯೋಗಗಳನ್ನು 'ಮಾರಿದ' ಕಾರಣದಿಂದಾಗಿ ಇವರೆಲ್ಲಾ ಒಂದೇ ದಿನದಲ್ಲಿ ನಿರುದ್ಯೋಗಿಗಳಾಗಬೇಕಾಯಿತು. ಅವರು ಹಾಗೂ ಅವರ ಕುಟುಂಬಗಳು ಈ ಬಾರಿಯ ಚುನಾವಣೆಯಲ್ಲಿ ಯಾರಿಗೆ ಮತ ಹಾಕಿರಬಹುದು ಎಂದು ಊಹಿಸುವುದು ಕಷ್ಟವಲ್ಲ.

ನ್ಯಾಯಾಲಯದ ತೀರ್ಪು ಬಂದಾಗ ಮಮತಾ ಕ್ಷಮಾಪಣೆ ಕೇಳಲಿಲ್ಲ. ಆಕೆ ಸಿಪಿಎಂ ಮತ್ತು ಬಿಜೆಪಿ ಮೇಲೆ ಆರೋಪ ಹೊರಿಸಿ ನ್ಯಾಯಾಂಗದ ಆದೇಶವನ್ನೇ ಧಿಕ್ಕರಿಸಿದರು. 'ನಾನು ಈ ತೀರ್ಪನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ಘೋಷಿಸಿದರು. ನ್ಯಾಯಾಂಗದ ನ್ಯಾಯಪರತೆಯನ್ನೇ ಧಿಕ್ಕರಿಸಿದ ಮಮತಾರನ್ನು ಬೆಂಬಲಿಸುವ ಮತ್ತು ಅವರನ್ನು ಸಮರ್ಥಿಸುವ ಲಿಬರಲ್‌ಗಳು, ಬುದ್ಧಿಜೀವಿಗಳು ಬಿಜೆಪಿಯು ಸಾಂವಿಧಾನಿಕ ಸಂಸ್ಥೆಗಳ ನಾಶಕ್ಕೆ ಕಾರಣವಾಗುತ್ತಿದೆ ಎಂದು ಆರೋಪಿಸುವುದು ಎಷ್ಟು ಹಾಸ್ಯಾಸ್ಪದ!

ಸ್ವಜನ ಪಕ್ಷಪಾತ

ಸ್ವಜನ ಪಕ್ಷಪಾತಕ್ಕೆ ಮತ್ತೊಂದು ಹೆಸರು ಮಮತಾ ಬ್ಯಾನರ್ಜಿ. ಅವಿವಾಹಿತೆಯಾಗಿರುವ ಮಮತಾ ಬ್ಯಾನರ್ಜಿ ತಮ್ಮ ಸೋದರಳಿಯ ಅಭಿಷೇಕ್ ಬ್ಯಾನರ್ಜಿಯನ್ನು ಟಿಎಂಸಿ ಪ್ರಧಾನಕಾರ್ಯದರ್ಶಿ ಹುದ್ದೆಗೇರಿಸಿದರು. ಆತ ಪಕ್ಷದಲ್ಲಿ ನಿರಂಕುಶ ರಾಜನಂತೆ ಕಾರ್ಯಾಚರಿಸತೊಡಗಿದ. ಮಮತಾ ಆತನಿಗೆ ಕೇವಲ ಪಕ್ಷದ ಸ್ಥಾನವನ್ನಷ್ಟೇ ನೀಡಿದ್ದಲ್ಲ, ಇಡೀ ಪಕ್ಷವನ್ನೇ ಆತನ ವಶಕ್ಕೊಪ್ಪಿಸಿದರು. ಅಭ್ಯರ್ಥಿಗಳ ಆಯ್ಕೆ, ಪ್ರಚಾರ ತಂತ್ರ, ಬೂತ್ ನಿರ್ವಹಣೆ ಎಲ್ಲವೂ ಅಭಿಷೇಕ್ ಮೂಲಕ ನಡೆಯಲಾರಂಭಿಸಿತು.

ಅಭಿಷೇಕ್ ಬ್ಯಾನರ್ಜಿಯ ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಂತೂ ಆತನದು ಕಬ್ಬಿಣದ ಹಸ್ತದ ಆಡಳಿತ. ಇತ್ತೀಚಿನ ಚುನಾವಣೆಯಲ್ಲಿ ಕೂಡಾ ಈ ಕ್ಷೇತ್ರದ ಹಲವಾರು ಬೂತ್‌ಗಳಲ್ಲಿ ಇವಿಎಂನಲ್ಲಿ ಬಿಜೆಪಿ ಹೆಸರಿನ ಮೇಲೆ ಟೇಪ್ ಅಂಟಿಸಲಾಗಿತ್ತು. ಇವಿಎಂಗಳನ್ನು ಇಟ್ಟಿದ್ದ ಸ್ಟ್ರಾಂಗ್ ರೂಮನ್ನು ಕೂಡ ಬಲವಂತವಾಗಿ ತೆರೆದು ಒಳಪ್ರವೇಶಿಸಲಾಯಿತು. ಇದೆಲ್ಲ ಅಭಿಷೇಕ್‌ನ



ಸೂಚನೆಯಂತೆ ನಡೆದುದು.

ಪ್ರಚಾರದ ವೇಳೆ ಅಭಿಷೇಕ್ ಬ್ಯಾನರ್ಜಿ "ತಮ್ಮ ಪಕ್ಷಕ್ಕೆ ಮತ ಹಾಕದವರು ಮುಂದಕ್ಕೆ ಪರಿಸ್ಥಿತಿ ಎದುರಿಸಬೇಕಾಗುತ್ತದೆ" ಎಂದು ಮತದಾರರಿಗೆ ನೇರವಾಗಿ ಬೆದರಿಕೆಯೊಡ್ಡಿದ್ದರು. ಟಿಎಂಸಿಗೆ ಮತ ಹಾಕಿದರೆ ಮಾತ್ರ ಮತದಾರರಿಗೆ ಉಳಿಗಾಲ ಎಂಬುದಾಗಿ ಪ್ರತಿ ಚುನಾವಣೆಯಲ್ಲೂ ಜನರನ್ನು ಬೆದರಿಸಲಾಗುತ್ತದೆ.

ಗೂಂಡಾ ರಾಜ್ಯ

ಮಮತಾ ಕಾಲದಲ್ಲಿ ಪಶ್ಚಿಮ ಬಂಗಾಳದಲ್ಲಿದ್ದುದು ಗೂಂಡಾ ರಾಜ್ಯ. ಟಿಎಂಸಿ ಗೂಂಡಾಗಳದ್ದೇ ಅಧಿಪತ್ಯ. ಫಾಲ್ಟಾ ಕ್ಷೇತ್ರದಲ್ಲಂತೂ ಇದು ಮೇರೆ ಮೀರಿತ್ತು. ಅದಕ್ಕಾಗಿಯೇ ಅಲ್ಲೀಗ ಮರುಚುನಾವಣೆ ಆದೇಶಿಸಲಾಗಿದೆ. ಆದರೆ ನಮ್ಮ ರಾಜಕೀಯ ವಿಶ್ಲೇಷಕರಿಗೆ ಅದು ಕಾಣಿಸುತ್ತಿಲ್ಲ.

ಫಾಲ್ಟಾದ ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ ಪೊಲೀಸ್ ಅಧಿಕಾರಿ ಅಜಯ್ ಶರ್ಮಾ ಅವರಿಗೆ ಬಹಿರಂಗವಾಗಿ ಸವಾಲು ಹಾಕಿದ್ದ. "ನೀವು ಆಟ ಆರಂಭಿಸಿದ್ದೀರಿ. ನಾನು ಅದನ್ನು ಮುಗಿಸುತ್ತೇನೆ" ಎಂದು ಬೆದರಿಸಿದ್ದ. ಟಿಎಂಸಿಗೆ ಅಡ್ಡ ಬಂದರೆ ಕೇಂದ್ರ ಮೀಸಲು ಪಡೆಯನ್ನೇ ಸ್ಫೋಟಿಸುವುದಾಗಿ ಆತ ಹೇಳಿದ್ದ. ಕೆಲವು ಗ್ರಾಮಗಳಿಗೆ ಭೇಟಿ ನೀಡಿದ್ದ ಜಹಂಗೀರ್ ಖಾನ್ ಅಲ್ಲಿನ ನಿವಾಸಿಗಳಲ್ಲಿ "ಟಿಎಂಸಿ ಅಧಿಕಾರಕ್ಕೆ ಬಂದರೆ ನಿಮ್ಮ ಮಹಿಳೆಯರನ್ನು ಅತ್ಯಾಚಾರ ಮಾಡಲಾಗುವುದು. ಹಾಗೂ ಪುರುಷರನ್ನು ಕೊಲ್ಲಲಾಗುವುದು ಎಂದು ಬೆದರಿಕೆಯೊಡ್ಡಿದ್ದ" ಎಂಬುದಾಗಿ ಆ ಗ್ರಾಮ ನಿವಾಸಿಗಳೇ ಪತ್ರಕರ್ತರಲ್ಲಿ ತಿಳಿಸಿದ್ದರು.

ಹೀಗೆ ದೂರಿಕೊಂಡವರು ಬಿಜೆಪಿ ಕಾರ್ಯಕರ್ತರಲ್ಲ, ಅವರು ಸಾಮಾನ್ಯ ಬಂಗಾಳಿ ಮತದಾರರು. ಅದರಲ್ಲಿಯೂ ಟಿಎಂಸಿಗೇ ಮತ ಹಾಕುತ್ತಾ ಬಂದವರು. ಅವರು ತಮಗೆ ರಕ್ಷಣೆ ಬೇಕೆಂದು ಪೊಲೀಸರಲ್ಲಿ ಕೋರುತ್ತಿದ್ದರು. ಇದು ಮಮತಾ ಬ್ಯಾನರ್ಜಿ ಆಡಳಿತ ಕಾಲದ ಪಶ್ಚಿಮ ಬಂಗಾಳದ ಪರಿಸ್ಥಿತಿ. ಪಶ್ಚಿಮ ಬಂಗಾಳದಲ್ಲಿ ಗ್ರಾಮ ಪಂಚಾಯತ್ ಮುಖ್ಯಸ್ಥರನ್ನು ಚುನಾವಣೆ ಮೂಲಕ ಆರಿಸುತ್ತಿರಲಿಲ್ಲ. ಟಿಎಂಸಿ ತನಗೆ ಬೇಕಾದವರನ್ನು ನೇಮಿಸುತ್ತಿತ್ತು.

ಪ.ಬಂಗಾಳದಲ್ಲಿ ಕ್ರಿಮಿನಲ್ ಅಭ್ಯರ್ಥಿಗಳು ಮತದಾರರಿಗೇ ಅತ್ಯಾಚಾರದ ಬೆದರಿಕೆಯೊಡ್ಡುತ್ತಾರೆ. ಚುನಾವಣಾ ವೀಕ್ಷಕರಿಗೆ ಎಲ್ಲರೆದುರೇ ಬೆದರಿಕೆ ಒಡ್ಡಲಾಗುತ್ತದೆ. ಇವೆಲ್ಲದರ ಮಧ್ಯೆ ಮಮತಾರವರು ಜಹಾಂಗೀರ್ ಖಾನ್‌ನನ್ನು ಸಮರ್ಥಿಸಿ ಮಾತನಾಡುತ್ತಾರೆ.

ಇದೀಗ ಚುನಾವಣಾ ಆಯೋಗವು ಫಾಲ್ಟಾದ ಮತದಾನವನ್ನು ರದ್ದುಪಡಿಸಿ ಮೇ 21ರಂದು ಮರುಮತದಾನಕ್ಕೆ ಆದೇಶಿಸಿದೆ. ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಇಡೀ ಕ್ಷೇತ್ರದ ಚುನಾವಣೆಯನ್ನೇ ರದ್ದುಪಡಿಸಿದ್ದು ಇದೇ ಮೊದಲು. ಆದರೆ ಇವೆಲ್ಲವೂ ಮಮತಾಪರ ವಿಶ್ಲೇಷಕರ ಕಣ್ಣಿಗೆ ಬೀಳುವುದಿಲ್ಲ. ಅವರೆಲ್ಲ ಬಿಜೆಪಿ ಗೆಲುವಿಗೆ ಅದರ ಹಿಂದುತ್ವ ಪ್ರಚಾರವೇ ಕಾರಣ ಎನ್ನುತ್ತಾರೆ. ಮಮತಾ ಕಾಲದ ದುರಾಡಳಿತದಿಂದ ಜನರು ರೋಸಿದ್ದರು ಎಂದು ಒಪ್ಪಿಕೊಳ್ಳುವುದಿಲ್ಲ.

ಮಮತಾ ಆಘಾತಕಾರಿ ಮಾತು

ಚುನಾವಣೆಗಿಂತ ಮೊದಲು ಎಸ್‌ಐಆರ್ ವಿರುದ್ಧ ಧರಣಿ ನಡೆಸಿದ ಮಮತಾ ಬ್ಯಾನರ್ಜಿ ಬಂಗಾಳಿ ಹಿಂದುಗಳೇ ತುಂಬಿದ್ದ ಸಭೆಯಲ್ಲಿ ಮಾತನಾಡುತ್ತಾ "ನಾವು ಇರುವುದರಿಂದಲೇ ನೀವು ಸುರಕ್ಷಿತರಾಗಿದ್ದೀರಿ. ನಾವಿಲ್ಲದಿದ್ದರೆ ಒಂದು ಸಮುದಾಯವು ಒಟ್ಟಾಗಿ ಬಂದು ನಿಮ್ಮನ್ನು ಸುತ್ತುವರಿದು ನಿಮ್ಮನ್ನು ಒಂದೇ ಕ್ಷಣದಲ್ಲಿ ಮುಗಿಸಿ ಬಿಡುತ್ತದೆ" ಎಂದು ಹೇಳಿದ್ದರು. ಅಂದರೆ ಹಿಂದುಗಳನ್ನು ಮುಗಿಸಿ ಬಿಡಲು ಒಂದು ಸಮುದಾಯ ಸಿದ್ಧವಾಗಿದೆ, ಆದರೆ ತಾನು ಅದನ್ನು ಸದ್ಯಕ್ಕೆ ತಡೆದಿದ್ದೀನೆ ಎಂಬುದು ಮಮತಾ ಮಾತಿನರ್ಥ.

ಇದು ಯಾರೋ ಬಿಜೆಪಿ ಮುಖಂಡ ಹೇಳಿದ ಮಾತಲ್ಲ, ಆರೆಸ್ಸೆಸ್ ಪ್ರಚಾರವೂ ಅಲ್ಲ, ಇದು ಜಾತ್ಯತೀತ ನಾಯಕಿಯೆಂದು ಕೆಲವು ಮಾಧ್ಯಮಗಳು ಹಾಡಿಹೊಗಳುವ ಮಹಿಳಾ ಮುಖ್ಯಮಂತ್ರಿಯೊಬ್ಬರಿಂದ ಉದುರಿದ ಮಾತು. ತಮ್ಮ ರಾಜ್ಯದಲ್ಲಿ ಒಂದು ಸಮುದಾಯವು ಹಿಂದುಗಳನ್ನು ಮುಗಿಸಿ ಬಿಡಲು ಕಾದಿದೆ ಎಂದು ಅವರು ನಿರ್ಲಜ್ಜವಾಗಿ ನುಡಿಯುತ್ತಾರೆ.

ಕಳೆದ 15 ವರ್ಷಗಳ ಆಳ್ವಿಕೆಯಲ್ಲಿ ಮಮತಾ ಬ್ಯಾನರ್ಜಿ ಬಹಳಷ್ಟು ಈದ್ ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಅಲ್ಲಿ ಅವರು ಮಾತನಾಡುವುದು ಬಂಗಾಳಿ ಭಾಷೆಯಲ್ಲ, ಉರ್ದು! ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಹಲವಾರು ಉರ್ದು ಪದಗಳಿವೆ. ಶಾಲೆಗಳಲ್ಲಿ, ಸರಕಾರಿ ಕಚೇರಿಗಳಲ್ಲಿ ಅಧಿಸೂಚನೆ ನೀಡಲು ಉರ್ದುವನ್ನು ಅಧಿಕೃತ ಭಾಷೆಯನ್ನಾಗಿಸುವ ಭರವಸೆಯನ್ನೂ ನೀಡಲಾಗಿದೆ. ಇಂದು ಬಂಗಾಳಿ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ರೀತಿಯೆ?

ಮಹುವಾ ಮೊಯಿತ್ರಾ ದಾರ್ಷ್ಟ್ಯ

ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಕೂಡಾ ದಾರ್ಷ್ಟ್ಯದ ಹೇಳಿಕೆ ನೀಡುವುದರಲ್ಲಿ ಹಿಂದೆ ಬಿದ್ದಿಲ್ಲ. ಚುನಾವಣಾ ಪ್ರಚಾರವೊಂದರಲ್ಲಿ ಆಕೆ "ಬಂಗಾಳಿಗಳು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿದ್ದರು. ಆದರೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬನೇ ಒಬ್ಬ ಗುಜರಾತಿಯನ್ನು ನೀವು ಹೆಸರಿಸಬಲ್ಲಿರಾ?" ಎಂದು ಪ್ರಶ್ನಿಸಿದ್ದರು. ಅದೊಂದು ಹೇಳಿಕೆಯಿಂದಲೇ ಆಕೆ ಮಹಾತ್ಮಾಗಾಂಧಿ, ಸರ್ದಾರ್ ಪಟೇಲ್, ಶ್ಯಾಮ್‌ಜೀ ಕೃಷ್ಣವರ್ಮ ಮುಂತಾದ ಸ್ವಾತಂತ್ರ್ಯ ವೀರರನ್ನು ನಗಣ್ಯ ಮಾಡಿಬಿಟ್ಟಿದ್ದರು. ಮಹಾರಾಷ್ಟ್ರದ ಸಾವರ್ಕರ್‌ರನ್ನು ಆಕೆ ಗುಜರಾತಿನವರು ಎಂದು ಬಣ್ಣಿಸಿದ್ದರು. ಬಳಿಕ ಈ ಹೇಳಿಕೆಗಾಗಿ ಮಮತಾ ಬ್ಯಾನರ್ಜಿ ಕ್ಷಮಾಪಣೆ ಕೇಳಿದ ಪ್ರಸಂಗ ನಡೆದಿತ್ತು. ಇಂತಹ ಮಹಿಳೆಯನ್ನು ನಮ್ಮ ಲಿಬರಲ್ ಮಾಧ್ಯಮಗಳು 'ಬುದ್ಧಿವಂತ ಸಂಸದೆ', 'ಉತ್ತಮ ಸಂಸದೀಯ ಪಟು' ಎಂದು ಎಂದು ಬಣ್ಣಿಸುತ್ತವೆ. ಎಂಥಾ ವಿಡಂಬನೆ!

ಮೊಹುವಾ ಇಂತಹ ಹೇಳಿಕೆ ನೀಡಿದ್ದು ಭವಾನಿಪುರದಲ್ಲಿ. ಅಲ್ಲಿ ಮಮತಾ ಬ್ಯಾನರ್ಜಿ ಅವರೇ ಸ್ಪರ್ಧಿಯಾಗಿದ್ದರು. ವಿಪರ್ಯಾಸವೆಂದರೆ ಅದೇ ಕ್ಷೇತ್ರದಲ್ಲಿ ಶೇ.30ಕ್ಕಿಂತ ಹೆಚ್ಚು ಗುಜರಾತಿಗಳಿದ್ದರು. ಅವರೆಲ್ಲ ಮತದಾನ ದಿನದಂದು ಮೊಹುವಾ ಹೇಳಿಕೆಯನ್ನು ಮರೆಯಲಿಲ್ಲ....

ಮತದಾರರು

ದಿಲ್ಲಿಯಲ್ಲಿ ಮನೆಕೆಲಸ ಮಾಡುವ ಸೀಮಾದಾಸ್ ಎಂಬಾಕೆ ಮತದಾನ ಮಾಡಲು ಎರಡು ದಿನ ರೈಲಿನಲ್ಲಿ ಪ್ರಯಾಣಿಸಿ ಪಶ್ಚಿಮ ಬಂಗಾಳಕ್ಕೆ ಬಂದಿದ್ದಳು. ಆಕೆ ಯಾವಾಗಲೂ ಟಿಎಂಸಿಗೆ ಮತ ಹಾಕುವಾಕೆ. ಆದರೆ ಈ ಬಾರಿ ಬಿಜೆಪಿಗೆ ಮತ ಹಾಕಿದ್ದಳು. ಮಮತಾ ಯಾವಾಗಲೂ ಮುಸ್ಲಿಮರ ಪರವಾಗಿದ್ದಾರೆ ಎಂಬುದು ಆಕೆಯ ದೂರು.

ಕೆಲವು ಮಾಧ್ಯಮಗಳು ಇದು ಬಿಜೆಪಿಯು ಮತದಾರರನ್ನು ಕೋಮು ನೆಲೆಯಲ್ಲಿ ಪ್ರಭಾವಿಸುತ್ತಿರುವುದರ ಪರಿಣಾಮ ಎಂದು ಬಣ್ಣಿಸಿದವು. ಆದರೆ ಪಶ್ಚಿಮ ಬಂಗಾಳದ ಮತದಾರರು ಮೂರ್ಖರಲ್ಲ. ಅವರು ಮಮತಾರ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಗೂಂಡಾರಾಜ್ಯವನ್ನು ಕಂಡಿದ್ದಾರೆ. ಅಲ್ಪಸಂಖ್ಯಾತ ಓಲೈಕೆಯಿಂದ ರೋಸಿದ್ದಾರೆ. ಕಾನೂನು ವ್ಯವಸ್ಥೆ ಕುಸಿದು ಬಿದ್ದಿರುವುದನ್ನು ಗಮನಿಸಿದ್ದಾರೆ.

ಮತದಾನ ಮುಗಿದು ಮತ ಎಣಿಕೆಗೆ ಕಾಯುವ ಅವಧಿಯಲ್ಲಂತೂ ಮಮತಾ, ಮೊಹುವಾ, ಅಭಿಷೇಕ್ ಬ್ಯಾನರ್ಜಿ, ಡೆರೆಕ್ ಓ ಬ್ರಿಯಾನ್ ಸೇರಿದಂತೆ ಟಿಎಂಸಿ ನಾಯಕರಿಂದ ಬಿಜೆಪಿ ಮುಖಂಡರೆಡೆಗೆ ಮತ್ತಷ್ಟು ಬೆದರಿಕೆಯ ಸಂದೇಶಗಳು ರವಾನಿಸಲ್ಪಟ್ಟವು. ಫಲಿತಾಂಶದ ಬಳಿಕ ನಿಮ್ಮೆಲ್ಲರನ್ನು ನೋಡಿಕೊಳ್ಳುತ್ತೇವೆ ಎಂದು ಅವರು ಬಿಜೆಪಿಗರಿಗೆ ಬಹಿರಂಗ ಬೆದರಿಕೆ ಹಾಕಿದರು.

ಮಾಧ್ಯಮಗಳ ಕುರುಡುಗಣ್ಣು

ಲಿಬರಲ್ ಮಾಧ್ಯಮಗಳು, ಹಲವಾರು ರಾಜಕೀಯ ವಿಶ್ಲೇಷಕರು ತಮ್ಮ ವಿಶ್ಲೇಷಣೆಯಲ್ಲಿ ಈ ಮುಂದಿನದನ್ನೆಲ್ಲ ಹೇಳಲಿಲ್ಲ- 15 ವರ್ಷಗಳ ಕಾಲ ಮಮತಾ ತಾವೇ ಒಂದು ಸಂಸ್ಥೆಯಾಗಿದ್ದರು, ಆಕೆಯೇ ಸರಕಾರವಾಗಿದ್ದರು, ಆಕೆ ಪ್ರತಿಯೊಂದು ಪಂಚಾಯತ್‌ನ್ನು ಕೂಡಾ ತಮ್ಮ ಬೆಂಬಲಿಗರಿಂದಲೇ ತುಂಬಿದ್ದರು, ಶಾಲೆಗಳಲ್ಲಿ ಖರೀದಿಸಿದ ಸಿಬ್ಬಂದಿಗಳನ್ನು ನೇಮಿಸಿದ್ದರು, ಆಕೆ ಅಪರಾಧಿ ಅಭ್ಯರ್ಥಿಗಳನ್ನು ರಕ್ಷಿಸಲು ಪೊಲೀಸರನ್ನು ಬಳಸಿಕೊಂಡರು, ಹಿಂದು ಮತದಾರರಿಗೆ ಅಲ್ಪಸಂಖ್ಯಾತರಿಂದ ಬೆದರಿಕೆ ಬಂದಾಗ ಮೌನವಾಗುಳಿದರು...

ಈ ಕುರಿತಂತೆ ಅವರದು ಕುರುಡುಗಣ್ಣು!

ಇವೆಲ್ಲದರ ಬದಲಾಗಿ ಅವರೆಲ್ಲ ಬಿಜೆಪಿ ಚುನಾವಣಾ ಅಕ್ರಮವೆಸಗಿತು ಎಂದರು. ಹಿಂದುತ್ವದ ಕುರಿತಂತೆ ಟೀಕಿಸಿದರು. ಚುನಾವಣಾ ಆಯೋಗವನ್ನು ನಿಂದಿಸಿದರು.

ಇವರದು ಬೌದ್ಧಿಕ ವೈಫಲ್ಯವಲ್ಲ, ಇದು ಅವರ ಬೌದ್ಧಿಕ ಆಯ್ಕೆ. ಅವರು ಇಂತಹುದನ್ನಷ್ಟೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಆದರೆ ಬಂಗಾಳದ ಸಾಮಾನ್ಯ ಜನರು ಅವರಿಗಿಂತ ಬುದ್ಧಿವಂತರು. ದುಡ್ಡಿಗಾಗಿ ಮಮತಾ ಪರವಾಗಿ ಬರೆಯುವ ಈ ವಿಶ್ಲೇಷಕರಿಗಿಂತ ಸಾಮಾನ್ಯ ಜನರು ಚೆನ್ನಾಗಿ ರಾಜ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದರು.

ಫಾಲ್ಟಾದಲ್ಲೀಗ ಮರುಚುನಾವಣೆ ನಡೆಯಲಿದೆ. ಮಹಿಳೆಯರ ಮೇಲೆ ಅತ್ಯಾಚಾರದ ಬೆದರಿಕೆ ಹಾಕಿದ, ಜನರನ್ನು ಕೊಲ್ಲುವುದಾಗಿ ನುಡಿದ ಜಹಾಂಗೀರ್ ಖಾನ್ ಈಗಲೂ ಟಿಎಂಸಿ ಅಭ್ಯರ್ಥಿ. ಮಮತಾ ಆತನನ್ನು ಕಣದಿಂದ ಹಿಂದಕ್ಕೆ ಸರಿಸಿಲ್ಲ. ಮಮತಾ ಪರವಾದ ರಾಜಕೀಯ ವಿಶ್ಲೇಷಕರು, ಲಿಬರಲ್‌ಗಳು ಇದು ಹಿಂದುತ್ವ ಮತ್ತು ಜಾತ್ಯತೀತತೆಯ ನಡುವಿನ ಹೋರಾಟ ಎಂದು ಬಣ್ಣಿಸಿಯಾರು. ಆದರೆ ಕಾದು ನೋಡಿ, ಫಾಲ್ಟಾದ ಜನರು ನಿಜವಾದ ಕತೆ ಏನು ಎಂಬುದನ್ನು ಮತದಾನದಂದು ಸಾರಿ ಹೇಳಲಿದ್ದಾರೆ.

2039ರ ವೇಳೆಗೆ ಅಂ. ನಿಲ್ದಾಣ ಆಧುನೀಕರಣ

ಶೀಘ್ರವೇ ಪ್ರಥಮ ಸೆಮಿ-ಸ್ಪೀಡ್ ರೈಲು

ಹೊಸದಿಲ್ಲಿ: ಹೊಸ ರೈಲ್ವೆ ಲೇನ್‌ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರ ಕುರಿತ ಸಂಪುಟ ಸಮಿತಿ ಮಂಜೂರಾತಿ ನೀಡಿದ್ದು, ಗಂಟೆಗೆ 220 ಕಿ.ಮೀ. ವೇಗದಲ್ಲೋಡುವ ರೈಲುಗಳಿಗೆ ಭಾರತೀಯ ರೈಲ್ವೆ ಶೀಘ್ರ ಹಸಿರು ನಿಶಾನೆ ತೋರಲಿದೆ. ಅಹಮ್ಮದಾಬಾದ್ (ಸರ್ಖೇಜ್) ಧೋಲೇರಾ ಸೆಮಿ ಹೈಸ್ಪೀಡ್ ಡಬಲ್ ಲೈನ್ ಯೋಜನೆಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಬುಧವಾರ ಮಂಜೂರಾತಿ ನೀಡಿದೆ. ಹೊಸ ರೈಲ್ವೆ ಲೈನ್‌ನಿಂದ ಸಾಬರಮತಿಯಿಂದ ಧೋಲೇರಾಗೆ ಪ್ರಯಾಣ ಅವಧಿ 48 ನಿಮಿಷ ಕಡಿಮೆಯಾಗಲಿದೆ ಎಂದು ರೈಲ್ವೆ ಸಚಿವ ತಿಳಿಸಿದ್ದಾರೆ. 20,667 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ ಎಂದು ಸಚಿವರು ಹೇಳಿದ್ದಾರೆ.

ನಾಗ್ಪುರ ವಿ.ನಿಲ್ದಾಣ ಅಭಿವೃದ್ಧಿಗೆ ಅಸ್ತು: ಸಾರ್ವಜನಿಕ-ಖಾಸಗಿ ಪಾಲು ದಾರಿಕೆ (ಪಿಪಿಪಿ) ಮಾದರಿಯಲ್ಲಿ ನಾಗ್ಪುರ ಅಂ. ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಮತ್ತು ಆಧುನೀಕರಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಮಂಜೂರಾತಿ ನೀಡಿದೆ.

ಮಿಹಾನ್ ಇಂಡಿಯಾ ಲಿಮಿಟೆಡ್(ಎಂಐಎಲ್)ಗೆ ಗುತ್ತಿಗೆ ಮೇಲೆ ನೀಡಲಾಗಿರುವ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಭೂಮಿಯ ಗುತ್ತಿಗೆ ಅವಧಿಯನ್ನು 2039ರ ಆ.6 ರತನಕ ವಿಸ್ತರಿಸಲು ಸಚಿವ ಸಂಪುಟ ಸಮ್ಮತಿಸಿದೆ. ಗುತ್ತಿಗೆ ಅವಧಿ ವಿಸ್ತರಣೆಯಿಂದ ಜಿಎಂಆರ್ ನಾಗ್ಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಜಿಎನ್‌ಐಎಎಲ್)ಕ್ಕೆ ಲೈಸೆನ್ಸ್ ನೀಡಲು ಎಂಐಎಲ್‌ಗೆ ಹಾದಿ ಸುಗಮವಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ವಿಮಾನ ನಿಲ್ದಾಣದ ಮೇಲ್ದರ್ಜೆಗೇರಿಸುವಿಕೆ, ಆಧುನೀಕರಣಕ್ಕೆ ಕೇಂದ್ರ ಸಚಿವ ಸಂಪುಟ ಮಂಜೂರಾತಿ ನೀಡಿದೆ. ಇದೀಗ ಗುತ್ತಿಗೆ ಅವಧಿ ವಿಸ್ತರಣೆಯಿಂದ, ಗುತ್ತಿಗೆಯ ಅವಧಿಯು ಜಿಎನ್‌ಐಎಎಲ್‌ಗೆ ಈಗಾಗಲೇ ನೀಡಿರುವ 30 ವರ್ಷಗಳ ವಿನಾಯಿತಿ ಅವಧಿಯೊಂದಿಗೆ ಜಾಸ್ತಿಯಾಗಲಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಸರಕಾರದ ಪ್ರಸ್ತುತ ನಿರ್ಧಾರದಿಂದ ನಾಗಪುರ ವಿಮಾನ ನಿಲ್ದಾಣವು ಬೆಳವಣಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಹೊಸ ಘಟ್ಟಕ್ಕೆ ನಾಂದಿ ಹಾಡೋ ನಿರೀಕ್ಷೆಯಿದೆ ಎಂದು ನಾಗರಿಕ ವಿಮಾನಯಾನ ಖಾತೆ ವಿಶ್ವಾಸ ವ್ಯಕ್ತಪಡಿಸಿದೆ.

ಕಲ್ಲಿದ್ದಲು ಅನಿಲಕ್ಕಾಗಿ 37,500 ಕೋಟಿ ರೂ.

37,500 ಕೋಟಿ ಅಂದಾಜು ವೆಚ್ಚದಲ್ಲಿ ಮೇಲ್ಮೈ ಕಲ್ಲಿದ್ದಲು ಅಥವಾ ಲಿಗ್ನೈಟ್‌ನಿಂದ ಅನಿಲವೆತ್ತುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಮಂಜೂರಾತಿ ನೀಡಿದೆ. 2030ರ ವೇಳೆ 100 ಮಿಲಿಯನ್ ಟನ್ ಕಲ್ಲಿದ್ದಲಿನಿಂದ ಅನಿಲ ಉತ್ಪಾದನೆಯ ರಾಷ್ಟ್ರೀಯ ಟಾರ್ಗೆಟ್‌ನ ವಿಸ್ತರಣೆ ಜತೆ ಇಂಧನ ಭದ್ರತೆಯ ಬಲವರ್ಧನೆ, ಎಲ್‌ಎನ್‌ಜಿ (ಶೇ.50ಕ್ಕಿಂತ ಜಾಸ್ತಿ ಆಮದು), ಯೂರಿಯಾ(ಶೇ.20 ಆಮದು), ಅಮೋನಿಯಾ (100ಶೇ. ಆಮದು), ಮೆಥನಾಲ್ (80ರಿಂದ 90ಶೇ. ಆಮದು)ಇತ್ಯಾದಿ ಪ್ರಮುಖ ಉತ್ಪನ್ನಗಳ ಆಮದು ಮೇಲಿನ ಅವಲಂಬನೆ ಕುಗ್ಗಿಸುವುದು ಪ್ರಸ್ತುತ ಯೋಜನೆಯ ಮೂಲಾಶಯವಾಗಿವೆ. ಯೋಜನೆಯು 3ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸಲಿದೆ ಮತ್ತು 50,000 ಉದ್ಯೋಗಾವಕಾಶ ಸೃಷ್ಟಿಯಾಗಲಿವೆ ಎಂದು ಮೂಲಗಳು ತಿಳಿಸಿವೆ.

ರಷ್ಯಾ ಸೈತಾನನ ಆರ್ಭಟ...!

ಅಣ್ವಸ್ತ್ರ ಪೈಪೋಟಿಗೆ ನಾಂದಿ ಹಾಡಿದ ಸಾರ್ಮತ್ ಕ್ಷಿಪಣಿ ಪರೀಕ್ಷೆ



ಜಾಗತಿಕ ಉದ್ವಿಗ್ನತೆ ಮತ್ತು ಪ್ರಮುಖ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳ ಪತನವಾಗಿರುವ ಹೊತ್ತಲ್ಲೇ, ರಷ್ಯಾ ತನ್ನ ಮುಂದಿನ ಪೀಳಿಗೆಯ ಖಂಡಾಂತರ ಕ್ಷಿಪಣಿ (ಐಎಸ್‌ಬಿಎಂ) ಆರ್ ಎಸ್-28 ಸಾರ್ಮತ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಪಾಶ್ಚಿಮಾತ್ಯ ದೇಶಗಳು ಸೈಟನ್ (ಸೇಟನ್ 2) ಎಂದು ಕರೆಯುವ ಈ ಕ್ಷಿಪಣಿಯ ಪರೀಕ್ಷೆ, ಪುಟಿನ್ ನೇತೃತ್ವದ ರಷ್ಯಾ, ತನ್ನ ಅಣ್ವಸ್ತ್ರ ಬಲವನ್ನು ಆಧುನೀಕರಿಸುವಲ್ಲಿ ಇಟ್ಟಿರುವ ಬಲವಾದ ಹೆಜ್ಜೆ ಎಂದು ವಿಶ್ಲೇಷಿಸಲಾಗುತ್ತಿದೆ. ಉತ್ತರ ರಷ್ಯಾದ ಪ್ಲೆಸೆಟ್ಸ್ಕ ಕಾಸ್ಮೋಡ್ರೋಮ್‌ನಿಂದ ಈ ಪರೀಕ್ಷೆ ನಡೆಸಲಾಗಿದೆ.

ಏನಿದು ಸೈಟನ್ ಕ್ಷಿಪಣಿ?

ಆರ್‌ಎಸ್-28 ಸಾರ್ಮತ್ ಒಂದು ಭಾರೀ ಖಂಡಾಂತರ ಕ್ಷಿಪಣಿಯಾಗಿದ್ದು, ಸೋವಿಯತ್ ಕಾಲದ ಆರ್-36ಎಂ ವೋಯೆವೊಡಾ ವ್ಯವಸ್ಥೆಯನ್ನು ಬದಲಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಇದರ ಅಭಿವೃದ್ಧಿ 2011ರಲ್ಲಿ ಆರಂಭವಾಯಿತು. ರಷ್ಯಾದ ಅಣ್ವಸ್ತ್ರ ಟ್ರಯಾಡ್‌ಗಳ ಆಧುನೀಕರಣದಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಪಾಶ್ಚಿಮಾತ್ಯ ವಿಶ್ಲೇಷಕರು ಇದನ್ನು ಸೈಟನ್ ಎಂದು ಹೆಸರಿಸಲು ಕಾರಣ ಇದರ ವಿನಾಶಕಾರಿ ಶಕ್ತಿ. ಇದು ಇದುವರೆಗೆ ನಿರ್ಮಿಸಲಾದ ಅತ್ಯಂತ ಶಕ್ತಿಶಾಲಿ ಅಣ್ವಸ್ತ್ರ ವಿತರಣಾ ವ್ಯವಸ್ಥೆಗಳಲ್ಲಿ ಒಂದಾಗಿದೆ. ಈ ಕ್ಷಿಪಣಿ ಮಲ್ಟಿಪಲ್ ಇಂಡಿಪೆಂಡೆಂಟ್ಲಿ ಟಾರ್ಗೆಟಬಲ್ ಮ್ಯಾನುವರಬಲ್ ರೀ-ಎಂಟ್ರಿ ವೆಹಿಕಲ್ಸ್ (ಎಂಐಆರ್‌ವಿ) ಅನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದ್ದು, ಏಕಕಾಲದಲ್ಲಿ ಹಲವು ಗುರಿಗಳ ಮೇಲೆ ಅಣ್ವಸ್ತ್ರ ದಾಳಿ ನಡೆಸಬಲ್ಲದು.

ಪ್ರಮುಖ ಸಾಮರ್ಥ್ಯ ಮತ್ತು ವಿಶೇಷತೆಗಳು

ಅಧ್ಯಕ್ಷ ಪುಟಿನ್ ಪ್ರಕಾರ, ಸಾರ್ಮತ್ 35,000 ಕಿಲೋಮೀಟರ್‌ಗಳಿಗೂ ಹೆಚ್ಚು ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ತಪ್ಪಿಸಲು ಉಪ-ಕಕ್ಷೆಯ ಹಾರಾಟದ ಹಾದಿಗಳನ್ನು ಬಳಸುತ್ತದೆ. ದಕ್ಷಿಣ ಧ್ರುವದ ಮೂಲಕವೂ ಗುರಿ ತಲುಪಬಲ್ಲ ಇದರ ಸಾಮರ್ಥ್ಯ, ಶತ್ರು ರಾಷ್ಟ್ರಗಳ ರಕ್ಷಣಾ ವ್ಯವಸ್ಥೆಯನ್ನು ದಿಕ್ಕುತಪ್ಪಿಸುತ್ತದೆ. ಈ ಕ್ಷಿಪಣಿಯ ಪೇಲೋಡ್ ಸಾಮರ್ಥ್ಯ ಪಾಶ್ಚಿಮಾತ್ಯ ಕ್ಷಿಪಣಿಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಶಕ್ತಿಶಾಲಿ, ಎಂದು ವರದಿಯಾಗಿದೆ. ಅಲ್ಲದೆ, ಶಬ್ದದ ವೇಗಕ್ಕಿಂತ 27 ಪಟ್ಟು ವೇಗವಾಗಿ ಚಲಿಸುವ ಅವಂಗಾರ್ಡ್ ಹೈಪರ್‌ಸಾನಿಕ್ ಗ್ಲೈಡ್ ವಾಹನಗಳನ್ನು ನಿಯೋಜಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ಪುಟಿನ್ ಸಂದೇಶ ಮತ್ತು ಕಾರ್ಯತಂತ್ರ

ಈ ಪರೀಕ್ಷೆಯ ನಂತರ ಮಾತನಾಡಿದ ಪುಟಿನ್, ಸಾರ್ಮತ್ ವಿಶ್ವದ ಅತ್ಯಂತ ಶಕ್ತಿಶಾಲಿ ಕ್ಷಿಪಣಿ ಎಂದು ಬಣ್ಣಿಸಿದರು. ವರ್ಷದ ಅಂತ್ಯದೊಳಗೆ ಇದು ರಕ್ಷಣಾ ಸೇವೆಗೆ ಸೇರ್ಪಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಉಕ್ರೇನ್ ಯುದ್ಧದ ಆರಂಭದಿಂದಲೂ ಪುಟಿನ್ ಅಣ್ವಸ್ತ್ರದ ಎಚ್ಚರಿಕೆ ನೀಡುತ್ತಲೇ ಬಂದಿದ್ದು, ಈ ಹೊಸ ಪರೀಕ್ಷೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರಷ್ಯಾದ ಶಕ್ತಿಯ ಪ್ರದರ್ಶನ ಎಂದೇ ಬಣ್ಣಿಸಲಾಗಿದೆ.

ಜಾಗತಿಕ ಆತಂಕ ಮತ್ತು ಪ್ರತಿಕ್ರಿಯೆಗಳು

ಈ ಪರೀಕ್ಷೆ, ಪಾಶ್ಚಿಮಾತ್ಯ ದೇಶಗಳಲ್ಲಿ ಆತಂಕ ಮೂಡಿಸಿದೆ. ಅಮೆರಿಕ ಮತ್ತು ನ್ಯಾಟೋ ಮಿತ್ರರಾಷ್ಟ್ರಗಳು ರಷ್ಯಾದ ಈ ಅಣ್ವಸ್ತ್ರ ಆಧುನೀಕರಣವನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ. ವಿಶೇಷವಾಗಿ, ರಷ್ಯಾ ಮತ್ತು ಅಮೆರಿಕ ನಡುವಿನ ಕೊನೆಯ ಪ್ರಮುಖ ಅಣ್ವಸ್ತ್ರ ಒಪ್ಪಂದ ಫೆಬ್ರವರಿ 2026 ರಲ್ಲಿ ಮುಕ್ತಾಯಗೊಂಡಿದ್ದು, ಈಗ ಜಗತ್ತಿನ ಎರಡು ದೊಡ್ಡ ಅಣ್ವಸ್ತ್ರ ರಾಷ್ಟ್ರಗಳ ಶಸ್ತ್ರಾಸ್ತ್ರಗಳ ಮೇಲೆ ಯಾವುದೇ ಮಿತಿ ಇಲ್ಲದಂತಾಗಿದೆ. ಇದು ಜಾಗತಿಕ ಅಣ್ವಸ್ತ್ರ ಪೈಪೋಟಿಯನ್ನು ಮತ್ತಷ್ಟು ತೀವ್ರಗೊಳಿಸುವ ಸಾಧ್ಯತೆಯಿದೆ.



ರಷ್ಯಾದ ಬೃಹತ್ ಶಸ್ತ್ರಾಸ್ತ್ರ ಕಾರ್ಯಕ್ರಮ

ಸಾರ್ಮತ್, ಪುಟಿನ್ ಅವರ 2018ರ ಬೃಹತ್ ಶಸ್ತ್ರಾಸ್ತ್ರ ಯೋಜನೆಯ ಒಂದು ಭಾಗವಷ್ಟೇ. ಇದರಲ್ಲಿ ಅವಂಗಾರ್ಡ್ ಹೈಪರ್‌ಸಾನಿಕ್ ವಾಹನ, ಪೋಸೈಡನ್ ಅಣುಶಕ್ತಿ ಚಾಲಿತ ನೀರೊಳಗಿನ ಡ್ರೋನ್ ಮತ್ತು ಬುರೆವೆಸ್ನಿಕ್ ಅಣುಶಕ್ತಿ ಚಾಲಿತ ಕ್ರೂಸ್ ಕ್ಷಿಪಣಿಗಳು ಸೇರಿವೆ. ಇತ್ತೀಚೆಗೆ ರಷ್ಯಾ ಒರೆಶ್ನಿಕ್ ಎಂಬ ಮಧ್ಯಂತರ ವ್ಯಾಪ್ತಿಯ ಕ್ಷಿಪಣಿಯನ್ನೂ ಉಕ್ರೇನ್ ವಿರುದ್ಧ ಬಳಸಿ ತನ್ನ ಕ್ಷಿಪಣಿ ತಂತ್ರಜ್ಞಾನದ ಅಭಿವೃದ್ಧಿಯನ್ನು ಪ್ರದರ್ಶಿಸಿದೆ.

ಈ ಪರೀಕ್ಷೆಯ ಪ್ರಾಮುಖ್ಯತೆ ಏನು?

ಉಕ್ರೇನ್ ವಿರುದ್ಧದ ಕದನ ನಿರ್ಣಾಯಕ ಹಂತ ತಲುಪಿದೆ, ಎಂದು ರಷ್ಯಾ ಹೇಳಿಕೊಳ್ಳುತ್ತಿರುವ ಸಮಯದಲ್ಲಿ ಈ ಪರೀಕ್ಷೆ ನಡೆದಿದೆ. ಯಾವುದೇ ಸಕ್ರಿಯ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳು ಇಲ್ಲದ ಈ ಕಾಲಘಟ್ಟದಲ್ಲಿ, ರಷ್ಯಾ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಕಾಯ್ದುಕೊಳ್ಳಲು ಕಾರ್ಯ ನಿರತವಾಗಿದೆ ಎಂಬ ಸಂದೇಶ ರವಾನಿಸಿದೆ. ಅಮೆರಿಕದ ಕ್ಷಿಪಣಿ ರಕ್ಷಣಾ ಕವಚಗಳ ಬಗ್ಗೆ ರಷ್ಯಾದ ಹಳೆಯ ಆತಂಕಕ್ಕೆ ಸಾರ್ಮತ್ ಒಂದು ಪ್ರಬಲ ಉತ್ತರ ಎನ್ನಲಾಗಿದೆ.



ನ್ಯಾಟೋ ಪ್ರತಿಕ್ರಿಯೆ

ನ್ಯಾಟೋ ಈ ಪರೀಕ್ಷೆಯನ್ನು ಜವಾಬ್ದಾರಿಯಿಲ್ಲದ ಪ್ರಚೋದನೆ ಎಂದು ಕರೆದಿದೆ. ರಷ್ಯಾ ತನ್ನ ಅಣ್ವಸ್ತ್ರಗಳನ್ನು ಪ್ರದರ್ಶಿಸುವ ಮೂಲಕ ಅಂತರಾಷ್ಟ್ರೀಯ ಭದ್ರತೆಯನ್ನು ಅಪಾಯಕ್ಕೆ ತಳ್ಳುತ್ತಿದೆ ಮತ್ತು ಇದು ಬೆದರಿಸುವ ತಂತ್ರ, ಎಂದು ನ್ಯಾಟೋ ಅಧಿಕಾರಿಗಳು ಟೀಕಿಸಿದ್ದಾರೆ.

ಸಾರ್ಮತ್ ಎಂಬ ರಾಕ್ಷಸ ಕ್ಷಿಪಣಿ!

ಆರ್‌ಎಸ್-28 ಸಾರ್ಮತ್ ಮುಂದಿನ ಪೀಳಿಗೆಯ ಭಾರೀ ಐಎಸ್‌ಬಿಎಂ ಆಗಿದ್ದು, ವೋಯೆವೊಡಾ ಕ್ಷಿಪಣಿಯನ್ನು ಬದಲಿಸಲಿದೆ. ಇದು 35,000 ಕಿ.ಮೀ ಗಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದೆ ಮತ್ತು ಏಕಕಾಲಕ್ಕೆ ಸುಮಾರು 10 ಟನ್‌ಗಳಷ್ಟು ಭಾರವನ್ನು ಹೊತ್ತೊಯ್ಯಬಲ್ಲದು. ಇದರಲ್ಲಿ 10ರಿಂದ 15ರವರೆಗೆ ಭಾರೀ ಅಣ್ವಸ್ತ್ರಗಳನ್ನು ಅಥವಾ ಹೈಪರ್‌ಸಾನಿಕ್ ಗ್ಲೈಡ್ ವಾಹನಗಳನ್ನು ಅಳವಡಿಸಬಹುದು. ಇದು ಉಪ-ಕಕ್ಷೆಯ ಹಾರಾಟದ ಮೂಲಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ವಂಚಿಸುವ ಸಾಮರ್ಥ್ಯ ಹೊಂದಿದೆ. ಇದು ಶಬ್ದದ ವೇಗಕ್ಕಿಂತ ಸುಮಾರು 20 ಪಟ್ಟು ಹೆಚ್ಚು ವೇಗದಲ್ಲಿ ಚಲಿಸಬಲ್ಲದು (ಗಂಟೆಗೆ 25,000 ಕಿ.ಮೀ). ಉಡಾವಣಾ ಸಮಯದಲ್ಲಿ ಈ ಕ್ಷಿಪಣಿಯ ಒಟ್ಟು ತೂಕ ಸುಮಾರು 208 ಮೆಟ್ರಿಕ್ ಟನ್‌ಗಳು!

ಯುರೋಪಿಯನ್ ಒಕ್ಕೂಟಕ್ಕೆ ಆತಂಕ

ಯುರೋಪಿಯನ್ ರಾಷ್ಟ್ರಗಳು, ವಿಶೇಷವಾಗಿ ಪೋಲೆಂಡ್ ಮತ್ತು ಬಾಲ್ಟಿಕ್ ದೇಶಗಳು, ಇದನ್ನು ತಮ್ಮ ಭದ್ರತೆಗೆ ನೇರ ಬೆದರಿಕೆ ಎಂದು ಪರಿಗಣಿಸಿವೆ. ರಷ್ಯಾ ಜಾಗತಿಕ ಅಣ್ವಸ್ತ್ರ ಒಪ್ಪಂದಗಳಿಂದ ಹೊರಬರುತ್ತಿರುವುದು ಇಡೀ ಯುರೋಪಿನ ಸ್ಥಿರತೆಗೆ ಧಕ್ಕೆ ತರುತ್ತದೆ ಎಂದು ಯುರೋಪಿಯನ್ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ. ಇನ್ನು ಅಮೆರಿಕದ ರಕ್ಷಣಾ ಇಲಾಖೆ (ಪೆಂಟಗನ್) ಈ ಪರೀಕ್ಷೆ ಹಳೆಯ ಅಣ್ವಸ್ತ್ರಗಳನ್ನು ಆಧುನೀಕರಿಸುವ ರಷ್ಯಾದ ದೀರ್ಘಕಾಲದ ಯೋಜನೆಯ ಭಾಗವಾಗಿದ್ದರೂ, ಪ್ರಸ್ತುತ ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಇದು ಅಗತ್ಯವಿಲ್ಲದ ಉದ್ವಿಗ್ನತೆಯನ್ನು ಸೃಷ್ಟಿಸುತ್ತದೆ ಎಂದು ಹೇಳಿದೆ. 2000ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಪುಟಿನ್ ರಷ್ಯಾದ ಅಣ್ವಸ್ತ್ರಗಳ ಆಧುನೀಕರಣಕ್ಕೆ ಆದ್ಯತೆ ನೀಡಿದ್ದಾರೆ.

ಕೇರಳ ನಾಯಕರೊಂದಿಗೆ ಚರ್ಚಿಸಿದ ಕಾಂಗ್ರೆಸ್ ಹೈಕಮಾಂಡ್

ಇಂದು ಕೇರಳ ಸಿಎಂ ಘೋಷಣೆ!

ತಿರುವನಂತಪುರಂ: ದಿಲ್ಲಿಯಲ್ಲಿ ಪಕ್ಷದ ಹೈಕಮಾಂಡ್ ಜತೆಗಿನ ಅಂತಿಮ ಸುತ್ತಿನ ಸಮಾಲೋಚನೆಯ ನಂತರ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇಂದು ಕೇರಳದ ಮುಂದಿನ ಮುಖ್ಯಮಂತ್ರಿಯನ್ನು ಘೋಷಿಸಲಿದೆ.

ಅಭ್ಯರ್ಥಿಯ ಆಯ್ಕೆಯ ಕುರಿತಾದ ಚರ್ಚೆಗಳು ಪೂರ್ಣಗೊಂಡಿವೆ, ಎಂದು ಹಿರಿಯ ನಾಯಕ ಜೈರಾಮ್ ರಮೇಶ್ ಖಚಿತಪಡಿಸಿದ್ದಾರೆ. 140 ಸದಸ್ಯ ಬಲದ ವಿಧಾನಸಭೆಯಲ್ಲಿ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಬಹುಮತ ಪಡೆದ 10 ದಿನಗಳ ನಂತರ ಈ ನಿರ್ಧಾರ ಹೊರ ಬಿದ್ದಿದೆ. ಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ವಿ.ಡಿ. ಸತೀಶನ್, ಕೆ.ಸಿ. ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ಹೆಸರಿದೆ. ವೇಣುಗೋಪಾಲ್ ಅವರಿಗೆ ಬಹುಪಾಲು ಶಾಸಕರ ಬೆಂಬಲವಿದ್ದರೆ, ಸತೀಶನ್ ಅವರಿಗೆ ಪಕ್ಷದ ಕಾರ್ಯಕರ್ತರು ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಬೆಂಬಲ ನೀಡಿದೆ ಎಂದು ವರದಿಯಾಗಿದೆ.

ಸೋನಿಯಾ ಗಾಂಧಿಯವರ ವೈದ್ಯಕೀಯ ತಪಾಸಣೆಯಿಂದಾಗಿ ಘೋಷಣೆ ವಿಳಂಬವಾಗಿದೆ, ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸನ್ನಿ ಜೋಸೆಫ್ ತಿಳಿಸಿದ್ದಾರೆ. ಈ ಮಧ್ಯೆ, ಪ್ರಮುಖ ನಾಯಕರ ಬೆಂಬಲಿಗರು ಅವರ ನಿವಾಸಗಳ ಮುಂದೆ ಜಮಾಯಿಸಿದ್ದಾರೆ. ನಾಯಕತ್ವ ಆಯ್ಕೆಯ ವಿಳಂಬ ಕಾರ್ಯಕರ್ತರಲ್ಲಿ ಅಸಮಾಧಾನ ಮೂಡಿಸಿದೆ. ಹೀಗಾಗಿ ಇಂದಿನ ಘೋಷಣೆ ಕುತೂಹಲ ಮೂಡಿಸಿದೆ.

ಈಗಾಗಲೇ ವಯನಾಡಿನಲ್ಲಿ ವೇಣುಗೋಪಾಲ್ ಆಯ್ಕೆಯನ್ನು ವಿರೋಧಿಸಿ ಪೋಸ್ಟರ್‌ಗಳು ಕಾಣಿಸಿಕೊಂಡಿವೆ. ಇಂದಿನ ಅಧಿಕೃತ ಘೋಷಣೆಯೊಂದಿಗೆ ಕಾಂಗ್ರೆಸ್ ಮುಜುಗರದಿಂದ ಬಚಾವಾಗಿ ನೂತನ ಸರ್ಕಾರ ರಚನೆ ಪ್ರಕ್ರಿಯೆಗೆ ಚಾಲನೆ ನೀಡುವ ಲೆಕ್ಕಾಚಾರದಲ್ಲಿದೆ.

ಕಿರುಸುದ್ದಿ

ಪ್ರಧಾನಿ ಹೆಜ್ಜೆ ಗುರುತಿನಲ್ಲಿ ಮುಖ್ಯಮಂತ್ರಿ ಸುವೇಂದು

ಕೋಲ್ಕತ: ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪ್ರಧಾನಿ ನರೇಂದ್ರ ಮೋದಿಯವರ ಹೆಜ್ಜೆ ಗುರುತಿನಲ್ಲಿ ಸಾಗುತ್ತಿದ್ದಾರೆ. ಬುಧವಾರ ವಿಧಾನಸಭೆಗೆ ಪ್ರವೇಶಿಸುವ ಮುನ್ನ ವಿಧಾನಸಭೆಯ ಮೆಟ್ಟಿಲುಗಳಿಗೆ ದಂಡವತ್ ಪ್ರಣಾಮ ಸಲ್ಲಿಸಿದರು. ಹೊಸದಾಗಿ ಆಯ್ಕೆಯಾದ ಬಿಜೆಪಿ ಶಾಸಕರ ಪ್ರಮಾಣ ವಚನ ಸಮಾರಂಭಕ್ಕಾಗಿ ವಿಧಾನಸಭೆಗೆ ಬಂದಿದ್ದ ಅಧಿಕಾರಿ, ಸಭಾಂಗಣಕ್ಕೆ ಪ್ರವೇಶಿಸುವ ಮುನ್ನ ವಿಧಾನಸಭೆಯ ಮೆಟ್ಟಿಲುಗಳಿಗೆ ಗೌರವ ಸಲ್ಲಿಸಿದರು.



ಮೇ 9ರಂದು, ಹೊಸ ಪಶ್ಚಿಮ ಬಂಗಾಳ ಸರ್ಕಾರದ ಪ್ರಮಾಣ ವಚನದ ವೇಳೆ ಪ್ರಧಾನಿ ಮೋದಿಯವರು ಕೋಲ್ಕತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಜನತೆಗೆ ಕೃತಜ್ಞತೆ ಸಲ್ಲಿಸಲು ವೇದಿಕೆಯಲ್ಲಿ ದಂಡವತ್ ಪ್ರಣಾಮ ಮಾಡಿದ್ದರು. ಭವಾನಿಪುರ ಉಳಿಸಿಕೊಂಡ ಸಿಎಂ: ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ್ದ ಭವಾನಿಪುರ ಕ್ಷೇತ್ರವನ್ನು ಉಳಿಸಿಕೊಂಡ ಮುಖ್ಯಮಂತ್ರಿ ಸುವೇಂದು, ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಮುಲಾಯಂ ಪುತ್ರ ಪ್ರತೀಕ್ ಯಾದವ್ ದಿಢೀರ್ ನಿಧನ

ಲಕ್ನೋ: ಸಮಾಜವಾದಿ ಪಕ್ಷದ ಸ್ಥಾಪಕ ದಿವಂಗತ ಮುಲಾಯಂ ಸಿಂಗ್ ಯಾದವ್ ಪುತ್ರ ಪ್ರತೀಕ್ ಯಾದವ್ (38) ಬುಧವಾರ ಲಖನೌನಲ್ಲಿ ನಿಧನರಾದರು. ಕೆಲಕಾಲದಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರೆಂದು ಕುಟುಂಬ ಮೂಲಗಳು ತಿಳಿಸಿವೆ. ಪ್ರತೀಕ್ ಅವರು ಮುಲಾಯಂ ಅವರ ಎರಡನೇ ಪತ್ನಿ ಸಾಧನಾ ಗುಪ್ತಾ ಅವರ ಪುತ್ರರಾಗಿದ್ದರು. ಅವರು ಅಖಿಲೇಶ್ ಯಾದವ್ ಅವರಿಗೆ ಸಂಬಂಧದಲ್ಲಿ ಕಿರಿಯ ಸಹೋದರರಾಗಿದ್ದರು. ಕೆಲವು ವಾರಗಳ ಹಿಂದೆ ಪ್ರತೀಕ್‌ರನ್ನು ಲಖನೌನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ವೇಳೆ ಅಖಿಲೇಶ್ ಕೂಡ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದರು. ಪ್ರತೀಕ್ ಪತ್ನಿ ಅಪರ್ಣಾ ಯಾದವ್ ಭಾರತೀಯ ಜನತಾ ಪಕ್ಷದ ಸಕ್ರಿಯ ನಾಯಕಿಯಾಗಿದ್ದಾರೆ. ಪೋಸ್ಟ್‌ಮಾರ್ಟಂ ವರದಿ ಪ್ರಕಾರ, ಭಾರೀ ಪಲ್ಮನರಿ ಥ್ರೊಂಬೊಎಂಬೊಲಿಸಮ್‌ನಿಂದ ಉಂಟಾದ ಕಾರ್ಡಿಯೊರೆಸ್ಪಿರೇಟರಿ ಕುಸಿತವೇ ಸಾವಿಗೆ ಕಾರಣವಾಗಿದೆ ಎಂದು ವೈದ್ಯಕೀಯ ವರದಿಯಲ್ಲಿ ತಿಳಿಸಲಾಗಿದೆ.

ರಾಜಸ್ಥಾನಕ್ಕೆ ಪ್ರಶ್ನೆ ಪತ್ರಿಕೆ ಕಳುಹಿಸಿದ ಕೇರಳ ವಿದ್ಯಾರ್ಥಿ

ಜೈಪುರ: ಮೇ 3ರಂದು ನಡೆದ ನೀಟ್-ಯುಜಿ 2026 ಪರೀಕ್ಷೆಯ ಪ್ರಶ್ನೆಗಳನ್ನು ಹೋಲುವ ಗೆಸ್ ಪೇಪರ್ ಅನ್ನು ಕೇರಳದಲ್ಲಿ ಎಂಬಿಬಿಎಸ್ ಓದುತ್ತಿರುವ ರಾಜಸ್ಥಾನದ ಸಿಕಾರ್ ಮೂಲದ ವಿದ್ಯಾರ್ಥಿಯೊಬ್ಬ ತನ್ನ ಸ್ನೇಹಿತರು ಮತ್ತು ಹಾಸ್ಟೆಲ್ ಮಾಲೀಕರಿಗೆ ಕಳುಹಿಸಿರುವುದು ತನಿಖೆಯಿಂದ ತಿಳಿದುಬಂದಿದೆ.

ತನಿಖೆಯ ಅಂಶಗಳು: ರಾಜಸ್ಥಾನದ ವಿಶೇಷ ಕಾರ್ಯಾಚರಣೆ ತಂಡ (ಎಸ್‌ಒಜಿ) ಈ ಪತ್ರಿಕೆ, ಗುರುಗ್ರಾಮ ಮತ್ತು ನಾಸಿಕ್ ಮೂಲದಿಂದ ಬಂದಿರಬಹುದು ಎಂದು ಗುರುತಿಸಿದೆ. 45 ರಸಾಯನಶಾಸ್ತ್ರ ಮತ್ತು 90 ಜೀವಶಾಸ್ತ್ರ ಪ್ರಶ್ನೆಗಳನ್ನು ಒಳಗೊಂಡಿದ್ದ ಈ ದಾಖಲೆಯನ್ನು ಪ್ರೈವೇಟ್ ಮಾಫಿಯಾ ಎಂಬ ಸಾಮಾಜಿಕ ಗುಂಪಿನಲ್ಲಿ ಪಾಸ್‌ವರ್ಡ್ ಸಂರಕ್ಷಿತ ಪಿಡಿಎಫ್ ರೂಪದಲ್ಲಿ ಹಂಚಿಕೊಳ್ಳಲಾಗಿತ್ತು. ಸೀಕರ್‌ನ ಹಾಸ್ಟೆಲ್ ಮಾಲೀಕರೊಬ್ಬರು ಈ ಕಡತವನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ, ಪೊಲೀಸರು ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ಮಾಹಿತಿ ನೀಡಿದ್ದಾರೆ.

ಅಧಿಕೃತ ಕ್ರಮಗಳು: ಜೈಪುರ, ಸಿಕಾರ್ ಮತ್ತು ಅಳ್ವಾರ್ ಸೇರಿದಂತೆ ವಿವಿಧೆಡೆ ಸುಮಾರು 150ಕ್ಕೂ ಹೆಚ್ಚು ಅಭ್ಯರ್ಥಿಗಳು ಮತ್ತು ಪೋಷಕರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಮೇ 8ರಂದು ಎಸ್‌ಒಜಿ ತಂಡ, ಮೂಲ ಪ್ರಶ್ನೆಪತ್ರಿಕೆಯೊಂದಿಗೆ ಈ ಗೆಸ್ ಪೇಪರ್ ಅನ್ನು ತಾಳೆ ಮಾಡಿ ನೋಡಿದಾಗ ಪ್ರಶ್ನೆಗಳು ಹೊಂದಾಣಿಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪರೀಕ್ಷೆಯನ್ನು ರದ್ದುಗೊಳಿಸಿದೆ. ಕೇಂದ್ರ ತನಿಖಾ ದಳ(ಸಿಬಿಐ) ಮಂಗಳವಾರ ಸಂಜೆ ಪ್ರಕರಣವನ್ನು ಕೈಗೆತ್ತಿಕೊಂಡಿದ್ದು, 2 ಡಜನ್ ಶಂಕಿತರನ್ನು, ಸಾಕ್ಷ್ಯಗಳನ್ನು ವಶಕ್ಕೆ ಪಡೆದಿದೆ. ರಾಜಸ್ಥಾನದಲ್ಲಿ ಈವರೆಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ.

ಸನಾತನ ನಿಂದಿಸುವ ಡಿಎಂಕೆ ನಾಯಕ ಅಪ್ರಬುದ್ಧ: ವಿಎಚ್‌ಪಿ

ಹೊಸದಿಲ್ಲಿ: ಅಪ್ರಬುದ್ಧನಂತೆ ಸನಾತನ ಧರ್ಮವನ್ನು ಪದೇ ಪದೇ ನಿಂದಿಸುತ್ತಿರುವ ಡಿಎಂಕೆ ನಾಯಕ ಉದಯನಿಧಿಗೆ, ಇತರ ಮತ-ಧರ್ಮಗಳನ್ನು ಇದೇ ರೀತಿ ನಿರಂತರ ಹೀಯಾಳಿಸುವ, ನಿಂದಿಸುವ ಕೆಚ್ಚೆದೆ, ಉದ್ಧಟತನ ಇದೆಯೇ? ಎಂದು ತೀಕ್ಷ್ಣ ಸವಾಲೆಸೆದಿರುವ ವಿಶ್ವ ಹಿಂದು ಪರಿಷತ್(ವಿಎಚ್‌ಪಿ)ನ ಅಂತಾರಾಷ್ಟ್ರೀಯ ಅಧ್ಯಕ್ಷ, ಹಿರಿಯ ವಕೀಲ ಆಲೋಕ್ ಕುಮಾರ್, ಡಿಎಂಕೆ ನಾಯಕನ ಎಲ್ಲೆ ಮೀರಿದ ದುರಹಂಕಾರವನ್ನು ಅತ್ಯುಗ್ರವಾಗಿ ಖಂಡಿಸಿದ್ದಾರೆ.

ದೇವಸ್ಥಾನಗಳಿಂದ ಲಾಭ ಪಡೆದವರಿಂದಲೇ ಸನಾತನ ಅಳಿಸುವ ಯತ್ನ: ವಿಎಚ್‌ಪಿ

ಭಾರತದ ಮಾತ್ರ ಸಮಾನ ಸನಾತನ ಹಿಂದು ಧರ್ಮ, ಹಿಂದು ನಂಬಿಕೆ-ಶ್ರದ್ಧೆಯನ್ನು ನಿರಂತರ ಅಪಮಾನಿಸುವುದು ಪ್ರಜಾತಾಂತ್ರಿಕ, ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾದುದು. ಉದಯನಿಧಿ ಹೇಳಿಕೆಯನ್ನು ಸದನದ ಕಡತಗಳಿಂದ ಕಿತ್ತು ಹಾಕಬೇಕೆಂದು ಆಲೋಕ್ ಕುಮಾರ್ ತ.ನಾಡಿನ ಹೊಸ ಸರಕಾರವನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ತಮ್ಮ ನಿಲುವು ವ್ಯಕ್ತಪಡಿಸಲಿ: ದುರುದ್ದೇಶಪೂರಿತ ಹಿಂದು ವಿರೋಧಿ ಹೇಳಿಕೆಗಳನ್ನು ಬೆಂಬಲಿಸುವುದೋ ಎಂಬ ಬಗ್ಗೆ ಹೊಸ ಮುಖ್ಯಮಂತ್ರಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಆಲೋಕ್ ಆಗ್ರಹಿಸಿದ್ದಾರೆ.

ಧರ್ಮ ವಿರೋಧಿ ವೈಚಾರಿಕತೆ ಉಳಿದಿಲ್ಲ: ಸನಾತನ ಹಿಂದು ಧರ್ಮ ತಮಿಳುನಾಡು ಸಹಿತ ಸಮಗ್ರ ಭಾರತದ ಸಾಂಸ್ಕೃತಿಕ ಆತ್ಮವಾಗಿದೆ. ಸನಾತನ ಧರ್ಮ ನಾಶಕ್ಕೆ ಯತ್ನಿಸಿದ ಹಲವು ವೈಚಾರಿಕತೆಗಳು ಅಥವಾ ಸಿದ್ಧಾಂತಗಳು ಸ್ವಯಂ ನಾಶವಾಗಿರುವುದಕ್ಕೆ ಚರಿತ್ರೆಯೇ ಸಾಕ್ಷಿ.

ಏನಾಸಂ ಕರಡು: ಅಸ್ಸಾಂ ಸಂಪುಟ ಅನುಮೋದನೆ

ಗುವಾಹಟಿ: ಅಸ್ಸಾಂನ ನೂತನ ಸರ್ಕಾರದ ಮೊದಲ ಸಚಿವ ಸಂಪುಟ ಸಭೆ ಬುಧವಾರ ನಡೆದಿದ್ದು, ಏಕರೂಪ ನಾಗರಿಕ ಸಂಹಿತೆ (ಏನಾಸಂ) ಕರಡು ಮತ್ತು ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷ ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆಗೆ ಅನುಮೋದನೆ ನೀಡಿದೆ.

ಪ್ರಮುಖ ನಿರ್ಧಾರಗಳು: ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮಾತನಾಡಿ, ಏನಾಸಂ ಮಸೂದೆಯನ್ನು ಮೇ 26 ರಂದು ವಿಧಾನಸಭೆಯಲ್ಲಿ ಮಂಡಿಸಲಾಗುವುದು. ಈ ಕಾಯ್ದೆ ಬಹುಪತ್ನಿತ್ವವನ್ನು ನಿಷೇಧಿಸುತ್ತದೆ ಮತ್ತು ವಿವಾಹ ಹಾಗೂ ವಿಚ್ಛೇದನಗಳ ನೋಂದಣಿಯನ್ನು ಕಡ್ಡಾಯಗೊಳಿಸುತ್ತದೆ. ಆದರೆ, ಬುಡಕಟ್ಟು ಜನಸಂಗತಿ ಮತ್ತು ಧಾರ್ಮಿಕ ವಿಧಿವಿಧಾನಗಳನ್ನು ಈ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಉದ್ಯೋಗ ಸೃಷ್ಟಿಯ ವಿಧಾನಗಳನ್ನು ರೂಪಿಸಲು ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯಪಡೆಯೊಂದನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಆಡಳಿತ ಮತ್ತು ಮಿತವ್ಯಯ ಕ್ರಮ: ಬಿಜೆಪಿಯ ಸಂಕಲ್ಪ ಪತ್ರವನ್ನು ಸರ್ಕಾರದ ಅಧಿಕೃತ ನೀತಿ ನಿರೂಪಣೆಯ ಆಧಾರವಾಗಿ ಸಂಪುಟ ಅಂಗೀಕರಿಸಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಿತವ್ಯಯ ಕ್ರಮಗಳನ್ನು ಘೋಷಿಸಲಾಗಿದ್ದು, ಹೊಸ ಕಾರುಗಳ ಖರೀದಿ ಮತ್ತು ಸಚಿವರ ವಿದೇಶಿ ಪ್ರವಾಸಗಳನ್ನು ನಿರ್ಬಂಧಿಸಲಾಗಿದೆ.

ಏ.9ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟ 126 ಸ್ಥಾನಗಳ ಪೈಕಿ 102 ಸ್ಥಾನಗಳನ್ನು ಗೆದ್ದು ಸತತ ಮೂರನೇ ಬಾರಿಗೆ ಅಧಿಕಾರ ಹಿಡಿದ ನಂತರ ಈ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.


ಹಿಂದಿ ರೂಸಿ ಭಾಯಿ ಭಾಯಿ: ಲಾವ್ರೊವ್

ಹೊಸದಿಲ್ಲಿ: ಭಾರತ, ರಷ್ಯಾ ನಡುವಿನ ಸಂಬಂಧ ಕೇವಲ ರಾಜಕೀಯ ಘೋಷಣೆಯಲ್ಲ, ಅದು ರಷ್ಯಾದ ಸಂಸ್ಕೃತಿಯ ಅವಿಭಾಜ್ಯ ಅಂಗ, ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಹೇಳಿದ್ದಾರೆ. ಲಾವ್ರೊವ್ ಈ ವಾರ ದಿಲ್ಲಿಗೆ ಭೇಟಿ ನೀಡಲಿದ್ದು, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಜತೆ ಮಾತುಕತೆ ನಡೆಸಲಿದ್ದಾರೆ. ಇದರೊಂದಿಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲೂ ಅವರು ಭಾಗವಹಿಸಲಿದ್ದಾರೆ. ರಷ್ಯಾ ಟುಡೇ-ಇಂಡಿಯಾಗೆ ನೀಡಿದ ಸಂದರ್ಶನದಲ್ಲಿ ಲಾವ್ರೊವ್ ಹಿಂದಿ ರೂಸಿ ಭಾಯಿ ಭಾಯಿ (ಭಾರತೀಯರು ಮತ್ತು ರಷ್ಯನ್ನರು ಸಹೋದರರು) ಎಂಬ ನುಡಿಗಟ್ಟು ಸಾಂಸ್ಕೃತಿಕ ಅಂಶವಾಗಿ ಮಾರ್ಪಟ್ಟಿದೆ ಎಂದು ವಿವರಿಸಿದ್ದಾರೆ. ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಬಾಂಧವ್ಯ ಅತ್ಯಂತ ಸಮೃದ್ಧವಾಗಿದ್ದು, ಎರಡೂ ದೇಶಗಳ ಹಾದಿಗಳು ಬೇರೆಯಾಗಲು ಸಾಧ್ಯವಿಲ್ಲ ಎಂದು ಲಾವ್ರೊವ್ ಅಭಿಪ್ರಾಯಪಟ್ಟಿದ್ದಾರೆ. ಈ ಭೇಟಿ, ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ವೃದ್ಧಿಸುವ ಗುರಿ ಹೊಂದಿದೆ.

ಪೋರ್ಚುಗಲ್‌ನಿಂದ ನಾರ್ಕೋ-ಭಯೋತ್ಪಾದಕನ ಹಸ್ತಾಂತರ

ಮೋಸ್ಟ್ ವಾಂಟೆಡ್ ಇಕ್ಬಾಲ್‌ಸಿಂಗ್ ಸೆರೆ

ಹೊಸದಿಲ್ಲಿ: ಪೋರ್ಚುಗಲ್‌ನಿಂದ ಹಸ್ತಾಂತರಿಸಲ್ಪಟ್ಟ ಮೋಸ್ಟ್ ವಾಂಟೆಡ್ ನಾರ್ಕೋ- ಭಯೋತ್ಪಾದಕ ಇಕ್ಬಾಲ್ ಸಿಂಗ್ ಅಲಿಯಾಸ್ ಶೇರಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬುಧವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ.



ಪಂಜಾಬ್‌ನ ಅಮೃತಸರ ಮೂಲದ ಶೇರಾ, 2020ರಲ್ಲಿ ಭಾರತದಿಂದ ಪರಾರಿಯಾಗಿದ್ದ. ಪಾಕಿಸ್ತಾನದಿಂದ ಹೆರಾಯಿನ್ ಸಾಗಿಸುವ ಭಾರತ ಮೂಲದ ನಾರ್ಕೋ-ಭಯೋತ್ಪಾದಕ ಮಾಡ್ಯೂಲ್‌ನ ಪ್ರಮುಖ ಸಂಚುಕೋರ ಮತ್ತು ಹ್ಯಾಂಡ್ಲರ್ ಆಗಿದ್ದ ಎಂದು ಎನ್‌ಐಎ ತಿಳಿಸಿದೆ. ಮಾದಕವಸ್ತುಗಳ ಸಾಗಣೆ ಮತ್ತು ವಿತರಣೆಯನ್ನು ಈತ ಮೇಲ್ವಿಚಾರಣೆ ಮಾಡುತ್ತಿದ್ದ. ಅಲ್ಲದೆ, ಹವಾಲಾ ನೆಟ್‌ವರ್ಕ್‌ಗಳ ಮೂಲಕ ಹಣವನ್ನು ಪಾಕಿಸ್ತಾನ ಮತ್ತು ಕಾಶ್ಮೀರ ಮೂಲದ ಹಿಜ್ಬುಲ್ ಮುಜಾಹಿದ್ದೀನ್ (ಹೆಚ್‌ಎಂ) ಭಯೋತ್ಪಾದಕರಿಗೆ ತಲುಪಿಸಿ ಭಯೋತ್ಪಾದಕ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದ್ದ.

ಪ್ರಕರಣದ ಹಿನ್ನೆಲೆ: ಹಿಜ್ಬುಲ್ ಮುಜಾಹಿದ್ದೀನ್ ಕಾರ್ಯಕರ್ತ, ಮೃತ ಉಗ್ರ ಕಮಾಂಡರ್ ರಿಯಾಜ್ ಅಹ್ಮದ್ ನಾಯ್ಕೂನ ಸಹಚರ ಹಿಲಾಲ್ ಅಹ್ಮದ್ ಶೇರ್ಗೋಜ್ರಿಯನ್ನು ಪಂಜಾಬ್ ಪೊಲೀಸರು ಬಂಧಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿತ್ತು. ಶೇರ್ಗೋಜ್ರಿಯಿಂದ 29 ಲಕ್ಷ ರೂ. ಮತ್ತು ಇತರ ಸದಸ್ಯರಿಂದ 32 ಲಕ್ಷ ರೂ. ಅಕ್ರಮ ಹಣವನ್ನು ವಶಪಡಿಸಲಾಗಿತ್ತು.

ಈ ಜಾಲವನ್ನು ನಾಶ ಮಾಡಲು ಮತ್ತು ಶೇರಾನನ್ನು ಹಸ್ತಾಂತರಿಸಲು ಎನ್‌ಐಎ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡಿತ್ತು. ಶೇರಾ ಭಯೋತ್ಪಾದಕ ಗ್ಯಾಂಗ್ ರಚಿಸಿಕೊಂಡು ಮಾದಕವಸ್ತು ಹಣವನ್ನು ದೇಶವಿರೋಧಿ ಚಟುವಟಿಕೆಗಳಿಗೆ ಬಳಸುತ್ತಿದ್ದ ಎಂದು ಆರೋಪಿಸಲಾಗಿದೆ.

ಕಾನೂನು ಪ್ರಕ್ರಿಯೆಗಳು

ಶೇರಾ ವಿರುದ್ಧ 2020ರ ಅಕ್ಟೋಬರ್‌ನಲ್ಲಿ ಜಾಮೀನು ರಹಿತ ವಾರಂಟ್ ಮತ್ತು 2021ರ ಜೂನ್‌ನಲ್ಲಿ ಇಂಟರ್‌ಪೋಲ್ ನೋಟಿಸ್ ಜಾರಿ ಮಾಡಲಾಗಿತ್ತು. ದಿಲ್ಲಿಗೆ ಬಂದಿಳಿದ ತಕ್ಷಣ ಈತನನ್ನು ವಶಕ್ಕೆ ಪಡೆದ ಎನ್‌ಐಎ ತಂಡ, ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ಹಾಜರುಪಡಿಸಿತು. ನ್ಯಾಯಾಧೀಶ ಪಿತಾಂಬರ್ ದತ್, ಆರೋಪಿಯನ್ನು ಪಂಜಾಬ್‌ನ ಮೊಹಾಲಿಗೆ ಕರೆದೊಯ್ಯಲು ಎನ್‌ಐಎಗೆ ಎರಡು ದಿನಗಳ ಟ್ರಾನ್ಸಿಟ್ ರಿಮಾಂಡ್ ಮಂಜೂರು ಮಾಡಿದ್ದಾರೆ.

ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ರೊಂದಿಗೆ ಮಹತ್ವದ ಮಾತುಕತೆ

ಚೀನಾಗೆ ಬಂದಿಳಿದ ಅಧ್ಯಕ್ಷ ಟ್ರಂಪ್

ಬೀಜಿಂಗ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಚೀನಾಕ್ಕೆ ಆಗಮಿಸಿದ್ದು, 3 ದಿನಗಳ ಕಾಲ ಅಲ್ಲಿಯೇ ಉಳಿದು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರೊಂದಿಗೆ ವ್ಯಾಪಾರ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಉನ್ನತ ಮಟ್ಟದ ಚರ್ಚೆ ನಡೆಸಲಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಚೀನಾದ ಉಪಾಧ್ಯಕ್ಷ ಹಾನ್ ಝೆಂಗ್, ಅಧ್ಯಕ್ಷ ಟ್ರಂಪ್‌ರನ್ನು ಸ್ವಾಗತಿಸಿದರು. ಇಂದು ಇಬ್ಬರು ನಾಯಕರ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯಲಿದ್ದು, ಶುಕ್ರವಾರ ಮಧ್ಯಾಹ್ನ ಔಪಚಾರಿಕ ಭೋಜನಕೂಟದ ಜೊತೆಗೆ ಚರ್ಚೆ ಮುಂದುವರಿಯಲಿದೆ. ಇದು 2025ರ ಅಕ್ಟೋಬರ್ ನಂತರ ಈ ಇಬ್ಬರು ನಾಯಕರ ನಡುವೆ ನಡೆಯುತ್ತಿರುವ ಏಳನೇ ಮುಖಾಮುಖಿ ಭೇಟಿಯಾಗಿದೆ.

ಆರ್ಥಿಕ ಗುರಿಗಳು: ಟೆಸ್ಲಾ ಮುಖ್ಯಸ್ಥ ಎಲೋನ್ ಮಸ್ಕ್ ಮತ್ತು ಆಪಲ್ ಸಿಇಒ ಟಿಮ್ ಕುಕ್ ಸೇರಿದಂತೆ ಪ್ರಮುಖ ಉದ್ಯಮಿಗಳ ತಂಡ ಟ್ರಂಪ್ ಜೊತೆಗಿದೆ. 525 ಬಿಲಿಯನ್ ಡಾಲರ್ ರಫ್ತಿನ ಮೇಲೆ ಪರಿಣಾಮ ಬೀರಿದ ಸುಂಕದ ವಿವಾದ ಬಗೆಹರಿಸಲು ಮತ್ತು ಅಮೆರಿಕದ ಆಹಾರ ಹಾಗೂ ವಿಮಾನಗಳ ಮಾರಾಟಕ್ಕೆ ಸಂಬಂಧಿಸಿದಂತೆ ಹೊಸ ಒಪ್ಪಂದಗಳಿಗೆ ಸಹಿ ಹಾಕುವ ಗಕ್ಷಿರಿ ಟ್ರಂಪ್‌ರದ್ದಾಗಿದೆ. ಅಲ್ಲದೆ, ಉಭಯ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಬೋರ್ಡ್ ಆಫ್ ಟ್ರೇಡ್ ಸ್ಥಾಪಿಸುವ ಯೋಜನೆಯೂ ಇದೆ.



ಪ್ರಾದೇಶಿಕ ಸಮಸ್ಯೆಗಳು: ಇರಾನ್ ಯುದ್ಧ, ಪಶ್ಚಿಮ ಏಷ್ಯಾದ ಭದ್ರತೆ ಮತ್ತು ಹಾರ್ಮುಜ್ ಜಲಸಂಧಿಯ ದಿಗ್ಬಂಧನದ ಕುರಿತು ಈ ಶೃಂಗಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿದೆ. ಚೀನಾ ಇರಾನ್ ತೈಲದ ಅತಿದೊಡ್ಡ ಆಮದುದಾರ ರಾಷ್ಟ್ರವಾಗಿದ್ದು, ಜಲಸಂಧಿಯನ್ನು ಆದಷ್ಟು ಬೇಗ ಪುನಃ ತೆರೆಯುವಂತೆ ಇರಾನ್‌ಗೆ ಕರೆ ನೀಡಿದೆ. ಇದರೊಂದಿಗೆ ತೈವಾನ್ ಸಮಸ್ಯೆ, ಅಮೆರಿಕದ ಶಸ್ತ್ರಾಸ್ತ್ರ ಮಾರಾಟ, ಕೃತಕ ಬುದ್ಧಿಮತ್ತೆ(ಎಐ) ಮತ್ತು ಪೂರೈಕೆ ಸರಪಳಿಗಳ ಬಗ್ಗೆಯೂ ಚರ್ಚೆಗಳು ನಡೆಯಲಿವೆ. ಟ್ರಂಪ್ ಒಂಬತ್ತು ವರ್ಷಗಳ ನಂತರ ಚೀನಾಕ್ಕೆ ಭೇಟಿ ನೀಡುತ್ತಿದ್ದಾರೆ. ಇದೇ ವರ್ಷದ ಕೊನೆಯಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಅಮೆರಿಕಕ್ಕೆ ಭೇಟಿ ನೀಡುವ ಯೋಜನೆಯೂ ಇದೆ.

ಕಿರುಸುದ್ದಿ

ಜೈನ ಮಂದಿರದಲ್ಲಿ 4.50 ಲಕ್ಷ ಮೌಲ್ಯದ ವಸ್ತುಗಳ ಕಳ್ಳತನ

ಹುಬ್ಬಳ್ಳಿ: ನಗರದ ಹೊಸೂರು ಕ್ರಾಸ್ ಬಳಿಯ ಜೈನ ಮಂದಿರದಲ್ಲಿ ಮಂಗಳವಾರ ರಾತ್ರಿ ಕಳ್ಳರು ಮೂರ್ತಿ, ನಗದು ಸೇರಿದಂತೆ 4.50 ಲಕ್ಷ ಮೌಲ್ಯದ ವಸ್ತುಗಳನ್ನು ಕಳವು ಮಾಡಿದ ಪ್ರಕರಣ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮಂದಿರಲ್ಲಿದ್ದ ಮೂರ್ತಿಗಳ ಮೇಲಿದ್ದ ಕಿರೀಟ, ಎರಡು ಚಕ್ರ, ಆರತಿ ತಟ್ಟೆ, ಹುಂಡಿಯಲ್ಲಿದ್ದ ಹಣ ದೋಚಲಾಗಿದೆ. ಕಳ್ಳರ ಚಲನವಲನಗಳು ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಸ್ಥಳಕ್ಕೆ ವಿದ್ಯಾನಗರ ಠಾಣೆ ಪೊಲೀಸರು, ಬೆರಳಚ್ಚು ತಜ್ಞರು ಹಾಗೂ ಶ್ವಾನ ದಳದಿಂದ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದ್ದಾರೆ. ಉತ್ತರ ವಿಭಾಗದ ಎಸಿಪಿ ಶಿವಾನಂದ ಚಲವಾದಿ, ಜೈನ ಸಮುದಾಯದವರಿಂದ ಘಟನೆ ಕುರಿತು ಮಾಹಿತಿ ಪಡೆದರು. ಬೈಕ್ ಕಳವು; ಆರೋಪಿ ಬಂಧನ: ಬೈಕ್‌ಗಳ ಸರಣಿ ಕಳವು ಪ್ರಕರಣವನ್ನು ಭೇದಿಸಿರುವ ವಿದ್ಯಾನಗರ ಠಾಣೆ ಪೊಲೀಸರು, ಆರೋಪಿ, ಬೈರಿದೇವರಕೊಪ್ಪದ ನಿವಾಸಿ ಪ್ರಕಾಶ ಪರಸನ್ನವರ ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ 9 ಲಕ್ಷ ಮೌಲ್ಯದ 7 ಯಮಹಾ ಆರ್‌ಎಕ್ಸ್100 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಕೇಶ್ವಾಪುರ, ನವನಗರ ಸೇರಿ ಹಲವೆಡೆ ಕಳವು ಮಾಡಿದ್ದ. ಅಲ್ಲದೆ, ದಾಂಡೇಲಿಯಲ್ಲಿಯೂ ಬೈಕ್ ಕಳವು ಮಾಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನೀಟ್ ಪರೀಕ್ಷೆ ಅಕ್ರಮ: ಕೇಂದ್ರದ ವಿರುದ್ಧ ಆಕ್ರೋಶ

ವಿಜಯನಗರ: ಇತ್ತೀಚೆಗೆ ನಡೆದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದನ್ನು ಸ್ಲಂ ಜನಾಂದೋಲನ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎನ್.ವೆಂಕಟೇಶ್ ಖಂಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಹಾರದಲ್ಲಿ 'ಗೆಸ್ ಪೇಪರ್' ಹೆಸರಿನಲ್ಲಿ 410 ಪ್ರಶ್ನೆಗಳಿಗೆ 120 ಉತ್ತರಗಳನ್ನು ಸಿದ್ಧಪಡಿಸಿ, ಪಿಡಿಎಫ್ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ಲಕ್ಷಾಂತರ ರೂಪಾಯಿಗೆ ಪ್ರಶ್ನೆ ಪತ್ರಿಕೆ ಲೀಕ್ ಮಾಡುವ ಮೂಲಕ ದೇಶದ 22,79,000 ವಿದ್ಯಾರ್ಥಿಗಳ ಕನಸನ್ನು ನುಚ್ಚುನೂರು ಮಾಡಲಾಗಿದೆ.



ಕಳೆದ ಎರಡು ವರ್ಷಗಳಿಂದ ಹಗಲಿರುಳು ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳ ಶ್ರಮ ಈ ದಿವ್ಯ ನಿರ್ಲಕ್ಷ್ಯದಿಂದಾಗಿ ವ್ಯರ್ಥವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಪೇಪರ್ ಲೀಕ್ ಮಾಡಿದವರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳದಿರುವುದೇ ಪರೀಕ್ಷಾ ಅಕ್ರಮ ಮರುಕಳಿಸಿದೆ. ಬಡ ಮತ್ತು ಮಧ್ಯಮ ವರ್ಗದ ಡಾಕ್ಟರ್ ಆಗುವ ಕನಸು ಕಂಡ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಆಟವಾಡುತ್ತಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಪ್ರತಿಷ್ಠಿತ ಶಾಲೆಗಳ ಪ್ರವೇಶ ಪರೀಕ್ಷೆ ಮುಂದೂಡಿಕೆ

ಬಳ್ಳಾರಿ: ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳ 6ನೇ ತರಗತಿ ಪ್ರವೇಶಕ್ಕಾಗಿ ನಡೆಯಬೇಕಿದ್ದ ಅರ್ಹತಾ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಈ ಮೊದಲು ಮೇ 12ರಂದು ನಿಗದಿಯಾಗಿದ್ದ ಪ್ರವೇಶ ಪರೀಕ್ಷೆಯನ್ನು ಈಗ ಮೇ 16ರಂದು ನಡೆಸಲು ತೀರ್ಮಾನಿಸಲಾಗಿದೆ. ಮೇ 16ರಂದು ಬೆಳಿಗ್ಗೆ 11 ರಿಂದ ಮ.1 ರ ವರೆಗೆ ನಗರದ ಹೆಡ್ ಪೋಸ್ಟ್ ಆಫೀಸ್ ಹತ್ತಿರದ ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜಿನಲ್ಲಿ ನಡೆಯಲಿದೆ. ನಗರದ ಅಲ್ಲೀಪುರದ ವಿಶ್ವೇಶ್ವರಯ್ಯ ಪ್ರೌಢ ಶಾಲೆ(ಬೆಸ್ಟ್ ಸ್ಕೂಲ್), ವಿದ್ಯಾನಗರದ ನಂದ ವಸತಿ ಶಾಲೆ, ಬೆಳಗಲ್ ಕ್ರಾಸ್‌ನ ಶ್ರೀನಂದಿ ಪ್ರೌಢಶಾಲೆ (ಸಿ.ಬಿ.ಎಸ್.ಇ) (ವಸತಿ ರಹಿತ), ಸಿರುಗುಪ್ಪದ ವಿಜಯಮೇರಿ ಪ್ರಾಥಮಿಕ ಶಾಲೆ (ವಸತಿ ಸಹಿತ), ದಮ್ಮೂರಿನ ಬೃಂದಾ ಇಂಟರ್ ನ್ಯಾಷನಲ್ ಸ್ಕೂಲ್(ವಸತಿ ಸಹಿತ) ಶಾಲೆಗಳಿಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	3011	5819
ಉದ್ದಿನಕಾಳು	4001	6510
ಒಣ ಮೆಣಸಿನಕಾಯಿ	6401	57299
ಹೆಸರುಕಾಳು	2519	7510
ನೆಲಗಡಲೆ (ಶೇಂಗಾ)	2569	2669
ಜೋಳ	1756	4136
ಮೆಕ್ಕೆಜೋಳ	1556	1951
ಮಡಿಕೆ (ಮಟಕಿ)	7259	13033
ಈರುಳ್ಳಿ	500	1800
ಆಲೂಗಡ್ಡೆ	1200	1900
ಕುಸುಬೆ	5302	5559
ಸೋಯಾಬಿನ್	5800	7280
ಗೋಧಿ	1810	4656

ಬೇಸಿಗೆ: ಗಗನಕ್ಕೇರಿದ ಎಳನೀರಿನ ದರ

ಹುಸೇನಸಾಬ ಕಟಗಿ

ದಿಗಂತ ವಿಶೇಷ

ಹನುಮಸಾಗರ: ಪಟ್ಟಣದಲ್ಲಿ ಬೇಸಿಗೆಯ ಉರಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆ ಜನರು ದೇಹದ ದಾಹ ತಣಿಸಿಕೊಳ್ಳಲು ಮತ್ತು ಆರೋಗ್ಯ ಕಾಪಾಡಿಕೊಳ್ಳಲು ಎಳೆನೀರಿನತ್ತ ಮುಖ ಮಾಡುತ್ತಿದ್ದಾರೆ.

ಕೆಲವು ತಿಂಗಳ ಹಿಂದೆ 50ಕ್ಕೆ ಸಿಗುತ್ತಿದ್ದ ಎಳನೀರು ಈಗ 60 ರೂ. ವರೆಗೆ ಮಾರಾಟವಾಗುತ್ತಿದೆ. ಹಳ್ಳಿಯಲ್ಲಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಪ್ರದೇಶಗಳಲ್ಲಿ 80ಕ್ಕೂ ಹೆಚ್ಚಿನ ದರ ಕೇಳಲಾಗುತ್ತಿದ್ದು, ಬಿಸಿಲಿನಿಂದ ಬಳಲುತ್ತಿರುವ ಜನರು ಎಳೆನೀರು ಖರೀದಿಸಲು ಹಿಂದೇಟು ಹಾಕುವಂತಾಗಿದೆ.

ಕಳೆದ ವರ್ಷ ಸಮರ್ಪಕ ಮಳೆಯಾಗದ ಪರಿಣಾಮ ತೆಂಗಿನ ಬೆಳೆ ಕುಂಠಿತಗೊಂಡಿದೆ. ಇದರಿಂದ ಮಾರುಕಟ್ಟೆಗೆ ಬರುತ್ತಿರುವ ಎಳೆನೀರಿನ ಪ್ರಮಾಣವೂ ಕಡಿಮೆಯಾಗಿದೆ. ಬೇಡಿಕೆ ಹೆಚ್ಚಿದ್ದರೂ ಪೂರೈಕೆ ಕಡಿಮೆಯಾಗಿರುವುದರಿಂದ ಸಗಟು ವ್ಯಾಪಾರಿಗಳು ದರ ಹೆಚ್ಚಿಸಿದ್ದು, ಚಿಲ್ಲರೆ ವ್ಯಾಪಾರಿಗಳೂ ಅನಿವಾರ್ಯವಾಗಿ ಬೆಲೆ ಏರಿಕೆ ಮಾಡಬೇಕಾದ ಪರಿಸ್ಥಿತಿ ಎದುರಿಸಿದ್ದಾರೆ.

ಹಿಂದೆ ರಸ್ತೆ ಬದಿಗಳಲ್ಲಿ ಎಳೆನೀರಿನ ದೊಡ್ಡ ರಾಶಿಗಳು ಕಾಣುತ್ತಿದ್ದರೆ, ಈಗ ಕೆಲವೇ ಪ್ರಮಾಣದಲ್ಲಿ ಮಾತ್ರ ಲಭ್ಯವಾಗುತ್ತಿದೆ. ಮದ್ದೂರು, ಮಂಡ್ಯ, ತಿಪಟೂರು, ತುಮಕೂರು, ದಾವಣಗೆರೆ ಮತ್ತು ಹರಿಹರ ಭಾಗಗಳಿಂದ ಜಿಲ್ಲೆಗೆ ಎಳನೀರು ಸರಬರಾಜಾಗುತ್ತಿತ್ತು. ಆದರೆ ಬರದ ಪರಿಣಾಮ ಆ ಭಾಗಗಳಲ್ಲೂ ತೆಂಗಿನ ಇಳುವರಿ ಕುಸಿದಿರುವುದರಿಂದ ಪೂರೈಕೆ ಕಡಿಮೆಯಾಗಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.



> ಬಿಸಿಲಿನ ತಾಪ ಹೆಚ್ಚಿರುವುದರಿಂದ ಎಳೆನೀರು ಕುಡಿಯಬೇಕೆನಿಸುತ್ತದೆ. ಆದರೆ ದರ ಜಾಸ್ತಿಯಾಗಿರುವುದರಿಂದ ಸಾಮಾನ್ಯ ಜನರು ದಿನನಿತ್ಯ ಖರೀದಿಸಲು ಕಷ್ಟಪಡುತ್ತಿದ್ದಾರೆ.
> ■ ಗಂಗಪ್ಪ ಜಾಲಿಹಾಳ, ಗ್ರಾಹಕ

> ಮಾರುಕಟ್ಟೆಯಲ್ಲಿ ಎಳೆನೀರಿನ ಕೊರತೆ ಹೆಚ್ಚಾಗಿದೆ. ಸಗಟು ವ್ಯಾಪಾರಿಗಳೇ ಹೆಚ್ಚು ದರ ಕೇಳುತ್ತಿರುವುದರಿಂದ ನಾವು ಕೂಡ ದುಬಾರಿ ಬೆಲೆಗೆ ಮಾರಾಟ ಮಾಡಬೇಕಾಗಿದೆ.
> ■ ಫಕ್ರುದ್ದೀನ್ ಬಾಗವಾನ, ಬೀದಿಬದಿಯ ವ್ಯಾಪಾರಿ

ಆರೋಗ್ಯದ ದೃಷ್ಟಿಯಿಂದ ಎಳನೀರು ಬೇಸಿಗೆಯಲ್ಲಿ ಅತ್ಯಂತ ಉಪಯುಕ್ತ ಪಾನೀಯವಾಗಿದೆ. ಇದು ದೇಹಕ್ಕೆ ತಂಪು ನೀಡುವುದರ ಜೊತೆಗೆ ನೀರಿನ ಕೊರತೆ ತಪ್ಪಿಸಿ ಶಕ್ತಿ ಹೆಚ್ಚಿಸುತ್ತದೆ. ಜೀರ್ಣಕ್ರಿಯೆ ಸುಧಾರಿಸುವುದರೊಂದಿಗೆ ಮೂತ್ರಪಿಂಡಗಳ ಆರೋಗ್ಯಕ್ಕೂ ಸಹಕಾರಿ. ಜೊತೆಗೆ ಚರ್ಮದ ಕಾಂತಿ ಹೆಚ್ಚಿಸಿ, ರಕ್ತದೊತ್ತಡ ಸಮತೋಲನದಲ್ಲಿರಲು ಸಹಾಯ ಮಾಡುತ್ತದೆ. ಬಿಸಿಲಿನಿಂದ ಉಂಟಾಗುವ ತಲೆಸುತ್ತು ಮತ್ತು ದೌರ್ಬಲ್ಯವನ್ನು ಕಡಿಮೆ ಮಾಡುವ ಗುಣವೂ ಇದಕ್ಕಿದೆ.

ಗ್ರಾಮದ ವಿದ್ಯಾರ್ಥಿ ಮೈಬುಸಾಬ ಬಾಗವಾನ್ ಮಾತನಾಡಿ, ಬೇಸಿಗೆಯಲ್ಲಿ ಎಳೆನೀರು ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಆದರೆ ಈಗಿನ ಬೆಲೆ ನೋಡಿದರೆ ಪ್ರತಿದಿನ ಕುಡಿಯುವುದು ಎಲ್ಲರಿಗೂ ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

ಭಾರೀ ಗಾಳಿ, ಗುಡುಗು ಸಹಿತ ಮಳೆ

ಕುಂದಗೋಳ: ತಾಲೂಕಿನಲ್ಲಿ ಬುಧವಾರ ಸಂಜೆ ಭಾರೀ ಗಾಳಿ, ಗುಡುಗು ಸಹಿತ ಮಳೆಯಾಗಿದೆ. ಹಲವು ಕಡೆಗಳಲ್ಲಿ ಗಿಡ-ಮರಗಳು ಉರುಳಿದ್ದು, ತಗಡುಗಳು ಹಾರಿವೆ. ಆದರೆ ಯಾವುದೇ ಪ್ರಾಣಹಾನಿ ಅಥವಾ ದೊಡ್ಡ ಅನಾಹುತ ಸಂಭವಿಸಿರುವ ವರದಿಯಾಗಿಲ್ಲ.

ತಾಲೂಕಿನ ಗುಡೇನಕಟ್ಟಿ ಗ್ರಾಮದಲ್ಲಿ ಬೀಡಿ ಅಂಗಡಿಯ ತಗಡುಗಳು ಹಾಗೂ ಅಂಗನವಾಡಿ ಕೇಂದ್ರದ ತಗಡುಗಳು ಗಾಳಿಗೆಹಾರಿವೆ. ಇನ್ನು ಹುಬ್ಬಳ್ಳಿ-ಲಕ್ಷ್ಮೇಶ್ವರ ರಸ್ತೆಯ ಶೇರೇವಾಡ ಗ್ರಾಮದ ಸಮೀಪದ ಟೋಲ್ ಬಳಿ ಅಂಗಡಿಯೊಂದರ ಮೇಲೆ ಮರ ಉರುಳಿ ಬಿದ್ದಿದೆ. ಅಲ್ಲದೆ ಗುಡೇನಕಟ್ಟಿ- ಯರಿನಾರಾಯಣಪುರ ರಸ್ತೆಯ ಮಧ್ಯೆ ಕೂಡ ಮರ ಉರುಳಿದ್ದು, ವಾಹನ ಸಂಚಾರಕ್ಕೆ ಕೆಲಕಾಲ ಅಡಚಣೆ ಉಂಟಾಯಿತು.

ಪಟ್ಟಣದಿಂದ ಹೋಗುವ ಮುಖ್ಯ ಲಕ್ಷ್ಮೇಶ್ವರ ಹೆದ್ದಾರಿಯ ಪೊಲೀಸ್ ಠಾಣೆ ಹತ್ತಿರ ಹಾಗೂ ದೇವನೂರ ಕ್ರಾಸ್ ಬಳಿ ಮರದ ಕೊಂಬೆಗಳು ಉರುಳಿವೆ. ಪ್ರವಾಸಿ ಮಂದಿರದ ಸಮೀಪ ವಿದ್ಯುತ್ ಟಿ.ಸಿ. ಮೇಲೆ ಹಾಗೂ ಹೊಂಡದ ಹತ್ತಿರ ವಿದ್ಯುತ್ ತಂತಿಗಳ ಮೇಲೆ ಮರದ ಕೊಂಬೆಗಳು ಬಿದ್ದ ಪರಿಣಾಮ ಕೆಲ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಜೊತೆಗೆ ಹೊಲಗಳಲ್ಲಿನ ಅನೇಕ ಮರಗಳು ಕೂಡ ನೆಲಕ್ಕುರುಳಿವೆ.

ಈ ಕುರಿತು ತಹಶೀಲ್ದಾರ ರಾಜು ಮಾವರಕರ ಅವರನ್ನು ಸಂಪರ್ಕಿಸಿದಾಗ, ಇದುವರೆಗೆ ಯಾವುದೇ ಅನಾಹುತದ ವರದಿ ಬಂದಿಲ್ಲ, ಸಿಬ್ಬಂದಿಗೆ ಸ್ಥಳ ಪರಿಶೀಲನೆ ನಡೆಸಿ, ಸಮಸ್ಯೆಗಳಿದ್ದರೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.



ನೀಟ್ ಅಕ್ರಮ: ಲಾಡ್ ಆರೋಪ

ಧಾರವಾಡ: ದೇಶದಲ್ಲಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿವಿಧ ಪರೀಕ್ಷೆಗಳ ಅಕ್ರಮ ಸರಣಿ ಮುಂದುವರೆದಿದ್ದು, ಈವರೆಗೆ 89 ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ಆರೋಪಿಸಿದರು.



ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೀಟ್ ಪರೀಕ್ಷಾ ಅಕ್ರಮ ಬೃಹತ್ ಮಾಫಿಯಾವಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ವಿಶ್ವಗುರು ಆಡಳಿತದ ಅಟ್ಟಹಾಸಕ್ಕೆ ಇದು ಸಾಕ್ಷಿಯಾಗಿದೆ ಎಂದು ಕೇಂದ್ರ ಸರ್ಕಾರದ ವೈಫಲ್ಯದ ಕುರಿತು ವ್ಯಂಗ್ಯವಾಡಿದರು.

ಶಿಕ್ಷಣ ಮಾಫಿಯಾ: ದೇಶದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಒಂದು ದೊಡ್ಡ ದಂಧೆಯಾಗಿ ಮಾರ್ಪಟ್ಟಿದೆ. 89 ಪರೀಕ್ಷೆಗಳ ಸೋರಿಕೆ ಅಂದರೆ ವ್ಯವಸ್ಥಿತವಾಗಿ ನಡೆಯುವ ಮಾಫಿಯಾ ಎಂಬುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಬಿಜೆಪಿ ನಾಯಕರು ಚಕಾರ ಎತ್ತಿಲ್ಲ ಎಂದು ಕಿಡಿಕಾರಿದರು.

ಕರ್ನಾಟಕದ ಮಕ್ಕಳಿಗೆ ವಂಚನೆ: ಈ ಅಕ್ರಮಗಳಿಂದ ಕರ್ನಾಟಕದ ಪ್ರತಿಭಾವಂತ ಮಕ್ಕಳಿಗೆ ಅನ್ಯಾಯವಾಗಿದೆ. ವಿಶೇಷವಾಗಿ ಸಿಬಿಎಸ್‌ಇ, ಆಂಗ್ಲ ಮಾಧ್ಯಮದಲ್ಲಿ ಓದಿದ ಶ್ರೀಮಂತ ವರ್ಗದ ಮಕ್ಕಳಿಗೆ ವೈದ್ಯಕೀಯ ಸೀಟು ಲಭಿಸುತ್ತಿವೆ ಎಂದು ದೂರಿದರು.

ಗ್ರಾಮೀಣ ಪ್ರತಿಭೆಗಳ ಕಡೆಗಣನೆ: ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು ಮೆಡಿಕಲ್ ಸೀಟುಗಳಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರದ ತಾರತಮ್ಯ ನೀತಿಯಿಂದ ಬಡ ಮಕ್ಕಳ ವೈದ್ಯಕೀಯ ಕನಸು ನುಚ್ಚುನೂರಾಗಿದೆ ಎಂದರು.

ಇಂತಹ ಪರೀಕ್ಷಾ ಅಕ್ರಮದ ಪ್ರಕರಣಗಳಲ್ಲಿ ಭಾಗಿಯಾದ ಅಥವಾ ಸಾಕ್ಷಿಯಾಗಿದ್ದ ಸುಮಾರು 44 ಜನರ ಹತ್ಯೆಯಾಗಿದೆ ಅಥವಾ ನಿಗೂಢವಾಗಿ ಸಾವನ್ನಪ್ಪಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ರಾಜ್ಯ-ಕೇಂದ್ರ ಬಿಜೆಪಿ ನಾಯಕರು ಮೌನದ ಕುರಿತು ಪ್ರಶ್ನಿಸಿದರು.

ಕೇಂದ್ರದ ನಿರ್ಲಕ್ಷ್ಯದಿಂದ ದೇಶದ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ. ತಕ್ಷಣವೇ ಈ ಪರೀಕ್ಷಾ ಅಕ್ರಮಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ಈ ಕುರಿತು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯದ ಜನರಿಗೆ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಕಲಬುರಗಿ ಯಾವತ್ತೂ ಮರೆಯುವುದಿಲ್ಲ: ತರನ್ನುಮ್

ಕಲಬುರಗಿ: ಕಳೆದ ಮೂರು ವರ್ಷಗಳ ಕಾಲ ಕಲಬುರಗಿಯಲ್ಲಿ ಸಲ್ಲಿಸಿದ ಸೇವೆ ತಮಗೆ ತೃಪ್ತಿ ನೀಡಿದೆ. ನನ್ನನ್ನು ಉತ್ತಮ ಅಧಿಕಾರಿಯನ್ನಾಗಿ ರೂಪಿಸಿದ ಕಲಬುರಗಿ ಜಿಲ್ಲೆಗೆ ಚಿರಋಣಿಯಾಗಿದ್ದೇನೆ ಎಂದು ನಿರ್ಗಮಿತ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಅಭಿಪ್ರಾಯಪಟ್ಟರು.



ಬುಧವಾರ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರಾಗಿ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಕಚೇರಿ ಸಿಬ್ಬಂದಿಗಳಿಂದ ಆಯೋಜಿಸಿದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಬಸವಣ್ಣನವರ ಕಾಯಕ ತತ್ವವನ್ನು ಅಕ್ಷರಸ ಪಾಲಿಸಿಕೊಂಡು ಜಿಲ್ಲೆಯ ಅಭಿವೃದ್ಧಿಗೆ ಪ್ರಮಾಣಿಕ ಪ್ರಯತ್ನ ಮಾಡಿದ್ದೇನೆ. ಇದಕ್ಕಾಗಿ ಸಹಕಾರ ನೀಡಿದ ಜಿಲ್ಲೆಯ ಜನಪ್ರತಿನಿಧಿಗಳು, ಆಡಳಿತ ವರ್ಗ, ಕಚೇರಿ ಸಿಬ್ಬಂದಿ, ಸಂಘ,-ಸಂಸ್ಥೆಗಳು, ಮಾಧ್ಯಮದವರು, ಸಾರ್ವಜನಿಕರಿಗೆ ಧನ್ಯವಾದ ತಿಳಿಸಲು ಇಚ್ಛೆಪಡುತ್ತೇನೆ ಎಂದರು.

ನೂತನ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಮಾತನಾಡಿ, ಜಿಲ್ಲಾಡಳಿತ ಮತ್ತು ಸರ್ಕಾರದ ಮೇಲೆ ಜನರ ಆಶೋತ್ತರಗಳು ಬೆಟ್ಟದಷ್ಟಿವೆ. ಕಳೆದ 3 ವರ್ಷ ಕಾಲ ಬಿ.ಫೌಜಿಯಾ ತರನ್ನುಮ್ ಜಿಲ್ಲಾಧಿಕಾರಿಯಾಗಿ ಜಿಲ್ಲೆಯಲ್ಲಿ ಅನೇಕ ಜನಪರ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅಭಿವೃದ್ಧಿಶೀಲ ಜಿಲ್ಲೆಯನ್ನಾಗಿಸಲು ಬಹಳಷ್ಟು ಪ್ರಯತ್ನಗಳಾಗಿವೆ. ಈ ಅಭಿವೃದ್ಧಿಯ ರಥವನ್ನು ಹೀಗೆ ಮುಂದುವರೆಸಲು ನಿಮ್ಮೆಲ್ಲರ ಸಹಕಾರ ಅಗತ್ಯವಿದೆ ಎಂದು ಅಧಿಕಾರಿ ವರ್ಗದಲ್ಲಿ ಮನವಿ ಮಾಡಿಕೊಂಡರು.

ನಂತರ ನಿರ್ಗಮಿತ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮತ್ತು ಅವರೊಂದಿಗೆ ಆಗಮಿಸಿ ಅವರ ತಂದೆ-ತಾಯಿಯವರಿಗೆ ಕಚೇರಿ ಸಿಬ್ಬಂದಿಗಳಿಂದ ಫಲ ತಾಂಬೂಲ ಮತ್ತು ಸ್ಮರಣಿಕೆ ನೀಡಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಪಾಲಿಕೆಯ ಮಹಾಪೌರ ವರ್ಷಾ ರಾಜೀವ ಜಾನೆ, ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಸಿ.ಇ.ಓ ಭಂವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಧಿಕಾರಿ ಸುಮಿತ್ ಪಾಟೀಲ, ಸಾಹಿತ್ಯ ಆಲದಕಟ್ಟಿ, ಪ್ರಭುರೆಡ್ಡಿ, ಪ್ರಮೀಳಾ ಎಂ.ಕೆ, ಸಮದ್ ಪಟೇಲ್ ಸೇರಿದಂತೆ ಜಿಲ್ಲೆಯ ತಹಶೀಲ್ದಾರರು, ಅನೇಕ ಜಿಲ್ಲಾ ಮಟ್ಟದ ಅಧಿಕಾರಿಗಳು, ಡಿ.ಸಿ ಕಚೇರಿ ಮತ್ತು ಆಪ್ತ ಶಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸ್ವಾಗತಿಸಿದರು. ವಾಣಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಹಲವು ಅಧಿಕಾರಿಗಳು ನಿರ್ಗಮಿತ ಡಿಸಿ ಕುರಿತು ಮಾತನಾಡಿದರು.

ಕ್ರಾಂತಿಯ ಬೀಜ ಬಿತ್ತಿದ್ದು ಬಸವಣ್ಣ: ಗೋನಾಳ



ಕೊಪ್ಪಳ: ನಗರದ ಶ್ರೀಗವಿಸಿದ್ದೇಶ್ವರ ಪದವಿ ಕಾಲೇಜಿನಲ್ಲಿ ವಿಶ್ವಗುರು ಬಸವಣ್ಣನವರ ಜಯಂತೋತ್ಸವ ಜರುಗಿತು.

ಪತ್ರಕರ್ತ ಜಿ.ಎಸ್.ಗೋನಾಳ ಮಾತನಾಡಿ, ಮೂಢ ನಂಬಿಕೆ, ಮಡಿ ಮೈಲಿಗೆ, ಮೇಲುಕೀಲು, ಲಿಂಗಅಸಮಾನತೆ ಜಾತಿ ವ್ಯವಸ್ಥೆ ಸೇರಿ ಸಮಾಜದಲ್ಲಿದ್ದ ಅನಿಷ್ಠ ಪದ್ಧತಿ ಹೋಗಲಾಡಿಸಲು ಅನೇಕ ಸಾಮಾಜಿಕ ಸುಧಾರಣೆ ತಂದವರು ವಿಶ್ವಗುರು ಬಸವಣ್ಣನವರು. ದಯವೇ ಧರ್ಮದ ಮೂಲವಯ್ಯ ಎನ್ನುವ ಮೂಲಕ ಮನುಕುಲಕ್ಕೆ ಮಾನವೀಯತೆಯ ಸಂದೇಶ ಸಾರಿದ್ದು ಕೂಡ ಬಸವಣ್ಣನವರು. ವಚನಗಳ ಮೂಲಕವೇ ಸಮಾಜ ಸುಧಾರಣೆಗೆ ಶ್ರಮಿಸಿದ ಈ ಮಹಾನ್ ವ್ಯಕ್ತಿ ಬಸವಣ್ಣನವರು ಎಂದರು.

ಶಾಂತಿಯ ಬೆಳಕು ಚೆಲ್ಲಿ ಕ್ರಾಂತಿಯ ಬೀಜ ಬಿತ್ತಿದವರು ವಿಶ್ವಗುರು ಬಸವಣ್ಣ. ಪ್ರಸಿದ್ಧ ಸಂತರಾಗಿದ್ದ ಇವರು ರಾಜನೀತಿಜ್ಞರಾಗಿ, ಸಮಾಜ ಸುಧಾರಕರಾಗಿ, ತಮ್ಮ ವಿಚಾರಧಾರೆಗಳ ಮೂಲಕ ಸಮಾಜದಲ್ಲಿನ ಅಂಕಕು ತಿದ್ದಿ ತೀಡಿ ದಾರಿದೀಪ ತೋರಿದರು. ಮನುಕುಲಕ್ಕೆ ಸಮಾನತೆಯ ಪಾಠ ಕಲಿಸಿಕೊಟ್ಟ ಅವರ ವಿಚಾರ ಇಂದಿಗೂ ನಮಗೆಲ್ಲರ ಬದುಕಿಗೆ ದಾರಿದೀಪವಾಗಿವೆ. ಇಂಥ ಶ್ರೇಷ್ಠರ ತತ್ವ ಸಿದ್ಧಾಂತ ಅರ್ಥೈಸಿ ಜೀವನದಲ್ಲಿ ಅಳವಡಿಸಿಕೊಂಡರೆ ಸುಂದರ ಬದುಕು ನಮ್ಮದಾಗುತ್ತದೆ ಎಂದರು.

ಕಾಲೇಜು ಉಪ ಪ್ರಾಚಾರ್ಯ ಡಾ.ಕರಿಬಸವೇಶ್ವರ ಬಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ಪ್ರಾಧ್ಯಾಪಕ ಶರಣಬಸಪ್ಪ ಬಿಳಿಯಲೆ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ದಂಡೋತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಧ್ಯಾಪಕ ಡಾ.ಶಿವಪ್ಪ, ಡಾ.ಸುಮಲತಾ ಬಿ.ಎ., ಅನುಷಾ ಹಿರೇಮಠ ನಿರೂಪಿಸಿದರು. ಪ್ರಾಧ್ಯಾಪಕರು ಹಾಗೂ ವಿದ್ಯಾಥಿಗಳು ಇದ್ದರು.

ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಿರಲಿ: ಡಿಸಿ

ಕೊಪ್ಪಳ: ಜಿಲ್ಲೆಯಲ್ಲಿ ಜೂನ್ 28 ರಿಂದ ಜುಲೈ 1 ರವರೆಗೆ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ ಯಾವುದೇ ಮಗು ಲಸಿಕೆಯಿಂದ ತಪ್ಪಿಸಿಕೊಳ್ಳಬಾರದು. ಇದನ್ನು ಪ್ರತಿಯೊಬ್ಬ ಅಧಿಕಾರಿಯೂ ತನ್ನ ಹೊಣೆಗಾರಿಕೆಯಾಗಿಸಿಕೊಂಡು ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಹೇಳಿದರು.



ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೋಲೀಯೋ ಕಾರ್ಯಕ್ರಮದ ಜಿಲ್ಲಾ ಮಟ್ಟದ ಜಾಗೃತ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜೂನ್ 28 ರಿಂದ ಜುಲೈ 1 ರವರೆಗೆ ನಾಲ್ಕು ದಿನಗಳ ಕಾಲ ನಡೆಯಲಿರುವ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಗೊಳಿಸಬೇಕು. "ಪೋಲಿಯೋ ನಿರ್ಮೂಲನೆ ಸರ್ಕಾರದ ಪ್ರಮುಖ ಗುರಿಯಾಗಿದ್ದು, ಮನೆ ಮನೆಗೆ ತೆರಳಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಒಂದು ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಅವರು ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಲಿಂಗರಾಜು ಟಿ. ಅವರು ಮಾತನಾಡಿ, ಜೂನ್ 28 ರಂಧು ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಿಗದಿತ ಬೂತ್‌ಗಳಲ್ಲಿ ಪೋಲಿಯೋ ಲಸಿಕೆ ಹಾಕಲಾಗುತ್ತದೆ. ಜೂನ್ 29 ರಿಂದ ಜುಲೈ 1 ರವರೆಗೆ ಮನೆ ಮನೆಗೆ ಭೇಟಿ ನೀಡಿ, ಲಸಿಕೆ ನೀಡಲಾಗುತ್ತದೆ. ಇದರೊಂದಿಗೆ ಜೂನ್ 28 ರಿಂದ ಜುಲೈ 1 ರವರೆಗೆ ವಲಸೆ ಕಾರ್ಮಿಕರ ವಸತಿ ಪ್ರದೇಶಗಳು, ಕಾರ್ಖಾನೆ ಕಾರ್ಮಿಕರ ಬಿಡಾರಗಳಿಗೆ ಭೇಟಿ ನೀಡಿ ಲಸಿಕೆ ನೀಡಲಾಗುವುದು ಎಂದು ಮಾಹಿತಿ ನೀಡಿದ ಅವರು, ಕಾರ್ಯಕ್ರಮದ ಯಶಸ್ವಿಗೆ ಆರೋಗ್ಯ ಇಲಾಖೆಯೊಂದಿಗೆ ವಿವಿಧ ಇಲಾಖೆಗಳು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ, ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ರವೀಂದ್ರನಾಥ ಎಂ.ಎಚ್., ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಪ್ರಕಾಶ ಎಚ್., ಮುನಿರಬಾದ್‌ನ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಕೆ.ಹೆಚ್. ತೊಗರಿ, ಜಿಲ್ಲಾ ಆಸ್ಪತ್ರೆಯ ಮಕ್ಕಳ ತಜ್ಞ ವಿಭಾಗದ ಮುಖ್ಯಸ್ಥರು ಡಾ.ಗಿರೀಶ ಸೇರಿದಂತೆ ವಿವಿಧ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಭಾರೀ ಗಾಳಿ, ಮಳೆ: ನಾಲ್ವರಿಗೆ ಗಾಯ

ಹೊನ್ನಾವರ: ತಾಲೂಕಿನ ಕೊಪ್ಪನಮಕ್ಕಿಯಲ್ಲಿ ಬೀಸಿದ ಬಿರುಗಾಳಿ ಮಳೆಗೆ ಮನೆಯ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮ ನಾಲ್ಕು ಜನರಿಗೆ ಗಂಭೀರ ಗಾಯವಾದ ಘಟನೆ ಜರುಗಿದೆ. ಗಾಯಗೊಂಡವರು ಅನುಪಮಾ ಭಾಸ್ಕರ್ ವೈದ್ಯ, ಆಶಾ ಈಶ್ವರ ಮೊಗೇರ್, ಬಾಲಕ ಸಂಜಯ್ ವೆಂಕಟೇಶ ಮೊಗೇರ್, ಬಾಲಕಿ ತನಿಷಾ ಭಾಸ್ಕರ ವೈದ್ಯ ಇವರಿಗೆ ಗಂಭೀರ ಗಾಯವಾಗಿದೆ. ಅವರನ್ನು ಮುರುಡೇಶ್ವರದ ಆರ್‌ಎನ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆಯ ವಿಚಾರ ತಿಳಿಯುತ್ತಿದ್ದಂತೆ ಸಚಿವರ ಮಂಕಾಳು ವೈದ್ಯ ರವರು ವಿದೇಶ ಪ್ರವಾಸದಲ್ಲಿದ್ದು ಸಚಿವರ ಮಗಳು ಬೀನಾ ವೈದ್ಯ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆಗೆ ಸಹಾಯ ಹಸ್ತ ನೀಡಿ ಸ್ಪಂದಿಸಿ ಮಾನವೀಯತೆ ಮೆರೆದಿದ್ದಾಳೆ. ಗಾಯಾಳುಗಳು ಹೊನ್ನಾವರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ದಾಖಲಿಸಿದ್ದು ಆಸ್ಪತ್ರೆಗೆ ತಹಶೀಲ್ದಾರ್ ಪ್ರವೀಣ ಕರಾಂಡೆ, ಕಂದಾಯ ಇಲಾಖಾ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.



ಬಸವ ಭವನ ಅಭಿವೃದ್ಧಿಗೆ 25 ಲಕ್ಷ ಅನುದಾನ ನೀಡಿ

ಕುಷ್ಟಗಿ: ಪಟ್ಟಣದ ಹೃದಯ ಭಾಗದಲ್ಲಿರುವ ಬಸವ ಭವನದ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯಗಳ ವೃದ್ಧಿಗಾಗಿ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಶಾಸಕ ದೊಡ್ಡನಗೌಡ ಎಚ್.ಪಾಟೀಲ ಅವರಿಗೆ ಬಸವಸಮಿತಿಯ ಪದಾಧಿಕಾರಿಗಳು ಸೋಮವಾರ ಮನವಿ ಸಲ್ಲಿಸಿದರು.



ಪಟ್ಟಣದ ಬಿಜೆಪಿ ಕಾರ್ಯಾಲಯ 'ಅಂಜನಾದ್ರಿ'ಯಲ್ಲಿ ನಡೆದ ಸಭೆಯಲ್ಲಿ, ಬಸವ ಭವನದಲ್ಲಿ ಅಗತ್ಯ ಸೌಲಭ್ಯಗಳ ಕೊರತೆ ಇರುವುದನ್ನು ಸಮಿತಿಯವರು ಶಾಸಕರ ಗಮನಕ್ಕೆ ತಂದರು. ಸುಮಾರು ಏಳು ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಬಸವ ಭವನವು ಸಾರ್ವಜನಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸಮಾಜಮುಖಿ ಸಭೆಗಳಿಗೆ ಪ್ರಮುಖ ಕೇಂದ್ರವಾಗಿ ಪರಿಣಮಿಸಿದ್ದರೂ, ಮೂಲಭೂತ ಸೌಕರ್ಯಗಳ ಅಭಾವದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಭವನದ ಪಶ್ಚಿಮ ಭಾಗದ ಕಾಂಪೌಂಡ್ ಗೋಡೆಯನ್ನು ಈ ಹಿಂದೆ ಪುರಸಭೆ ವತಿಯಿಂದ ಚರಂಡಿ ಮತ್ತು ರಸ್ತೆ ಕಾಮಗಾರಿಯ ವೇಳೆ ತೆರವುಗೊಳಿಸಲಾಗಿದ್ದು, ಮೂರು ವರ್ಷ ಕಳೆದರೂ ಪುನರ್ ನಿರ್ಮಾಣವಾಗಿಲ್ಲ. ಇದರಿಂದ ಆವರಣದಲ್ಲಿ ಅಶುಚಿತನ ಹೆಚ್ಚುತ್ತಿದ್ದು, ಪಶ್ಚಿಮ ಭಾಗದಲ್ಲಿ ಹೊಸ ಕಾಂಪೌಂಡ್ ಗೋಡೆ ನಿರ್ಮಿಸುವುದು ಹಾಗೂ ದಕ್ಷಿಣ ಭಾಗದ ಗೋಡೆಯ ಎತ್ತರ ಹೆಚ್ಚಿಸುವ ಅಗತ್ಯವಿದೆ ಎಂದು ಸಮಿತಿಯವರು ಮನವಿ ಮಾಡಿದರು.

ಇದಲ್ಲದೆ, ಬಸವ ಭವನದಲ್ಲಿ ಸುಮಾರು 2,500 ಬಸವಾದಿ ಶರಣರ ಗ್ರಂಥಗಳ ಭಂಡಾರವಿದ್ದು, ಅವುಗಳ ಸಂರಕ್ಷಣೆ ಹಾಗೂ ಸಾರ್ವಜನಿಕರ ಅಧ್ಯಯನಕ್ಕೆ ಅನುಕೂಲವಾಗುವಂತೆ ಪೂರ್ವ ಭಾಗದಲ್ಲಿ ಎರಡು ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಬೇಕೆಂದು ಆಗ್ರಹಿಸಲಾಯಿತು.

ಮಳೆಗಾಲದಲ್ಲಿ ಭವನದ ಸುತ್ತಮುತ್ತ ಕೆಸರು ನಿಂತು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ ನೆಲಹಾಸು ಅಳವಡಿಸುವುದು ಹಾಗೂ ಕಾರ್ಯಕ್ರಮಗಳಿಗೆ ಆಗಮಿಸುವ ಜನರ ಅನುಕೂಲಕ್ಕಾಗಿ ಶೌಚಾಲಯ ನಿರ್ಮಾಣ ಮಾಡುವ ಅಗತ್ಯವಿದೆ ಎಂದು ತಿಳಿಸಲಾಯಿತು. ಜಾಗತಿಕ ಮಹಾ ಸಭಾ ಅಧ್ಯಕ್ಷ ಟಿ ಬಸವರಾಜ ಬಸವ ಸಮಿತಿಯ ಅಧ್ಯಕ್ಷ ಶಿವಸಂಗಪ್ಪ ಬಿಜಕಲ್, ಉಪಾಧ್ಯಕ್ಷ ಎಸ್.ಸಿ. ಪಾಟೀಲ್, ಕಾರ್ಯದರ್ಶಿ ಮಹೇಶ ಹಡಪದ ಸೇರಿದಂತೆ ಜಾಗತಿಕ ಲಿಂಗಾಯತ ಮಹಾಸಭಾ ಪದಾಧಿಕಾರಿಗಳು ಹಾಗೂ ಬಸವಪರ ಸಂಘಟನೆಗಳ ಪ್ರಮುಖರು ಉಪಸ್ಥಿತರಿದ್ದರು.

ಬೆಳೆ ಖರೀದಿಸಲು ದಲ್ಲಾಳಿಗಳ ನಿರಾಕರಣೆ

ಹಳಿಯಾಳ: ತಾಲೂಕಿನಾದ್ಯಂತ ಇರುವ ಮಾವು ಬೆಳೆಗಾರರು ತಮ್ಮ ಬೆಳೆಗಳೊಂದಿಗೆ ಎಪಿಎಮ್‌ಸಿಗೆ ಬಂದಾಗ ಬೆಳೆ ಖರೀದಿಸಲು ದಲ್ಲಾಳಿಗಳು ಹಠಾತ್‌ನೆ ನಿರಾಕರಿಸಿದ ಪ್ರಸಂಗ ಜರುಗಿತು.

ಹಳಿಯಾಳದ ಎಪಿಎಮ್ ಸಿಯು ಬೆಳೆ ಸಂಗ್ರಹ ಮತ್ತು ವಿಲೇವಾರಿಗೆ ಸೂಕ್ತ ವ್ಯವಸ್ಥೆ ಹೊಂದಿರದೇ ಇದ್ದುದಲ್ಲದೇ ಮೇಲಾಧಿಕಾರಿಗಳಿಂದ ಖರೀದಿಗೆ ಯಾವುದೇ ಅನುಮತಿ ಇರದ ಕಾರಣ ಕಾರ್ಯದರ್ಶಿ ಸುಮಿತ್ರಾ ಹಾವನ್ನವರ ಖರೀದಿಗೆ ನಿರಾಕರಿಸಿದ್ದಾರೆ.

ಸ್ಥಳಕ್ಕಾಗಮಿಸಿದ ತಹಶೀಲ್ದಾರ ಫಿರೋಜಷಾ ಸೋಮನಕಟ್ಟಿ ಹಾಗೂ ಸಿಬ್ಬಂದಿ ಮತ್ತು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಹಾರ ಕಂಡುಕೊಳ್ಳಲು ನಿರತರಾಗಿದ್ದರು.

ಮಧ್ಯಾಹ್ನದ ವರೆಗೆ ದಲ್ಲಾಳಿಗಳು ಮಾವಿನ ಬೆಳೆಯನ್ನು 2800-2900 ರೂ. ಪ್ರತಿ ಕ್ವಿಂಟಾಲ್‌ನಂತೆ ಖರೀದಿಸಿದ್ದರು. ಆದರೆ ಮಾವು ಬೆಳೆಯ ಆವಕ ಒಮ್ಮೆಲೆ ಹೆಚ್ಚಾದ ಕಾರಣ ದಲ್ಲಾಳಿಗಳು ಖರೀದಿ ನಿಲ್ಲಿಸಿದರು. ಮತ್ತು ದರಗಳಲ್ಲಿ ವ್ಯತ್ಯಾಸಕ್ಕೆ ಕಾರಣ ಒಡ್ಡಿ ಮಾವು ಖರೀದಿಯ ಕಂಪನಿಯವರು ನಿರಾಕರಿಸುತ್ತಿರುವ ಕಾರಣ ಹೇಳಿದರು.

ಇಂತಹ ಸಮಯದಲ್ಲಿ ಸ್ಥಳದಲ್ಲಿದ್ದ ಪತ್ರಕರ್ತರು ರೈತರ ಗೋಳನ್ನು ನೋಡಲಾಗದೇ ರೈತರ ಪರವಾಗಿ ಅಧಿಕಾರಿಗಳೊಂದಿಗೆ ಚರ್ಚೆ ಮಾಡಲಾರಂಭಿಸಿದರು. ಸಮಯಕ್ಕೆ ಸರಿಯಾಗಿ ರೈತ ಮುಖಂಡರುಗಳಾದ ಕುಮಾರ ಬೊಬಾಟಿ ಮತ್ತು ನಾಗೇಂದ್ರ ಜಿವೋಜಿ ದಲ್ಲಾಳಿಗಳನ್ನು ಮತ್ತು ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತರಾಟೆಗೆ ತೆಗೆದುಕೊಂಡು ಈ ಬಾರಿ ಕ್ಷೇತ್ರದಲ್ಲಿ ಮಾವಿನ ಫಸಲು ಕಡಿಮೆ ಇದ್ದು, ರೈತರು ತುಂಬಾ ನಷ್ಟದಲ್ಲಿದ್ದರು. ಇಂತಹ ವೇಳೆ ದಲ್ಲಾಳಿಗಳು ಇದ್ದ ದರಕ್ಕೂ ಕಲ್ಲು ಹಾಕುತ್ತಿದ್ದು ರೈತರ ಶೋಷಣೆಗೆ ಕಾರಣೀಕರ್ತರಾಗದಂತೆ ಇರಲು ಮನವಿ ಮಾಡಿದರು. ದಲ್ಲಾಳಿಗಳು ಮಾವನ್ನು ಖರೀದಿ ಮಾಡಲು ಒಪ್ಪಿ 2500ರೂ. ಪ್ರತಿ ಕ್ವಿಂಟಾಲೆಗೆ ದರ ನಿಗದಿ ಮಾಡಿ ಅದುವರೆಗೆ ಆಗಮಿಸಿದ್ದ ಎಲ್ಲಾ ವಾಹನಗಳಲ್ಲಿಯ ಸರಕು ತೆಗೆದುಕೊಳ್ಳಲು ಒಪ್ಪಿದರು. ಇವೆಲ್ಲದರ ನಡುವೆ ನೆರೆದಿದ್ದ ರೈತರು ಪತ್ರಕರ್ತರ ನಿಲುವಿಗೆ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದು ಪತ್ರಕರ್ತರ ಸಮಾಜಮುಖಿ ಕಾರ್ಯಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ.



ಎಪಿಎಮ್ ಸಿ ಕಾರ್ಯದರ್ಶಿ ಸುಮಿತ್ರಾ ಹಾವನ್ನವರ ಮೇ13 ರಂದು ಸಂದೇಶ ಹೊರಡಿಸಿದ್ದು ಎಪಿಎಮ್ಸಿಯ ದಲ್ಲಾಳಿಗಳು ಮಾವನ್ನು ಖರೀದಿಸಲು ಕೆಲವು ದಿನಗಳ ವರೆಗೆ ಸ್ಥಗಿತಗೊಳಿಸಿದ ಕಾರಣ ಯಾರೂ ಯಾವುದೇ ಖರೀದಿ ಖಾತ್ರಿ ಇಲ್ಲದೇ ಫಸಲನ್ನು ಕೊಯ್ಲು ಮಾಡದೇ ಕೆಲ ದಿನಗಳವರೆಗೆ ಕಾಯಲು ವಿನಂತಿಸಿದ್ದಾರೆ.

CHANGE OF NAME

I, **SHAHNAZ BANU ABDUL SAMAD** (Old Name) R/o. 949/4 Pairgadde Kumta 581343, have changed my name as **SHAINAZ BANU MOHAMMED SALEEM BANVASIKAR** (New Name) henceforth I will be called and recognized by new name for all future purposes, dated: 13/05/2026.

CHANGE OF NAME

I, **MOHAMMED SHAREEF IMAMSAB KOLIKERI** (Old Name) Resident of 343, Masjid Galli, Kiravatti, Dist: Uttara Kannada 581412, have changed my name as **MOHAMMED SHARIF IMAMSAB KOLIKERI** (New Name) henceforth I will be called and recognized by new name for all future purposes, dated: 13/05/2026.

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಉಪ ವಿಭಾಗ, ವಿಜಯಪುರ

ಸಂಖ್ಯೆ:ಸಅಸಂ/ಹೊಸ ಕಾಮಗಾರಿ/ಟೆಂಡರ್/ಸಿಆರ್–/2026–27

ದಿನಾಂಕ: 08.05.2026

ಟೆಂಡರ್ ಪ್ರಕಟಣೆ

2026–27 ನೇ ಸಾಲಿಗೆ ಹೊಸ ಅರಣ್ಯೀಕರಣ & ಮನಗೂಳಿ ಟ್ರೀ ಪಾರ್ಕನಲ್ಲಿ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಇಂಡೆಂಟ್ ಸಂಖ್ಯೆ: KFD/2026-27/OW/WORK_INDENT38728, 38729, 38730, 38731, 38732, 38733, 38734, 38735, 38736, 38737, 38738, 38739, 38740, 38741, 38742 ರಂತೆ ಮೂರನೇ ಬಾರಿ ಟೆಂಡರನ್ನು ಕರೆಯಲಾಗಿದೆ. ದಿನಾಂಕ: 20.05.2026 ರ ವರೆಗೆ ಟೆಂಡರ್ ಹಾಕುವ ಮತ್ತು ದಿನಾಂಕ: 22.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಲಾಗುವುದು. ಟೆಂಡರ್‌ದಲ್ಲಿ ಭಾಗವಹಿಸಲಿಚ್ಛಿಸುವವರು kppp.karnataka. gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವಿಜಯಪುರ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/92/ಕೆಎಸ್ಎಂಸಿಎ/2026–27

CHANGE OF NAME

I, **KIRAN KULKARNI** (Old Name) Resident of H. No: 48, Shree Venkatadri, Madihal, Dist: Dharwad, Karnataka - 580001, have changed my name as **KIRAN GOPAL KULKARNI** (New Name) henceforth I will be called and recognized by new name for all future purposes, dated: 13/05/2026.

CHANGE OF NAME

I, **VAJRAKUMAR PATIL** (Old Name) Resident of Sadalaga Road, Belagavi - 591216, have changed my name as **VAJRAKUMAR BHAUSAHEB PATIL** (New Name) henceforth I will be called and recognized by new name for all future purposes, dated: 13/05/2026.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com

No.KSAPS/24/2025-PROC　　Dated: 13.05.2026

ಟೆಂಡರ್ (ದ್ವಿ ಲಕೋಟೆ) (ಕಾಲ್–4) ಪ್ರಕಟಣೆ

2026–27ನೇ ಆರ್ಥಿಕ ವರ್ಷಕ್ಕೆ ಭಾಗವಹಿಸುವವರಿಗೆ ತರಬೇತಿ ಸ್ಥಳ, ಆಹಾರ ಮತ್ತು ವಸತಿ ಒದಗಿಸಲು ಅರ್ಹ ಬಿಡ್‌ದಾರರಿಂದ ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) (ಕಾಲ್–4) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21/05/2026. ಸಮಯ ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ : https://kppp.karnataka.gov.in.

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು

DIPR/CP/631/NR/2026-27

ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿಜಯನಗರ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಎಸ್.ಪಿ. ಕಛೇರಿ ಹಿಂಭಾಗ ಅನೆಕ್ಸ್ ಕಟ್ಟಡ ಹೊಸಪೇಟೆ.

ಮೇಲ್: ddwovjnr@gmail.com ದೂ.ಸಂ:083942–25762

ಸಂಖ್ಯೆ:ಜಿಅಂ.ಕ.ವಿ/ಹೊ.ಗು.ಟೆಂ/ಸಿಆರ್–01/2026–27 ದಿನಾಂಕ:07–05–2026

ಇ–ಟೆಂಡರ್ ಪ್ರಕಟಣೆ
E-PROCUREMENT TENDAR NOTIFICATION

ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಕಛೇರಿಯ ಕೆಲಸ ನಿರ್ವಹಣೆಗಾಗಿ 01 ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ ಗ್ರೂಪ್ 'ಡಿ' ಸಿಬ್ಬಂದಿಗಳನ್ನು 2026–27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಥವಾ ಕಾರ್ಯಾದೇಶ ನೀಡಿದ ದಿನಾಂಕದಿಂದ 12 ತಿಂಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ

(ದ್ವಿ ಲಕೋಟೆ ಪದ್ಧತಿ) **Calendar Of Events**

1.ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: **DEDASC/2026-27/SE0099 ದಿನಾಂಕ:07–05–2026.** 2.ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: **ರೂ. 6,03,285/–** 3.ಇ.ಎಂ.ಡಿ ಮೊತ್ತ:: **ರೂ.15,082/–**. 4.e-portalಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಬಹುದಾದ ದಿನಾಂಕ: **ದಿನಾಂಕ:08.05.2026.** 5.ಪ್ರೀ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ: **ದಿನಾಂಕ: 20.05.2026 ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿ ವಿಜಯನಗರ ಜಿಲ್ಲೆ,** 6.e-portalಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ. **ದಿನಾಂಕ: 22.05.2026ಸಂಜೆ 4.00 ಗಂಟೆಗೆ.** 7.e-portalನ ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ: **ದಿನಾಂಕ: 25.05.2026 ಬೆಳಗ್ಗೆ 11.00 ಗಂಟೆಗೆ. ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿ ಹೊಸಪೇಟೆ, ವಿಜಯನಗರ ಜಿಲ್ಲೆ, (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).** 8.e-portalನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ: **ದಿನಾಂಕ: 26.05.2026 ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿಹೊಸಪೇಟೆ, ವಿಜಯನಗರ ಜಿಲ್ಲೆ, (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).** 9.ಹೆಚ್ಚಿನ ಮಾಹಿತಿ ಹಾಗೂ ನಿಗದಿತ ಅರ್ಜಿ ನಮೂನೆಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: **Website: https://KPPP.karnataka.gov.in ಅಥವಾ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳ ಕಛೇರಿ, ಎಸ್.ಪಿ ಕಛೇರಿ ಹಿಂಭಾಗ ಅನೆಕ್ಸ್‌ಕಟ್ಟಡ (ಕೆಳ ಮಹಡಿ) ಹೊಸಪೇಟೆ.ವಿಜಯನಗರಜಿಲ್ಲೆ, 583201. ದೂ:083942–25762**

ಸಹಿ/–ಜಿಲ್ಲಾ ಅಂಗವಿಕಲರ
ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/72

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

CHAMARAJANAGAR INSTITUTE OF MEDICAL SCIENCES
(An Autonomous Institute of Govt of Karnataka)
Sy. No:124, Yadapura Village, Kasaba Hobli,
Chamarajanagar-571313.
E-Mail: directorcimsernagara@gmail.com　Tel: 08226-226701,
Website: https://cimsernagara.karnataka.gov.in

ಸಂ. ಸಿಮ್ಸ್/ಕಾಂಟ್ರಾಸ್ಟ್/06/2026-27　　ದಿನಾಂಕ : 18.04.2026

ಟೆಂಡರ್ ಅಧಿಸೂಚನೆ

ಈ ವಿದ್ಯಾಲಯದ ಬೋಧನಾ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸಾ ಅನುಕೂಲಕ್ಕಾಗಿ ಅತ್ಯಾವಶ್ಯಕವಾಗಿರುವ ಕಾಂಟ್ರಾಸ್ಟ್ ಮತ್ತು ಬಿ.ಎಂ.ಡಬ್ಲ್ಯು., ಕವರ್‌ಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ರಂತೆ ಅಧಿನಿಯಮ 2000 ರಂತೆ ಇ-ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ಕರೆಯಲಾಗಿದೆ. ಆಸಕ್ತ ಟೆಂಡರ್‌ದಾರರು ದಿನಾಂಕ :25.05.2026 ರಂದು 5.00 ಗಂಟೆಯೊಳಗೆ ನಿಗಧಿತ ಇ.ಎಂ.ಡಿ. ಪಾವತಿಸಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕಾರ್ಯನಿರತ ದಿನವನ್ನು ಕಡೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಕಛೇಸಹಿದಾರರನ್ನು ಕಛೇರಿ ವೇಳೆಯಲ್ಲಿ ಭೇಟಿ ಮಾಡಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಚಾಮರಾಜನಗರ.

ಸಂ.ವಾಸಾಸಂಇ:ಚಾ.ನಗರ : 104:2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಘಟಪ್ರಭಾ
ವಿಭಾಗ ನಂ. 2, ಹಿಡಕಲ್‌ಡ್ಯಾಂ
ಕಚೇರಿ ದೂರವಾಣಿ ಸಂ:08333–2200119/ಫ್ಯಾಕ್ಸ ಸಂ:08333–263405/
ಇ–ಮೇಲ್: eegrbc2@gmail.com

ಸಂ: ಕನೀನಿನಿ/ಜಿಆರ್‌ಬಿಸಿಸಿ–2/ಡಿಬಿ/ಟೆಂಡರ್/2026–27/258　ದಿನಾಂಕ: 11.05.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ 01 ಸಂಖ್ಯೆ ಡ್ಯಾಮ್‌ಗೆ ಸಂಬಂಧಿಸಿದ ಕಾಮಗಾರಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. (ಅಂದಾಜು ಮೊತ್ತ ರೂ. ರೂ.32.50 ಲಕ್ಷಗಳು) ಇಂಡೆಂಟ ನಂ. 3671 2ನೇ ಕರೆ 2) ಕರ್ನಾಟಕ ಸರ್ಕಾರದ https://kppp. karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ: 11–05–2026 ರಿಂದ ಡೌನ್ ಲೋಡ್ ಮಾಡಿಕೊಳ್ಳ ಬಹುದಾಗಿರುತ್ತದೆ. 3)ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 18–05–2026 ವೇಳೆ : 17.30 ಗಂಟೆಯೊಳಗೆ ಸಲ್ಲಿಸುವುದು 4) ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ:20–05–2026 ವೇಳೆ : 10.30 ಗಂಟೆ 5) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

Note:Here after any change with reference to this Notification will be Notified in https://kppp.karnataka .gov.in Portal Only.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.2 ಹಿಡಕಲ್ ಡ್ಯಾಮ್

DIPR/BGM/RO-NO-240/KSMCA/2026-27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ–2/ಟೆಂಡರ್ ಪ್ರಕಟಣೆ/333/2026–27/　ದಿನಾಂಕ:12.05.2026

ಅಲ್ಪಾವಧಿ/ಮರು ಟೆಂಡರ್ ಪ್ರಕಟಣೆ ಸಂಖ್ಯೆ: 03/2026–27/ ದಿನಾಂಕ: 12.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–1 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 09 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಹಾಗೂ ಕನಿಷ್ಠ ಮೊತ್ತ ರೂ.7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 12.05.2026ರ ಸಂಜೆ 04:30 ಗಂಟೆಯಿಂದ ಪಡೆಯಬಹುದು** (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) **ಕೊನೆಯ ದಿನಾಂಕ: 22.05.2026 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.05.2026ರ ಬೆಳಗ್ಗೆ 11:00 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:68/ಕೆಎಸ್ಎಂಸಿಎ/2026–27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ: 08262–220936　E-mail:zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:45/2025–26/3ನೇ ಕರೆ/385,
ದಿನಾಂಕ:12–05–2026

ಟೆಂಡರ್ ಪ್ರಕಟಣೆ (3ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗ, ಚಿಕ್ಕಮಗಳೂರು ರವರು ಚಿಕ್ಕಮಗಳೂರು ಜಿಲ್ಲೆಯ **ಕೊಪ್ಪ, ನ.ರಾ.ಪುರ ಮತ್ತು ಶೃಂಗೇರಿ** ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ **ರೂ.50.40**ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Stan-dardTender Document KW-3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:12–05–2026 ರಿಂದ ದಿನಾಂಕ:25–05–2026 ರ ವರೆಗೆ ಸಂಜೆ. 05.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:27–05–2026 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:01–06–2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಿಕ್ಕಮಗಳೂರು

ನಗರಸಭೆ ಕಾರ್ಯಾಲಯ, ರಾಣೇಬೆನ್ನೂರು

ನಂ:ನಸರಾ/ಕಾವಿ/ವಹಿ–03/2026–27　ದಿನಾಂಕ: 12–05–2026

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ **ಸನ್ 2025–26 ಮತ್ತು 2026–27ನೇ ಸಾಲಿನ ನಗರಸಭೆ ಅನುದಾನ ಹಾಗೂ ಸನ್ 2025–26ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಉಳಿತಾಯವಾದ ಅನುದಾನಗಳಡಿ** ಒಟ್ಟಾರೆ **ರೂ. 83.63 ಲಕ್ಷಗಳಲ್ಲಿ 14** ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು/ಸರಬರಾಜುದಾರರು ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ **http//www.ranebennurcity. mrc.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ನಗರಸಭೆಯ ಕಚೇರಿ ವೇಳೆಯಲ್ಲಿ ಹಾಗೂ ಇ–ಪ್ರೊಕ್ಯೂರಮೆಂಟ್ ಸಹಾಯಕ **ದೂರವಾಣಿ ಸಂಖ್ಯೆ: +91 8046010000, +91 8068948777** ರಿಂದ ಮಾಹಿತಿ ಪಡೆಯಬಹುದು.

ಸೂಚನೆ: ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಆದಲ್ಲಿ ಆ ದಿನಾಂಕಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: **27–05–2026 ಸಮಯ: 16.30,**

ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: **27–05–2026 ಸಮಯ: 17.30,**

ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ: **29–05–2026 ಸಮಯ: 11.30,**

ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ : **01–06–2026 ಸಮಯ: 11.30** ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆಯಾದ ನಂತರ.

ಸಹಿ/–
ಪೌರಾಯುಕ್ತರು,
ನಗರಸಭೆ, ರಾಣೇಬೆನ್ನೂರು

ವಾ.ಸಾ.ಇ./ಹಾವೇರಿ/90/2026–27/ದೇಶಪಾಂಡೆಪಬ್ಲಿಸಿಟಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಪ್ಪಳ

ಶ್ರೀ ಗವಿಸಿದ್ಧೇಶ್ವರ ಗಂಜ್ ಕೊಪ್ಪಳ – 583 231, ಇ–ಮೇಲ್ : apmckoppal2014@gmail.com

ಸಂಖ್ಯೆ : ಕೃ.ಉ.ಮಾ.ಸ./ಕೊ./ಲೀ & ಲೈ/89/2026–27　　ದಿನಾಂಕ : 08–05–2026

ಸಂಕ್ಷಿಪ್ತ ಪ್ರಕಟಣೆ

ಕೊಪ್ಪಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ ಮಳಿಗೆ / ಚಿಕ್ಕ ಮಳಿಗೆ / ಗೋದಾಮುಗಳನ್ನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 13 ಹಾಗೂ 14ರ ಪ್ರಕಾರ ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಆರಂಭಿಕವಾಗಿ 11 ತಿಂಗಳ ಅವಧಿಗೆ, ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸಿಕೊಳ್ಳಬಹುದಾದ 33 ತಿಂಗಳಿಗೆ ಶೇ 5% ರಷ್ಟು ಲೀವ್ & ಲೈಸನ್ಸ್ ಶುಲ್ಕ ಹೆಚ್ಚಿಸಿ, ಗರಿಷ್ಠ 55 ತಿಂಗಳ ಅವಧಿಗೆ ಜೇಷ್ಠತಾ ಆಧಾರದ ಮೇಲೆ ಹಾಗೂ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರ	ಗೋದಾಮು ಸಂಖ್ಯೆ	ನಿಗಧಿಪಡಿಸಿರುವ ಮಾಸಿಕ ಬಾಡಿಗೆ (ಜಿ.ಎಸ್.ಟಿ ಹೊರತುಪಡಿಸಿ) ರೂ.ಗಳಲ್ಲಿ (ಪ್ರತಿ ಒಂದಕ್ಕೆ)	ಆರಂಭಿಕ ಮುಂಗಡ ಠೇವಣಿ (ರೂ.ಗಳಲ್ಲಿ)	ಮೀಸಲಾತಿ ವಿವರ
ನಿಯಮ 13 ರಂತೆ ಗೋದಾಮುಗಳ ಹಂಚಿಕೆ					
01	ಗಿಣಿಗೇರಾ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಅಸೈಡ್ ಯೋಜನೆಯಡಿಯಲ್ಲಿ ನಿರ್ಮಿಸಿದ 4 ಸಂಖ್ಯೆ ಗೋದಾಮುಗಳು (400 ಎಮ್.ಟಿ. ಸಾಮರ್ಥ್ಯ).	1, 2, 3	35,278.00	70,556.00	1–ಎಸ್.ಸಿ. 2–ಎಫ್.ಪಿ.ಓ 3–ಸಾಮಾನ್ಯ ವರ್ಗ
02	ಗಿಣಿಗೇರಾ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ನಿರ್ಮಿಸಿದ 2 ಸಂಖ್ಯೆ ಗೋದಾಮುಗಳು (500 ಎಮ್.ಟಿ. ಸಾಮರ್ಥ್ಯ).	1, 2	49,754.00	99,508.00	1–ಎಫ್.ಪಿ.ಓ. 2–ಸಾಮಾನ್ಯ ವರ್ಗ
03	ಕೂಕನಪಳ್ಳಿ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ನಿರ್ಮಿಸಿದ ಗೋದಾಮು (100 ಎಮ್.ಟಿ. ಸಾಮರ್ಥ್ಯ).	1	12,327.00	24,654.00	ಸಾಮಾನ್ಯ ವರ್ಗ
04	ಅಳವಂಡಿ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ನಿರ್ಮಿಸಿದ ಗೋದಾಮು (300 ಎಮ್.ಟಿ. ಸಾಮರ್ಥ್ಯದ).	1	15,537.00	31,074.00	ಎಸ್.ಸಿ
05	ಬೆಳವಿನಾಳ ವಿಸ್ತೃತ ಮಾರುಕಟ್ಟೆ ಪ್ರಾಂಗಣದಲ್ಲಿ ಡಬ್ಲ್ಯೂ.ಐ.ಎಫ್. ಯೋಜನೆಯಡಿಯಲ್ಲಿ ನಿರ್ಮಿಸಿದ ಗೋದಾಮು (1000 ಎಮ್.ಟಿ. ಸಾಮರ್ಥ್ಯ).	1	85,433.00	1,70,866.00	ಸಾಮಾನ್ಯ ವರ್ಗ
06	ಕೊಪ್ಪಳ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಕೆ.ವಿ.ವೈ ಯೋಜನೆಯಡಿ 7 ಚಿಕ್ಕ ಮಳಿಗೆಗಳು (ಪ್ರತಿ ಒಂದಕ್ಕೆ).	1, 2, 3, 4, 5, 6, 7	3,506.00	7,012.00	2–ಎಸ್.ಸಿ, 5–ಎಸ್.ಟಿ 6–ಸಾಮಾನ್ಯ ಮಹಿಳೆ 1, 4, 3 & 7 ಸಾಮಾನ್ಯ ವರ್ಗ
07	2022–24 ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಡಿ ಬೆಳವಿನಾಳ ವಿಸ್ತೃತ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 3 ಚಿಕ್ಕ ಮಳಿಗೆಗಳು.	1, 2, ಮತ್ತು 3	3,803.00	7,606.00	1–ಸಾಮಾನ್ಯ ಮಹಿಳೆ 2 ಮತ್ತು 3 ಸಾಮಾನ್ಯ ವರ್ಗ
ನಿಯಮ 14 ರನ್ವಯ ಹಂಚಿಕೆ					
08	ಕೊಪ್ಪಳ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 2023–24 ನೇ ಸಾಲಿನಲ್ಲಿ ಹೊಸದಾಗಿ ನಿರ್ಮಿಸಿರುವ ಚಿಕ್ಕ ಮಳಿಗೆಗಳು (ಪ್ರತಿ ಒಂದಕ್ಕೆ).	2, 4, 5, 6, 7, 8, 9 ಮತ್ತು 11	5,905.00	11,810.00	2–ಎಸ್.ಸಿ. 9–ಸಾಮಾನ್ಯ ಮಹಿಳೆ 5, 6, 7, 8 & 11 ಸಾಮಾನ್ಯ ವರ್ಗ
09	2023–24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮಹಡಿ ಮೆಟ್ಟಿಲು ಕೋಣೆ.	1	3,758.00	7,516.00	ಸಾಮಾನ್ಯ ವರ್ಗ
10	ಕೂಕನಪಳ್ಳಿ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 4 ಚಿಕ್ಕ ಮಳಿಗೆಗಳು ಪ್ರತಿ ಒಂದಕ್ಕೆ.	1, 2, 3, 4	2,020.00	4,040.00	1–ಎಸ್.ಸಿ, 2–ಎಸ್.ಟಿ 3–ಎಫ್.ಪಿ.ಓ 4–ಸಾಮಾನ್ಯ ವರ್ಗ

1) ಚಿಕ್ಕ ಮಳಿಗೆ / ಗೋದಾಮುಗಳನ್ನು ಹಂಚಿಕೆ ಪಡೆಯಲು ಇಚ್ಛಿಸುವವರು ನೋಂದಣಿ ಶುಲ್ಕ ರೂ. 500–00 ಮೌಲ್ಯದ ಡಿ.ಡಿ / ನಗದು ಮೂಲಕ. ಕಾರ್ಯದರ್ಶಿ ಕೃ.ಉ.ಮಾ.ಸ, ಕೊಪ್ಪಳ ಇವರ ಹೆಸರಿಗೆ ದಿನಾಂಕ : 26–05–2026 ರೊಳಗೆ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಸುವುದು. 2) ನೋಂದಣಿಯನ್ನು ಮಾಡಿಸಿದವರು ನಮೂನೆ–III ಹಾಗೂ ನಮೂನೆ–VI ಟೆಂಡರ್ ಫಾರಂ ಪಡೆಯಲು ಅರ್ಜಿ ಶುಲ್ಕ ರೂ. 500.00 ಡಿಡಿ / ಚೆಕ್ / ನಗದು ಮೂಲಕ ಕಾರ್ಯದರ್ಶಿ, ಕೃ.ಉ.ಮಾ.ಸ, ಕೊಪ್ಪಳ ಇವರಿಗೆ ಸಲ್ಲಿಸಿ ದಿನಾಂಕ : 06–06–2026 ಅರ್ಜಿಗಳನ್ನು ಸಾಯಂಕಾಲ 4.00 ಘಂಟೆಯವರೆಗೆ ಪಡೆದುಕೊಳ್ಳುವುದು. 3) ಅರ್ಜಿ ನಮೂನೆ – III ಹಾಗೂ ನಮೂನೆ–VI ರಲ್ಲಿನ ಎಲ್ಲಾ ಮಾಹಿತಿಯನ್ನು ಭರ್ತಿಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ : 17–06–2026 ರ ಸಾಯಂಕಾಲ 5.30 ಘಂಟೆಯವರೆಗೆ. 4) ದಿನಾಂಕ : 18–06–2026 ರಂದು ಬೆಳಿಗ್ಗೆ 11.00 ಗಂಟೆಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಸಮಿತಿಯ ಆಡಳಿತ ಕಾರ್ಯಾಲಯದಲ್ಲಿ ಪ್ರತಿ ಮಳಿಗೆ ಅನುಗುಣವಾಗಿ ಪ್ರತ್ಯಕವಾಗಿ ಬಹಿರಂಗ ಹರಾಜು ಪ್ರಕ್ರಿಯೆ ಜರುಗಿಸಲಾಗುವುದು. ಬಹಿರಂಗ ಹರಾಜು ಪ್ರಕ್ರಿಯೆ ಮುಕ್ತಾಯದ ನಂತರ ಟೆಂಡರ್ ಕವರಗಳನ್ನು ತೆರೆಯಲಾಗುವುದು. 5) ನಿಯಮ 13 ರಡಿ ಹಂಚಿಕೆಯನ್ನು ಸಮಿತಿಯಿಂದ ಲೈಸನ್ಸ್ ಪಡೆದ ಕಾರ್ಯಕರ್ತರಿಗೆ ಜೇಷ್ಠತಾ ಆಧಾರದಲ್ಲಿ ಪರಿಗಣಿಸಲಾಗುವುದು. 6) ಸದರಿ ಕಟ್ಟಡಗಳ ಹಂಚಿಕೆಯ ಪ್ರಕ್ರಿಯೆಯಲ್ಲಿ ಮೀಸಲಿಟ್ಟ ಮಳಿಗೆಗಳಿಗೆ ಮೀಸಲಾತಿ ಅಡಿಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗದೇ ಇದ್ದಲ್ಲಿ, 2004 ರ ನಿಯಮ 17(3)(ii) ರಡಿ ಸಾಮಾನ್ಯ ವರ್ಗದಡಿ ಸ್ವೀಕೃತವಾದ ಅರ್ಜಿಯನ್ನು ಹಂಚಿಕೆಗೆ ಪರಿಗಣಿಸಲಾಗುವುದು. 7) ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಅನುಮೋದನೆಗೆ ಒಳಪಟ್ಟಿರುತ್ತದೆ. 8) ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. 9) ಅರ್ಜಿಯೊಂದಿಗೆ ನೀಡಲಾದ ಸಮಿತಿಯ ಷರತ್ತು ಮತ್ತು ನಿಬಂಧನೆಗಳಲ್ಲಿ ತಿಳಿಸಿರುವಂತೆ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಅಗತ್ಯ ದಾಖಲೆಗಳನ್ನು ಸಲ್ಲಿಸದೆ ಇದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ,
ಕೃ.ಉ.ಮಾ.ಸ., ಕೊಪ್ಪಳ.

ಸಹಿ/– ಆಡಳಿತಾಧಿಕಾರಿ,
ಕೃ.ಉ.ಮಾ.ಸ., ಕೊಪ್ಪಳ.

ಡಿಐಪಿಆರ್/ಕೊಪ್ಪಳ/80/ಮಣಿಪಾಲ್/2026–27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ

ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ, ಮೈಸೂರು–570023

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ: 18/2025–26/ (3ನೇ ಕರೆ), ದಿನಾಂಕ: 27.04.2026

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ನಂಜನಗೂಡು ತಾಲ್ಲೂಕಿನ 2024–25ನೇ ಸಾಲಿನ 5054 ಮಳೆಹಾನಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗೆ KW-4 ರೀತ್ಯಾ ಮರುಟೆಂಡರ್ (3ನೇ ಕರೆ) ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 06.05.2026 ರಿಂದ ದಿ: 16.05.2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿ: 18.05.2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. **ಕ್ರ.ಸಂ.01. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ:** ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದಿಂದ ಅಹಲ್ಯ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ತಗಡೂರು ಗಾಮದ ಚಂಡಿಕೇಶ್ವರ ದೇವಸ್ಥಾನದ ರಸ್ತೆ, ಅಳಗಂಚಿ, ಕಿರಗುಂದ, ಬಿಳಿಗೆರೆ, ಹಾರೋಪುರ, ಬಿಳುಗಲಿ, ಹದಿನಾರು ಮೋಳೆ, ಇಮ್ಮಾವುಹುಂಡಿ, ಕೆ.ಎಸ್.ಹುಂಡಿ, ಬಿದರಗೂಡು ಮತ್ತು ಅಹಲ್ಯ ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ ಮತ್ತು ಸಿ.ಸಿ. ರಸ್ತೆ ಹಾಗೂ ಡಾಂಬರು ರಸ್ತೆ ನಿರ್ಮಾಣ ಕಾಮಗಾರಿ (RDPR/2025-26/RD/WORK_INDENT21391/Call-3) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 455.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 382.08 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 5,75,500.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp. karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಪೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/169/KSMCA/134/2026-27

ಕರ್ನಾಟಕ ಸರಕಾರ
(ತೋಟಗಾರಿಕೆ ಇಲಾಖೆ)

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ (ಜಿಲ್ಲಾ ಪಂಚಾಯತ್)ಶಿರಹಟ್ಟಿ.

ಕ್ರಸಂ:ಹಿಸತೋನಿ:ಜಿಪಂ:ಶಿ:ವಿನಿ1:ಟೆಂಡರ್:01:2026–27　ದಿನಾಂಕ:08–05–2026

ಟೆಂಡರ್ ಪ್ರಕಟಣೆ

ವಿಷಯ: 2026–27ನೇ ಸಾಲಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ) ಶಿರಹಟ್ಟಿ ಕಚೇರಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಒದಗಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ.

ಈ ಮೂಲಕ ನೋಂದಾಯಿತ ಟ್ರಾವೆಲ್ ಏಜೆನ್ಸಿಗಳಿಂದ/ವಾಹನ ಮಾಲೀಕರಿಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿ ಕಚೇರಿಯ ಉಪಯೋಗಕ್ಕಾಗಿ ವಿವಿಧ ಮಾದರಿಯ ವಾಹನಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಮಾಸಿಕ ಬಾಡಿಗೆ ಹಾಗೂ ದಿನದ ಬಾಡಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವವರು **ರೂ:–500/–** ಗಳ ಟೆಂಡರ್ ಫಾರ್ಮ್ ಶುಲ್ಕ ಪಾವತಿಸಿ ಭರ್ತಿ ಮಾಡಿದ ಟೆಂಡರ್ ಫಾರ್ಮನ್ನು **ದಿನಾಂಕ: 25–05–2026** ರೊಳಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿ ಕಚೇರಿಯಲ್ಲಿ ನಿಗದಿತ ಅವಧಿಯಲ್ಲಿಸಲ್ಲಿಸಬೇಕು.


ಬಾಡಿಗೆ ವಾಹನ ಒದಗಿಸಲು ಇಷ್ಟವಿದ್ದಲ್ಲಿ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಈ ಕೆಳಕಂಡ ಷರತ್ತುಗಳ ಮೇರೆಗೆ ತಮ್ಮ ಅತೀ ಕಡಿಮೆ ದರವನ್ನು ನಮೂದಿಸಿ **ದಿನಾಂಕ: 25.05.2026 ರಂದು ಮಧ್ಯಾಹ್ನ : 12.00 ಗಂಟೆಯೊಳಗಾಗಿ** ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿ ಕಚೇರಿಯಲ್ಲಿ ಸಲ್ಲಿಸುವುದು. ತಾಂತ್ರಿಕ ಬಿಡ್ ಪರಿಶೀಲಿಸಿದ ನಂತರ ಅರ್ಹ ಸಂಸ್ಥೆಯವರ/ವಾಹನ ಮಾಲೀಕರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಅನುಮೋದಿತ ದರಗಳು ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ)ಶಿರಹಟ್ಟಿರವರನ್ನುಖುದ್ದಾಗಿಸಂಪರ್ಕಿಸಬಹುದು.

ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 25.05.2026 ಮಧ್ಯಾಹ್ನ 12:00 ಗಂಟೆ** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.05.2026 ಮಧ್ಯಾಹ್ನ 01:00 ಗಂಟೆ** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 25.05.2026 ಮಧ್ಯಾಹ್ನ03:00 ಗಂಟೆ** ಟೆಂಡರ್ ಮೊತ್ತ: **ರೂ.4,20,000/–**ಇ.ಎಂ.ಡಿ ಮೊತ್ತ: **ರೂ.10,500/–**

ಸಹಿ/–
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿ.ಪಂ) ಶಿರಹಟ್ಟಿ

ವಾ.ಸಾ.ಸಂ.ಇ/ಗದಗ/65/ದೇಶಪಾಂಡೆಪಬ್ಲಿಸಿಟಿ/2026–27



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	12	8	4	0	16	+0.551
ಆರ್‌ಸಿಬಿ	11	7	4	0	14	+1.103
ಹೈದರಾಬಾದ್	12	7	5	0	14	+0.331
ಪಂಜಾಬ್	11	6	4	1	13	+0.428
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ದಿಲ್ಲಿ	12	5	7	0	10	-0.993
ಕೆಕೆಆರ್	10	4	5	1	9	-0.169
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕೆಕೆಆರ್ 192/4 | ರಾಯಲ್ ಬೆಂಗಳೂರಿಗೆ ಕಠಿಣ ಗುರಿ
ರಿಂಕು-ರಘು ಆರ್ಭಟ

ರಾಯ್ಪುರ: ರಘು-ರಿಂಕು ಮಿಂಚಿದ ನಂತರ ಕಳೆದ ಪಂದ್ಯದಲ್ಲಿ ಬೌಲಿಂಗ್ ಪಿಚ್ ಆಗಿದ್ದ ಕೆಕೆಆರ್ ಬುಧವಾರದಂದು ಬ್ಯಾಟಿಂಗ್ ಪಿಚ್ ಆಗಿ ಬದಲಾಯಿತು. ಸ್ಫೋಟಕ ಬ್ಯಾಟಿಂಗ್ ಮಾಡಿದ ಕೆಕೆಆರ್ ಮಹತ್ವದ ಪಂದ್ಯದಲ್ಲಿ ಬೆಂಗಳೂರಿಗೆ 193 ರನ್ ಗುರಿ ನೀಡಿದೆ.

ಸುಯಶ್ ಮತ್ತು ಶೇಫರ್ಡ್ ಬದಲಿಗೆ ಡಫಿ ಮತ್ತು ವೆಂಕಟೇಶ್ ಅವರೊಂದಿಗೆ ಕಣಕ್ಕಿಳಿದ ಆರ್‌ಸಿಬಿ ಮೊದಲಿಗೆ ಉತ್ತಮ ಬೌಲಿಂಗ್ ಮಾಡಿದರೂ, ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಕೆಕೆಆರ್ ದೊಡ್ಡ ಗುರಿ ನಿರ್ಮಿಸಿದೆ. ರಘುವಂಶಿ(71; 46ಎ, 7 ಬೌ, 3ಸಿ), ರಿಂಕು(49★; 29ಎ, 3 ಬೌ, 2ಸಿ) ಬ್ಯಾಟಿಂಗ್ ನೊಂದಿಗೆ ಕೋಲ್ಕತ್ತಾ, 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 192 ರನ್ ಗಳಿಸಿದೆ.

ರಘುವಂಶಿ ಅಬ್ಬರ: ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಕೆಕೆಆರ್ ಗೆ ಭರ್ಜರಿ ಆರಂಭ ಸಿಕ್ಕಿತು. ರಾಯ್ಪುರದ ಬೌಲಿಂಗ್ ಪಿಚ್‌ನಲ್ಲಿ ಫಿನ್ ಆಲೆನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದರು. ಮೊದಲೆರಡು ಓವರ್‌ಗಳಲ್ಲಿ ರನ್ ಬಾರಿಸಿದರೂ ಭುವನೇಶ್ವರ್ ಕುಮಾರ್ ಅವರ ಸ್ವಿಂಗ್ ಎದುರಿಗೆ ನಿಲ್ಲಲಾಗಲಿಲ್ಲ. 8 ಬಾಲ್ ಎದುರಿಸಿದ್ದ ಆಲೆನ್ 18 ರನ್‌ಗೆ ಔಟಾದರು. ಅವರು ಔಟಾಗುತ್ತಿದ್ದಂತೆ ನಿಧಾನವಾಗಿ ಆಡುತ್ತಿದ್ದ ರಹಾನೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 3 ಬೌಂಡರಿ, 1 ಸಿಕ್ಸರ್ ಬಾರಿಸಿದ ನಂತರ ಅವರೂ ವಿಕೆಟ್ ಕೊಟ್ಟರು. ನಾಲ್ಕನೇ ಕ್ರಮಾಂಕದಲ್ಲಿ ಗ್ರೀನ್ ಬಂದರು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಅಂಗ್ರಿಶ್ ರಘುವಂಶಿ ಸ್ಫೋಟಕ ಬ್ಯಾಟಿಂಗ್‌ಗೆ ಮಣೆ ಹಾಕಿದರು. ಪವರ್‌ಪ್ಲೇ ಮುಕ್ತಾಯಕ್ಕೆ ಕೆಕೆಆರ್ 56 ರನ್ ಗಳಿಸಿತು. ರಹಾನೆ ಮತ್ತು ಫಿನ್ ಔಟಾಗಿದ್ದರು.

ಮಧ್ಯಮ ಓವರ್‌ಗಳಲ್ಲಿ ಗ್ರೀನ್ ಒಂದು ಬದಿಯಲ್ಲಿ ನಿಂತರೆ ರಘು ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಬೌಂಡರಿ ಸಿಕ್ಸರ್ ಗಳೊಂದಿಗೆ ಅರ್ಧ ಶತಕ ಬಾರಿಸಿದರು. ಗ್ರೀನ್ ಸ್ಫೋಟಕ ಬ್ಯಾಟಿಂಗ್ ಗೆ ಮುಂದಾಗುತ್ತಿದ್ದಂತೆ 24 ಬಾಲ್‌ಗಳಲ್ಲಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರಿಂಕು ಸಿಂಗ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ 97 ರನ್ ಗಳಿಸಿತು. ಡೆತ್ ಓವರ್‌ವರೆಗೂ ರಿಂಕು-ರಘು ಆಟ ಮುಂದುವರಿಯಿತು. ರಿಂಕು ಸಿಂಗ್ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದ್ದಲ್ಲದೆ, ರೋಮಾಂಚನಕಾರಿ ಬೌಂಡರಿಗಳನ್ನೂ ಬಾರಿಸಿದರು. 19ನೇ ಓವರ್‌ನಲ್ಲಿ ಹೆಚ್ಚಿನ ರನ್ ಬರದಿದ್ದರೂ ಇನ್ನುಳಿದ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಕೆಕೆಆರ್ ಹೆಚ್ಚಿನ ರನ್‌ಗಳನ್ನು ಜೊತೆಗೂಡಿಸಿತು. ಕೊನೆಯಲ್ಲಿ ರಿಂಕು ಸಿಂಗ್ ಕೂಡ 49★ ರನ್ ಬಾರಿಸಿದರು. ಅಂಗ್ರಿಶ್ 71 ರನ್ ಗಳಿಸಿದರು.



ಪಂದ್ಯಕ್ಕೆ ಮಳೆ ಅಡ್ಡಿ
ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಟಾಸ್‌ಗೂ ಮುನ್ನವೇ ಸಂಜೆಯ ಹೊತ್ತಲ್ಲಿ ಮಳೆ ಶುರುವಾಯಿತು. ರಾಯ್ಪುರ ಕ್ರೀಡಾಂಗಣದ ತುಂಬೆಲ್ಲಾ ಕವರ್ ಹಾಕಿದ್ದರು. 7:15ಕ್ಕೆ ಮಳೆ ನಿಂತರೂ, ಮೈದಾನ ಸಿದ್ಧಗೊಂಡು ಪಂದ್ಯ ನಡೆಸಲು ಒಂದು ತಾಸಿಗಿಂತಲೂ ಹೆಚ್ಚಿನ ಸಮಯ ಬೇಕಾಯಿತು. ಪರಿಷ್ಕೃತ ಸಮಯವನ್ನು ನಿಗದಿ ಮಾಡಿ, 8:30 ಕ್ಕೆ ಟಾಸ್, 8:45ಕ್ಕೆ ಪಂದ್ಯ ಶುರುವಾಯಿತು.

ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಾಟ
ಪಂಜಾಬ್‌ಗೆ ಮಹತ್ವದ ಪಂದ್ಯ

ಧರ್ಮಶಾಲಾ: ಐಪಿಎಲ್ ಪ್ಲೇಆಫ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಮುಖ ಪಂದ್ಯದಲ್ಲಿ ಪಂಜಾಬ್ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಕಳೆದ ಪಂದ್ಯಗಳಲ್ಲಿ ಭಾರೀ ಸೋಲು ಕಂಡಿರುವ ಶ್ರೇಯಸ್ ಅಯ್ಯರ್ ನೇತೃತ್ವದ ಕಿಂಗ್ಸ್ ತಂಡವು ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕಿಕೊಂಡಿದೆ. ಅತ್ತ ಮುಂಬೈ ಸಕಾರಾತ್ಮಕ ಅಂತ್ಯಕ್ಕೆ ಅಣಿಯಾಗುತ್ತಿದೆ.

ಮೊದಲಿನ ಪಂದ್ಯಗಳಲ್ಲಿ ಅಜೇಯವಾಗಿದ್ದ ಪಂಜಾಬ್ ಕಿಂಗ್ಸ್ ದ್ವಿತಿಯಾರ್ಧದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಟೇಬಲ್ ಟಾಪರ್ ಆಗಿದ್ದ ಪಂಜಾಬ್ ಇದೀಗ ನಾಲ್ಕು ಸೋಲುಗಳೊಂದಿಗೆ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಮುಂಬೈ ಇಂಡಿಯನ್ಸ್ ಸೋಲುಗಳಿಂದಲೇ ಕಂಗೆಟ್ಟಿದ್ದು ಆರ್‌ಸಿಬಿ ವಿರುದ್ಧ ಸೋತು 9ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಧರ್ಮಶಾಲಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂಜಾಬ್ ಕಿಂಗ್ಸ್‌ಗೆ ಒತ್ತಡ: ಒಟ್ಟು 13 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿರುವ ಪಂಜಾಬ್ ಕಿಂಗ್ಸ್ ಸೋತರೆ ದೊಡ್ಡ ಹಿನ್ನಡೆ ಅನುಭವಿಸಲಿದೆ. ಪಂದ್ಯದ ನಂತರ ಅಂಕಪಟ್ಟಿ ಸ್ಥಾನಕ್ಕೆ ಯಾವುದೇ ಪರಿಣಾಮ ಬೀಳದಿದ್ದರೂ, ಶುಕ್ರವಾರದಂದು ಚೆನ್ನೈ ಲಖನೌ ತಂಡದ ವಿರುದ್ಧ ಗೆದ್ದರೆ, ಪಂಜಾಬ್ ಐದನೇ ಸ್ಥಾನಕ್ಕೆ ಇಳಿಯಲಿದೆ. ಪ್ಲೇಆಫ್ ಲೆಕ್ಕಾಚಾರದಲ್ಲಿ ಗಟ್ಟಿಯಾಗಿ ಉಳಿಯಬೇಕೆಂದರೆ ಪಂಜಾಬ್ ಕಿಂಗ್ಸ್ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಟಾಪ್ ಸ್ಥಾನದ ಮೇಲೆ ಕಣ್ಣಿಡಬೇಕಾದರೆ ಮಾಡು ಇಲ್ಲವೇ ಮಡಿ. ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಪಂಜಾಬ್ ಕಿಂಗ್ಸ್ ಕಳೆದ ಪಂದ್ಯದಲ್ಲಿ ಬೌಲಿಂಗ್‌ನಲ್ಲಿ ದೊಡ್ಡ ಹಿನ್ನಡೆ ಅನುಭವಿಸಿದೆ. ಮುಖ್ಯವಾಗಿ ಅರ್ಷದೀಪ್ ಬಿಟ್ಟರೆ ಇನ್ನುಳಿದ ಬೌಲರ್‌ಗಳು ವಿಫಲರಾಗಿದ್ದರೆ.



ಪಂದ್ಯದ ವಿವರ
ಯಾವಾಗ: ಗುರುವಾರ, ಎಲ್ಲಿ: ಧರ್ಮಶಾಲಾ, ಸಮಯ: 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್: ಧರ್ಮಶಾಲಾದ ಎಚ್‌ಸಿಎಲ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಬ್ಯಾಟಿಂಗ್‌ಗೆ ಬಲ ನೀಡಲಿದೆ. ಕಳೆದ ಪಂದ್ಯದಲ್ಲಿ ದಿಲ್ಲಿ 210 ರನ್‌ಗುರಿ ಬೆನ್ನತ್ತಿತ್ತು. ಬೌಲರ್‌ಗಳಿಗೆ ಅಲ್ಪ ಕಾಟ ಕೊಡಲಿದೆ. ಸ್ಪಿನ್ನರ್‌ಗಳಿಗೆ ತೀರಾ ಕಷ್ಟ. ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇ ಹೆಚ್ಚು.

ಗೆಲುವುಗಳ ವಿದಾಯಕ್ಕೆ ಮುಂಬೈ ಸಿದ್ಧ
ಅತ್ತ ಪಂದ್ಯಾವಳಿಯಿಂದ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ಗೆಲುವಿನೊಂದಿಗೆ ಅಭಿಯಾನ ಮುಗಿಸುವ ನಿರೀಕ್ಷೆಯಲ್ಲಿದೆ. ಹಿಂದಿನ ಬಹುತೇಕ ಪಂದ್ಯಗಳಲ್ಲಿ ಸೋತಿರುವ ಮುಂಬೈ ಆರ್‌ಸಿಬಿ ವಿರುದ್ಧ ಗೆಲ್ಲುವ ಹಂತಕ್ಕೆ ಬಂದು ಸೋತಿತು. ಬ್ಯಾಟಿಂಗ್ ವೈಫಲ್ಯತೆ ತಂಡಕ್ಕೆ ದೊಡ್ಡ ಆಘಾತ ನೀಡಿದೆ. ಯಾರೊಬ್ಬರೂ ಲಯದಲ್ಲಿಲ್ಲ. ರಯಾನ್ ಕೂಡ ಹಿಂದಿನ ಪಂದ್ಯದಲ್ಲಿ ಬೇಗನೇ ಔಟಾಗಿದ್ದಾರೆ. ತಂಡಕ್ಕೆ ಪಾಂಡ್ಯ ಬಲ ಸಿಗಬಹುದು. ಅಭ್ಯಾಸಕ್ಕಿಳಿದ ಅವರು ಪಂದ್ಯಕ್ಕೆ ಮರಳುವ ಸಾಧ್ಯತೆ ಇದೆ. ಬೌಲಿಂಗ್‌ನಲ್ಲೂ ಪ್ರಮುಖರು ಲಯಕ್ಕೆ ಬರಬೇಕಿದೆ.

ಕಿರುಸುದ್ದಿ

ವೇಟ್‌ಲಿಫ್ಟಿಂಗ್: ಜ್ಞಾನೇಶ್ವರಿಗೆ ಬೆಳ್ಳಿ
ಹೊಸದಿಲ್ಲಿ: ಬುಧವಾರ ಗಾಂಧಿನಗರದಲ್ಲಿ ನಡೆದ 2026 ರ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭರವಸೆಯ ಅಥ್ಲೀಟ್ ಜ್ಞಾನೇಶ್ವರಿ ಯಾದವ್ ಸ್ನ್ಯಾಚ್ ವಿಭಾಗದಲ್ಲಿ ಬೆಳ್ಳಿ ಪದಕ ಮತ್ತು 53 ಕೆಜಿ ವಿಭಾಗದಲ್ಲಿ ಒಟ್ಟಾರೆ ಕಂಚಿನ ಪದಕ ಗೆದ್ದರು. ಇದರೊಂದಿಗೆ ಆತಿಥ್ಯ ಭಾರತ ಮಹತ್ವದ ಪದಕ ಬಾಚಿಕೊಂಡಿದೆ. ಜ್ಞಾನೇಶ್ವರಿ ಒಟ್ಟು 194 ಕೆಜಿ ಎತ್ತುವ ಮೂಲಕ ಅದ್ಭುತ ಪ್ರದರ್ಶನ ನೀಡಿದರು. ಸ್ನ್ಯಾಚ್ ವಿಭಾಗದಲ್ಲಿ ಅವರು 88 ಕೆಜಿ ಎತ್ತಿದರು. ಚೀನಾದ ಜಿನ್ನಾನ್ ಝೂವೊ ಒಟ್ಟು 216 ಕೆಜಿ ಎತ್ತುವ ಮೂಲಕ ಈ ವಿಭಾಗದಲ್ಲಿ ಚಿನ್ನ ಗೆದ್ದರೆ, ವಿಯೆಟ್ನಾಂನ ಹೊಯಿ ಹುವಾಂಗ್ ನ್ಗುಯೆನ್ ಒಟ್ಟು 195 ಕೆಜಿ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಪಡೆದರು.

ರಾಮಕೃಷ್ಣ ಬದಲಿಗೆ ಕನ್ನಡಿಗ ನೋಹ್ರೊನಾ
ಚೆನ್ನೈ: ಕನ್ನಡಿಗ, ಮಹರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಮಿಂಚಿ ಗಮನ ಸೆಳೆದಿರುವ ಮೈಕಲ್ ನೋಹ್ರೊನಾ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡ ಬದಲಿ ಆಟಗಾರರಾಗಿ ಖರೀದಿಸಿದೆ. ತಂಡದಿಂದ ರಾಮಕೃಷ್ಣ ಘೋಷ್ ಗಾಯದಿಂದ ಹೊರಬಿದ್ದಿದ್ದು, ಅವರ ಬದಲಿಗೆ ನೋಹ್ರಾನಾ ಅವರನ್ನು ಆಯ್ಕೆ ಮಾಡಿಕೊಂಡಿರುವುದು ಫ್ರಾಂಚೈಸಿ ಬುಧವಾರ ತಿಳಿಸಿದೆ. ಕರ್ನಾಟಕದಲ್ಲಿ ನಡೆಯುವ ಮಹರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಮಂಗಳೂರು ಡ್ರ್ಯಾಗನ್ಸ್ ಪರ ಆಡಿದ್ದ ಅವರು, 13 ಪಂದ್ಯಗಳಲ್ಲಿ 285 ರನ್ ಗಳಿಸಿದ್ದಲ್ಲದೆ, 10 ವಿಕೆಟ್ ಕೂಡ ಪಡೆದಿದ್ದರು. ಈ ಬೆನ್ನಲ್ಲೇ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯಾವಳಿಯಲ್ಲೂ ಕರ್ನಾಟಕ ತಂಡವನ್ನು ಮೂರು ಬಾರಿ ಪ್ರತಿನಿಧಿಸಿದ್ದಾರೆ.

ಪ್ರೀ ಕ್ವಾರ್ಟರ್‌ಗೆ ಸಿಂಧು, ಸೇನ್

- ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್
- ಮುಂದುವರಿದ ಭಾರತೀಯರ ಪಾರುಪತ್ಯ
- ಕಿಡಂಬಿ ಶ್ರೀಕಾಂತ್‌ಗೂ ಮುನ್ನಡೆ
- ಕನ್ನಡಿಗ ಆಯುಷ್ ಸೇರಿದಂತೆ ಹಲವರಿಗೆ ನಿರಾಸೆ

ಬ್ಯಾಂಕಾಕ್: ಇಲ್ಲಿ ನಡೆಯುತ್ತಿರುವ ಥೈಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿನಲ್ಲಿ ಭಾರತದ ಆಟಗಾರರು ಭರ್ಜರಿ ಪ್ರದರ್ಶನ ನೀಡಿದ್ದು, ಪಿ.ವಿ. ಸಿಂಧು, ಲಕ್ಷ್ಯ ಸೇನ್ ಹಾಗೂ ಕಿಡಂಬಿ ಶ್ರೀಕಾಂತ್ ಪ್ರೀ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ.

ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿ ಉತ್ತಮ ಪ್ರದರ್ಶನ ನೀಡಿರುವ ನಂತರ ಭಾರತದ ಪ್ರಮುಖ ಬ್ಯಾಡ್ಮಿಂಟನ್ ಆಟಗಾರರು ಮಿಂಚಿದ್ದಾರೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಸಿಂಧು, ತೈವಾನ್ ತುಂಗ್ ಚಿಯೊ ಟೋಂಗ್ ವಿರುದ್ಧ ಕೇವಲ 33 ನಿಮಿಷಗಳಲ್ಲಿ 21-9, 21-12 ಅಂತರದ ಸುಲಭ ಜಯ ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ಅವರನ್ನು ಎದುರಿಸಲಿದ್ದಾರೆ. ಮೊದಲನೇ ಸೆಟ್‌ನಲ್ಲೇ ದೊಡ್ಡ ಮುನ್ನಡೆ ಸಾಧಿಸಿದ ಸಿಂಧು 21-9ರಿಂದ ಗೆದ್ದರು. ಅದೇ ಆಟವನ್ನು ಮುಂದುವರಿಸಿದಂತೆ ಎದುರಾಳಿ ತೈವಾನ್‌ನ ತುಂಗ್ ಎರಡನೇ ಸೆಟ್‌ನಲ್ಲಿ 21-12ರಿಂದ ಸೋತರು.

ಲಕ್ಷ್ಯ ಸೇನ್, ಸಿಂಗಾಪುರದ ಜಿಯಾ ಹೆಂಗ್ ಜೇಸನ್ ತೆಹ್ ವಿರುದ್ಧ 21-16, 21-17 ಅಂತರದಲ್ಲಿ ಗೆದ್ದು ತಮ್ಮ ಮುಖಾಮುಖಿ ದಾಖಲೆಯನ್ನು 6-0ಗೆ ಏರಿಸಿದರು. ಅವರೂ ಯಾವುದೇ ಅಡತಡೆ ಇಲ್ಲದೆ ಪ್ರಾಬಲ್ಯ ಸಾಧಿಸಿದರು. ಎರಡೂ ಸೆಟ್‌ಗಳಲ್ಲಿ ಸೇನ ಮುನ್ನಡೆಯಲ್ಲೇ ಇದ್ದರು. ಮಾಜಿ ವಿಶ್ವ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತ ಶ್ರೀಕಾಂತ್, ಸಿಂಗಾಪುರದ ಲೋ ಕೀನ್ ಯೂ ವಿರುದ್ಧ 21-14, 21-15 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. ಇದೀಗ ಅವರು ತೈವಾನ್‌ನ ಸುಲಿ ಯಾಂಗ್ ಅವರನ್ನು ಎದುರಿಸಲಿದ್ದಾರೆ.

ಮಾಳ್ವಿಕಾಗೂ ಜಯ
ಮಹಿಳಾ ವಿಭಾಗದಲ್ಲಿ ಮಾಳ್ವಿಕಾ ಬನ್ಸೋದ್ ರೋಚಕ ಹೋರಾಟದಲ್ಲಿ ಕೆನಡಾದ ವೆನ್ ಯು ಝಾಂಗ್ ವಿರುದ್ಧ ಜಯ ಸಾಧಿಸಿದರು. ಮೊದಲ ಗೇಮ್ ಸೋತರೂ, ಎರಡನೇ ಗೇಮ್‌ನಲ್ಲಿ ಆರು ಗೇಮ್ ಪಾಯಿಂಟ್ ಉಳಿಸಿಕೊಂಡು ಕೊನೆಗೆ ಪಂದ್ಯವನ್ನು ಮೂರನೇ ಗೇಮ್‌ಗೆ ಕೊಂಡೊಯ್ದು ಗೆಲುವು ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಹಾಲಿ ಚಾಂಪಿಯನ್ ಚೆನ್ ಯು ಫೇಯ್ ಅವರನ್ನು ಎದುರಿಸಲಿದ್ದಾರೆ. ಯುವ ಆಟಗಾರ್ತಿ ದೇವಿಕಾ ಸಿಹಾಗ್ ಜಪಾನ್‌ನ ನಾತ್ಸುಕಿ ನಿದೈರಾ ವಿರುದ್ಧ ಗೆದ್ದು ಸೂಪರ್ 500 ಮಟ್ಟದಲ್ಲಿ ತಮ್ಮ ಮೊದಲ ಜಯ ದಾಖಲಿಸಿದರು.

ಹಲವರಿಗೆ ನಿರಾಸೆ
ಆದರೆ ಭರವಸೆಯ ಆಟಗಾರರಾದ ಆಯುಷ್ ಶೆಟ್ಟಿ, ಅನ್ಮೋಲ್ ಖರ್ಬ್, ಉನ್ನತಿ ಹೂಡಾ ಹಾಗೂ ತನ್ವಿ ಶರ್ಮ ಸೋಲು ಕಂಡು ಟೂರ್ನಿಯಿಂದ ಹೊರಬಿದ್ದರು. ಕೊರಿಯಾದ ನೊರೊಕಾ ವಿರುದ್ಧ ಆಡಿದ ಆಯುಷ್ 13-21, 21-17, 4-21 ರಿಂದ ಸೋತರು. ಸ್ಥಳೀಯ ಆಟಗಾರ್ತಿ ಚೋಚುವಾಂಗ್ ಉನ್ನತಿ ಹೂಡಾ ಅವರನ್ನು 11-21, 21-17, 21-16ರಿಂದ ಸೋಲಿಸಿದರು. ಚೀನಾದ ಚೇನ್ ಅನ್ಮೋಲ್ ಅವರನ್ನು 2-1ರಿಂದ ಸೋಲಿಸಿದರೆ, ತನ್ವಿ ಶರ್ಮ ಹೀನಾ ಅಕೆಚಿ ವಿರುದ್ಧ 17-21, 8-21ರಿಂದ ಸೋಲಿಸಿದರು.

ಕ್ವಾರ್ಟರ್‌ಗೆ ಯಾನಿಕ್ ಸಿನ್ನರ್

ಹೊಸದಿಲ್ಲಿ: ಉತ್ತಮ ಪ್ರದರ್ಶನ ನೀಡಿರುವ ಯಾನಿಕ್ ಸಿನರ್ ಇಟಾಲಿಯನ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಪಂದ್ಯದಲ್ಲಿ ಅರ್ಹತಾ ಸುತ್ತಿನಿಂದ ಬಂದ ಆಂಡ್ರಿಯಾ ಪೆಲ್ಲೆಗ್ರಿನೊ ವಿರುದ್ಧ 6-2, 6-3 ಅಂತರದಲ್ಲಿ ಗೆದ್ದ ಸಿನ್ನರ್, ನೊವಾಕ್ ಜೊಕೊವಿಚ್ ಅವರ ದಾಖಲೆಯನ್ನೂ ಸರಿಗಟ್ಟಿದರು. ಗ್ರ್ಯಾಂಡ್ ಸ್ಲ್ಯಾಮ್ ಬಳಿಕ ಅತ್ಯಂತ ಮಹತ್ವದ ಟೂರ್ನಿಗಳೆಂದು ಪರಿಗಣಿಸಲ್ಪಡುವ ಮಾಸ್ಟರ್ಸ್ ಸರಣಿಯಲ್ಲಿ ಸಿನರ್ ಇದೀಗ ಸತತ 31ನೇ ಗೆಲುವು ದಾಖಲಿಸಿದ್ದಾರೆ.



ಈ ಹಿಂದೆ 2011ರಲ್ಲಿ ಜೊಕೊವಿಚ್ ಇದೇ ಸಾಧನೆ ಮಾಡಿದ್ದರು. ರೋಮ್‌ನಲ್ಲಿ ಪ್ರಶಸ್ತಿ ಗೆದ್ದರೆ, ಎಲ್ಲಾ ಒಂಬತ್ತು ಮಾಸ್ಟರ್ಸ್ 1000 ಟೂರ್ನಿಗಳಲ್ಲೂ ಜಯಿಸಿದ ಎರಡನೇ ಆಟಗಾರ ಎಂಬ ಗೌರವ ಸಿನರ್‌ಗೆ ಸಿಗಲಿದೆ. ಈ ಸಾಧನೆಯನ್ನು ಇದುವರೆಗೆ ಜೊಕೊವಿಚ್ ಮಾತ್ರ ಮಾಡಿದ್ದಾರೆ. ಸಿನರ್ ಈಗಾಗಲೇ ಸತತ ಐದು ಮಾಸ್ಟರ್ಸ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದಾರೆ. ಇದೇ ವೇಳೆ ಕೈಮಣಿಯ ಗಾಯದಿಂದ ಕಾರ್ಲೋಸ್ ಅಲ್ಕರಾಜ್ ಟೂರ್ನಿಯಿಂದ ಹೊರಗುಳಿದಿರುವುದು ಸಿನರ್‌ಗೆ ಇನ್ನಷ್ಟು ಬಲ ನೀಡಿದೆ. ರೋಮ್ ಮತ್ತು ಮುಂಬರುವ ಫ್ರೆಂಚ್ ಓಪನ್‌ನಲ್ಲಿ ಅವರೇ ಪ್ರಮುಖ ಪ್ರಶಸ್ತಿ ಫೇವರಿಟ್ ಆಗಿದ್ದಾರೆ. ಒಟ್ಟಾರೆ ಸಿನರ್ ತಮ್ಮ ಗೆಲುವಿನ ಸರಣಿಯನ್ನು 26 ಪಂದ್ಯಗಳಿಗೆ ವಿಸ್ತರಿಸಿದ್ದಾರೆ. ಫೆಬ್ರವರಿ 19ರಂದು ಖತಾರ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಯಾಕುಬ್ ಮೆನ್ಸಿಕ್ ವಿರುದ್ಧ ಸೋತ ಬಳಿಕ ಅವರು ಇನ್ನೂ ಯಾವುದೇ ಪಂದ್ಯದಲ್ಲಿ ಸೋಲು ಕಂಡಿಲ್ಲ.

ಬೆಳಗಾವಿ ಮಹಾನಗರ ಪಾಲಿಕೆ ಸಭೆಯಲ್ಲಿ ಗಡಿಸಮರ
ಎಂಇಎಸ್ ಸದಸ್ಯರ ವಿರೋಧಕ್ಕೆ ಆಕ್ಷೇಪ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯು ಬುಧವಾರ ಕನ್ನಡ ಮತ್ತು ಮರಾಠಿ ಸದಸ್ಯರ ನಡುವಿನ ತೀವ್ರ ವಾಗ್ವಾದಕ್ಕೆ ಸಾಕ್ಷಿಯಾಯಿತು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಗೊತ್ತುವಳಿಯನ್ನು ಸ್ವೀಕರಿಸುವ ವಿಚಾರದಲ್ಲಿ ಎಂಇಎಸ್ ಮತ್ತು ಕನ್ನಡ ಪರ ಸದಸ್ಯರ ನಡುವೆ ಭಾರಿ ಗದ್ದಲ ನಡೆದು ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಸಭೆಗೆ ನುಗ್ಗಲು ಯತ್ನಿಸಿದ ಘಟನೆ ನಡೆಯಿತು.

ಕನ್ನಡ ಪರ ಸದಸ್ಯ ರಮೇಶ್ ಸೊಂಟಕ್ಕಿ ಅವರು, ಮಹಾಜನ್ ವರದಿ ಅಂತಿಮ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಗೊತ್ತುವಳಿಯನ್ನು ಪಾಲಿಕೆ ಅಧಿಕೃತವಾಗಿ ಸ್ವೀಕರಿಸಬೇಕು ಎಂದು ವಿಷಯ ಮಂಡಿಸಿದರು. ಈ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಎಂಇಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿದೆ, ಹೀಗಿರುವಾಗ ಗೊತ್ತುವಳಿ ಮಂಡಿಸಲು ಸಾಧ್ಯವಿಲ್ಲ ಎಂದು ಉದ್ಧಟತನ ತೋರಿದರು. ಇದು ಕನ್ನಡ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

ಸಭೆಯಲ್ಲಿ ಹಾಜರಿದ್ದ ಕಾನೂನು ತಜ್ಞರು, ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಈಗಲೇ ಗೊತ್ತುವಳಿ ಸ್ವೀಕರಿಸಲು ಅವಕಾಶವಿಲ್ಲ ಎಂದರು. ಇದಕ್ಕೆ ತಿರುಗೇಟು ನೀಡಿದ ರಮೇಶ್ ಸೊಂಟಕ್ಕಿ, ಕರ್ನಾಟಕ ವಿಧಾನಸಭೆಯಲ್ಲೇ ಆರು ಬಾರಿ ಇಂತಹ ಗೊತ್ತುವಳಿ ಅಂಗೀಕಾರವಾಗಿದೆ ಎಂದು ನೆನಪಿಸಿದರು. ಗದ್ದಲ ತೀವ್ರಗೊಂಡ ಹಿನ್ನೆಲೆಯಲ್ಲಿ ಮಧ್ಯಪ್ರವೇಶಿಸಿದ ಮೇಯರ್ ಪ್ರೀತಿ ಕಾಮಕರ ಅವರು, ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಈ ಕುರಿತು ಸರ್ಕಾರದ ಅಭಿಪ್ರಾಯ ಪಡೆಯಲಾಗುವುದು ಎಂದು ರೂಲಿಂಗ್ ನೀಡಿದರು.

ಇದೇ ವೇಳೆ, ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಶ್ರೀನಿವಾಸ ತಾಳೂರ್ಕರ್ ನೇತೃತ್ವದಲ್ಲಿ ಪಾಲಿಕೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಬೆಳಗಾವಿ ಕರ್ನಾಟಕದ್ದು ಎಂದು ಘೋಷಣೆ ಕೂಗುತ್ತಾ ಸಭೆಗೆ ನುಗ್ಗಲು ಪ್ರಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ನಂತರ ಮೇಯರ್ ಮತ್ತು ಉಪಮೇಯರ್ ಸ್ಥಳಕ್ಕೆ ಬಂದು ಹೋರಾಟಗಾರರಿಂದ ಮನವಿ ಸ್ವೀಕರಿಸಿದರು. ಆಡಳಿತ ಪಕ್ಷದಲ್ಲಿರುವ ಬಿಜೆಪಿ ಮತ್ತು ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ ಸದಸ್ಯರ ನಡುವೆ ಈ ವಿಚಾರದಲ್ಲಿ ಒಮ್ಮತವಿದ್ದರೂ, ಎಂಇಎಸ್ ಸದಸ್ಯರ ನಡೆಯಿಂದಾಗಿ ಪಾಲಿಕೆ ಸಭೆ ರಣರಂಗವಾಗಿ ಪರಿಣಮಿಸಿತು.



ಮರಣ ಹೊಂದಿದವರ ಖಾತೆಗೆ ಗೃಹಲಕ್ಷ್ಮಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮರಣ ಹೊಂದಿದ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ರೂ.22 ಕೋಟಿ ಅನುದಾನ ವರ್ಗಾವಣೆ ಆಗಿದೆ ಎಂಬ ಮಾಹಿತಿಯನ್ನು ರಾಜ್ಯ ಕಚೇರಿ ತಿಳಿಸಿದ್ದುಫಿ, ಈ ಸಹಾಯಧನ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಫಲಾನುಭವಿಗಳ ಮಾಹಿತಿಯನ್ನು ಪಡೆಯಲು ಕ್ರಮ ಕೈಗೊಳ್ಳಬೇಕೆಂದು ದ.ಕ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಸೂಚಿಸಿದ್ದಾರೆ.

ಮಂಗಳವಾರ ದ.ಕ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲಾಖೆಯ ಮಾಹಿತಿಯಲ್ಲಿ ಜೀವಂತವಿರುವ ಗೃಹಲಕ್ಷ್ಮಿ ಫಲಾನುಭವಿಯು ಮರಣ ಹೊಂದಿರುವುದಾಗಿ ದಾಖಲಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಮುಂದಿನ ಸಭೆಗೆ ವರದಿ ಸಲ್ಲಿಸುವಂತೆ ಸೂಚಿಸಿದರು.

ಫಲಾನುಭವಿಗಳ ಮಾಹಿತಿ ನೀಡಲು ಭರತ್ ಮುಂಡೋಡಿ ಸೂಚನೆ

ಮರಣ ಹೊಂದಿದ ಫಲಾನುಭವಿಯ ಹೆಸರು, ಖಾತೆ ಸಂಖ್ಯೆ ಹಾಗೂ ಬ್ಯಾಂಕಿನ ವಿವರಗಳು ಇದ್ದಲ್ಲಿ ಬ್ಯಾಂಕ್ ಮುಖಾಂತರ ಕ್ರಮ ಕೈಗೊಳ್ಳಬಹುದು. ಇಲ್ಲವಾದಲ್ಲಿ ಗ್ರಾಮದಲ್ಲಿ ಮರಣಹೊಂದಿದವರ ಮಾಹಿತಿ ಗ್ರಾಮ ಕರಣಿಕರ ಕಚೇರಿಯಲ್ಲಿ ಲಭ್ಯವಿರುತ್ತದೆ. ಅಂತಹ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪಡೆದಲ್ಲಿ ಮರಣ ಹೊಂದಿದ ಫಲಾನುಭವಿಯ ಖಾತೆಗೆ ಸಹಾಯಧನ ಬಿಡುಗಡೆ ಮಾಡುವುದನ್ನು ತಡೆಹಿಡಿಯಬಹುದು. ಮೃತ ಫಲಾನುಭವಿಯ ಮರಣ ಪ್ರಮಾಣ ಪತ್ರ ಬಂದ ತಕ್ಷಣ ಫಲಾನುಭವಿಗಳ ಪಟ್ಟಿಯಿಂದ ಹೆಸರನ್ನು ತೆಗೆಯಬೇಕು. ಅವರ ಹೆಸರು, ಬ್ಯಾಂಕ್ ವಿವರಗಳಿದ್ದಲ್ಲಿ ಬ್ಯಾಂಕ್ ಮುಖಾಂತರ ಖಾತೆಯನ್ನು ಸ್ಥಗಿತಗೊಳಿಸಲು ಕ್ರಮವಹಿಸಬೇಕು ಎಂದು ಅವರು ಸೂಚಿಸಿದರು

ಮತಕ್ಕಾಗಿ ಹಿಜಾಬ್ ಬಳಕೆ: ಅಶೋಕ

ಬೆಂಗಳೂರು: ದಾವಣಗೆರೆ ಉಪಚುನಾವಣೆ ಸುತ್ತ ನಡೆದ ಘಟನೆಗಳ ನಂತರ ಅಲ್ಪಸಂಖ್ಯಾತರ ಆಕ್ರೋಶಕ್ಕೆ ಬೆದರಿರುವ ಕಾಂಗ್ರೆಸ್ ಸರ್ಕಾರ, ಈಗ ತನ್ನ ಮತಬ್ಯಾಂಕ್ ಉಳಿಸಿಕೊಳ್ಳಲು ಹಿಜಾಬ್ ಅಸ್ತ್ರವನ್ನು ಕೈಗೆತ್ತಿಕೊಂಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದ ನೈಜ ಸಮಸ್ಯೆಗಳಾದ ಬೆಲೆ ಏರಿಕೆ, ಭ್ರಷ್ಟಾಚಾರ, ರೈತರ ಸಂಕಷ್ಟ, ಕಾನೂನು ಸುವ್ಯವಸ್ಥೆಯ ವೈಫಲ್ಯ - ಇವೆಲ್ಲದರ ಬಗ್ಗೆ ಮೌನವಾಗಿರುವ ಕಾಂಗ್ರೆಸ್ ಸರ್ಕಾರ, ಮುನಿಸಿಕೊಂಡಿರುವ ಮುಸ್ಲಿಂ ಮತ ಬ್ಯಾಂಕ್‌ಗೆ ಹಿಜಾಬ್ ಮೂಲಕ ಮುಲಾಮು ಹಚ್ಚಲು ಹೊರಟಿದೆ ಎಂದು ಆಕ್ಷೇಪಿಸಿದ್ದಾರೆ.



ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ 2022ರಲ್ಲಿ ಅಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ವಸ್ತ್ರಸಂಹಿತೆಯನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಮುಖ್ಯ ಎಂದು ತೀರ್ಪು ನೀಡಿತ್ತು. ಈಗ ಕೋರ್ಟ್ ಆದೇಶವನ್ನೇ ಗಾಳಿಗೆ ತೂರಿ ಒಂದು ಸಮುದಾಯದ ಓಲೈಕೆಗೆ ಮುಂದಾಗಿರುವುದು ಯಾವ ಸೀಮೆ ಜಾತ್ಯತೀತತೆ? ಒಂದು ಸಮುದಾಯದ ಹಿಜಾಬ್‌ಗೆ ಹಸಿರು ನಿಶಾನೆ ತೋರಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಕೇಸರಿ ಶಾಲುವಿಗೆ ಮಾತ್ರ ನಿಷೇಧ ಹೇರಿದೆ. ನಿಮ್ಮ ಈ ಓಲೈಕೆ ರಾಜಕಾರಣ ಹಿಂದುಗಳಿಗೆ ಅರ್ಥವಾಗುವುದಿಲ್ಲ ಎಂದು ಭಾವಿಸಿದ್ದೀರಾ ಮುಖ್ಯಮಂತ್ರಿಗಳೇ? ಎಂದು ಪ್ರಶ್ನಿಸಿದ್ದಾರೆ.

ಶಾಲಾ-ಕಾಲೇಜುಗಳನ್ನು ಸಮಾನತೆಯ ಕೇಂದ್ರಗಳನ್ನಾಗಿ ನೋಡುವ ಬದಲು, ಧರ್ಮದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿಭಜಿಸುತ್ತಿರುವ ನಿಮ್ಮ ನಡೆಯೇ ನಾಚಿಕೆಗೇಡು. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರ ಅತಿಯಾದ ಓಲೈಕೆ ರಾಜಕಾರಣ ಮಾಡಿ ಯಾವ ದುಸ್ಥಿತಿಗೆ ತಲುಪಿದೆಯೋ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರಕ್ಕೂ ಅದೇ ಗತಿ ಕಾದಿದೆ. ಕರ್ನಾಟಕದಲ್ಲಿ ತುಷ್ಟೀಕರಣದ ಪರಾಕಾಷ್ಠೆ ತಲುಪಿರುವ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರು ತಕ್ಕ ಪಾಠ ಕಲಿಸುವುದು ಗ್ಯಾರಂಟಿ. ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಸಂವಿಧಾನ ಮತ್ತು ನ್ಯಾಯಾಂಗದ ಆಶಯಗಳನ್ನು ಬಲಿಕೊಡುತ್ತಿರುವ ಈ ಸರ್ಕಾರಕ್ಕೆ ಜನರೇ ಅಂತ್ಯ ಹಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ತಡೆಗೋಡೆಗೆ ಅನುದಾನ: ಸಚಿವ

ಕುಂದಾಪುರ: ಸೇತುವೆ ಸಹಿತ ಕಿಂಡಿ ಅಣೆಕಟ್ಟು, ಉಪ್ಪು ನೀರಿನ ತಡೆಗಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟುಗಳ ನಿರ್ವಹಣೆಗಾಗಿ ವರ್ಷಕ್ಕೆ ಸರಕಾರದಿಂದ 20 ಕೋ.ರೂ. ಖರ್ಚು ಮಾಡುತ್ತಿದ್ದೇವೆ. 5 ವರ್ಷಕ್ಕೆ ನಿರ್ವಹಣೆಗಾಗಿ ಟೆಂಡರ್ ಸಹ ಕರೆದು ಕೊಡಲಾಗುತ್ತಿದೆ. ಆದರೆ ಯಾರ್ಯಾರು ಏನೇನು ಕಾಮಗಾರಿ ಮಾಡಿದ್ದಾರೆ. ಆದರ ಸಂಪೂರ್ಣ ಮಾಹಿತಿ ತರಿಸಿಕೊಂಡು, ಪರಿಶೀಲನೆ ಮಾಡುವ ಮೂಲಕ ಇಲಾಖೆಯಿಂದಲೇ ನಿಗಾವಹಿಸಲಾಗುತ್ತಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.



ಅವರು ಬುಧವಾರ ಕುಂದಾಪುರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ನಮ್ಮ ಇಲಾಖೆಗೆ ವರ್ಷಕ್ಕೆ 50 ಕೋ.ರೂ. ಅಂದರೆ ತಿಂಗಳಿಗೆ 4.16 ಕೋ.ರೂ. ಬಿಡುಗಡೆಯಾಗುತ್ತದೆ. ತಡೆಗೋಡೆ ನಿರ್ಮಾಣಕ್ಕೆ ಗರಿಷ್ಠ ಅರ್ಜಿ ಬರುತ್ತಿದೆ. ಎಲ್ಲಿ ಹೆಚ್ಚಿನ ಅವಶ್ಯಕತೆ ಇದೆಯೋ ಅಲ್ಲಿಗೆ ಖಂಡಿತ ಆದ್ಯತೆ ನೆಲೆಯಲ್ಲಿ ಕೊಡುತ್ತೇವೆ. ಕರಾವಳಿ ಭಾಗದ ನದಿ ಕೊರತೆ ತಡೆಗೋಡೆ ನಿರ್ಮಾಣಕ್ಕೂ ಸಾಧ್ಯವಾದಷ್ಟು ಅನುದಾನ ನೀಡಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ನದಿಗಳ ಜೋಡಣೆ ಯೋಜನೆ ಬಗ್ಗೆ ಏನೇ ಇದ್ದರೂ ಕೇಂದ್ರ ಸರಕಾರವೇ ಕ್ರಮ ಕೈಗೊಳ್ಳಬೇಕು. ಈಗಾಗಲೇ ಇಲಾಖೆಯಿಂದ ಅನೇಕ ಬಾರಿ ಕೇಂದ್ರ ಜಲಶಕ್ತಿ ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಡಿಸಿಎಂ ಡಿಕೆಶಿ ಜತೆಗೂಡಿ ಸ್ವತಃ ನಾನು ಕೇಂದ್ರ ಸಚಿವರನ್ನು ಭೇಟಿಯಾಗಿ 3,200 ಕೋ.ರೂ. ಮೊತ್ತದ ಯೋಜನೆಗಳ ಪ್ರಸ್ತಾವನೆ ಸಲ್ಲಿಸಿದ್ದೇನೆ. ಆದರೆ ಈವರೆಗೆ ಯಾವುದೇ ಅನುದಾನ ಬಂದಿಲ್ಲ ಎಂದವರು ಸ್ಪಷ್ಟಪಡಿಸಿದರು.

ನೀಟ್ - ಯುಜಿ ಪ್ರಶ್ನೆ ಪತ್ರಿಕೆ ಸೋರಿಗೆ ಬಗ್ಗೆ ಪೂರ್ತಿ ಮಾಹಿತಿಯಿಲ್ಲ, ಎಲ್ಲೂ ಯಾವ ಪ್ರಶ್ನೆ ಪತ್ರಿಕೆಗಳೂ ಸೋರಿಕೆಯಾಗಬಾರದು ಅನ್ನುವ ಕಟ್ಟುನಿಟ್ಟಿನ ಆದೇಶವಿದೆ. ಈ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ. ಕಳೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ವೇಳೆ ಸೋರಿಕೆಯಾಗದ ಹಾಗೇ ಕ್ರಮ ಕೈಗೊಂಡಿದ್ದೇವೆ. ಈ ರೀತಿಯ ಸೋರಿಕೆ ಆಗಬಾರದು. ಅಂತವರ ಮೇಲೆ ಮೊದಲು ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ರಾಜ್ಯದಲ್ಲಿ ಮೊದಲಿದ್ದ ಹಾಗೇ ಸಿಇಟಿ ಜಾರಿಗೆ ರಾಜ್ಯ ಸಚಿವ ಸಂಪುಟವೇ ತೀರ್ಮಾನ ಕೈಗೊಳ್ಳಲಿದೆ. ಎಂದರು.

ರಾಗಿಗೆ ಬೆಂಬಲ ಬೆಲೆ ಏರಿಕೆ ಸ್ವಾಗತ


ಬೆಂಗಳೂರು: ಕೇಂದ್ರ ಸರ್ಕಾರದ ಸರ್ಕಾರದ ಸಂಪುಟ ಸಭೆಯಲ್ಲಿ ಕ್ವಿಂಟಲ್ ರಾಗಿ ಬೆಳೆಗೆ 2026-27ರ ಸಾಲಿನಲ್ಲಿ 5,205 ರೂ. ಬೆಂಬಲ ಬೆಲೆ ನಿಗದಿಪಡಿಸಲು ಒಪ್ಪಿಗೆ ನೀಡಿದ ನಿರ್ಧಾರವನ್ನು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಸ್ವಾಗತಿಸಿದ್ದಾರೆ.



ರಾಗಿಗೆ ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ 5,205 ರೂ. ನಿಗದಿಪಡಿಸಿರುವುದು ಅತ್ಯಂತ ಸ್ವಾಗತಾರ್ಹ ಹಾಗೂ ರೈತಪರ ನಿರ್ಧಾರವಾಗಿದೆ. ಇದು ಲಕ್ಷಾಂತರ ರೈತರಿಗೆ, ವಿಶೇಷವಾಗಿ ರಾಜ್ಯದಲ್ಲಿ, ದೊಡ್ಡ ಉತ್ತೇಜನ ಮತ್ತು ನೆಮ್ಮದಿಯನ್ನು ನೀಡಲಿದೆ. ಕರ್ನಾಟಕದಲ್ಲಿ ರಾಗಿ ಕೇವಲ ಒಂದು ಬೆಳೆ ಮಾತ್ರವಲ್ಲ, ಗ್ರಾಮೀಣ ಕುಟುಂಬಗಳ ಜೀವನೋಪಾಯ, ಆಹಾರ ಭದ್ರತೆ ಮತ್ತು ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ ಎಂದು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5983

ಎಡದಿಂದ ಬಲಕ್ಕೆ
1.ನಿಧಾನ ನಡಿಗೆ-ಮಂದಗಮನ (4)
3. ಮನುಷ್ಯರನ್ನು ಬಲಿಕೊಡುವ ಯಜ್ಞ (4)
5.ಸರ ಧರಿಸಿ ಕತ್ತು ತಿರುಗಿಸಿ ಮಾಡಿದ ವ್ಯಾಯಾಮ (4)
8.ನಕಲುಗಳಿಗಿಂತ ಮೊದಲು ಇರುವ ದಸ್ತಾವೇಜು (4)
10. ಹಗುರವಾಗಿ ತೇಲುತ್ತಿರುವ ನಾವೆ (3)
11. ನಾವು ವಾಸಿಸುವ ಭೂಮಿ (3)
12.ಸಂಪಿಗೆ ಹೂವು ಇಲ್ಲಿ ತಿರುಗಿದೆ (3)
14.ಮಾರ್ದನಿಗೆ ಓಗೊಟ್ಟ ಮಹಿಳೆ (3)
16.ಮಂಗಳನಿರುವ ಸಪ್ತಾಹದ ದಿನ (4)
17.ಪೂರ್ಣ ಮಾಗಿರುವುದು ತಿರುಗಿದೆ (4)

ಮೇಲಿನಿಂದ ಕೆಳಕ್ಕೆ
2.ಗ್ರಾಮ್ಯ ಭಾಷೆಯಲ್ಲಿ ವ್ಯಾಪಾರ (3)
4.ರಸದಿಂದ ತುಂಬಿದ ಮಾವು (3)
6.ಇದು ಒಂದು ಗಾಳಿವಾದ್ಯ-ಶಹನಾಯಿ (3)
7.ಮೇಲೇರುವಿಕೆ ತಲೆಕೆಳಗಾಗಿದೆ (2)
8.ಮತ್ತೊಬ್ಬರ ವಿಷಯದಲ್ಲಿ ತೂರಿಸಬಾರದ್ದು (2)
9.ಶೌರ್ಯ-ಕಲಿತನದ ಸಮಾನಪದ (3)
11.ಮೈ ಮೇಲೆ ಹೊದೆವ ಉತ್ತರೀಯ (5)
13.ಶಶಿಯನ್ನೇ ಅಲಂಕಾರ ಮಾಡಿಕೊಂಡವನು-ಶಿವ (5)
14.ವಾಚಾಳಿ ಸರಳಭಾಷೆಯಲ್ಲಿ (4)
15.ಕಾರ್ಯಕ್ರಮವನ್ನು ನಡೆಸುವ ವ್ಯಕ್ತಿ (4)

5982 ಉತ್ತರ

ಎಡದಿಂದ ಬಲಕ್ಕೆ:
1.ಜಾಹೀರಾತು 2.ಜಾಲಂದರ
4.ಮಹೋನ್ನತಿ 6.ಮೊದಲಿಗ
7.ನೋಡುಗ 8.ಮೃಗಸಿರ
9.ವೀರಾಸನ 11.ವಾಡಿಕೆ
12.ಆಕಾಶ 13.ನಾಜೂಕು
15.ನಗೆಗೇಡಿ 16.ಉಗ್ರವಾದಿ

ಮೇಲಿನಿಂದ ಕೆಳಕ್ಕೆ :
1.ಜಾಗೃತಿ 3.ಗರ್ಗರ
5.ಮನೋರಮೆ
6.ಮೊಗವೀರ
8.ಮೃಗವಾಹನ
10.ಉಪಶಮನ 13.ನಾಡಿ
14.ಕುದಿ

ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹ | ಹೋರಾಟಗಾರ ಹಿರೇಮಠ ಕರೆ

ನಾಳೆಯಿಂದ ಸತ್ಯಪ್ರತಿಪಾದನೆ ಸತ್ಯಾಗ್ರಹ

ಧಾರವಾಡ: ಹುಬ್ಬಳ್ಳಿ–ಧಾರವಾಡ ಬೃಹತ್ ಮಹಾನಗರ ಪಾಲಿಕೆ ವಿಭಜಿಸಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ಮೇ.15ರಿಂದ ಪಾಲಿಕೆ ಕಚೇರಿ ಮುಂಭಾಗ ಸತ್ಯಪ್ರತಿಪಾದನೆ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಹೋರಾಟಗಾರ ಬಿ.ಡಿ.ಹಿರೇಮಠ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಹೈಕೋರ್ಟ್ ಮಾದರಿಯಲ್ಲೇ ನಿರಂತರ ಹೋರಾಟ ನಡೆಯಲಿದೆ. ಅಂದು ಬೆಳಿಗ್ಗೆ 11ಕ್ಕೆ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದ ನಂತರ ಪಾಲಿಕೆ ಕಚೇರಿ ಮುಂದೆ ಶಾಂತಿಯುತ, ಅಹಿಂಸಾತ್ಮಕ ಸತ್ಯಾಗ್ರಹ ನಡೆಸುವುದಾಗಿ ಹೇಳಿದರು.



ನಿರ್ಣಯ ರದ್ದತಿಗೆ ಆಗ್ರಹ: ಧಾರವಾಡದ ಅಭಿವೃದ್ಧಿ ಕುಂಠಿತದ ಹಿನ್ನಲೆ ಪ್ರತ್ಯೇಕತೆ ಕೂಗು ಎದ್ದಿದೆ. ಇದು ಕೇವಲ ಸಾಂಕೇತಿಕವಲ್ಲ, ನ್ಯಾಯ ಸಿಗುವವರೆಗೆ ಸತ್ಯಪ್ರತಿಪಾದನೆ ಚಳವಳಿ ನಡೆಯಲಿದೆ. ಬೃಹತ್ ಪಾಲಿಕೆ ನಿರ್ಣಯ ರದ್ದುಗೊಳಿಸುವಂತೆಯೂ ಆಗ್ರಹಿಸಿದರು.

ಹೋರಾಟ ಸಮಿತಿ ಅಧ್ಯಕ್ಷ ವೆಂಕಟೇಶ ಮಾಚಕನೂರ, ಪ್ರತ್ಯೇಕ ಪಾಲಿಕೆ ನಿರ್ಣಯ 2024 ಡಿ.28ರಲ್ಲಿ ಸಚಿವ ಸಂಪುಟ ಒಪ್ಪಿಗೆ ಪಡೆದು, 2025ರ ಜ.22ಕ್ಕೆ ಗೆಜೆಟ್ ನೋಟಿಫಿಕೇಶನ್ ಬಳಿಕ ಕಡತ ರಾಜ್ಯಪಾಲರ ಅಂಕಿತಕ್ಕೆ ಹೋಗಿದೆ. ಎ.28ರಿಂದ (11 ತಿಂಗಳಿಂದ) ರಾಜ್ಯಪಾಲರ ಕಚೇರಿಯಲ್ಲಿ ಬಾಕಿ ಇದೆ ಎಂದು ದೂರಿದರು.

ಮಾಜಿ ಸಭಾಪತಿ ಡಾ.ವೀರಣ್ಣ ಮತ್ತಿಕಟ್ಟಿ, ಯಾವುದೇ ಕಡತವನ್ನು ರಾಜ್ಯಪಾಲರು ಆರು ತಿಂಗಳು ಮಾತ್ರವೇ ತಮ್ಮ ಬಳಿ ಇಟ್ಟುಕೊಳ್ಳಬಹುದು. ಆದರೆ, ಧಾರವಾಡ ಪ್ರತ್ಯೇಕ ಪಾಲಿಕೆ ಕಡತ 11 ತಿಂಗಳಿಂದ ಬಾಕಿ ಉಳಿಸಿದ್ದು ಕಾನೂನು ಬಾಹಿರ. ಈ ಕುರಿತು ರಾಷ್ಟ್ರಪತಿ, ಪ್ರಧಾನಿಗೂ ಪತ್ರ ಬರೆದರೂ ಸಹ ಉತ್ತರ ಬಂದಿಲ್ಲ ಎಂದು ಗಂಭೀರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಾದೇವ ಹೊರಟ್ಟಿ, ವಿಠ್ಠಲ ಕಮ್ಮಾರ, ಪ್ರಕಾಶ ಘಾಟಗೆ, ಅರವಿಂದ ಏಗನಗೌಡರ, ಈಶ್ವರ ಶಿವಳ್ಳಿ, ಎಚ್.ಸಿ.ನೀರಾವರಿ, ವೀರಣ್ಣ ಶೆಟ್ಟರ್, ಬಸವರಾಜ ಜಾಧವ ಇದ್ದರು.

ಅಂತಿಮ ಎಚ್ಚರಿಕೆ

ರಾಜ್ಯಪಾಲರು ಪ್ರತ್ಯೇಕ ಪಾಲಿಕೆ ರಚನೆಯ ಪ್ರಸ್ತಾವನೆಗೆ ಅಂಕಿತ ಹಾಕದಿದ್ದರೆ ಅಥವಾ ನಿರ್ಧಾರ ವಿಳಂಬ ಮಾಡಿದರೆ, ಮುಂದಿನ ದಿನಗಳಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದು ಬಿ.ಡಿ.ಹಿರೇಮಠ ಎಚ್ಚರಿಸಿದರು.

ಸಿಡಿಲು ಸಹಿತ ಮಳೆ



ಮುಂಡಗೋಡ: ಬುಧವಾರ ಮಿಂಚು ಸಿಡಿಲು ಸಹಿತ ಬಿದ್ದ ಮಳೆಗೆ ಬಿಸಿಲಿನ ಬೇಗೆಯಿಂದ ಬೇಸತ್ತ ಜನತೆಗೆ ತುಸು ಸಮಾಧಾನ ತಂದಿದೆ. ಸಂಜೆ ಅರ್ಧ ಗಂಟೆಗೂ ಅಧಿಕ ಗುಡುಗು ಮಿಂಚು ಸಹಿತ ಮಳೆ ಸುರಿಯಿತು. ಕಳೆದ ಕೆಲ ದಿನಗಳಿಂದ ಬಿಸಿಲಿನ ತಾಪಮಾನ ವಾಡಿಕೆಗಿಂತ ಹೆಚ್ಚಾಗಿ ಜಳಕ್ಕೆ ತಾಳಲಾರದಷ್ಟು ಜನರು ಸಂಕಟ ಪಡುತ್ತಿದ್ದರು. ಯಾವಾಗ ಮಳೆ ಬಿದ್ದು ವಾತಾವರಣ ತಂಪಾಗುವುದೋ ಎಂದು ಜನ ಕಾದಿದ್ದರು. ಮಳೆಯ ದೊಡ್ಡದೊಡ್ಡ ಹನಿಗಳು ಉದುರುವ ಮೂಲಕ ಸುರಿದ ಮಳೆಯಿಂದ ರಸ್ತೆ ಚರಂಡಿಗಳು ತುಂಬಿ ಹರಿದವು. ಮಳೆಯೊಂದಿಗೆ ಬೀಸಿದ ಭಾರಿ ಗಾಳಿಯ ಆರ್ಭಟಕ್ಕೆ ಅಲ್ಲಲ್ಲಿ ಮರಗಳು ಬಿದ್ದಿದ್ದು, ಗ್ರಾಮೀಣ ಭಾಗಗಳಲ್ಲಿ ಕೆಲವು ಮರಗಳ ಟೊಂಗೆಗಳು ಬಿದ್ದು ರಸ್ತೆ ಸಂಚಾರ ಬಂದಾಗಿದ್ದವು ವಾಹನ ಚಾಲಕರೆ ಟೊಂಗೇಗಳನ್ನು ತೆರವುಗೊಳಿಸಿ ರಸ್ತೆ ಸಂಚಾರ ಸುಗಮಗೊಳಿಸಿದರು. ಅರಣ್ಯದಲ್ಲಿ ಒಣಗುತ್ತಿದ್ದ ಗಿಡ–ಮರಗಳಿಗೆ ಮಳೆ ನೀರಿನ ಆಸರೆ ಸ್ವಲ್ಪ ದೊರೆತಂತಾಯಿತು. ರಸ್ತೆಗಳ ಮೇಲೆ ಅಲ್ಲಲ್ಲಿ ಮಳೆ ನೀರು ನಿಂತಿರುವುದು ಕಂಡು ಬಂತು.

ಉಕ ರೈಲ್ವೆ ಯೋಜನೆಗಳು ಜಾರಿಯಾಗಲಿ

ಹುಬ್ಬಳ್ಳಿ: ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುವ ಅನೇಕ ರೈಲ್ವೆ ವಿವಿಧ ಕಾರಣಗಳಿಂದ ವರ್ಷಗಳ ಕಾಲ ನನೆಗುದಿಗೆ ಬಿದ್ದಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷರಾದ ಜಿ.ಕೆ. ಆದಪ್ಪಗೌಡರ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಉತ್ತರ ಕರ್ನಾಟಕದ ಜನರ ಬಹುಕಾಲದ ಕನಸಾಗಿರುವ ಬೆಳಗಾವಿ–ಕಿತ್ತೂರು– ಧಾರವಾಡ ರೈಲು ಮಾರ್ಗ ಹಾಗೂ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗಳು ವಿವಿಧ ಆಡಳಿ ತಾತ್ಮಕ ಹಾಗೂ ಭೂಸ್ವಾಧೀನ ಸಮಸ್ಯೆಗಳಿಂದ ವಿಳಂಬವಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಈ ಎರಡೂ ಯೋಜನೆಗಳು ಉತ್ತರ ಕರ್ನಾಟಕದ ಕೈಗಾರಿಕಾ, ವಾಣಿಜ್ಯ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿದ್ದು, ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಿವೆ ಎಂದು ಅವರು ತಿಳಿಸಿದ್ದಾರೆ.

ವಿಶೇಷವಾಗಿ ಬೆಳಗಾವಿ–ಕಿತ್ತೂರು–ಧಾರವಾಡ ರೈಲು ಮಾರ್ಗವು ಬೆಳಗಾವಿ ಮತ್ತು ಧಾರವಾಡ ನಡುವಿನ ಸಂಪರ್ಕವನ್ನು ಸುಗಮಗೊಳಿಸುವ ಜೊತೆಗೆ ಪ್ರಯಾಣದ ಅವಧಿಯನ್ನು ಕಡಿಮೆ ಮಾಡಲಿದ್ದು, ಬೆಳಗಾವಿ–ಕಿತ್ತೂರು ಕೈಗಾರಿಕಾ ವಲಯದ ಅಭಿವೃದ್ಧಿಗೆ ಹೊಸ ಚೈತನ್ಯ ನೀಡಲಿದೆ. ಇದೇ ರೀತಿ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆ ಉತ್ತರ ಕರ್ನಾಟಕವನ್ನು ಕರಾವಳಿ ಭಾಗದೊಂದಿಗೆ ಸಂಪರ್ಕಿಸುವ ಮಹತ್ವದ ಯೋಜನೆಯಾಗಿದ್ದು, ವ್ಯಾಪಾರ, ಪ್ರವಾಸೋದ್ಯಮ, ರಫ್ತು ಚಟುವಟಿಕೆ ಹಾಗೂ ಕೈಗಾರಿಕಾ ಅಭಿವೃದ್ಧಿಗೆ ದೊಡ್ಡ ಉತ್ತೇಜನ ನೀಡುವ ಸಾಮರ್ಥ್ಯ ಹೊಂದಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ರೈಲ್ವೆ ಮಾರ್ಗ ವಿಸ್ತರಣೆ, ಡಬ್ಲಿಂಗ್ ಹಾಗೂ ಹೊಸ ರೈಲು ಮಾರ್ಗ ನಿರ್ಮಾಣ ಯೋಜನೆಗಳು ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರು, ರೈತರು, ವ್ಯಾಪಾರಸ್ಥರು ಹಾಗೂ ಕೈಗಾರಿಕಾ ವಲಯವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಯೋಜನೆಗಳು ಪೂರ್ಣಗೊಂಡಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ಪ್ರವಾಸೋದ್ಯಮ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಉತ್ತೇಜನ ದೊರೆಯಲಿದ್ದು, ರಾಜ್ಯದ ಆರ್ಥಿಕ ಪ್ರಗತಿಗೆ ಹೊಸ ದಿಕ್ಕು ಸಿಗಲಿದೆ ಎಂದು ತಿಳಿಸಿದ್ದಾರೆ.

ಭೂಸ್ವಾಧೀನಕ್ಕೆಸಂಬಂಧಿಸಿದಪರಿಹಾರಧನವಿತರಣೆಯಲ್ಲಿ ಉಂಟಾಗಿರುವ ವಿಳಂಬ ಹಾಗೂ ಭೂ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳ್ಳದಿರುವುದರಿಂದ ಯೋಜನೆಗಳ ಅನುಷ್ಠಾನಕ್ಕೆ ಮತ್ತಷ್ಟು ತೊಂದರೆ ಉಂಟಾಗುತ್ತಿರುವುದು ಕಳವಳಕಾರಿ ವಿಚಾರವಾಗಿದೆ. ರಾಜ್ಯ ಸರ್ಕಾರವು ರೈತರೊಂದಿಗೆ ಸಮನ್ವಯ ಮತ್ತು ಮಾತುಕತೆಯ ಮೂಲಕ ನ್ಯಾಯಸಮ್ಮತ ಪರಿಹಾರವನ್ನು ಶೀಘ್ರವಾಗಿ ವಿತರಿಸಿ ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿ ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸುವ ಕಾರ್ಯವನ್ನು ವೇಗಗೊಳಿಸಬೇಕು ಎಂದು ಅವರು ವಿನಂತಿಸಿದ್ದಾರೆ.

IN THE COURT OF THE PRL, CIVIL JUDGE & IMFC, AT MUDHOL
FDP.NO.13/2025

BETWEEN:
SMT.SHIVAGANGAMMA HIREMATH. and others...**petitioners**
And:-
SRI, RUDRAYYA GURULINGAYYA KALMATH@ KALADAGIMATH, ...respondent

DRAFT MEMO FOR PAPER PUBLICATION

To.
R-(c).SMT.VIJAYALAKSHMI RUDRAYYA KALMATH @ KALADA GIMATH,D/o Late Rudrayya Kalmath Aged major.R/at Machakanur Village and Post,Lokapur Hobli,Mudhol Taluk,Bagalkot District-587313. PH:9591357408/9449768335.
R-1(d).SRI.JAYADEVA RUDRAYYA KALMATH @ KALADAGIMATH,S/o Late Rudrayya Kalmath, Aged major. R/at Machakanur Village and Post, Lokapur Hobli, Mudhol Taluk ,Bagalkot District-587313.PH: 9591357408/9449768335.
R-1(e).SRI.KEDARANATH RUDRAYYA KALMATH@ KALAD AGIMATH, W/o Late Rudrayya Kalmath, Aged major.R/at Machakanur Village and Post,Lokapur Hobli, Mudhol Taluk, Bagalkot District-587313. PH:9591357408/9449768335.
R-1(f).SMT.NIVEDITH RUDRAYYA KALMATH @ KALADAGIMATH, W/o Late Rudrayya Kalmath, Aged major. R/at Machakanur Village and Post, Lokapur Hobli, Mudhol Taluk Bagalkot District-587313. PH: 9591357408/9449768335.
...Proposed respondents

WHEREAS the above named petitioner has instituted the above petition against the defendant for partition even today the summons not yet served I am taking substitute service as paper publication in respect of proposed respondents No. R1 (c) to R1(f), who are residing in the cause title address.

Any person interested in his matter, may appear before this Hon'ble Court of theIN THE COURT OF THE PRL. CIVIL JUDGE & JMFC, AT MUDHOL at 11.00 AM On 1/7/26 to which date the case is posted for hearing.

Given under my hand and the seal of this court this the

By Order of the cou court
Sirastedar
Mudhol

ADVOCATE FOR PETITIONERS:
SRI. CHANNAVEERAYYA, S.K,
Advocate and legal consultant
NO.45, first floor, 1 Main Road, Qud Cross, Telecom Layout,
New Timber Yard, Bangalore-560026.
PH: 9739572903.

ಕ್ರಿಮಿನಲ್ ಮಿಸಲೇನಿಯಸ್ ನಂ: 38/2025
ಮಾನ್ಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಹಾನಗಲ್ಲ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ಶ್ರೀಮತಿ ಪಾರ್ವತೆವ್ವ ಕೋಂ ರಾಜಶೇಖರ ಹುಲಸೂರ ಸಾ॥ ಮಾಸನಕಟ್ಟಿ ತಾ॥ ಹಾನಗಲ್ಲ ಜಿಲ್ಲಾ ಹಾವೇರಿ ಹಾಗೂ ಇನ್ನೊಬ್ಬರು

ವಿರುದ್ಧ

ಎದುರುಗಾರರು : 1) ಶ್ರೀಮತಿ ಕಲ್ಪನಾ ಕೋಂ ಸಿಂಗಪ್ಪ ಹಾವಣಗಿ, ಸಾ। ಕುಂದೂರ ತಾ॥ ಶಿಗ್ಗಾಂವ ಜಿಲ್ಲಾ ಹಾವೇರಿ ಹಾಲಿವಸ್ತಿ ಸಾ॥ ಮಾಸನಕಟ್ಟಿ ತಾ। ಹಾನಗಲ್ಲ ಜಿಲ್ಲಾ ಹಾವೇರಿ ಹಾಗೂ ಇತರರು

ಇತ್ಯಾದಿ

ಈ ಪ್ರಕರಣದಲ್ಲಿ ಅರ್ಜಿದಾರರಾದ ನಾವು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟೀಸು ಏನೆಂದರೆ,

ನಾವು ದಿನಾಂಕ: 26–06–2025 ರಂದು ಮಾನ್ಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಹಾನಗಲ್ಲ ಇವರ ನ್ಯಾಯಾಲಯದಲ್ಲಿ ಅರ್ಜಿದಾರರ ಹಾಗೂ ಎದುರುಗಾರ ನಂ. 1ನೇದವರ ತಾಯಿಯಾದ ಶ್ರೀಮತಿ ನಾಗವ್ವ ಕೋಂ. ಚನಬಸಪ್ಪ ಸಂಕಣ್ಣನವರ ಇವರು ಹಾನಗಲ್ ತಾಲೂಕ ಮಾಸನಕಟ್ಟಿ ಗ್ರಾಮದಲ್ಲಿ ದಿನಾಂಕ: 07–08–2021 ರಂದು ಮೃತಿಯಾಗಿರುತ್ತಾಳೆ ಅಂತಾ ಮಾನ್ಯ ನ್ಯಾಯಾಲಯದಲ್ಲಿ ಸದರಿ ಮೃತಳ ಮರಣ ದಿನಾಂಕವನ್ನು ನಮೂದು ಮಾಡುವ ಕುರಿತು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಶ್ರೀಮತಿ ನಾಗವ್ವ ಕೋಂ ಚನಬಸಪ್ಪ ಸಂಕಣ್ಣನವರ ಇವರ ಮರಣದ ದಾಖಲಾತಿ ಕುರಿತು ಸಾರ್ವಜನಿಕರ ಅಥವಾ ಹಿತಾಸಕ್ತಿಯುಳ್ಳ ಯಾವುದೇ ವ್ಯಕ್ತಿಗಳ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ: 30–05–2026 ರಂದು ಬೆಳಿಗ್ಗೆ 11–00 ಘಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ವ ತಮ್ಮ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಯಾರದ್ದೂ ಯಾವುದೇ ತಂಟೆ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುವವರು ಇರುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸ್.

ಇಂದು ದಿ: 12–05–2026 ರಂದು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಬಸವರಾಜ ಕೆ. ಹಳಕಟ್ಟಿ, ಶಿರಸ್ತೇದಾರರು
ಹಾನಗಲ್ಲ ಸಿವ್ಹಿಲ್ ಜಡ್ಜ್ & ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹಾನಗಲ್ಲ
ಸಹಿ/– ಎನ್.ಎಸ್. ಅಕ್ಕಿ
ಅರ್ಜಿದಾರರ ಪರ ವಕೀಲರು, ಹಾನಗಲ್ಲ

ಕ್ರಿಮಿನಲ್ ಮೀಸಲೇನಿಯಸ್ ನಂ : 455/2026
ಮೇ: ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಮಾದೇವಪ್ಪ ತಂದೆ ಮರೆಪ್ಪ ದೇವರಮನಿ ಹಾಗೂ ಇನ್ನೊಬ್ಬರು.

ವಿರುದ್ಧ

ಎದುರುಗಾರರು : ಮೇ॥ ಜನನ ಮರಣಗಳ ನೋಂದಣಿ ಅಧಿಕಾರಿಗಳು ತಹಶೀಲ್ದಾರರು ಸವಣೂರ, ತಹಶೀಲ್ದಾರ ಕಾರ್ಯಾಲಯ ಸವಣೂರ, ತಾ: ಸವಣೂರ ಜಿ: ಹಾವೇರಿ

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿಯ ಅರ್ಜಿದಾರರು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟೀಸ ಏನೆಂದರೆ,

ಅರ್ಜಿದಾರರು ಸವಣೂರಿನ ಜೆ.ಎಮ್.ಎಫ್.ಸಿ. ಇವರ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯ ಸಹೋದರಿ(ಅತ್ತೆ)ಯಾದ ಫಕ್ಕೀರವ್ವ ತಂದೆ ದುರಗಪ್ಪ ಹರಿಜನ ಉರ್ಫ ದೇವರಮನಿ ಇವರು ಸವಣೂರ ತಾಲೂಕಾ ಪೈಕಿ ಚವಡಾಳ ಗ್ರಾಮದ ಅರ್ಜಿದಾರರ ಮನೆಯಲ್ಲಿ ದಿನಾಂಕ: 10–09–1999 ರಂದು ಮರಣ ಹೊಂದಿದ್ದು ಇರುತ್ತದೆ ಅಂತಾ ಘೋಷಿಸಲು ಅರ್ಜಿ ಸಲ್ಲಿಸಿದ್ದು ಇರುತ್ತದೆ. ಏಕೆಂದರೆ ಸದರಿಯವರ ಮರಣ ದಿನಾಂಕದ ಬಗ್ಗೆ ಎದುರುಗಾರರ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ಈ ಹಿಂದೆ ನೋಂದಣಿ ಇರುವುದಿಲ್ಲ. ಕಾರಣ ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಕುರಿತು ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರ ಮರಣ ದಿನಾಂಕ ಬಗ್ಗೆ ಯಾರಾದರೂ ತಕರಾರು ಮಾಡುವವರಿದ್ದರೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮೂಲಕ ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ : 15–06–2026 ರಂದು ಬೆಳಿಗ್ಗೆ 11–00 ಘಂಟೆಗೆ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು ಇಲ್ಲವಾದಲ್ಲಿ ಮಾನ್ಯ ನ್ಯಾಯಾಲಯದವರು ಈ ಪ್ರಕರಣಕ್ಕೆ ತಕರಾರು ಇರುವುದಿಲ್ಲ ಅಂತಾ ಪರಗಣಿಸಿ ಮುಂದಿನ ಆದೇಶಗಳನ್ನು ಮಾಡುವರು ತಿಳಿಯಿರಿ.ಇಂದು ದಿನಾಂಕ :11–05–2026 ರಂದು ನ್ಯಾಯಾಲಯದ ಮೊಹರ ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸ್ಥಳ : ಸವಣೂರ
ದಿನಾಂಕ : 11–05–2026

ಸಹಿ/– ಶಿರಸ್ತೇದಾರರು
1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯದಲ್ಲಿ
ಸಹಿ/– ಶ್ರೀ ಜೆ.ಎಸ್. ನೀರಲಗಿ
ಅರ್ಜಿದಾರರ ಪರ ವಕೀಲರು, ಸವಣೂರ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ವಿ–1/ಟೆಂಡರ–03/2026–27/619 ದಿನಾಂಕ: 11.05.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–1&2) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 18–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 19–05–2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 20–05–2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: H/Ac 5054-80-190-0-01-132KRDCL(Foot Bridge) During 2025-26 ವರ್ಕ ಇಂಡೆಂಟ್ (1) PWD/2026-27/BG/WORK_INDENT35367 (2) PWD/2026-27/BG/WORK_INDENT35368 (3) PWD/2026-27/BG/WORK_INDENT35369 (4) PWD/2026-27/BR/WORK_INDENT35568

(ಕೆಡಬ್ಲೂ–1,2) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/126/26-27 ದಿ: 11.05.2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE PRUNCIPAL CIVIL JUDGE & J.M.F.C. AT BALLARI
Cri. M.C. No. 425/2026

Between :
S. LINGANA GOUDA And Others ....Petitioner
And
The Tahasildar cum Register of Births and Deaths, Taluk Office, Kampli .....Respondent

NOTICE
TO WHOM SO EVER IT MAY CONCERNED

To,
Respondents:
The Tahasildar cum Register of Births and Deaths, Taluk Office, Ballari.

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioner's father/husband death certificate by name SHANTHAPPA @ SHANTANA GOUDA, S/o Late. DAKSHANAMURTHY GOUDA who died on 10-02-2019 at Ward No. 3, Near Maremma Temple, Metri Village and Post, Kampli Taluk, Ballari.

You are here by directed to appear in this court in person or by a pleader duly instructed on 22/06/2026 at about 11.00 am in the before this court to show cause against the above petitions filling wherein the petition will be heard and determined ex-parte.

Given under my hand and seal of the court on this day of 12th day of MAY- 2026.

By order of the court.
Sd/- Chief Ministerial Officer
P.C.J & J.M.F.C. Court Ballari.
Sd/- K.S.Veerabadrappa & O. Obalesha
Advocate for the Petitioners

IN THE COURT OF CIVIL JUDGE & JMFC AT SIRUGUPPA
Criminal. Misc. Case No: 427/2026

Between:
B.Shekhshavali S/o Late Rafiq sab, Aged about 30 years, R/o K. Belagal village, Sirugupppa (T) Ballari.(D) .....Petitioner
And
To,
The Tahasildar - Cum- Birth and Deaths Registrar Taluk Office Siruguppa & others .....Respondents

TO WHOM SO EVER IT MAY CONCERN

NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Father by name RAFIQ S/o. NABI SAB Who was expired on 10-04-2000 at the residence of the petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 16-06-2026 at 11.00 am before this court.

In default of your appearance on the date/day of above petition will be heard and determined as "Ex-parte"

Given under my hand & seal of the court this 13th day of May-2026.

By Order of the court,
Sd/- Chief Ministrial Officer,
Civil judge & JMFC Court Siruguppa.
Sd/-BABU SAHEB
Advocates Siruguppa,

ಕರ್ನಾಟಕ ಸರಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಉಪ–ವಿಭಾಗ, ರವರ ಕಚೇರಿ, ಕಲಬುರಗಿ

ಸಂಖ್ಯೆ:ಸಅಸಂ/ಕಲ/ಸಾಅ/ಇ–ಟೆಂಡರ್/ಸಿಆರ್–/2026–27 ದಿನಾಂಕ : 12.05.2026

ಟೆಂಡರ್ ಪ್ರಕಟಣೆ

(KPPP ಮೊದಲನೆ ಅವೃತ್ತಿಯಲ್ಲಿನ ಪ್ರೋರ್ಟಲ್ ಮೂಲಕ ಮಾತ್ರ)

ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗ ಕಛೇರಿಯಿಂದ 2026–27ನೇ ಸಾಲಿನಲ್ಲಿ ಕೆ.ಎಫ್.ಡಿ.ಎಫ್ ಮತ್ತು ಆರ್.ಎಸ್.ಪಿ. ಯೋಜನೆಗಳಡಿ ನೆಡುತೋಪು ನಿರ್ಮಾಣ/ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ಇ–ಟೆಂಡರ್‌ನ್ನು kppp.karnataka.gov.in ನಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಕ್ರ.ಸಂ ಕಾಮಗಾರಿಯ ವಿವರ : ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಅಹ್ವಾನಿಸಲಾಗಿದೆ. 1) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಟ** : 419100/– **ಗರಿಷ್ಟ** : 1242800/– 2) ಲೆಕ್ಕ ಶೀರ್ಷಿಕೆ : ಕೆ.ಎಫ್.ಡಿ.ಎಫ್ ಮತ್ತು ಆರ್.ಎಸ್.ಪಿ. 3) ಗುತ್ತಿಗೆದಾರರ ಅರ್ಹತೆ : 2026–27ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಣಿ ಮಾಡಿರಬೇಕು. 4) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.05.2026 ಅಪರಾಹ್ನ 4.00 ಗಂಟೆಯವರೆಗೆ, 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 26.05.2026 ಅಪರಾಹ್ನ 4.00 ಗಂಟೆ ನಂತರ, 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 27.05.2026 ಅಪರಾಹ್ನ 4.00 ಗಂಟೆ ನಂತರ (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದಲ್ಲಿ ಮಾತ್ರ ಆರ್ಥಿಕ ಬಿಡ್ ತೆರೆಯಲಾಗುವುದು. 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ಉಪ ವಿಭಾಗ, ಎಸ್.ಬಿ.ಟೆಂಪಲ್ ರೋಡ, ಕಲಬುರಗಿ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ಉಪ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ./ಕಲಬುರಗಿ/113/ದೇಶಪಾಂಡೆ ಪಬ್ಲಿಸಿಟಿ/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಿಜಯಪುರ ವಿಭಾಗ, ವಿಜಯಪುರ

ಸಂಖ್ಯೆ:ಕಕರಸಾ/ವಿವಿ/ಸಂಚಾರ/ವಾಣಿಜ್ಯ/361/2026–27 ದಿನಾಂಕ:30.04.2026

ಇ–ಟೆಂಡರ್ ಪ್ರಕಟಣೆ ಸಂಖ್ಯೆ; 11/2026
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು, ಉಪಹಾರ ಗೃಹಗಳು/ತೆರೆದ ಸ್ಥಳಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತವೆ.

1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 25.05.2026** ರ 17.28 **ಗಂಟೆಯ ವರೆಗೆ.**

2) ಆನ್‌ಲೈನ್ ಮೂಲಕ ಇ–ಟೆಂಡರ್ ತೆರೆಯುವ **ದಿನಾಂಕ: 27.05.2026** ರಂದು ಬೆಳಿಗ್ಗೆ 10.00 **ಗಂಟೆಯ ನಂತರ.**

ಟೆಂಡರ್ ಪ್ರಕಟಣೆಯ ಪ್ರತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ರವರ ಹೊಸ ತಂತ್ರಾಂಶ https://kppp.karnataka.gov.in ದಿಂದ ಪಡೆಯಬಹುದಾಗಿದೆ ಅಥವಾ DTO ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ವಿಷಯ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಬಂದು ವಿಚಾರಿಸಬಹುದಾಗಿದೆ. ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗದ ವಿಭಾಗೀಯ ಕಚೇರಿ (ಸಂಚಾರ ಶಾಖೆ) ಯಲ್ಲಿ ಬಂದು ವಿಚಾರಿಸಬಹುದಾಗಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ನಿಗಮ, ವಿಜಯಪುರ ವಿಭಾಗ

ವಾಸಾಸಂಇ/ವಿಜಯಪುರ/91/ಕೆಎಸ್‌ಎಂಸಿಎ/2026–27

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"

ಜಿನಕೊಬ / ಡಿ.ಎಮ್.ಎಫ್ / ಹೊರಗುತ್ತಿಗೆ / 2026/ 01/01 ದಿನಾಂಕ: 08.05.2026

ಟೆಂಡರ್ ಅವಧಿ ವಿಸ್ತರಣಾ ಪ್ರಕಟಣೆ (CORRIGENDUM)

ಬಳ್ಳಾರಿ ಜಿಲ್ಲೆಯ ಡಿ.ಎಂ.ಎಫ್ (DMF) ಕೋಶಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯನ್ವಯ ಹಾಗೂ ಸ್ಟಾಂಡರ್ಡ್ ಟೆಂಡರ್ ದಸ್ತಾವೇಜುಗಳ ಪ್ರಕಾರ ಈಗಾಗಲೇ ಕೆ.ಪಿ.ಪಿ ಪೋರ್ಟಲ್ (KPPP Portal) ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು.

ಆದರೆ, ತಾಂತ್ರಿಕ ಕಾರಣಗಳಿಂದಾಗಿ ಈ ಪ್ರಕಟಣೆಯು ಪತ್ರಿಕೆಗಳಲ್ಲಿ ಸಕಾಲಕ್ಕೆ ಪ್ರಕಟವಾಗದೇ ಇರುವುದರಿಂದ, ಆಸಕ್ತ ಬಿಡ್ದಾರರಿಗೆ ಹೆಚ್ಚಿನ ಕಾಲಾವಕಾಶ ನೀಡಲು ಟೆಂಡರ್ ಸಲ್ಲಿಕೆಯ ಅವಧಿಯನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ:

ಪ್ಯಾಕೇಜ್ ಕಾಮಗಾರಿ ವಿವರ: Providing Manpower Services on outsource basis for DMF Cell of Ballari District. DMA/2025-26/SE7481. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 90.50. **EMD (Rs):** 1,81,000/–

ವಿವರಗಳು ದಿನಾಂಕ ಮತ್ತು ಸಮಯ

ಟೆಂಡರ್ ಕುರಿತು ವಿಚಾರಣೆ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: **16.05.2026, ಸಂಜೆ 4:30 ರವರೆಗೆ.** ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19.05.2026, ಸಂಜೆ 4:30 ರವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **20.05.2026, ಸಂಜೆ 5:00 ಗಂಟೆಗೆ.** ಆರ್ಥಿಕ ಬಿಡ್ (Financial Bid) ತೆರೆಯುವ ದಿನಾಂಕ: **22.05.2026, ಬೆಳಿಗ್ಗೆ 11:00 ಗಂಟೆಗೆ**

ಪ್ರಮುಖ ಸೂಚನೆಗಳು: 1)ಮೇಲೆ ತಿಳಿಸಿದ ದಿನಾಂಕಗಳಂದು ಸಾರ್ವಜನಿಕ ರಜೆ ಘೋಷಣೆಯಾದಲ್ಲಿ, ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.2) ಆಸಕ್ತರು ಹೆಚ್ಚಿನ ವಿವರಗಳು ಮತ್ತು ನಿಬಂಧನೆಗಳಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ಪೋರ್ಟಲ್ **https://kppp.karnataka.gov.in/** ನಲ್ಲಿ ಲಾಗಿನ್ ಆಗಿ ಮಾಹಿತಿ ಪಡೆಯಬಹುದು.3)ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ (ದೂರವಾಣಿ ಸಂಖ್ಯೆ: 7760848568) ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/139

ಕ್ರಿಮಿನಲ್ 'ಮಿಸಲೇನಿಯಸ್: 37/2026
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ:ಶಿವರಾಜ ತಂದೆ ನಾಗಪ್ಪ ಕಲಕುಟಗರ ವಯಾ:25ವರ್ಷ,ಉದ್ಯೋಗ:ಶೇತ್ಕಿ ಸಾ:ಹನಮನಹಳ್ಳಿ ತಾ॥ಕುಂದಗೋಳ ಜಿ॥ಧಾರವಾಡ

ವಿರುದ್ಧ

ಎದುರುಗಾರರು:ಮಾನ್ಯ ತಹಶೀಲ್ದಾರರು, ಕುಂದಗೋಳ [ಜನನ–ಮರಣ ನೋಂದಣಿ ಅಧಿಕಾರಿಗಳು ಕುಂದಗೋಳ] ಸಾ॥ ತಾ॥ ಕುಂದಗೋಳ, ಮಾನ್ಯ ಗ್ರಾಮ ಲೇಕ್ಕಾಧಿಕಾರಿಗಳು, ಹನಮನಹಳ್ಳಿ [ಜನನ–ಮರಣ ನೋಂದಣಿ ಅಧಿಕಾರಿಗಳು ಕುಂದಗೋಳ] ಸಾ:ಹನಮನಹಳ್ಳಿ ತಾ॥ಕುಂದಗೋಳ,

ಆದೇಶ 5,ನಿಯಮ 20(1)(1ಎ)ರ ಅಡಿ
ಸಾರ್ವಜನೀಕ ನೋಟಿಸ್

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ ಅಜ್ಜನಾದ (ತಂದೆಯ ತಂದೆ)ಶ್ರೀ ಶಿವಪ್ಪ ತಂದೆ ಹನಮಂತಪ್ಪ ಕಲಕುಟಗರ ಇವರು ದಿನಾಂಕ: 01–01–1979 ರಂದು ಕುಂದಗೋಳ ತಾಲೂಕ ಪೈಕಿ ಅರ್ಜಿದಾರನ ಮನೆಯಾದ ಹನಮನಹಳ್ಳಿ ಗ್ರಾಮದಲ್ಲಿ ಮರಣದ ಕುರಿತು ನೋಂದಾಯಿಸಿ ಕೊಂಡು ಮರಣ ಪ್ರಮಾಣಪತ್ರ ಪೂರೈಸುವಂತೆ ಕೋರಿ ಮೇಲ್ಕಂಡ ಎದರುಗಾರನ ವಿರುದ್ಧ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ:– 12/06/2026 ರಂದು ಮುಂಜಾನೆ 10:30 ಕ್ಕೆ ನೇಮಿಸಿದ್ದು, ಮೇಲ್ಕಂಡ ವಿಷಯಕ್ಕೆ ಯಾವುದೇ ತಕರಾರು ಇದ್ದಲ್ಲಿ ಸದರಿ ದಿನಾಂಕದಂದು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ಈ ಹೊತ್ತು ದಿನಾಂಕ: 13/05/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತ್ತು.

ಕೋರ್ಟಿನ ಆಜ್ಞೆಯ ಮೇರಿಗೆ
ಸಹಿ/– ಶಿರಸ್ತೆದಾರ
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ
ಸಹಿ/– ಶ್ರೀ ಯು.ಎಮ್.ಪಾಟೀಲ
ಅರ್ಜಿದಾರನ ಪರ ವಕೀಲರು, ಕುಂದಗೋಳ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ, ಭಿಮರಾಯನಗುಡಿ–585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com

ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ /ಯೋಶಾ/2026–27/ 86 ದಿನಾಂಕ:–11.05.2026

ತಿದ್ದುಪಡಿ/ವಿಸ್ತರಣೆ ಪ್ರಕಟಣೆ

ಉಲ್ಲೇಖ:– 1) ಈ ಕಛೇರಿ ಟೆಂಡರ್ ಪ್ರಕಟಣೆ ಸಂ:21, ದಿನಾಂಕ: 10.04.2026

ಉಲ್ಲೇಖ ಟೆಂಡರ್ ಪ್ರಕಟಣೆ ಮೂಲಕ ಈ ಕಛೇರಿಯಿಂದ ಇ–ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಮುಖಾಂತರ Karnal Lift Irrigation Scheme on Turnkey Basis".(Work indent no:KBJNL/2025-26/ LI/WORK_INDENT2778)" ಕಾಮಗಾರಿಯ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಅವಧಿಯ ಘಟನಾವಳಿಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಕ್ರ.ಸಂ	ವಿವರ	ಪ್ರಕಟಿತ ದಿನಾಂಕ	ಪರಿಷ್ಕೃತ ದಿನಾಂಕ
1	ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟಿನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವುದು.	15.04.2026 ರಿಂದ	ಬದಲಾವಣೆ ಇರುವುದಿಲ್ಲಾ
2	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ.	12.04.2026 ರ ಸಂಜೆ: 5.00 ತನಕ	19.05.2026 ರ ಸಂಜೆ: 5.00 ರವರೆಗೆ
3	ಪ್ರಿ ಬಿಡ್ ಸಭೆಯ ದಿನಾಂಕ.	24.05.2026 ರಂದು ಬೆಳಿಗ್ಗೆ: 11.00 ಕ್ಕೆ	ಬದಲಾವಣೆ ಇರುವುದಿಲ್ಲಾ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ.	14.05.2026 ರಂದು ಬೆಳಿಗ್ಗೆ: 11.00 ಕ್ಕೆ	20.05.2026 ರಂದು ಸಂಜೆ: 5.30 ಗಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ.	18.05.2026 ರಂದು ಬೆಳಿಗ್ಗೆ: 11.00 ಕ್ಕೆ(ತಾತ್ಕಾಲಿಕ)	25.05.2026 ರಂದು ಬೆಳಿಗ್ಗೆ: 11.00 ಗಂಟೆಗೆ ಕ್ಕೆ(ತಾತ್ಕಾಲಿಕ)

ಉಳಿದಂತೆ ಉಲ್ಲೇಖ ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿದ ಇತರೆ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ

ವಾ.ಸಾ.ಸಂ.ಇ/ಯಾದಗಿರ/66/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–2/ಇ–ಟೆಂಡರ್ ಪ್ರಕಟಣೆ/2026–27/ 348, ದಿನಾಂಕ:12.05.2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–2, 3 ಮತ್ತು 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025–26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿ ಶಹಾಪುರ ತಾಲೂಕಿನ (1)31071/2ನೇ ಕರೆ, (2)35311, (3) 30820/3ನೇ ಕರೆ, (4) 35888, (5) 35889 ಮತ್ತು (6) 33049 ಸುರಪೂರ ತಾಲೂಕಿನ (1)30959/2ನೇ ಕರೆ & (2)34447 ಒಟ್ಟು 8 (ಎಂಟು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 18.05.2026 (11.30 ಗಂಟೆ ನಂತರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 21.05.2026 (01.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 26.05.2026 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್**:27.05.2026 (16.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ**:29.05.2026 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) **ಅಂತರ್ಜಾಲ ತಾಣದ ವಿಳಾಸ:https://kppp.karnataka.gov.in**

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/69/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ–581334

ದೂರವಾಣಿ ಸಂಖ್ಯೆ: 08387–295236 E-mail: dcf.honavar@gmail.com
ಸಂ. ಎ2/ಬಜೆಟ್/ಟೆಂಡರ್/ವಿವ–3/2025–26 ದಿನಾಂಕ: 06.05.2026

ಟೆಂಡರ ಪ್ರಕಟಣೆ

(1) ಹೊನ್ನಾವರ ವಿಭಾಗದ ಭಟಕಳ ಉಪವಿಭಾಗದಲ್ಲಿ ರಕ್ಷಣಾ ಶಿಬಿರಗಳ ಕಾವಲುಗಾರರನ್ನು, ಇಲಾಖಾ ವಾಹನಗಳಿಗೆ ವಾಹನ ಚಾಲಕರನ್ನು ಮತ್ತು ಗಣಕಯಂತ್ರ ನಿರ್ವಾಹಕರನ್ನು 2026–27 & 2027–28 ನೇ ಸಾಲಿಗೆ outsource (ಹೊರಗುತ್ತಿಗೆ) ಮೂಲಕ ಪಡೆಯುವ ಕುರಿತು. ದಿನಾಂಕ: 25.05.2026 ರಂದು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

(2) ಹೊನ್ನಾವರ ವಿಭಾಗದ ಹೊನ್ನಾವರ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026–27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

(3) ಹೊನ್ನಾವರ ವಿಭಾಗದ ಭಟಕಳ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026–27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.


(4) ಹೊನ್ನಾವರ ವಿಭಾಗದ ಕುಮಟಾ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026–27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

ಆಸಕ್ತ ಟೆಂಡರುದಾರರು https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

DIPR/KWR/KSMCA/121/26-27 D:.13.05.2026

ಜೈಲಿನಲ್ಲೂ 'ವ್ಯವಸ್ಥಾಪಕ'ರಾಗಿದ್ದರು ಮೈ. ಚ. ಜಯದೇವ



• ದತ್ತಾತ್ರೇಯ ಹೊಸಬಾಳೆ,
ಆರ್‌ಎಸ್‌ಎಸ್ ಸರಕಾರ್ಯವಾಹ

ಜಯದೇವರ ಹತ್ತಿರದ ಪರಿಚಿತರ ಸಾಲಿನಲ್ಲಿ ನಾನೂ ಒಬ್ಬ. 1971ರಲ್ಲಿ ನಾನು ನನ್ನೂರಿನಿಂದ ಬೆಂಗಳೂರಿಗೆ ಬಂದೆ. 1993ರವರೆಗೆ ಬೆಂಗಳೂರೇ ನನ್ನ ಕೇಂದ್ರ. ಆ 22–23 ವರ್ಷಗಳಲ್ಲಿ ನೂರಾರು ಸಲ ಜಯದೇವ ಅವರನ್ನು ಭೇಟಿಮಾಡಿ ಅವರಿಂದ ಅನೇಕ ಸಂಗತಿಗಳನ್ನು ಕಲಿಯುವ ಅವಕಾಶ ನನಗೆ ಸಿಕ್ಕಿತ್ತು. ಬೆಂಗಳೂರಿಗೆ ಬಂದ ಬಳಿಕ ರಾಷ್ಟ್ರೋತ್ಥಾನ ಪರಿಷತ್ತಿನ ಹಳೆಯ ಕಟ್ಟಡದ ಮೊದಲನೆಯ ಮಹಡಿಯ ಮೂಲೆಯ ಕೋಣೆಯಲ್ಲಿ ಅವರನ್ನು ಭೇಟಿಮಾಡಿದ್ದೆ. ಜಯದೇವ ಅವರು ಸಂಘದ ಕಾರ್ಯಕರ್ತರಾಗಿ ಬೆಂಗಳೂರಿನ ಉದ್ದಗಲವನ್ನೂ ಅಳೆದವರು. ನೂರಾರು, ಸಾವಿರಾರು ಮನೆಗಳ 1993ರಲ್ಲಿ ಸ್ವಯಂಸೇವಕರನ್ನು, ಅವರ ಪರಿವಾರದವರನ್ನು ಅತ್ಯಂತ ಹತ್ತಿರದಿಂದ ಆತ್ಮೀಯತೆಯಿಂದ ಮಾತನಾಡಿಸಿ, ಅವರಿಗೆ ವ್ಯಕ್ತಿಜೀವನದಲ್ಲಿ, ಕುಟುಂಬ ಜೀವನದಲ್ಲಿ, ಅವರ ವೃತ್ತಿಜೀವನದಲ್ಲಿ ಹೇಗಿರಬೇಕು ಹೇಗಿರಬಾರದು ಅನ್ನುವ ಪಾಠಗಳನ್ನು ಕಲಿಸಿದವರು. ದಾರಿಯನ್ನು ತೋರಿಸಿದವರು.


ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮೈ. ಚ. ಜಯದೇವ ಅವರನ್ನು ಜೈಲಿನಲ್ಲಿ ಹತ್ತಿರದಿಂದ ನೋಡುವಂತಹ ಅವಕಾಶ ನನಗಿತ್ತು. 1975ರ ಡಿಸೆಂಬರ್ 18ನೇ ತಾರೀಖು ಬೆಂಗಳೂರಿನ ಕಾರಾಗೃಹದಲ್ಲಿ ಮೀಸಾ ಬಂದಿಯಾಗಿ ಪ್ರವೇಶ ಪಡೆದೆ. 1976ರ ಜೂನ್ ತನಕ ಸುಮಾರು ಆರೂವರೆ ತಿಂಗಳು ಬೆಂಗಳೂರು ಜೈಲಿನಲ್ಲಿ ನಾವು ಜೊತೆಗಿದ್ದವು. ಆನಂತರ ಅವರನ್ನು ಗುಲ್ಬರ್ಗಾಕ್ಕೆ, ನನ್ನನ್ನು ಬಳ್ಳಾರಿಗೆ ವರ್ಗಾಯಿಸಿದರು.

ಜೈಲಿನಲ್ಲಿ ಇರಬೇಕಾದರೆ ಅಲ್ಲಿರುವಂಥವರ ಮಾನಸಿಕ ಸ್ಥಿತಿಯನ್ನು ಸಮವಾಗಿ ಕಾಪಾಡಬೇಕಾಗುತ್ತದೆ. ಜೈಲಿನಲ್ಲಿ ಇರುವಂತಹ ವ್ಯವಸ್ಥೆಯಲ್ಲಿ ರಾಜಕೀಯ ಖೈದಿಗಳಿಗೆ ಏನು ಸಿಗಬೇಕೋ ಅದು ಸರಿಯಾಗಿ ಸಿಗಬೇಕು. ಈ ಎಲ್ಲ ಸಂಗತಿಗಳ ಬಗ್ಗೆ ಜೈಲಿನಲ್ಲೂ ಒಬ್ಬ ಜನರಲ್ ಮ್ಯಾನೇಜರ್ ಆಗಿದ್ದವರು ಜಯದೇವ ಅವರು. ಅವರಿಗೆ ಮುಖ್ಯ ಸಹಕಾರಿಯಂತಿದ್ದ ನನಗೆ ಅವರ ಜೊತೆ ಒಡನಾಡುವುದೇ ಮುಖ್ಯ ಕೆಲಸ. ಆಗ ಜೈಲಿನ ಸೂಪರಿಂಟೆಂಡೆಂಟ್ ಚಬಲಾನಿ ಎಂಬ ಸಿಂಧಿ ವ್ಯಕ್ತಿ. ಅವರು ಖೈದಿಗಳ ಅಹವಾಲುಗಳನ್ನು ಕೇಳಲು ರಾಜಕೀಯ ಬಂದಿಗಳನ್ನು ಪ್ರತಿನಿಧಿಸುತ್ತಿದ್ದ ಜಯದೇವ ಅವರಿಗೆ ನಿತ್ಯ ಸುಮಾರು ಹನ್ನೊಂದೂವರೆ ಹೊತ್ತಿಗೆ ಭೇಟಿಮಾಡಲು ಅನುಮತಿಯನ್ನು ಕೊಟ್ಟಿದ್ದರು. ಜಯದೇವ ಅವರಿಗೆ ಸಹಾಯಕನಾಗಿ ನಾನು ಹೋಗುತ್ತಿದ್ದೆ.



ಅವರು ಚಬಲಾನಿಯವರ ಬಳಿಗೆ ಹೋಗುವ ಮೊದಲು ಕೆಲವು ಅಂಶಗಳನ್ನು ಬರೆದುಕೊಳ್ಳುತ್ತಿದ್ದರು. ಯಾರಿಗೆ ಏನು ಅವಶ್ಯಕತೆ ಇದೆ, ಏನೇನು ಸಮಸ್ಯೆಗಳಿವೆ ಇತ್ಯಾದಿ. ಅದನ್ನೆಲ್ಲ ಚಬಲಾನಿಯವರ ಜೊತೆ ಮಾತನಾಡುವ ಕೆಲಸ ಜಯದೇವರದ್ದು. ಸೂಪರಿಂಟೆಂಡೆಂಟ್ ಇದಕ್ಕೆ ಬೇಕಾದಂತಹ ಉತ್ತರ ಕೊಡುತ್ತಿದ್ದರು; ಇಂಥದ್ದನ್ನು ಮಾಡುತ್ತೇನೆ, ಇಂಥದ್ದನ್ನು ಮಾಡಬಹುದು ಇತ್ಯಾದಿ. ಜಯದೇವ ಅವರು ಅಧಿಕಾರಿಗಳಿಗೆಂದೂ 'ನಿಮಗೆ ಇದನ್ನು ಕೇಳೋಕೆ ಅಧಿಕಾರವಿಲ್ಲ' ಎಂದು ಹೇಳುವುದಕ್ಕೆ ಅವಕಾಶವನ್ನೇ ಕೊಡಲಿಲ್ಲ; ಅವರಿಗೆ ತನ್ನ ಸೀಮೆ ಎಲ್ಲಿದೆ ಎಂಬುದು ಗೊತ್ತಿತ್ತು. ತನ್ನ ಅಧಿಕಾರ ಎಲ್ಲಿಯ ತನಕ ಇದೆ ಎಂಬುದೂ ಗೊತ್ತಿತ್ತು. ಅದೆಲ್ಲ ಗೊತ್ತಿದ್ದೇ ಅವರು ಜೈಲಿನ ಅಧಿಕಾರಿಗಳ ಜೊತೆ ವ್ಯವಹರಿಸುತ್ತಿದ್ದರು.

ಜೈಲಿನ ಒಳಗಡೆ ಒಂದು ದಿವಸ ನಾವು ನಡೆದು ಹೋಗುತ್ತಿರಬೇಕಾದರೆ 'ಈ ಜೈಲಿನ ಒಳಗಡೆ ಎಷ್ಟು ಬ್ಯಾರಕ್‌ಗಳಿವೆ?' ಎಂದು ಕೇಳಿದರು. ನಾನು 'ಎಣಿಸಿಲ್ಲ' ಅಂದೆ. 'ಎಣಿಸು ನೋಡೋಣ' ಅಂದರು. ನಾನು ಎಣಿಸಿದೆ. 'ಇಷ್ಟಿವೆ' ಎಂದೆ. 'ಬರೆದುಕೊ' ಎಂದರು. 'ಎಷ್ಟು ಎಲೆಕ್ಟ್ರಿಕ್ ಕಂಬ ಇರಬಹುದು?' ಕೇಳಿದರು. 'ಈ ಕಂಬಗಳು ಹೀಗೇ ಎಲ್ಲಿಯ ತನಕ ಹೋಗುತ್ತದೆ?', 'ಜೈಲಿನ ಈ ತುದಿಯಿಂದ ಕೊನೆಯ ತನಕ ಹೋಗುತ್ತಿದೆ. 'ಜೈಲಿನ ಈ ತುದಿಯಿಂದ ಕೊನೆಯ ತನಕ ನಡೆದುಹೋದರೆ ಎಷ್ಟು ಹೆಜ್ಜೆ ಆಗುತ್ತದೆ?' ಎಂದು ಕೇಳಿದರು. 'ಸುಮಾರು ಸಾವಿರದ ಐವತ್ತು ಹೆಜ್ಜೆ'ನಾನೆಂದೆ. 'ಸರಿ. ಬರೆದುಕೋ' ಎಂದರು. ಬರೆದುಕೊಂಡೆ... ಈ ರೀತಿ ಸುಮಾರು 50–60 ಪ್ರಶ್ನೆಗಳು. ಕೊನೆಗೆ ಎಲ್ಲಿಯವರೆಗೆ ಅಂದರೆ, 'ಮೀಸಾ ಬಂದಿಗಳಲ್ಲಿ ಎಷ್ಟು ಜನ ಗಡ್ಡ ಬಿಟ್ಟಿದ್ದಾರೆ, ಎಷ್ಟು ಜನ ಕನ್ನಡಕ ಹಾಕುತ್ತಾರೆ' ಎನ್ನುವವರೆಗೂ ಬರೆದಿದ್ದೆ. ಯಾಕೆ ಹೀಗೆ ಬರೆಸುತ್ತಿದ್ದಾರೆ ಎಂದು ನನಗನ್ನಿಸುತ್ತಿತ್ತು. ಆದರೆ ನನಗೇನು, ಜೈಲಿನಲ್ಲಿ



ಕಾಲ ಕಳೆಯುವುದಕ್ಕೆ ಏನೋ ಒಂದು ಬೇಕಲ್ಲ ಎಂದುಕೊಂಡು ಅವನ್ನೆಲ್ಲ ಶ್ರದ್ಧೆಯಿಂದಲೇ ಮಾಡಿದ್ದೆ. ಇದಕ್ಕೆ ಜಯದೇವ ಅವರು ಹೇಳಿದ್ದು ಇಷ್ಟು; 'ನಾವು ಎಲ್ಲಿದ್ದೇವೋ ಆ ಸ್ಥಳದ ಪೂರ್ತಿ ಮಾಹಿತಿ ನಮಗೆ ಗೊತ್ತಿರಬೇಕು. ಜೈಲಿನ ಒಂದೊಂದು ಭಾಗದ ವಿವರವನ್ನೂ ಈ ರೀತಿ ನನ್ನ ಬಳಿ ಅವರು ಬರೆಸಿದ್ದರು. ಹೀಗೆ ಸೂಕ್ಷ್ಮ ಅವಲೋಕನವನ್ನು ವಿಸ್ತೃತವಾದಂತಹ ಆಲೋಚನೆಯನ್ನು ಹೇಗೆ ಮಾಡಬೇಕು, ನಮ್ಮ ಸುತ್ತಮುತ್ತಲ ಪರಿಸರವನ್ನು ಗಮನವಿಟ್ಟು ನೋಡುವುದು ಹೇಗೆ ಎಂಬುದನ್ನು ಸಹಜವಾಗಿ, ಆದರೆ ಯೋಜಿತವಾಗಿ ಅವರು ಮಾಡುತ್ತಾ ಹೋದರು. ನನಗೂ ಕಲಿಸಿದರು.

ಜಯದೇವರ ಮೇಲೆ ಅವರ ಬಂಧನದ ಎರಡು ದಿನಗಳ ನಂತರ, ಅಂದರೆ 1975ರ ನವೆಂಬರ್ 16ರಂದು ಕೇಸ್ ದಾಖಲಿಸಲಾಯಿತು. 1976ರ ಜೂನ್‌ನಲ್ಲಿ ಜಯದೇವರನ್ನು ಮತ್ತು ಅಜಿತ್‌ಕುಮಾರರನ್ನು ಕಲಬುರ್ಗಿ ಜೈಲಿಗೆ ಕಳಿಸಲಾಯಿತು. ಜಯದೇವರ ಜೈಲು ಪ್ರವೇಶದ ಮುನ್ನ ಒಂದೊಂದೂ ಒಂದೊಂದು ರೀತಿಯ ವ್ಯವಸ್ಥೆ ಇತ್ತು. ಮೀಸಾ ರಾಜಕೀಯ ಬಂದಿಗಳಿಗೆ ಕೊಡುವ ಸೌಲಭ್ಯಗಳಲ್ಲೂ ವ್ಯತ್ಯಾಸವಿತ್ತು. ಅದಕ್ಕೆ ಕಾರಣ ಬೆಳಗಾವಿ ಜೈಲು ಮುಂಬಯಿ ಕರ್ನಾಟಕದಲ್ಲಿದ್ದರೆ, ಬಳ್ಳಾರಿ ಜೈಲು ಮದ್ರಾಸ್ ಪ್ರೆಸಿಡೆನ್ಸಿ ಆಡಳಿತಕ್ಕೆ ಸೇರಿತ್ತು. ಬೆಂಗಳೂರಿನ ವ್ಯವಸ್ಥೆ ಹಳೆಯ ಮೈಸೂರಿನದು. ಹೀಗಾಗಿ ಜೈಲ್ ಮ್ಯಾನ್ಯುಯಲ್‌ಗಳಲ್ಲಿ ತಾರತಮ್ಯವಿತ್ತು. ಆಯಾ ಜೈಲುಗಳಲ್ಲಿ ಆಯಾ ಜೈಲು ಮ್ಯಾನ್ಯುಯಲ್‌ಗಳ ಪ್ರಕಾರ ನಡೆದುಕೊಳ್ಳಲಾಗುತ್ತಿತ್ತು. ಅವುಗಳನ್ನು ಬದಲಾಯಿಸುವ ಪರಿಸ್ಥಿತಿ ಇರಲಿಲ್ಲ. ನಾವು ಇದ್ದಿದ್ದರಲ್ಲಿ ಸಮಾನ ರೀತಿನೀತಿಗಳನ್ನು ತಂದು ಸುಧಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದೆವು. ಆಗ ಕಾನೂನಿನಲ್ಲಿ ಬದಲಾವಣೆ ತರಲು ಸಾಧ್ಯವಾಗದಿದ್ದರೂ ಆಮೇಲೆ ಆಯಿತು. ಈ ಬಗೆಯ ಸುಧಾರಣೆಗಳನ್ನು ತರುವ ಪ್ರಯತ್ನದಲ್ಲಿ ಜಯದೇವರ ಕೊಡುಗೆ ಬಹು ಮಹತ್ತ್ವದ್ದು.

ನಾನು ಬಂಧನಕ್ಕೊಳಗಾಗಿದ್ದು 1975ರ ಡಿಸೆಂಬರ್ 18ರಂದು. ನನಗಿಂತ ಒಂದು ತಿಂಗಳು ಮುಂಚೆಯೇ ಜಯದೇವರು ಜೈಲಿನಲ್ಲಿದ್ದರು. ಡಿಸೆಂಬರ್ 20ಕ್ಕೆ ನನಗೆ ಮೀಸಾ ಆಯಿತು. ನಾನು ಒಳಗೆ ಹೋದಾಗಿನಿಂದ ಜಯದೇವರಿಗೆ ಅಸಿಸ್ಟೆಂಟ್ ಆಗಿದ್ದೆನೆನ್ನಲಡ್ಡಿಯಿಲ್ಲ. ಜಯದೇವ 'ಬಿ' ಕ್ಲಾಸ್ ಖೈದಿ. ನಾನು ಮೀಸಾ. ಪ್ರತಿ ದಿನ ನಾವಿಬ್ಬರೂ ಜೈಲ್ ಸೂಪರಿಂಟೆಂಡೆಂಟ್ ಐಪಿಎಸ್ ಚಬಲಾನಿಯವರನ್ನು ಬೆಳಗ್ಗೆ 11 ಗಂಟೆಗೆ ಭೇಟಿ ಮಾಡುತ್ತಿದ್ದೆವು. ಅದು ಅವರೊಂದಿಗೆ ಆವಶ್ಯಕತೆಗಳನ್ನು ಕುರಿತು ತಿಳಿಸುವ ಸಂದರ್ಭ. ಜೈಲಿನಲ್ಲಿ ಉದ್ಭವಿಸುತ್ತಿದ್ದ ದಿನನಿತ್ಯದ ಸಮಸ್ಯೆಗಳನ್ನು ವಿವರಿಸುವುದೂ ಅವಕ್ಕೆ ಅವರಿಂದ ಪರಿಹಾರ ಪಡೆಯುವುದೂ ಅದರ ಉದ್ದೇಶ. ಜೈಲಿನಲ್ಲಿ ಬಂದಿಗಳ ಸಂಖ್ಯೆಯಲ್ಲಿ ಪ್ರತಿ ದಿನ ಬದಲಾವಣೆ ಇರುತ್ತಿತ್ತು. ಕೆಲವರಿಗೆ ವರ್ಗಾವಣೆ, ಕೆಲವರ ಆಗಮನ. ಹೀಗೆ ಸಂಖ್ಯೆಯಲ್ಲಿ ಏರುಪೇರು. ಅದಕ್ಕೆ ತಕ್ಕಂತೆ ರೇಶನ್ ವ್ಯವಸ್ಥೆಯನ್ನು ಅವರು ಮಾಡಬೇಕಿತ್ತು. ಮೂರು ನಾಲ್ಕು ದಿನಗಳಿಗೊಮ್ಮೆ ಆರ್ಡರ್‌ಗಳನ್ನು ಬದಲಾಯಿಸುತ್ತಿದ್ದರು.

ಅವರದು ಸದಾಕಾಲ ಅವಿಚಲ ಶಾಂತ ಮನಸ್ಸು, ಅದ್ಭುತ ಕೇಳುಗರು. ಗುಂಪುಗಳಲ್ಲಿ ಅವರಿರುವಾಗ ಉಳಿದವರು ಹರಟೆ ಹೊಡೆಯುತ್ತಿದ್ದರೂ ಜಯದೇವರು ಮುಗುಳುನಗುತ್ತ ಆಲಿಸುತ್ತಿದ್ದುದೇ ಹೆಚ್ಚು. ಅಂಥ ಸನ್ನಿವೇಶಗಳಲ್ಲಿ ಅವರ ಮಾತು ಬಹಳ ಕಡಮೆ. ಇನ್ನೊಬ್ಬರು ಮಾತನಾಡುವಾಗ ಅವರ ಮನಸ್ಸಿನಲ್ಲಿ ಏನು ವಿದ್ಯಮಾನ ನಡೆಯುತ್ತಿದೆ ಎಂದು ಜಯದೇವರು ಲೆಕ್ಕಹಾಕುತ್ತಿದ್ದರು. ಅವರ ಮಾತುಗಳ ಹಿನ್ನೆಲೆಯನ್ನು ಕುರಿತು ಯೋಚಿಸುತ್ತಿದ್ದರು. ಉದಾಹರಣೆಗೆ ಚಬಲಾನಿಯವರ ಭೇಟಿಯ ಹಿಂದಿನ ದಿನ ಮಧ್ಯಾಹ್ನವೆಲ್ಲ ಚರ್ಚಿಸಬೇಕಾದ ಅಂಶಗಳನ್ನು ಕುರಿತೇ ಅವರ ಮನಸ್ಸಿನಲ್ಲಿ ಚಿಂತನೆ ನಡೆಯುತ್ತಿತ್ತು. ಅವರ ಪಾಡಿಗೆ ಅವರು ಒಂದು ಕಡೆ ಕುಳಿತು ಆಲೋಚನೆಯಲ್ಲಿ ಮುಳುಗಿಹೋಗುತ್ತಿದ್ದರು. ತಮ್ಮ ಕೆಲಸವನ್ನು ಯಶಸ್ವಿಗೊಳಿಸಬೇಕಾದರೆ ಕೆಲವು ಅಂಶಗಳನ್ನು ಬಲವಾಗಿ, ಆದರೆ ಯಾವುದೇ ಉದ್ರೇಕ ಅಥವಾ ಆವೇಶಗಳ ಸ್ಪರ್ಶವಿಲ್ಲದಂತೆ, ಮಂಡಿಸುವುದು ಬಹು ಮುಖ್ಯ. ಆ ರೀತಿಯಲ್ಲಿ ಅವರು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಕೆಲವು ಬಾರಿ ವಿನಮ್ರವಾಗಿ ಮನವಿ ಮಾಡುವುದು, ಕೆಲವು ಬಾರಿ ಕಾನೂನಾತ್ಮಕವಾಗಿ ಮಂಡಿಸುವುದು, ಕೆಲವು ಬಾರಿ ಜೋಕ್ ಮಾಡುತ್ತಾ ವಿಷಯವನ್ನು ಸಂವಹಿಸುವುದು – ಅವರದೇ ಆದ ವಿಶಿಷ್ಟ ಶೈಲಿ. ಒಟ್ಟಾರೆ ಕಾರ್ಯ ಸಾಧಿಸಲು ಬೇಕಾದ ಎಲ್ಲ ಪ್ರಯೋಗಗಳನ್ನೂ ಮಾಡುತ್ತಿದ್ದವರು ಅವರು.

1983ರಲ್ಲಿ ಹೆಗಡೆ ಮುಖ್ಯಮಂತ್ರಿ ಆಗಿದ್ದಾಗ ಲಕ್ಷ್ಮೀಸಾಗರ್ ಅವರು ಕಾನೂನು ಸಚಿವರು. ಜಯದೇವರ ಅವರ ಭೇಟಿ ಆಗಾಗ ನಡೆಯುತ್ತಿತ್ತು. ಜಯದೇವರು ಜೈಲಿನಲ್ಲಿದ್ದಾಗ ಸುದೀರ್ಘ ಚಿಂತನ ನಡೆಸಿ ಜೈಲಿನಲ್ಲಿ ಎಲ್ಲ ಕಾಲಕ್ಕೂ ಆಗಬೇಕಾದ ಸುಧಾರಣೆಗಳನ್ನು ಕುರಿತು ಒಂದು ಪಟ್ಟಿಯನ್ನೇ ಸಿದ್ಧಪಡಿಸಿದ್ದರು. ಅವರ ಮನಸ್ಸಿನ ಅಂತರಾಳದಲ್ಲಿ ಏನೇನು ವಿದ್ಯಮಾನಗಳು ನಡೆಯುತ್ತಿದ್ದವೋ ದೇವರೇ ಬಲ್ಲ. ನನ್ನನ್ನು ಜೊತೆ ಮಾಡಿಕೊಂಡು ಸುತ್ತಾಡಲು ಹೋಗುವಂತೆ ಕರೆದುಕೊಂಡು ಹೋಗುತ್ತಿದ್ದರು. ಜೈಲಿನಲ್ಲಿನ ಮರಗಳು, ಅವುಗಳ ಸಂಖ್ಯೆ, ಗೋಡೆಗಳು, ಅವುಗಳ ಎತ್ತರ, ಜೈಲಿನ ಎಲ್ಲ ವ್ಯಕ್ತಿಗಳ ವಯಸ್ಸು, ಆರೋಗ್ಯಸ್ಥಿತಿ, ಆರ್ಥಿಕ ಹಿನ್ನೆಲೆ, ದೈಹಿಕ ಶಕ್ತಿ ಮುಂತಾದವನ್ನು ಯಾರ ಅರಿವಿಗೂ ಬಾರದಂತೆ ಸಂಗ್ರಹಿಸಿ ಅಂಕಿ ಅಂಶ ಸಿದ್ಧಪಡಿಸಿದೆವು. ಓಡಲು ಆಗದಂತಹ ಎಷ್ಟು ಜನ ವಯಸ್ಸಿನವರಿದ್ದಾರೆ. ಸಮಯ ಬಂದರೆ ಅವರನ್ನು ಹೊತ್ತೊಯ್ಯಬಲ್ಲಂಥ ಬಾಹುಬಲಿಗಳು ಎಷ್ಟು ಜನ, ವಿಭಿನ್ನ ವೈಚಾರಿಕತೆಯ ಜನರೆಷ್ಟು? ಅವರಲ್ಲಿ ಯಾರ್ಯಾರು ಎಷ್ಟೆಷ್ಟು? ಇದೆಲ್ಲ ನನ್ನ ಕೈಯಲ್ಲಿ ಬರೆಸಿದ್ದರು. ಹಾಗೆಯೇ ಜೈಲಿನ ಎಲ್ಲ ಮೀಸಾ ಬಂದಿಗಳಿಗೂ ಬಹು ದೊಡ್ಡ ಆಘಾತ ಉಂಟಾದ ಸಂದರ್ಭವೂ ಎದುರಾಯಿತು. ಅದು ಜೈಲಿನಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಿತು. ಮೀಸಾ ಬಂದಿಗಳ ಭವಿಷ್ಯವನ್ನು ಕರಾಳ ಕತ್ತಲೆ ಕವಿದಂತಾಯಿತು. ಆಗ ಜಯದೇವರು ನಿರ್ವಹಿಸಿದ ಪಾತ್ರ ನಮಗೆಲ್ಲ ಅವಿಸ್ಮರಣೀಯ.

ಅದು 1975ರ ಡಿಸೆಂಬರ್ ಮೂರನೆಯ ವಾರದ ಆರಂಭದ ದಿನಗಳು. ಸುಪ್ರೀಂಕೋರ್ಟ್‌ನಿಂದ ಹೊರಬಿದ್ದ ಒಂದು ಸುದ್ದಿ ಮೀಸಾ ಬಂದಿಗಳನ್ನೆಲ್ಲ ಥರಗುಟ್ಟಿಸಿಬಿಟ್ಟಿತು. ಆಗ ನಿರೇನ್ ಡೇ ಎಂಬುವರು ಅಟಾರ್ನಿ ಜನರಲ್ ಆಗಿದ್ದರು. ಪ್ರತಿ ಆರು ತಿಂಗಳುಗಳಿಗೊಮ್ಮೆ ಮೀಸಾವನ್ನು ಸರ್ಕಾರ ಮುಂದುವರಿಸುತ್ತಿತ್ತು. ಆಗ ಹಲವು ಕೋರ್ಟ್‌ಗಳಿಂದ ರಾಜಕೀಯ ನಾಯಕರನ್ನು ಬಿಡುಗಡೆ ಮಾಡಬೇಕೆಂದು ಹೇಬಿಯಸ್ ಕಾರ್ಪಸ್ ಅರ್ಜಿಗಳು ಹೋಗಿದ್ದವು. ಲಾಲ್ ಕೃಷ್ಣ ಅಡ್ವಾಣಿಯವರೂ ಅಂತಹ ಒಬ್ಬರು ಅರ್ಜಿದಾರರು.

ಮೀಸಾ ಎಂದರೆ ವಿಚಾರಣೆಯೂ ಇಲ್ಲ, ಅಹವಾಲೂ ಇಲ್ಲ, ಬಂದಿಯಾದವನು ದೇಶದ ಭದ್ರತೆಗೆ ಅಪಾಯಕಾರಿ ಮನುಷ್ಯನೆಂಬ ಭಯಂಕರ ಆರೋಪದ ಮೇಲೆಯೇ ಬಂಧನಕ್ಕೆ ಒಳಗಾಗಿರುವುದು. ಸರ್ಕಾರದ ಪರ ಸುಪ್ರೀಂಕೋರ್ಟ್‌ನಲ್ಲಿ ವಾದಮಾಡುತ್ತಿದ್ದವರು ನಿರೇನ್ ಡೇ. ನ್ಯಾಯಮೂರ್ತಿಗಳು ಅಟಾರ್ನಿ ಜನರಲ್ ಅವರನ್ನು 'ಜೈಲಿನಲ್ಲಿ ಬಂಧಿತನಾಗಿ ಒಳಗಿದ್ದ ವ್ಯಕ್ತಿ ಆರು ತಿಂಗಳ ನಂತರವೂ ಅಪಾಯಕಾರಿ ಎಂದು ಹೇಗೆ ರುಜುವಾತು ಮಾಡುತ್ತೀರಿ?' ಎಂದು ಕೇಳಿದಾಗ ಇಡೀ ಕೋರ್ಟ್ ತತ್ತರಿಸುವಂತೆ ಡೇ ಅವರು 'ಮೀಸಾ ಬಂದಿಗಳನ್ನು ದೇಶದ ಭದ್ರತೆಗಾಗಿ ಗುಂಡಿಟ್ಟುಕೊಂದರೂ ಅದನ್ನು ಪ್ರಶ್ನಿಸುವ ಹಕ್ಕು ನ್ಯಾಯಾಲಯಕ್ಕೆ ಇಲ್ಲ' ಎಂದು ಹೇಳಿಕೆಯ ಬಾಂಬ್ ಹಾಕಿದರೂ ಎಲ್ಲ ವಕೀಲರು ನ್ಯಾಯಮೂರ್ತಿಗಳು ಗಪ್‌ಚುಪ್ ಆಗಿ ಕುಳಿತಿದ್ದರು.


ಈ ಪರಿಸ್ಥಿತಿಯನ್ನು ಮತ್ತೆ ನಿಭಾಯಿಸಲು ಮುಂದಾದವರು ಜಯದೇವರೇ! ಎಲ್ಲರಿಗೂ ಸಮಾಧಾನ ಹೇಳುವ ಕೆಲಸ ಅವರದು. ಮೆರವಣಿಗೆಯ ಮೂಲಕ ಪ್ರತಿಭಟನೆ ತೋರಿಸಿದ ತರುಣರನ್ನು ಕರೆದು ಜಯದೇವ ಮಾತನಾಡಿಸಿದರು. 'ನೀವು ಹೀಗೆಲ್ಲ ಮಾಡುವುದು ಸರಿಯಲ್ಲ. ನೀವೇನೋ ಮನೆ ಮಠ ತೊರೆದು ಬಂದಿರುವ ಧೈರ್ಯಶಾಲಿಗಳು. ಯಾವುದಕ್ಕೂ ಹೆದರದಿರುವವರು. ಆದರೆ ಗೃಹಸ್ಥರೂ ವ್ಯಾಪಾರಸ್ಥರೂ ಮುಂತಾದ ಹಿರಿಯರನ್ನು ನೋಡಿ. ಇತರರ ಸ್ಥಿತಿಯನ್ನು ನೋಡಿ. ನಿಮ್ಮ ಈ ಬಗೆಯ ವರ್ತನೆಯಿಂದ ಅವರ ಭವಿಷ್ಯದ ಚಿಂತನೆ ಮತ್ತಷ್ಟು ನಿಗೂಢವಾಗುತ್ತದಲ್ಲವೇ?' ಎಂದು ವಿಧವಿಧವಾಗಿ ಓಲೈಸಿ ಶಾಂತಗೊಳಿಸಿದ್ದು ಅವರ ಕರ್ತೃತ್ವಶಕ್ತಿಯ ಇನ್ನೊಂದು ಉತ್ತಮ ಉದಾಹರಣೆ.

–ಪೂರ್ಣ ಲೇಖನ ಪುಸ್ತಕದಲ್ಲಿದೆ



ಮೈ.ಚ. ಜಯದೇವ ಕುರಿತ ಪುಸ್ತಕ ಲೋಕಾರ್ಪಣೆ ಇಂದು

ಪುಸ್ತಕ: ಅವಿಶ್ರಾಂತ ಧ್ಯೇಯ ಜೀವಿ–ಮೈ.ಚ.ಜಯದೇವ ಬದುಕು–ನೆನಪು
ಲೇಖಕರು: ಡಾ.ಬಾಬು ಕೃಷ್ಣಮೂರ್ತಿ ಮತ್ತು ಬೇಳೂರು ಸುದರ್ಶನ
ಸ್ಥಳ: ಟೌನ್ ಹಾಲ್, ಬೆಂಗಳೂರು
ದಿನಾಂಕ: ಮೇ 14
ಸಮಯ: ಸಂಜೆ 6:30ಕ್ಕೆ
ಲೋಕಾರ್ಪಣೆ: ಸುತ್ತೂರು ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಪುಸ್ತಕದ ಕುರಿತು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮಾತನಾಡಲಿದ್ದಾರೆ.
ಅತಿಥಿಗಳು: ಲೇಖಕರಾದ ಡಾ.ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ.ಕುಮಾರ್



ಒಂದು ಜೀವನ, ಒಂದು ಧ್ಯೇಯಾನುಸಂಧಾನ ಎಂಬ ಸೂತ್ರವನ್ನು ಜೀವನದುದ್ದಕ್ಕೂ ಪಾಲಿಸುತ್ತ ಅವಿಸ್ಮರಣೀಯರಾದ ಮೈ.ಚ. ಜಯದೇವ ಅವರು ರಾಷ್ಟ್ರೋತ್ಥಾನ ಪರಿಷತ್ತನ್ನು ಆರಂಭದ ದಿನಗಳಿಂದಲೂ ಅಂದರೆ 1965ರಿಂದಲೂ ಕಟ್ಟಿ ಬೆಳೆಸಿದವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಪಳಗಿದ ಜಯದೇವ ಅವರು, ತಮ್ಮ ದೂರದರ್ಶಿ ಚಿಂತನೆ, ರಾಷ್ಟ್ರನಿಷ್ಠ ಕರ್ತವ್ಯಪ್ರಜ್ಞೆ, ಕಠಿಣ ಪರಿಶ್ರಮದ ಮೂಲಕ ಸ್ವಸ್ಥ ಸಮಾಜನಿರ್ಮಾಣದ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ತು ಸ್ಥಿರ ಹೆಜ್ಜೆಗಳನ್ನಿಟ್ಟು ಮುನ್ನಡೆಯಲು ಕಾರಣೀಭೂತರಾದರು.

ವ್ಯವಸ್ಥಾಕುಶಲರೂ, ಅಸಾಮಾನ್ಯ ದಕ್ಷರೂ, ಸಂಘಟನೆಯ ರೂವಾರಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು ಮಹಾನಗರ ಕಾರ್ಯವಾಹ, ಪ್ರಾಂತ ಕಾರ್ಯವಾಹ, ಕ್ಷೇತ್ರೀಯ ಕಾರ್ಯವಾಹ, ಕ್ಷೇತ್ರೀಯ ಪ್ರಚಾರಕ, ಅಖಿಲ ಭಾರತೀಯ ಕಾರ್ಯಕಾರಿಣಿಯ ಆಮಂತ್ರಿತ ಸದಸ್ಯರು ಹೀಗೆ 5 ದಶಕಗಳಿಗೂ ಹೆಚ್ಚು ಕಾಲ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಸಂಘದ ಬೇರುಗಳನ್ನು ಗಟ್ಟಿಗೊಳಿಸಿದವರು.

ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅಮೃತ ಶಿಶುನಿವಾಸ, ಅಬಲಾಶ್ರಮ ಸೇರಿದಂತೆ ಬೆಂಗಳೂರಿನ ಅನೇಕ ಸಾಮಾಜಿಕ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ ನಿಂತವರು. ಈ ಎಲ್ಲ ಸಂಸ್ಥೆಗಳು ಮೂಲೋದ್ದೇಶದಂತೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಪ್ರೇರಣೆ ನೀಡುವುದರ ಜೊತೆಜೊತೆಗೆ ಅಗತ್ಯ ವ್ಯವಸ್ಥೆ, ಸಮರ್ಥ ಮತ್ತು ಸರಿಯಾದ ವ್ಯಕ್ತಿ ಜೋಡಣೆಯಂತಹ ಕೆಲಸಗಳನ್ನೂ ತೆರೆಯ ಹಿಂದೆ ನಿಂತು ಮಾಡಿದವರು ಮೈ.ಚ. ಜಯದೇವ ಅವರು.

ಸಂಸ್ಥೆಗಳನ್ನು ಭೌತಿಕ, ಬೌದ್ಧಿಕ, ಸಾಮಾಜಿಕವಾಗಿ ಕಟ್ಟುವಲ್ಲಿ ಮೈ ಚ ಜಯದೇವ ಹೊಂದಿದ್ದ ಕುಶಲತೆ ಅಸಾಮಾನ್ಯ

ಸಮಾಜಸೇವೆಯನ್ನೇ ಉಸಿರಾಗಿಸಿಕೊಂಡಿದ್ದ ಹಿರಿಯ ಚೇತನ



• ಬೇಳೂರು ಸುದರ್ಶನ,
ಕೃತಿಯ ಲೇಖಕರಲ್ಲೊಬ್ಬರು

ರಾಷ್ಟ್ರೋತ್ಥಾನ ಪರಿಷತ್ತಿನ ಸ್ಥಾಪನಾ ತಂಡದ ಸದಸ್ಯರೂ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರೂ ಆಗಿ ಸಮಾಜಸೇವೆಯ ಅಭಂಗಪೂಜೆಯನ್ನೇ ಉಸಿರಾಗಿಸಿಕೊಂಡು ಜೀವಿಸಿದ್ದ ಹಿರಿಯ ಚೇತನ ಶ್ರೀ ಮೈ ಚ ಜಯದೇವರ ಜೀವನ ಚರಿತ್ರೆ ಮತ್ತು ಅವರ ಒಡನಾಡಿಗಳ ನೆನಪುಗಳ ಸಂಕಲನ ಅವಿಶ್ರಾಂತ ಧ್ಯೇಯಜೀವಿ ಮೈ ಚ ಜಯದೇವ: ಬದುಕು–ನೆನಪು ಪುಸ್ತಕವನ್ನು ಹಿರಿಯ ಲೇಖಕ ಶ್ರೀ ಬಾಬು ಕೃಷ್ಣಮೂರ್ತಿ ಅವರೊಂದಿಗೆ ಬರೆದು ಪೂರೈಸಿದ ಕೃತಾರ್ಥತೆ ನನ್ನದು.





ಜೀವನೋಪಾಯಕ್ಕಾಗಿ ಯಾವ ಕೆಲಸವನ್ನಾದರೂ ಮಾಡಲು ಮುಂದಾಗಿದ್ದ(ಅಂದ್ರೆ, ದಿಕ್ಕು ದೆಸೆ ಇಲ್ಲದವನಾಗಿದ್ದ) ನನ್ನನ್ನು ಜಯದೇವರು ರಾಷ್ಟ್ರೋತ್ಥಾನಕ್ಕೆ(1987) ಸೇರಿಸಿಕೊಂಡು ಕಾರ್ಯಸಂಸ್ಕೃತಿಯ ಪಾಠಗಳನ್ನು ಕಲಿಸಿದರು. 2008–15ರ ಕಾಲಘಟ್ಟದಲ್ಲಿ ಅವರು ನನ್ನ ಹಿರಿಯ ಸ್ನೇಹಿತರೂ ಮಾರ್ಗದರ್ಶಕರೂ ಆಗಿದ್ದರು. ಆ ಕಾಲದಲ್ಲಿ ಅವರೊಂದಿಗೆ ಹಲವು ಸಾಮಾಜಿಕ ಸಂಗತಿಗಳ ಬಗ್ಗೆ ಚರ್ಚಿಸಿದ್ದೆ; ಹಲವೊಮ್ಮೆ ವಾದಿಸಿದ್ದೆ! ಅವರು ಮಾತ್ರ ಕಂಡೂಕಾಣಿಸದ ಕಿರುನಗುವಿನೊಂದಿಗೆ ಎಲ್ಲವನ್ನೂ ಸಹನೆಯಿಂದ ಕೇಳಿ ಅಗತ್ಯವಿದ್ದ ಸಂಗತಿಗಳ ಬಗ್ಗೆ ಸಕ್ರಿಯವಾಗಿಯೇ ಸ್ಪಂದಿಸುತ್ತಿದ್ದರು. ಈ ಕುರಿತ ಕೆಲವು ಘಟನೆಗಳು ಪುಸ್ತಕದಲ್ಲಿವೆ.

ಜಯದೇವರ ಜೀವನ ಚರಿತ್ರೆಯನ್ನು ಬರೆಯುವ ಅವಕಾಶವೂ ಸಿಕ್ಕಿದ್ದು ನನಗೆ ಒಲಿದ ಅದೃಷ್ಟವೇ. ನಾನು ಹುಟ್ಟಿದ್ದೂ 1965ರಲ್ಲಿ, ರಾಷ್ಟ್ರೋತ್ಥಾನದ ಸ್ಥಾಪನಾ ವರ್ಷವೂ 1965! ನನಗೆ ರಾಷ್ಟ್ರೋತ್ಥಾನವು ಇನ್ನಷ್ಟು ಆಪ್ತವಾಗಲು ಇದೂ ಒಂದು ಕಾರಣ. ವ್ಯಕ್ತಿಯಾಗಿ ನಾನು ಸಾಧಿಸಿದ್ದು ಒಂದು ಬಿಂದು ನೀರಿನಷ್ಟು; ಸಂಸ್ಥೆಯನ್ನು ಕಟ್ಟಿದ ಜಯದೇವರ ಸಾಧನೆ ಹಿಂದು ಮಹಾ ಸಾಗರದಷ್ಟು! ಹೋಲಿಕೆ ಇಷ್ಟಕ್ಕೇ ನಿಲ್ಲುತ್ತದೆ. ಜಯದೇವರ ಬದುಕು ಅಸಾಮಾನ್ಯ. ವೃತ್ತಿಯೆಂದರೇನೆಂದೇ ಗೊತ್ತಿಲ್ಲದ ದಿನಗಳಲ್ಲಿ ಕೆಲಸ ಕೊಟ್ಟ ಜಯದೇವರು, ನನ್ನ ನಿವೃತ್ತಿಯ ಹಂತದಲ್ಲಿಯೂ ತಾವೇ ನನ್ನ ಬರೆವಣಿಗೆಯ ವಿಷಯವಾಗಿದ್ದು ಮಾತ್ರ ಬಯಸದೆಯೇ ಬಂದ ಭಾಗ್ಯ! ಬದುಕು ಕೊಟ್ಟವರ ಬದುಕಿನ



ಬಗ್ಗೆ ಬರೆಯುವುದು ದೊಡ್ಡ ಸವಾಲಿನ ಕೆಲಸ.

ಬಾಬು ಕೃಷ್ಣಮೂರ್ತಿಯವರು ನಮ್ಮ ನಡುವಿನ ಹೆಸರಾಂತ ಲೇಖಕರು. ಅವರ ಅಜೇಯ ಓದಿಯೇ ನನ್ನ ಬಾಲ್ಯ ಸ್ಮರಣೀಯವಾಗಿದ್ದು. ಅವರು ಬರೆದ ಮೊದಲ ಅಧ್ಯಾಯಗಳ ಮುಂದೆ ನನ್ನ ಬರವಣಿಗೆ ಏನೇನೂ ಅಲ್ಲ. ಅವರು ಸಂಸ್ಕರಿಸಿ ಬರೆದಿದ್ದಾರೆ. ನಾನು ಸಂಗ್ರಹಿಸಿ ದಾಖಲಿಸಿದ್ದೇನೆ ಅಷ್ಟೇ. ನನ್ನನ್ನು ಬಾಲ್ಯದಿಂದಲೂ ನೋಡಿ ತಿದ್ದುತ್ತಿರುವ ಶ್ರೀ ಸು ರಾಮಣ್ಣನವರು ಈ ಪುಸ್ತಕವನ್ನೂ



ತಿದ್ದಿದ್ದು ನನ್ನ ಇನ್ನೊಂದು ಅಪೂರ್ವ ಅನುಭವ.

ಜಯದೇವರ ಆರಂಭದ ವರ್ಷಗಳ ಅಧ್ಯಾಯಗಳನ್ನು ಓದುತ್ತಿದ್ದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು – ಮೈಸೂರು ಭಾಗದ ಬೆಳವಣಿಗೆ ಹೇಗಾಯ್ತು ಎಂಬ ಚಿಕ್ಕ ಚಿತ್ರಣವೂ ಸಿಗುತ್ತದೆ. ಏಕೆಂದರೆ ಯಾದವರಾವ್ ಜೋಶಿಯವರ ಪ್ರಭಾವದಿಂದ ಸಂಘಕಾರ್ಯ ಬೆಳೆಯುತ್ತಿದ್ದ ಸಂದರ್ಭದಲ್ಲೇ ಜಯದೇವರೂ ಸೇರಿದಂತೆ ಹಲವರು ಸಂಘಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟರು. ಅದರಲ್ಲೂ ಮೈಸೂರಿನಿಂದ ಬೆಂಗಳೂರಿಗೆ ಬಂದ ಇಂತಹ ಪ್ರಚಾರಕರ ಸಂಖ್ಯೆ ಗಮನಾರ್ಹ.

ಆದರೆ ಜಯದೇವರು ತುರ್ತು ಪರಿಸ್ಥಿತಿಯ ನಂತರ ರಾಷ್ಟ್ರೋತ್ಥಾನದ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಮೇಲೆ ಅವರ ಅಳಿದುಳಿದ ವೈಯಕ್ತಿಕ ಬದುಕೂ ಇಲ್ಲವಾಯಿತು. ಭಾರತದಲ್ಲೇ ರಾಷ್ಟ್ರೋತ್ಥಾನ ಪರಿಷತ್ ಒಂದು ಅದ್ವಿತೀಯ ಸಂಘಟನೆ, ಸಂಸ್ಥೆ, ಆಂದೋಲನ ಎಲ್ಲವೂ ಆಗಿ ಬೆಳೆದ ಪರಿ ಗಮನಾರ್ಹ. ಜಯದೇವರ ಬದುಕೆಂದರೆ ರಾಷ್ಟ್ರೋತ್ಥಾನದ ಪುಟಗಳೇ ಆಗಿವೆ. 1997ರವರೆಗೆ ಪ್ರಚಾರಕರಾಗದೆಯೇ ಪ್ರಚಾರಕ ಜೀವನ ನಡೆಸಿದ ಅವರು ನಂತರದ ಎರಡು ದಶಕಗಳ ಕಾಲ(ಎರಡನೆಯ ಸಲ) ಪ್ರಚಾರಕರಾಗಿದ್ದರು. ಈ ಐವತ್ತೂ ವರ್ಷಗಳಲ್ಲಿ ಅವರ ವೈಯಕ್ತಿಕ ಘಟನೆಗಳು ಸಿಗುವುದೇ ಕಷ್ಟವಾಯಿತು. 'ಇರುವುದನ್ನು ಜೋಡಿಸಿ ಬರಿ' ಎಂದು ಎಸ್ ಆರ್ ರಾಮಸ್ವಾಮಿಯವರು ನನಗೆ ಬರವಣಿಗೆಯ ಆರಂಭದಲ್ಲಿ ಹೇಳಿದ ಮಾತೇ ಕೊನೆಗೂ ನಿಜವಾಯಿತು! ಇದಕ್ಕೆ ಮುಖ್ಯವಾದ ಕಾರಣವೆಂದರೆ ಜಯದೇವರು ಸಂಘದ ಇತರ ಸಹಸ್ರಾರು ಪ್ರಚಾರಕರಂತೆಯೇ ಸೂಚಿಸಿದ ಕೆಲಸ ಮಾಡಿಕೊಂಡೇ ಇದ್ದರು.

ಹೀಗೆ ತಮ್ಮ ಅಧಿಕೃತ ಹೊಣೆಗಾರಿಕೆಗಳ ನಡುವೆಯೂ ಅವರು ಬೆಂಗಳೂರಿನ ಪರಂಪರೆಯ ಸಾಕ್ಷಿಗಳಂತಿದ್ದರೂ ದುರ್ಬಲವಾಗಿದ್ದ ಪ್ರತಿಷ್ಠಿತ ಸಂಘ ಸಂಸ್ಥೆಗಳನ್ನು ಅವುಗಳ ಕಾರ್ಯೋದ್ದೇಶಗಳಿಗೆ ಒಂದಿನಿತೂ ಭಂಗ ತಾರದಂತೆ ಪುನರುಜ್ಜೀವನಗೊಳಿಸಿದರು. ಈಗಿನ ಸಂದರ್ಭದಲ್ಲಿ ಹೇಳುವುದಾದರೆ ಅವರೊಬ್ಬ 'ಮಲ್ಟಿ ಟಾಸ್ಕರ್'. ಸಂಸ್ಥೆಗಳನ್ನು ಭೌತಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ ಕಟ್ಟುವಲ್ಲಿ ಅವರು ಹೊಂದಿದ್ದ ಕುಶಲತೆ ಅಸಾಮಾನ್ಯ. ಐದು ದಶಕಗಳ ಹಿಂದೆಯೇ ದ ಮಿಥಿಕ್ ಸೊಸೈಟಿಯ ಮರುಹುಟ್ಟಿಗೆ ಕಾರಣರಾದ ಜಯದೇವರು ನಂತರದ ದಿನಗಳಲ್ಲಿ ಗೋಖಲೆ ಸಾರ್ವಜನಿಕ ವಿಚಾರಗಳ ಸಂಸ್ಥೆ, ಅಬಲಾಶ್ರಮ, ಅನಾಥ ಶಿಶುನಿವಾಸ– ಇವುಗಳ ಸಬಲೀಕರಣದಲ್ಲಿ ಯಶ ಸಾಧಿಸಿದ





ಝಲಕ್ ಕೂಡಾ ಇಲ್ಲಿ ದಾಖಲಾಗಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕ ಜೀವನ ಚರಿತ್ರೆಗಳೆಂದರೆ ಸಂಘಕಾರ್ಯದಲ್ಲಿ ತೊಡಗಿದ ಅಸಂಖ್ಯ ಪ್ರಚಾರಕ ಪ್ರಾತಿನಿಧಿಕ ಜೀವನ ಚರಿತ್ರೆಗಳೇ ಆಗುತ್ತವೆ. ಹಾಗೆ ನೋಡಿದರೆ ಸಂಘದ ಎಲ್ಲ ಪ್ರಮುಖ ಪ್ರಚಾರಕರೂ ಮಾದರಿ ವ್ಯಕ್ತಿತ್ವಗಳೇ! ಹೀಗಿದ್ದೂ ಮೈ ಚ ಜಯದೇವರಂತಹ ವ್ಯಕ್ತಿತ್ವಗಳನ್ನು ಪ್ರಾತಿನಿಧಿಕವಾಗಿ ಪರಿಚಯಿಸುವುದು ಸಂಘವನ್ನು ಬಲ್ಲವರಿಗೂ, ತಿಳಿಯದವರಿಗೂ ಅಗತ್ಯವಾಗಿತ್ತು ಎಂದು ಪುಸ್ತಕ ಬರೆದಾದ ಮೇಲೆ ನನಗನ್ನಿಸಿದೆ. ಮುಖ್ಯವಾಗಿ ಸಂಘಕಾರ್ಯವನ್ನು ಗಂಭೀರವಾಗಿ ತೆಗೆದುಕೊಂಡವರು ಈ ಪುಸ್ತಕದಿಂದ ತಿಳಿಯಬಹುದಾದ ಹಲವಾರು ಅಂಶಗಳಿವೆ.

ಐದು ದಶಕಗಳನ್ನೂ ಮೀರಿ ಒಂದು ಸಂಸ್ಥೆಯ ಹುಟ್ಟು ಬೆಳವಣಿಗೆಯಲ್ಲಿ ಸಂಪೂರ್ಣ ಜೀವನವನ್ನೇ ತೊಡಗಿಸಿಕೊಂಡ ಜಯದೇವರು ಕರ್ನಾಟಕದ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ರಂಗದ ರಾಷ್ಟ್ರಮುಖೀ ಚಟುವಟಿಕೆಗಳನ್ನು ಬಿತ್ತಿ ಬೆಳೆಸಿದರು. ಸಿದ್ಧಾಂತಗಳ ಒಲವು–ನಿಲುವುಗಳನ್ನು ಮೀರಿ ನಾಡಿನ ಎಲ್ಲ ಲೇಖಕರನ್ನು, ಚಿಂತಕರನ್ನು ರಾಷ್ಟ್ರೋತ್ಥಾನದ ವೇದಿಕೆಗೆ ಕರೆತಂದರು. ಅವರ ಈ ಐತಿಹಾಸಿಕ ಕೊಡುಗೆಯ ಬಗ್ಗೆ ಇನ್ನೂ ಸಂಶೋಧನೆ ಮಾಡಬಹುದಾಗಿದೆ ಎನ್ನಿಸಿದೆ.

ರಾಷ್ಟ್ರೀಯ ವಿಚಾರಧಾರೆಯನ್ನು ಕರ್ನಾಟಕದ ಮಟ್ಟಿಗೆ ಪ್ರಭಾವಿಯಾಗಿ ಹಬ್ಬಿಸಿದ ಧ್ಯೇಯಜೀವಿಯೊಬ್ಬರ ಬದುಕಿನ ಪುಟಗಳನ್ನು ಬರೆದ ಸಂತಸ ನನ್ನದು.

ಕಿರುಸುದ್ದಿ

ಆನಂದಗೌಡ ಪಾಟೀಲ ನೇಮಕ



◆**ಮುಂಡರಗಿ:** ಜಿಲ್ಲೆಯ ಮುಂಡರಗಿ ಪಟ್ಟಣದ ಬಿಜೆಪಿ ಯುವ ನಾಯಕ ಆನಂದಗೌಡ ಹ.ಪಾಟೀಲ ಅವರನ್ನು ಜಿಲ್ಲಾ ಬಿಜೆಪಿ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ತೋಟಪ್ಪ (ರಾಜು) ಕುರಡಗಿ ತಿಳಿಸಿದ್ದಾರೆ. ಆನಂದಗೌಡರು ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಸೇವೆಯೇ ಅವರ ಕಾರ್ಯಕ್ಷೇತ್ರವಾಗಿದೆ ಎಂದು ಶ್ಲಾಘಿಸಲಾಗಿದ್ದು, ನರಗುಂದ ಶಾಸಕ , ಮಾಜಿ ಸಚಿವ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಲಿಂಗರಾಜಗೌಡ ಪಾಟೀಲ, ಮುಂಡರಗಿ ಮಂಡಳ ಅಧ್ಯಕ್ಷ ಕುಮಾರಸ್ವಾಮಿ ಹಿರೇಮಠ ಸೇರಿದಂತೆ ಹಲವರು ಹರ್ಷವ್ಯಕ್ತಪಡಿಸಿದ್ದಾರೆ.

ಸದಸ್ಯರಾಗಿ ಆಯ್ಕೆ



◆**ಶಿರಹಟ್ಟಿ:** ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ತಾಲೂಕಿನ ತಂಗೋಡ ಗ್ರಾಮದ ಮುಖಂಡ ಧ್ರುವರಾಜ ಹೊನ್ನಪ್ಪನವರ ಅವರನ್ನು ಮೂರು ವರ್ಷದ ಅವಧಿಗೆ ಸಿಂಡಿಕೇಟ್ ನಾಮನಿರ್ದೇಶನ ಸದಸ್ಯರನ್ನಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ನೇಮಕ ಮಾಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೀಘ್ರ ಸ್ಥಗಿತಗೊಳಿಸಿ

◆**ಗದಗ:** ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಅಧಿಕೃತ ಅಥವಾ ಅನುಮೋದನೆ ಪಡೆಯದೇ ಇರುವ ಅನಧಿಕೃತ ಹೋಂಸ್ಟೇಗಳು ಹಾಗೂ ರೆಸಾರ್ಟ್‌ಗಳು ಅನಧಿಕೃತ ಚಟುವಟಿಕೆಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷ, ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೋಂಸ್ಟೇ ಹಾಗೂ ರೆಸಾರ್ಟ್‌ಗಳನ್ನು ಕಾನೂನುಬದ್ಧವಾಗಿ ಮುಂದುವರಿಸಲು ಆಸಕ್ತಿ ಇರುವ ಮಾಲೀಕರು, ಅಗತ್ಯ ದಾಖಲೆಗಳೊಂದಿಗೆ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಇವರನ್ನು ಸಂಪರ್ಕಿಸಿ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಅಂತಹ ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

ಮೇ 19ಕ್ಕೆ ಕಾರ್ಯಾಗಾರ

◆**ಗದಗ:** ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಮೇ 19 ರಂದು ಬೆಳಗ್ಗೆ 10ಕ್ಕೆ ಕರ್ನಾಟಕ ರಾಜ್ಯ ವಿಕೇಂದ್ರೀಕರಣ, ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಉಪಸ್ಥಿತಿಯಲ್ಲಿ 2027-2028 ನೇ ಸಾಲಿನ ಜನಪರ ಯೋಜನೆ ರೂಪಿಸುವುದಕ್ಕಾಗಿ ಕಾರ್ಯತಂತ್ರದ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಗತಿ ಪರಿಶೀಲನಾ ಸಭೆ

◆**ಗದಗ:** ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ ಅಧ್ಯಕ್ಷತೆ ಮೇ 15 ರಂದು ಬೆಳಗ್ಗೆ 11ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಂತ್ಯದವರೆಗಿನ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಆಯುಷ್ಮಾನ್ ಕಾರ್ಡ್ ವಿತರಣೆ

◆**ಗಜೇಂದ್ರಗಡ:** ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವಾಯ್‌ಎಫ್.ಐ) ನೇತೃತ್ವದಲ್ಲಿ ಪಟ್ಟಣದ 8ನೇ ವಾರ್ಡಿನ ಅರ್ಹ ಫಲಾನುಭವಿಗಳಿಗೆ ಉಚಿತ ಆಯುಷ್ಮಾನ್ ಕಾರ್ಡ್ ವಿತರಣಾ ಸಮಾರಂಭವು ಮಕ್ಕಿಯವರ ಓಣಿಯ ನಾಸೀರ್ ಅಲಿ ಸುರಪುರ ಅವರ ಬಯಲು ಜಾಗದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಕಾರ್ಯಕ್ರಮವನ್ನು ಹಿರಿಯ ನ್ಯಾಯವಾದಿ ಎಂ.ಎಸ್.ಹಡಪದ ನೆರವೇರಿಸಲಿದ್ದು , ಮುಖ್ಯ ಅತಿಥಿಗಳಾಗಿ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಹಸನಸಾಬ ತಟಗಾರ, ಕಾರ್ಯದರ್ಶಿ ಫಯಾಜ್ ತೋಟದ, ಎ.ಡಿ.ಕೋಲಕಾರ, ಮಾಸುಮಲಿ ಮದಗಾರ, ನಾಸೀರ್ ಸುರಪುರ, ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮದ ಸಂಯೋಜಕ ದಾವಲಸಾಬ ತಾಳಿಕೋಟಿ ತಿಳಿಸಿದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4569-7582
ಅಜವಾನ	8612-9712
ಅಲಸಂದಿಕಾಳು	3277-6129
ಕಡಲೆ	2027-5935
ಹೆಸರು	3044-4345
ಜೋಳ	1244-4350
ಗೋವಿನಜೋಳ	1044-2000
ಕುಸಬಿ	4562-5399
ಸೂರ್ಯಕಾಂತಿ	6472-6472
ಗೋಧಿ	1044-5102
ಗುರೆಳ್ಳು	8500-8500



ನರಗುಂದ: ನರಗುಂದ ಪೊಲೀಸ್ ಠಾಣೆಗೆ ನೂತನವಾಗಿ ಆಗಮಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಸತ್ಯಪ್ಪ ಬಿ. ಮಳಗೊಂಡ ಅವರನ್ನು ತಾಲೂಕು ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಬುಧವಾರ ಸನ್ಮಾನಿಸಿದರು. ಕರವೇ ತಾಲೂಕು ಅಧ್ಯಕ್ಷ ನಬಿಸಾಬ ಕಿಲ್ಲೆದಾರ, ರೈತ ಹೋರಾಟಗಾರ ವಿಜಯ ಕುಲಕರ್ಣಿ, ವಿಜಯ ಬಡಿಗೇರ, ಮಹಾದೇವ ಆತೇದಾರ, ದಾವಲಸಾಬ ಗಸ್ತಿ, ರಜಾಕ ಮನಿಗೇರ, ಅಲ್ಲಾಬಕ್ಷ ಮುಲ್ಲಾ, ಬಸವರಾಜ ಮೆಣಸಗಿ, ಫೈಯಾಜ್ ಪಠಾಣ ಇದ್ದರು.

ರಸಗೊಬ್ಬರಗಳ ಬಳಕೆ ತಡೆ ಅಭಿಯಾನದ ಉದ್ದೇಶ

◆**ಮುಂಡರಗಿ:** ತಾಲೂಕಿನ ಬೆಣ್ಣಿಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಧರ್ತಿ ಮಾತಾ ಬಚಾವೋ ಆಂದೋಲನ ಅಂಗವಾಗಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ರಸಗೊಬ್ಬರಗಳ ವಿವೇಚನಾಯುಕ್ತ ಬಳಕೆ, ಉತ್ಪಾದಕತೆಯನ್ನು ಸುಧಾರಿಸುವುದು ಮತ್ತು ಮಣ್ಣಿನ ಆರೋಗ್ಯದ ಸುಸ್ಥಿರ ಸುಧಾರಣೆಯನ್ನು ಸಾಧಿಸುವುದು, ನಕಲಿ ರಸಗೊಬ್ಬರಗಳ ಉತ್ಪಾದನೆ ಮತ್ತು ಸಾಗಣೆಕೆಯನ್ನು ತಡೆಗಟ್ಟುವುದು ಮತ್ತು ಕೃಷಿಯೇತರ ಬಳಕೆಗಾಗಿ ರಸಗೊಬ್ಬಗಳ ಬಳಕೆಯನ್ನು ತಡೆಗಟ್ಟುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು. ರೈತರು ಸಮತೋಲನವಾಗಿ ಗೊಬ್ಬರಗಳನ್ನು ಬಳಸಬೇಕು, ಕೇವಲ ಯೂರಿಯಾ, ಡಿ.ಎ.ಪಿ ಗೊಬ್ಬರಗಳಿಗೆ ಸೀಮಿತವಾಗದೆ ಕಾಂಪ್ಲೆಕ್ಸ್ ಗೊಬ್ಬರಗಳು ಹಾಗೂ ಸಾವಯವ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ, ಬೇವಿನ ಹಿಂಡಿ, ಹುಳಿ ಮಜ್ಜಿಗೆ ಸಮತೋಲನವಾಗಿ ಉಪಯೋಗಿಸುವಂತೆ ರೈತರಿಗೆ ಸಲಹೆ ನೀಡಿದರು. ತಾಲೂಕು ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ಮಾತನಾಡಿ, ಅತಿಯಾದ ಯೂರಿಯಾ ಬಳಕೆ ಮಾಡುವುದರಿಂದ ತರಕಾರಿ, ಹಣ್ಣು, ಧಾನ್ಯಗಳಲ್ಲಿ ನೈಟ್ರೇಟ್ ಅಂಶ ಹೆಚ್ಚಾಗುತ್ತದೆ, ಇವು ದೀರ್ಘಾವಧಿಯಲ್ಲಿ ಮಾನವನಿಗೆ ವಿಷಕಾರಿಯಾಗಿ ಪರಿಣಮಿಸಿ ಹೊಟ್ಟೆ ನೋವು, ವಾಂತಿ ಮುಂತಾದ ಕಾಯಿಲೆಗಳಿಗೆ ಕಾರಣವಾಗುತ್ತವೆ. ಆಹಾರಗಳಲ್ಲಿ ನೈಟ್ರೇಟ ಅಂಶ ಹೆಚ್ಚಾಗಿದ್ದರೆ ಅವು ನೈಟ್ರೋಸಾಮೈನ್ಸ್‌ಗಳಾಗಿ ಪರಿವರ್ತನೆಯಾಗಿ ಕ್ಯಾನ್ಸರ್‌ಗೆ ಕಾರಣವಾಗಬಹುದು. ರಕ್ತದಲ್ಲಿ ಆಮ್ಲಜನಕದ ಮಟ್ಟವನ್ನು ಕಡಿಮೆ ಮಾಡುತ್ತದೆ ಎಂದರು. ತಾಲೂಕು ತಾಂತ್ರಿಕ ಕೃಷಿ ಅಧಿಕಾರಿ ಶಿವಮೂರ್ತಿ ನಾಯ್ಕ, ತಾಲೂಕು ತಾಂತ್ರೀಕ ವ್ಯವಸ್ಥಾಪಕ (ಆತ್ಮ) ಗೌರಿಶಂಕರ ಸಜ್ಜನರ ಹಾಗೂ ಬೆಣ್ಣಿಹಳ್ಳಿಗ್ರಾಮದ ರೈತರಾದ ಗುರುರಾಜ ಡಂಬಳ, ಮಲ್ಲಪ್ಪ ಹೊಸಹುರುಬರ, ಈರಪ್ಪ ಚವಡಿ, ದೇವೇಂದ್ರಪ್ಪ ಶಿಗಟರಾಯನಕೇರಿ, ಮಾಂತೇಶ ಹಳ್ಳಿಕೇರಿ, ದೇವಪ್ಪ ಅಜ್ಜಪ್ಪನವರ, ಭೀಮಣ್ಣ ತಳವಾರ, ಕರಿಯಪ್ಪ ಡೊಳ್ಳಿನ ಇತರರಿದ್ದರು.



ಗದಗ: ಜಿಲ್ಲೆಯ ಹಳ್ಳಿಕೆರೆ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಂ.ವಿ. ವೆಂಕಟೇಶ ಭೇಟಿ ನೀಡಿ, ಕೇಂದ್ರದ ಕಾರ್ಯವೈಖರಿ ಹಾಗೂ ಮಕ್ಕಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ವಿವಿಧ ಅಧಿಕಾರಿಗಳು, ಸಿಬ್ಬಂದಿ, ಊರಿನ ಹಿರಿಯರು ಉಪಸ್ಥಿತರಿದ್ದರು.

ಕುಡಿಯುವ ನೀರು ಸಮರ್ಪಕ ಪೂರೈಸಿ



◆**ಗದಗ:** ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಉಷ್ಣಾಂಶದ ಹಿನ್ನೆಲೆಯಲ್ಲಿ ಜನ ಹಾಗೂ ಜಾನುವಾರುಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡಲು ಪ್ರಥಮ ಆದ್ಯತೆ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮತ್ತು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಡಾ.ಎಂ.ವಿ. ವೆಂಕಟೇಶ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಕಳೆದ ವರ್ಷಕ್ಕಿಂತ ಈ ಬಾರಿ ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಎಲ್ಲ ತಾಲೂಕು ಪಂಚಾಯತಿ ಇಒಗಳು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೂಕೆ ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಅನಗತ್ಯ ನೀರಿನ ಪೋಲು ಹಾಗೂ ಅಪವ್ಯಯ ತಡೆಗಟ್ಟಿ ವರ್ಷಪೂರ್ತಿ ಸಮರ್ಪಕ ನೀರು ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ವಸತಿ ಶಾಲೆಗಳು ಕೇವಲ ತಿಂಡಿ-ಊಟ ನೀಡುವ ಕೇಂದ್ರಗಳಾಗಬಾರದು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ವಸತಿ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಇಂಡೆಂಟ್ ಬುಕ್ ಸರಿಯಾಗಿ ನಿರ್ವಹಿಸಿ ಮಕ್ಕಳಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಎಸಿ ಗಂಗಪ್ಪ ಎಂ., ಡಿಎಸ್ ಸಿ ಆರ್. ಮುಂಡರಗಿ ಸೇರಿದಂತೆ ಇತರರಿದ್ದರು.

ಕೆರೆಗಳಲ್ಲಿ ನೀರು ಸಂಗ್ರಹಕ್ಕೆ ಆದ್ಯತೆ ನೀಡಿ

ತಿಮ್ಮಾಪೂರ ಗ್ರಾಮ ಸೇರಿದಂತೆ ನೀರು ಸರಬರಾಜಿನಲ್ಲಿ ಸಮಸ್ಯೆ ಇರುವ ಪ್ರದೇಶಗಳನ್ನು ಗುರುತಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವ ಗ್ರಾಮಗಳು ಹಾಗೂ ವಾರ್ಡುಗಳನ್ನು ಗುರುತಿಸಿ ಖಾಸಗಿ ಬೋರ್‌ವೆಲ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ ಇರುವ ಕೆರೆಗಳಲ್ಲಿ ನೀರು ಸಂಗ್ರಹಕ್ಕೆ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿರುವ ಆರ್‌ಒ ಘಟಕಗಳ ಸಮರ್ಪಕ ನಿರ್ವಹಣೆ ಕುರಿತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು ಎಂದು ಡಾ.ಎಂ.ವಿ. ವೆಂಕಟೇಶ ಸೂಚಿಸಿದರು.

> ಜಿಲ್ಲೆಯಲ್ಲಿ ಒಟ್ಟು 9 ನಗರ ಸ್ಥಳೀಯ ಸಂಸ್ಥೆಗಳಿದ್ದು, ಗದಗ-ಬೆಟಗೇರಿ ನಗರಕ್ಕೆ ಪ್ರತಿ 8 ದಿನಕ್ಕೊಮ್ಮೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ.
>
> ■ **ಬಸನಗೌಡ ಕೊಟೂರ,** ನಗರಾಭಿವೃದ್ಧಿ ಯೋಜನಾ ಕೋಶದ ಯೋಜನಾ ನಿರ್ದೇಶಕ

ಮುನ್ನೆಚ್ಚರಿಕಾ ಕ್ರಮ

ಜಿಲ್ಲೆಯಲ್ಲಿ ಹೆಸರು, ಮುಸುಕಿನ ಜೋಳ ಹಾಗೂ ಸೂರ್ಯಕಾಂತಿ ಪ್ರಮುಖ ಬೆಳೆಗಳಾಗಿವೆ. ಮುಂಗಾರು ಹಂಗಾಮಿನಲ್ಲಿ 3.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಮುಂಗಾರು ಹಂಗಾಮಿಗೆ ಅಗತ್ಯವಿರುವ ಯೂರಿಯಾ, ಡಿಎಪಿ ಹಾಗೂ ಕಾಂಪ್ಲೆಕ್ಸ್ ಗೊಬ್ಬರಗಳ ಲಭ್ಯತೆ ಕುರಿತು ಮಾಹಿತಿ ನೀಡಿದ ಅವರು, ಸದ್ಯ 7,468 ಮೆಟ್ರಿಕ್ ಟನ್ ಗೊಬ್ಬರ ಮಾರಾಟವಾಗಿದ್ದು, 15,948 ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನು ಉಳಿದಿದೆ. ರೈತರಿಗೆ ಗೊಬ್ಬರ ಹಾಗೂ ಬೀಜ ಕೊರತೆ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ಕೃಷಿ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ತಿಳಿಸಿದರು.

ನಿವೇಶನ ಅಗತ್ಯ

ಜಿಲ್ಲೆಯಲ್ಲಿ 123 ಅಪೌಷ್ಟಿಕ ಮಕ್ಕಳು ಗುರುತಿಸಲ್ಪಟ್ಟಿದ್ದಾರೆ. ಅಪೌಷ್ಟಿಕ ಮಕ್ಕಳ ಆರೋಗ್ಯ ಸುಧಾರಣೆಗೆ ಅಗತ್ಯ ಪೌಷ್ಟಿಕ ಆಹಾರ ಹಾಗೂ ಆರೈಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ 126 ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಅಗತ್ಯವಿದ್ದು, ಕ್ರಮ ವಹಿಸಲಾಗುತ್ತಿದೆ. ಉಳಿದಂತೆ ಇಲಾಖೆಯ ಎಲ್ಲಾ ಕಾರ್ಯಕ್ರಮ ಸುಗಮವಾಗಿ ನಡೆಯುತ್ತಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಪದ್ಮಾವತಿ ಜಿ. ತಿಳಿಸಿದರು.

ಜನರನ್ನು ಕಚೇರಿಗೆ ಅಲೆದಾಡಿಸದಿರಿ: ಬಿರಾದಾರ

◆**ಲಕ್ಷ್ಮೇಶ್ವರ:** ಪುರಸಭೆ ಸಭಾಭವನದಲ್ಲಿ ಬುಧವಾರ ಲೋಕಾಯುಕ್ತ ಅಧಿಕಾರಿಗಳಿಂದ ಸಾರ್ವಜನಿಕರಿಂದ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಸುಮಾರು 16 ಅರ್ಜಿಗಳು ಸಲ್ಲಿಸಲ್ಪಟ್ಟವು. ಜಿಲ್ಲಾ ಲೋಕಾಯುಕ್ತ ಡಿವೈಎಸ್‌ಪಿ ವಿಜಯಕುಮಾರ ಬಿರಾದಾರ ಮಾತನಾಡಿ, ಜನರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಕಚೇರಿಗೆ ಬಂದಾಗ ಅಧಿಕಾರಿಗಳು ಸರಿಯಾಗಿ ಸ್ಪಂದಿಸಬೇಕು. ಅಧಿಕಾರಿಗಳು ಸಮಸ್ಯೆ ಬಗೆಹರಿಸುವ ಕಡೆ ಗಮನ ಕೊಡಬೇಕು. ಜನರಿಗೆ ಕಚೇರಿಗೆ ಅಲೆದಾಟ ತಪ್ಪಿಸಬೇಕು ಎಂದರು.

ಹಿರಿಯ ನಿವೃತ್ತ ಶಿಕ್ಷಕ ಕೊತ್ತಲ ಮಹಾದೇವಪ್ಪ ಅವರು ಬಟ್ಟೂರು ವ್ಯಾಪ್ತಿಯಲ್ಲಿನ ಜಮೀನಿನಲ್ಲಿ ಪಹಣಿ ಪತ್ರಿಕೆಯಲ್ಲಿ ಪಾಶ್ಚಾತ್ ಹೆಸರು ದಾಖಲಿಸುವಲ್ಲಿ ಕಂದಾಯ ಇಲಾಖೆಯವರು ವಿಳಂಬ ಮಾಡುತ್ತಿದ್ದಾರೆ ಎಂದು, ಶಿರಹಟ್ಟಿಯ ಭೂದಾಖಲೆಗಳ ಕಚೇರಿಯಲ್ಲಿ ನಕಾಶವನ್ನು ಕೊಡಲು ವಿಳಂಬ ಮಾಡುತ್ತಾರೆ ಎಂದು ಶಂಕರ ಬ್ಯಾಡಗಿ, ಪವನ ಬಂಕಾಪುರ ಇಟ್ಟಿಗೇರಿಗೆ ಕೊಳಚೆ ನೀರು ಬಂದು ಸೇರುತ್ತಿದೆ ಎಂದು, ಪುರಸಭೆಯ ಬಾನುಮಾರ್ಕೆಟ್ ಮತ್ತು ಹೊಸಬಸ್‌ನಿಲ್ದಾಣದ ಎದುರಿನ ಮಳಿಗೆಗಳನ್ನು ದುರಸ್ತಿಗೊಳಿಸಿ ಮರು ಟೆಂಡರ ಕರೆಯುವಂತೆ ರಮೇಶ ಹಂಗನಕಟ್ಟಿ, ಹಾಲಪ್ಪ ಬಂಡಾರಿ, ಬಸಣ್ಣ ಮೆಲ್ಮುರಿ ಅಹವಾಲು ಸಲ್ಲಿಸಿದರು. ಮಂಜುನಾಥ ಮುಳಗುಂದ, ಬಸವರಾಜ ಹಿರೇಮನಿ ಸುರೇಶ ಹಟ್ಟಿ ತಮ್ಮಾ ತಿಮ್ಮಿ ಗುಡ್ಡದಲ್ಲಿ ಮೂಲಸೌಕರ್ಯ ಒದಗಿಸಿ ಮನೆ ಕಟ್ಟಲು ಅನುಮತಿ ಕೊಡಬೇಕು ಎಂದು, ಬಸವರಾಜ ಕಲ್ಲೂರ ಸಿಬ್ಬಂದಿ ಸಮಸ್ಯೆಗೆ ಕ್ಯಾರೇ ಅನ್ನುವುದಿಲ್ಲ ಎಂದು ಆರೋಪಿಸಿದರು. ಮಲ್ಲಿಕಾರ್ಜುನ ನಿರಾಲೋಟ, ಆಶ್ರಯ ನಿವೇಶನ ಕೊಡಿ ಎಂದು ಮಹಿಳೆಯರು, ಹಿರೇಮಲ್ಲಾಪುರದಲ್ಲಿ ಐತೇನಾಲ್ ಕಂಪನಿ 2 ಎಕರೆ 19 ಗುಂಟೆಯಲ್ಲಿ ಕೆರೆ ಒತ್ತುವರಿ ಮಾಡಿ ಕಂಪನಿ ಕಟ್ಟಿದ್ದಾರೆ ಎಂದು ಹಾಲಪ್ಪ ಬಂಡಾರಿ, ವಿನಾಯಕ ನಗರಕ್ಕೆ ಮೂಲಸೌಲಭ್ಯ ಕೊರತೆ ನೀಗಿಸುವಂತೆ ಮಂಜುನಾಥ ಹೊಗೆಸೊಪ್ಪಿನ, ರಾಘವೇಂದ್ರ ಕಡೆಮನಿ ಮನವಿ ಸಲ್ಲಿಸಿದರು. ತಾಪಂ ಇಒ ಮಂಜುಳಾ ಹಕಾರಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡದಾರಿ, ಗ್ರೇಡ್ 2 ತಹಶೀಲ್ದಾರ್ ಮಂಜುನಾಥ ಅಮಾಸಿ, ಡಾ. ಶ್ರೀಕಾಂತ ಕಾಟೇವಾಲೆ, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ ಮುಳಗುಂದ, ಉಪನೋಂದಣಾಧಿಕಾರಿ ಎಸ್. ಕೆ.ಜಲರೆಡ್ಡಿ ಇದ್ದರು.

- ಆದರಹಳ್ಳಿ ಗಣಿಗಾರಿಕೆ ಸಮಸ್ಯೆ ತಿಳಿದುಕೊಳ್ಳಿ
- ಕುಡಿಯುವ ನೀರಿನ ಸಮಸ್ಯೆ ನೀಗಿಸಿ
- ಕಚೇರಿಗಳಲ್ಲಿ ಅಧಿಕಾರಿಗಳಿಗೆ, ಕಚೇರಿ ಸಿಬ್ಬಂದಿ, ಯಾರಾದರೂ ಬ್ಲಾಕ್ ಮೇಲ್ ಮಾಡಿದರೆ ದೂರು ನೀಡಿ ಎಂದ ವಿಜಯಕುಮಾರ ಬಿರಾದಾರ



ಸಾರ್ವಜನಿಕರ ಮೇಲೆ ಹಲ್ಲೆ: ಇಬ್ಬರ ಬಂಧನ

◆**ಲಕ್ಷ್ಮೇಶ್ವರ:** ಪಟ್ಟಣದಲ್ಲಿ ಮಂಗಳವಾರ ರಾತ್ರಿಯ ಸುಮಾರಿಗೆ ಉಡುಪಿ ಜಿಲ್ಲೆಯ ಕಾಪು ಗ್ರಾಮದಿಂದ ಬಂದಿದ್ದ ಖಾಸಗಿ ಬಸ್‌ನಲ್ಲಿದ್ದ ಚಾಲಕ ಮತ್ತು ಕ್ಲೀನರ್ ಸಾರ್ವಜನಿಕರಿಗೆ ವಾಹನ ಟಚ್ ಮಾಡಿದ್ದಲ್ಲದೇ ನಿರ್ಲಕ್ಷ್ಯದಿಂದ ಚಾಲನೆ ಮಾಡಿ ಸಾರ್ವಜನಿಕರ ಮೇಲೆ ಹಲ್ಲೆ ಮಾಡಿದ ಘಟನೆಗೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರ ಸಂಜೆಯ 7.40 ರ ಸುಮಾರಿಗೆ ಪಟ್ಟಣದ ಸೋಮೇಶ್ವರ ಪಾದಗಟ್ಟಿಯ ಹತ್ತಿರ ಇರುವ ಕಿರಾಣಿ ಅಂಗಡಿಯ ಆದಿನಾಥ ಬರಿಗಾಲಿ ಎಂಬ ಯುವಕ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಉಡುಪಿ ಜಿಲ್ಲೆಯ ಕಾಪು ಗ್ರಾಮದಿಂದ ಬಂದಿದ್ದ ಖಾಸಗಿ ಬಸ್‌ನ ಚಾಲಕ ಅವರಿಗೆ ಬಸ್ ತಗುಲಿಸಿದ್ದಾನೆ. ಇದನ್ನು ಪ್ರಶ್ನಿಸಿದ್ದಕ್ಕೆ ಬಸ್‌ನಲ್ಲಿದ್ದ ಕ್ಲೀನರ್ ಏಕಾಏಕಿ ಬಸ್‌ನಿಂದ ಕೆಳಗಿಳಿದು ಆದಿನಾಥ ಅವರಿಗೆ ಹಲ್ಲೆ ಮಾಡಿದ್ದಾರೆ. ಇದನ್ನು ಪ್ರಶ್ನಿಸಲು ಹೋದ ಮತ್ತು ಬಿಡಿಸಲು ಬಂದ ಕೊಟ್ರೇಶ ಕತ್ತಿ ಮತ್ತು ಶಕ್ತಿ ಕತ್ತಿ ಎನ್ನುವವರಿಗೆ ಅಂಗಿ ಹಿಡಿದು ಹೊಡೆದು ಅಂಗಿ ಹರಿದು ಗಾಯಗೊಳಿಸಿ ಅವ್ಯಾಚ್ಯ ಶಬ್ದಗಳಿಂದ ಅವರನ್ನು ನಿಂದಿಸಿ ಬೆದರಿಕೆ ಹಾಕಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಆದಿನಾಥ ಬರಿಗಾಲಿ ಅವರು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಪಿಎಸ್‌ಐ ನಾಗರಾಜ ಗಡದ ಅವರು ದೂರು ದಾಖಲಿಸಿಕೊಂಡು ಆರೋಪಿಗಳಾದ ಉಡುಪಿ ಜಿಲ್ಲೆಯ ಕಾಪು ಗ್ರಾಮದ ಅಬ್ದುಲ್‌ರಫೀಜ್ ಅಬ್ದುಲ್‌ಹಫೀಜ್ ಮತ್ತು ಉಡುಪಿ ಜಿಲ್ಲೆಯ ಉಚ್ಚಿಲಾ ಗ್ರಾಮದ ಅಬ್ದುಲ್‌ರಜಾಕ ಇಬ್ರಾಹಿಂ ರಾಮಲಾ ಅವರನ್ನು ಬಂಧಿಸಿ ಎಸ್‌ಪಿ ಅವರ ನಿರ್ದೇಶನದಂತೆ ದೂರು ದಾಖಲಿಸಿಕೊಂಡು ರಾತ್ರಿ ಆರೋಪಿತರನ್ನು ಗದಗದಲ್ಲಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.



ಉದ್ವಿಗ್ನ ವಾತಾವರಣ

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಘಟನಾ ಸ್ಥಳದಲ್ಲಿಯೇ ನೂರಾರು ಯುವಕರ ಗುಂಪು ಬಸ್‌ಗೆ ಮುತ್ತಿಗೆ ಹಾಕಿ ಆರೋಪಿತರ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹಲ್ಲೆ ಮಾಡಿದ ವ್ಯಕ್ತಿಯನ್ನು ಕೆಳಗಿಳಿಸುವಂತೆ ಆಗ್ರಹಿಸಿದರು. ಈ ವೇಳೆ ಕೆಲ ಕಾಲ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿತ್ತು. ನಂತರ ಪೊಲೀಸರು ಮಧ್ಯ ಪ್ರವೇಶಿಸಿ ಬಸ್‌ನ್ನು ಅಲ್ಲಿಂದ ಠಾಣೆಗೆ ಕರೆತಂದು ಆರೋಪಿತರನ್ನು ವಶಕ್ಕೆ ಪಡೆದುಕೊಂಡರು. ಶಾಸಕ ಡಾ.ಚಂದ್ರು ಲಮಾಣಿ ಸ್ಥಳಕ್ಕೆ ಆಗಮಿಸಿ ಘಟನೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಎಸ್‌ಪಿ ರೋಹನ್ ಜಗದೀಶ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿ ಅವಲೋಕಿಸಿದರು. ಡಿವೈಎಸ್‌ಪಿ ಮುರ್ತುಜಾ ಖಾದ್ರಿ, ಡಿಆರ್ ಡಿವೈಎಸ್ಪಿ ವಿದ್ಯಾಧರ ನಾಯಕ್, ಸಿಪಿಐ ಬಿ.ವೈ.ನ್ಯಾಮಗೌಡ, ಪಿಎಸ್‌ಐ ನಾಗರಾಜ ಗಡದ, ಕ್ರೈಂ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಪರಿಸ್ಥಿತಿಯನ್ನು ನಿಭಾಯಿಸಿದರು.

ದೇಶದ ಅಭಿವೃದ್ಧಿಗೆ ಕೊಡುಗೆ ನೀಡಿ

◆**ನರೇಗಲ್ಲ:** ಭಾರತ ಗ್ರಾಮಗಳ ದೇಶ, ಗ್ರಾಮಗಳ ಅಭಿವೃದ್ಧಿಯಲ್ಲಿ ದೇಶದ ಅಭಿವೃದ್ಧಿ ಅಡಗಿದೆ. ಅದಕ್ಕೆ ಶಿಬಿರಾರ್ಥಿಗಳು ದೇಶದ ಅಭಿವೃದ್ಧಿಗೆ ಪೂರಕವಾದ ನಿಮ್ಮದೇ ಆದ ಕೊಡುಗೆಗಳನ್ನು ನೀಡುವುದು ಮುಖ್ಯ ಎಂದು ಹಾಲಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಎ.ಸಿ. ಪಾಟೀಲ ಹೇಳಿದರು.

ಸಮೀಪದ ಹಾಲಕೆರೆ ಗ್ರಾಮದಲ್ಲಿ ಅನ್ನದಾನೇಶ್ವರ ಸಭಾಭವನ ಆವರಣದಲ್ಲಿ ನಡೆದ ಮಹಾತ್ಮ ಗಾಂಧಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಗ್ರಾಮ ಪಂಚಾಯತ್ ಹಾಲಕೆರೆ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮ ವಾಸ್ತವ್ಯ ಮತ್ತು ಅಧ್ಯಯನ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಗ್ರಾಮೀಣ ಅಭಿವೃದ್ಧಿ ಎಂದರೆ ಕೇವಲ ರಸ್ತೆ, ವಿದ್ಯುತ್, ನೀರು ಎಂಬ ಮೂಲಸೌಕರ್ಯಗಳ ಅಭಿವೃದ್ಧಿಯಷ್ಟೇ ಅಲ್ಲ; ಅದು ಶಿಕ್ಷಣ, ಆರೋಗ್ಯ, ಉದ್ಯೋಗಾವಕಾಶ, ಕೃಷಿ ಸುಧಾರಣೆ, ಮಹಿಳಾ ಸಬಲೀಕರಣ ಮತ್ತು ಪರಿಸರ ಸಂರಕ್ಷಣೆ ಎಲ್ಲವನ್ನೂ ಒಳಗೊಂಡ ಸಮಗ್ರ ಪ್ರಕ್ರಿಯೆಯಾಗಿದೆ. ಇಂದಿನ ದಿನಗಳಲ್ಲಿ ಸರ್ಕಾರವೂ ಗ್ರಾಮೀಣ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಆದರೆ ಈ ಯೋಜನೆಗಳ ಯಶಸ್ಸು ನಮ್ಮೆಲ್ಲರ ಸಹಕಾರದ ಮೇಲೆ ಅವಲಂಬಿತವಾಗಿದೆ. ಪ್ರತಿಯೊಬ್ಬರೂ ತಮ್ಮ ಗ್ರಾಮವನ್ನು ಅಭಿವೃದ್ಧಿಪಡಿಸಲು ಹೊಣೆಗಾರಿಕೆಯಿಂದ ಮುಂದೆ ಬರಬೇಕು ಎಂದರು.

ಈ ಸಂದರ್ಭದಲ್ಲಿ ಗಜೇಂದ್ರಗಡ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಶರಣಪ್ಪ ಬೆಟಗೇರಿ ,ಬಾಳಪ್ಪ ಬುರುಡಿ, ಅಂದನಗೌಡ ಟಿ ಪಾಟೀಲ, ಮಾಹಾದೇಪ್ಪ ಮುಂದಿನಮನಿ ಹಾಗು ಗದಗ್ ಮಹಾತ್ಮ ಗಾಂಧಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.





ಲಕ್ಷ್ಮೇಶ್ವರ: ತಾಲೂಕಿನ ಯಳವತ್ತಿ ಗ್ರಾಮದ ಆರಾಧ್ಯದೈವ ಗುಂಡೇಶ್ವರ ದೇವಸ್ಥಾನದ ಜಾತ್ರಾಮಹೋತ್ಸವದ ಅಂಗವಾಗಿ ವಿಜೃಂಭಣೆಯಿಂದ ರಥೋತ್ಸವ ನೆರವೇರಿತು. ಹಣ್ಣು-ಕಾಯಿ ನೈವೇದ್ಯ ಮಾಡಿಸಿಕೊಂಡು ಬಳಿಕ ರಥಕ್ಕೆ ಉಡಿ ತುಂಬಿ, ಹೊಸ ವಸ್ತ್ರಾಭರಣಗಳನ್ನಿರಿಸಿ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಲಾಯಿತು. ಭಕ್ತಾದಿಗಳು ಉತ್ತತ್ತಿ, ಹಣ್ಣುಗಳನ್ನು ತೇರಿಗೆ ಎಸೆದರು.



ಗಜೇಂದ್ರಗಡ: ನಗರದ ಸುತ್ತಮುತ್ತಲಿನ ಗ್ರಾಮ ಪ್ರದೇಶಗಳಲ್ಲಿ ಬುಧವಾರ ಸಾಯಂಕಾಲ ಬಿಸಿಲ ಬೇಗೆಗೆ ಬೆಂದಿದ್ದ ಜನತೆಗೆ ಮಳೆರಾಯನ ಆಗಮನದಿಂದ ಕೊಂಚಮಟ್ಟಿಗೆ ಹರ್ಷ ಸಾರ್ವಜನಿಕರಲ್ಲಿ ಕಂಡಿತು. ಜೋರಾದ ಗಾಳಿ ,ಗುಡುಗು ಮಿಂಚು ಸಹಿತ ಮಳೆಗೆ ಸಾಕು ಸಾಕು ಎಂದ ಜನತೆಗೆ ಮಳೆರಾಯನ ಆಗಮನ ಜನತೆಗೆ ಕೂಲ್ ವಾತಾವರಣ ಕಾಣುವಂತಾಯಿತು.

ಒತ್ತಡದ ಜೀವನದಿಂದ ಹೊರಬನ್ನಿ: ನೂರಶೆಟ್ಟರ

◆**ಶಿರಹಟ್ಟಿ:** ಇಂದು ಮನುಷ್ಯ ತನ್ನ ಆರೋಗ್ಯವನ್ನು ಲೆಕ್ಕಿಸದೆ ಆಡಂಬರದ ಬದುಕಿಗಾಗಿ ಒತ್ತಡ ಜೀವನ ಅನುಭವಿಸುತ್ತಿದ್ದಾನೆ ಎಂದು ಸಿ.ಸಿ.ಎನ್. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಚಂದ್ರಕಾಂತ ನೂರಶೆಟ್ಟರ ಹೇಳಿದರು.

ಸ್ಥಳೀಯ ಸಿ.ಸಿ.ಎನ್. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಧಾರವಾಡದ ಎಸ್.ಡಿ.ಎಂ. ನಾರಾಯಣ ಹಾರ್ಟ್ ಸೆಂಟರ್ ಮತ್ತು ಕೆ.ಎಚ್.ಪಿ.ಐ.ಎಂ.ಎಸ್. ಗದಗ ಇವರ ಆಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಜೀವನದಲ್ಲಿ ಏನಾದರೂ ಸಾಧನೆ ಮಾಡಲು ಸದೃಢ ಆರೋಗ್ಯ ಬಹಳ ಮುಖ್ಯ. ದೇಹವು ರೋಗಗಳ ನೆಲೆಯಾಗದಂತೆ ಎಚ್ಚರವಹಿಸಬೇಕು. ಪರಿಶುದ್ಧ ಗಾಳಿ, ನೀರು, ಆಹಾರವನ್ನು ನಾವು ಸದ್ಬಳಕೆ ಮಾಡಿಕೊಂಡು ಆರೋಗ್ಯಕರ ಜೀವನ ನಡೆಸಬೇಕು. ಗುಟ್ಕಾ, ಸಿಗರೇಟು, ಮದ್ಯಪಾನದಂತಹ ದುಶ್ಚಟಗಳಿಂದ ದೂರವಿರಬೇಕು. ಒತ್ತಡದ ಜೀವನ ಆದಷ್ಟು ಕಡಿಮೆ ಮಾಡಿಕೊಂಡು ಸರಳ ಜೀವನ ನಡೆಸಬೇಕು ಎಂದರು.



ನಿವೃತ್ತ ಶಿಕ್ಷಕ ಎಚ್.ಎನ್. ದೇವಗಿರಿ ಮಾತನಾಡಿ, ಉಚಿತ ಆರೋಗ್ಯ ತಪಾಸಣಾ ಶಿಬಿರದಿಂದ ಬಡವರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಹೃದಯ ಸಮಸ್ಯೆ, ಕಣ್ಣು, ಕೈ, ಕಾಲು ಇತರೆ ಆರೋಗ್ಯ ಸಮಸ್ಯೆಗಳಿಗೆ ಮುಕ್ತಿ ದೊರೆಯುತ್ತದೆ. ಆರ್ಥಿಕ ಉಳಿತಾಯ ಆಗುತ್ತದೆ. ಆರೋಗ್ಯ ಇದ್ದರೆ ನಾವು ಸುಖವಾಗಿ ಬಾಳಬಹುದು ಎಂದರು.

150ಕ್ಕೂ ಅಧಿಕ ಜನರು ಉಚಿತವಾಗಿ ಬಿಪಿ ಶುಗರ್, ಹೃದಯ ತಪಾಸಣೆ ಹಾಗೂ ಇಸಿಜಿ, ಇಸಿಒ ಚೆಕಪ್ ಮಾಡಿಕೊಂಡರು. ಡಾ. ಪ್ರಕಾಶ ಹೊಸಮನಿ, ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ಪುನೀತ ಓಲೇಕಾರ, ಡಾ. ಪ್ರಕಾಶ, ಡಾ. ಪ್ರದೀಪ, ಡಾ.ನಿತೇಶ ಕುಮಾರ,ಡಾ. ನವೀನಕುಮಾರ, ಡಾ. ವಿನೋದ ನರಗುಂದ, ಫಕೀರೇಶ ರಟ್ಟಿಹಳ್ಳಿ, ಮಹಾಂತೇಶ ದಶಮನಿ, ಅಜ್ಜನಗೌಡ್ರ ಪಾಟೀಲ, ಬಸವರಾಜ ಸಂಗಪ್ಪಶೆಟ್ಟರ ಇದ್ದರು.

ರಾಜ್ಯಾಧ್ಯಕ್ಷ ಶಂಕರ ಬಿದರಿ ಭೇಟಿ

◆**ಗಜೇಂದ್ರಗಡ:** ಪಟ್ಟಣದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಮಹಿಳಾ ಘಟಕ ಸಹ ಕಾರ್ಯದರ್ಶಿ ಕವಿತಾ ಜಾಲಿಹಾಳ ಅವರ ನಿವಾಸಕ್ಕೆ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಭೇಟಿ ನೀಡಿದರು. ಧಾರ್ಮಿಕ ಕಾರ್ಯಕ್ರಮಕ್ಕೆಂದು ಆಗಮಿಸಿದ್ದ ಅವರು ಜಾಲಿಹಾಳ ಅವರ ನಿವಾಸಕ್ಕೆ ಭೇಟಿ ನೀಡಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಈ ಭಾಗದಲ್ಲಿ ಬಲವರ್ಧನೆಗೆ ಚರ್ಚಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕಕ್ಕೆ ಅವಿರೋಧವಾಗಿ ಆಯ್ಕೆಯಾದ ಪ್ರಭು ಚವಡಿ ಅವರನ್ನು ಸನ್ಮಾನಿಸಲಾಯಿತು. ಜಾಲಿಹಾರ ಪರಿವಾರದಿಂದ ಶಂಕರ ಬಿದರಿ ಅವರನ್ನು ಸನ್ಮಾನಿಸಲಾಯಿತು. ಡಾ. ಬಿ.ವಿ. ಕಂಬಳ್ಯಾಳ, ಬಿ.ಎಂ. ಸಜ್ಜನರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಮಹಿಳಾ ಘಟಕ ಸಹ ಕಾರ್ಯದರ್ಶಿ ಕವಿತಾ ಜಾಲಿಹಾಳ, ಜಿಲ್ಲಾಧ್ಯಕ್ಷ ಶರಣಬಸಪ್ಪ ಗುಡಿಮನಿ, ಸುರೇಶ ಜಾಲಿಹಾಳ, ಶರಣಪ್ಪ ರೇವಡಿ, ಅಂಬರೀಶ ಬಳಿಗೇರ, ಟಿ.ಎಸ್. ರಾಜೂರ, ಬಸವರಾಜ ಪುರ್ತಗೇರಿ, ಮಹಾಂತೇಶ ರೇವಡಿ, ಬಿ.ಎಸ್. ಶೀಲವಂತರ, ಬಸವರಾಜ ಚನ್ನಿ, ಶಿವಕುಮಾರ ಶಶಿಮಠ, ಸಿದ್ದಾರ್ಥ ಜಾಲಿಹಾಳ, ವಿಶ್ವನಾಥ ಕುಷ್ಟಗಿ, ಹುಚ್ಚಪ್ಪ ಹಾವೇರಿ, ಶರಣಪ್ಪ ಚಳಗೇರಿ, ವಿಜಯಲಕ್ಷ್ಮೀ ಮಾನ್ವಿ, ಗೀತಾ ಕಂಬಳ್ಯಾಳ, ಜಯಶ್ರೀ ಉಗಲಾಟದ ಸೇರಿದಂತೆ ಇತರರಿದ್ದರು.



ಹಿಂದುಳಿದವರ ಏಳ್ಗೆಗೆ ಸರ್ವರೂ ಶ್ರಮಿಸಲಿ: ಪಾಟೀಲ

◆**ನರಗುಂದ:** ಪಟ್ಟಣದ ಹಳೇ ಎಪಿಎಮ್ಸಿ ಯಾರ್ಡ್‌ನಲ್ಲಿನ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ ಆವರಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಘಟಕಕ್ಕೆ ನೂತನವಾಗಿ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಪ್ರವೀಣಕುಮಾರ ಅರ್ಜುನಪ್ಪ ಆಳಗವಾಡಿ ಅವರನ್ನು ಪಿಕಾರ್ಡ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಸನ್ಮಾನಿಸಿದರು.

ಪಿಕಾರ್ಡ ಬ್ಯಾಂಕ್‌ನ ಅಧ್ಯಕ್ಷ ಎಂ.ಎಸ್. ಪಾಟೀಲ ಮಾತನಾಡಿ, ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರ ಏಳ್ಗೆಗೆ ಎಲ್ಲರೂ ಒಟ್ಟಾಗಿ ಶ್ರಮಿಸೋಣ. ಸುಶಿಕ್ಷಿತ ಸಮಾಜವನ್ನಾಗಿ ರೂಪಿಸೋಣ ಮತ್ತು ಪ್ರತಿ ಕ್ಷೇತ್ರದಲ್ಲೂ ಸಮಾಜ ಬಾಂಧವರ ಸೇವಾ ಕೈಂಕರ್ಯವನ್ನು ನೋಡಬೇಕಾಗಿದೆ. ನಮ್ಮದು ಸಮಾಜದ ಏಳ್ಗೆಗೆ ಸಂಪೂರ್ಣ ಬೆಂಬಲವಿದೆ ಎಂದರು.



ಅಖಿಲ ಭಾರತ ವೀರಶೈವ ಮಹಾಸಭಾದ ನೂತನ ತಾಲೂಕು ಅಧ್ಯಕ್ಷ ಪ್ರವಿಣಕುಮಾರ ಆಳಗವಾಡಿ ಮಾತನಾಡಿದರು. ಉಪಾಧ್ಯಕ್ಷ ಎಸ್.ಕೆ. ಹುಡೇದಮನಿ, ಬಿ.ಬಿ. ಐನಾಪೂರ, ಎಸ್.ವಿ. ಪಾಟೀಲ, ಯಲ್ಲಪ್ಪಗೌಡ ಪಾಟೀಲ, ಅಶೋಕ ಸಾಲೂಟಗಿ, ಈಶ್ವರಗೌಡ ಪಾಟೀಲ, ಎನ್.ಎಲ್. ತಿಮ್ಮನಗೌಡ್ರ, ಎಸ್.ಎಸ್. ಬೋಳಶೆಟ್ಟಿ, ಆರ್ .ಐ. ಶಿವನಗೌಡ್ರ, ಕಲ್ಲನಗೌಡ ತಿಪ್ಪನಗೌಡ್ರ, ಎಲ್.ಬಿ. ಕುದರಿ, ಎಂ.ಎಂ. ಜೋಗಣ್ಣವರ, ಭೀಮಪ್ಪ ನಾಯ್ಕರ, ಗುರುಪಾದಪ್ಪ ಕುರಹಟ್ಟಿ ಹಾಗೂ ಫಕೀರಗೌಡ ಲಿಂಗನಗೌಡ್ರ, ಅಜೀತಗೌಡ ಪಾಟೀಲ, ಆರ್.ಸಿ. ಪಾಟೀಲ, ಬಸವರಾಜ ಯರಗಟ್ಟಿ, ಬಸಯ್ಯ ಜಾಲಿಹಾಳ, ಪ್ರಭುಗೌಡ ಮುದಿಗೌಡ್ರ, ಬಸವರಾಜ ಭೂಮಣ್ಣವರ ಹಾಗೂ ವ್ಯವಸ್ಥಾಪಕ ಡಿ.ಬಿ. ಆಲೂರ ಇತರರಿದ್ದರು.

ಗೋ ಮಹಿಮಾ ಸದ್ವಿಚಾರ ಗೋಷ್ಠಿ | ಕೆ.ಇ.ಎನ್. ರಾಘವನ್ ಹೇಳಿಕೆ

ಗೋವು ಆಧಾರಿತ ಕೃಷಿಯಿಂದ ಸಮೃದ್ಧಿ

ಹುಬ್ಬಳ್ಳಿ: ಗೋವು ಆಧಾರಿತ ಗೊಬ್ಬರ ಬಳಕೆಯಿಂದ ಸಮೃದ್ಧಿ ಬೆಳೆ ಬೆಳೆಯಬಹುದು. ಅಂತಹ ಭೂಮಿಯಲ್ಲಿ ಬಂಗಾರದ ಬೆಳೆ ಪಡೆಯಬಹುದು. ಅಂದಾಗ ದೇಶವೂ ಸಮೃದ್ಧಿಯಾಗಲಿದೆ ಎಂದು ಗೋ ಸೇವಾ ಗತಿ ವಿಧಿಯ ಅಖಿಲ ಭಾರತೀಯ ಪ್ರಶಿಕ್ಷಣ ಪ್ರಮುಖ ಕೆ.ಇ.ಎನ್.ರಾಘವನ್ ತಿಳಿಸಿದರು.

ಗೋಕುಲ ರಸ್ತೆ ಮಾರುತಿ ನಗರದ ಆರ್ ಎಸ್ಎಸ್ ಕಾರ್ಯಾಲಯವಾದ ಕೇಶವ ಕುಂಜದಲ್ಲಿ ಗೋ ಸೇವಾ ಗತಿವಿಧಿ ಹುಬ್ಬಳ್ಳಿ ಮಹಾನಗರ ಕರ್ನಾಟಕ ಉತ್ತರ ಪ್ರಾಂತದಿಂದ ಹಮ್ಮಿಕೊಂಡಿದ್ದ ಗೋ ಮಹಿಮಾ ಸದ್ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗೋ ಮಾತೆಯಲ್ಲಿ 33 ಕೋಟಿ ದೇವಾನು ದೇವತೆಗಳು ನೆಲೆಸಿದ್ದಾರೆ. ಹಾಲು ನೀಡುವ ಎಲ್ಲ ಪ್ರಾಣಿಗಳಿಗಿಂತ ಗೋವಿನ ಹಾಲು ಶ್ರೇಷ್ಠವಾಗಿದೆ. ದೇಶದಲ್ಲಿ ನೂರಾರು ದೇವಸ್ಥಾನಗಳು ಆಕಲು ಹಾಲು ನೆಲ ಸ್ಪರ್ಶಿಸಿದ್ದರಿಂದ ನಿರ್ಮಾಣವಾಗಿವೆ. ಗೋ ಹಾಲಿನಿಂದ ಅನೇಕ ರೋಗಗಳಿಗೆ ಮುಕ್ತಿ ದೊರೆಯಲಿದೆ ಎಂಬುವುದು ವೈಜ್ಞಾನಿಕವಾಗಿ ಸಾಬೀತಾಗಿದೆ ಎಂದರು.

ರಾಮರಾಜದಲ್ಲಿ ಗೋ ಆಧಾರಿತ ಕೃಷಿ ಇತ್ತು. ಈಗ ಗೋ ಆಧಾರಿತ ಕೃಷಿ ಪದ್ಧತಿ ನಾವು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಗೋ ಹಾಲಿನ ಸತ್ವ ಇದೆ. ಗೋವು ನೆಲೆಸುವ ಮಣ್ಣಿನಲ್ಲಿ ಸಾಕಷ್ಟು ಮೈಕ್ರೋನ ಉತ್ಪತ್ತಿಯಾಗಲಿದೆ. ಆದ್ದರಿಂದಪ್ರತಿಯೊಬ್ಬರ ಮನೆಯಲ್ಲಿ ಗೋ ಉತ್ಪನ್ನಗಳಿಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಹೇಳಿದರು.



> ಪ್ರತಿ ಮನೆಯಲ್ಲಿ ಒಂದಾದರೂ ದೇಶಿ ಗೋವು ಇರಬೇಕು. ವ್ಯವಹಾರಿಕ ದೃಷ್ಟಿಕೋನ ಬಿಟ್ಟು ಆರೋಗ್ಯ ದೃಷ್ಟಿಯಿಂದ ಸಾಕಬೇಕು. ಗೋ ಮೂತ್ರದಿಂದ ಆರೋಗ್ಯಕರ ಪರಿಸರ ನಿರ್ಮಾಣ ಆಗಿಲಿದೆ. ಗೋವು ಸಂರಕ್ಷಣೆ ಮಾಡುವ ಕೆಲಸ ಆಗಬೇಕು.
> ■ ಶಾಂತಲಿಂಗ ಸ್ವಾಮೀಜಿ, ಅಮ್ಮಿನಬಾವಿ

ಅಮ್ಮಿನಬಾವಿಯ ಶಾಂತಲಿಂಗ ಸ್ವಾಮೀಜಿ ಮಾತನಾಡಿ, ಗೋಮಾತೆಯ ಹಾಲು ಸೇವಿಸುವುದರಿಂದ ಅಷ್ಟೇ ಅಲ್ಲ ಅದರ ಸೇವೆ ಮಾಡುವುದರಿಂದಲೂ ನಾವು ಆರೋಗ್ಯವಂತರಾಗಿ ಬಾಳಬಹುದು. ಗೋ ಮಾತೆಯ ಸಲುಗೆಯಿಂದ ಮನೆ ಹಾಗೂ ಮನದಲ್ಲಿ ಶಾಂತಿ, ನೆಮ್ಮದಿ ಹಾಗೂ ಆರೋಗ್ಯ ಸಂಪದ್ಭರಿತವಾಗಿರುತ್ತದೆ ಎಂದರು.

ಹಿಂದೂ ಧರ್ಮದಲ್ಲಿ ಗೃಹ ಪ್ರವೇಶ, ಧಾರ್ಮಿಕ ಕಾರ್ಯಗಳಲ್ಲಿ ಗೋ ಮಾತೆಯ ಪೂಜೆ ಮಾಡಲಾಗುತ್ತದೆ. ಗೋ ಸಗಣಿಯಿಂದ ತಯಾರಿಸಿದ ವಿಭೂತಿ ಧಾರಣೆ ಮಾಡುವುದರಿಂದ ಬಡತನ ನಿರ್ಮೂಲನೆಯಾಗಲಿದೆ. ನಾಸ್ತಿಕರಿಗೂ ಗೋವು ಅವಶ್ಯಕ. ಗೋ ಹಾಲಿನಿಂದ ನಾಸ್ತಿಕರು ಉತ್ತಮ ಆರೋಗ್ಯ ಕಾಪಾಡಿಕೊಳ್ಳುತ್ತಾರೆ ಎಂದು ಹೇಳಿದರು.

ಗೋ ಸೇವಾ ಗತಿವಿಧಿಯ ಮಹಾಪೋಷಕ ಹಾಗೂ ಉದ್ಯಮಿ ವಿ.ಎಸ್.ವಿ ಪ್ರಸಾದ ಮಾತನಾಡಿದರು. ಧಾರವಾಡ ವಿಭಾಗದ ಸಂಘಚಾಲಕ ಗೋವಿಂದಪ್ಪ ಗೌಡಪ್ಪಗೋಳ, ಗೋ ಗತಿ ವಿಧಿಯ ಪ್ರಾಂತ ಸಂಯೋಜಕ ದತ್ತಾತ್ರೇಯ ಭಟ್ಟ ಇದ್ದರು.

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ನಿರ್ಣಯ ಕೈಗೊಳ್ಳಲು ಒತ್ತಾಯ

15ಕ್ಕೂ ಹೆಚ್ಚು ಪ್ರತಿಭಟನಾಕಾರರ ಬಂಧನ, ಬಿಡುಗಡೆ

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆ ಎದುರು ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯವನ್ನು ಮಹಾನಗರ ಪಾಲಿಕೆಯಲ್ಲಿ ಒಮ್ಮತದಿಂದ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಉಗ್ರ ಪತಿಭಟನೆಯನ್ನು ನಡೆಸಿದರು.

ಬುಧವಾರ ಮಾರ್ಕೆಟ್ ಪೊಲೀಸ್ ಠಾಣೆ ವ್ಯಾಪ್ತಿಯ ಮಹಾನಗರ ಪಾಲಿಕೆ ಮುಂಭಾಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಸುಮಾರು 30ರಿಂದ 40 ಜನ ಭಾಗವಹಿಸಿ ಕನ್ನಡಪರ ಘೋಷಣೆ ಕೂಗಿ ಪ್ರತಿಭಟಿಸಿದರು.

> ಬೆಳಗಾವಿ ಪಾಲಿಕೆ ಎದುರು ಕನ್ನಡಪರ ಸಂಘಟನೆಗಳ ಪ್ರತಿಭಟನೆ

ಕರವೇ ಜಿಲ್ಲಾಅಧ್ಯಕ್ಷ ವಾಜೀದ್ ಹಿರೇಕುಡಿ (ಕರವೇ ಶಿವರಾಮೇಗೌಡ ಬಣ ಜಿಲ್ಲಾಧ್ಯಕ್ಷ), ಬಲರಾಮ್ ಮಾಸಿನಟ್ಟಿ (ಗಡಿನಾಡು ಕನ್ನಡಿಗರ ಸೇನೆ ರಾಜ್ಯಾಧ್ಯಕ್ಷ), ಬಾಲಪ್ಪ ಗುಡಗನಟ್ಟಿ (ಕರವೇ ಯುವ ಸೈನ್ಯ), ಈಶ್ವರ ಗೌಡ ಪಾಟೀಲ್ (ಕರವೇ ಸ್ವಾಭಿಮಾನಿ ಬಳಗ) ಹಾಗೂ ಶ್ರೀನಿವಾಸ್ ತಾಲೂಕರ (ಸರ್ವೋದಯ ಸಂಘಟನೆ ಅಧ್ಯಕ್ಷ) ನೇತೃತ್ವ ವಹಿಸಿದ್ದರು.

ಮಹಾಜನ ವರದಿಯೇ ಅಂತಿಮ: ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಕುರಿತು ಕರ್ನಾಟಕ ಸರ್ಕಾರದ ಅಚಲ ನಿಲುವಿನಂತೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯವನ್ನು ಪಾಲಿಕೆ ಸಭೆಯಲ್ಲಿ ತಕ್ಷಣ ಕೈಗೊಳ್ಳಬೇಕು ಎಂದು ಪ್ರತಿಭಟನೆಯಲ್ಲಿ ಒತ್ತಾಯಿಸಿದರು. ಮಹಾಜನ ವರದಿಯೇ ಅಂತಿಮ ಎಂಬ ನಿಲುವನ್ನು ಮಹಾನಗರ ಪಾಲಿಕೆ ಅಧಿಕೃತ ನಿರ್ಣಯದ ಮೂಲಕ ಪುನರುಚ್ಚರಿಸಬೇಕು ಎಂದು ಆಗ್ರಹಿಸಿದರು.

ಕನ್ನಡಪರ ಸಂಘಟನೆಗಳು ಸಭಾಂಗಣಕ್ಕೆ ನುಗ್ಗಲು ಯತ್ನ: ಇದೇ ವೇಳೆ, ಸರ್ವೋದಯ ಸಂಘಟನೆ ಅಧ್ಯಕ್ಷ ಶ್ರೀನಿವಾಸ್ ತಾಲೂಕರ ಅವರು ತಮ್ಮ ಮುಖವನ್ನು ಮರೆಮಾಚಿಕೊಂಡು ಮಹಾನಗರ ಪಾಲಿಕೆಯ ಸಾರ್ವಜನಿಕ ಶೌಚಾಲಯದಲ್ಲಿ ಅಡಗಿ ಕುಳಿತಿದ್ದರು ಎನ್ನಲಾಗಿದೆ. ಬಳಿಕ ದಿಢೀರನೆ ಘೋಷಣೆಗಳನ್ನು ಕೂಗುತ್ತಾ ಪಾಲಿಕೆ ಪರಿಷತ್ ಸಭಾಂಗಣದೊಳಗೆ ನುಗ್ಗಲು ಯತ್ನಿಸಿದ ವೇಳೆ ಪೊಲೀಸರು ಅವರನ್ನು ತಡೆದು ವಶಕ್ಕೆ ಪಡೆದು ಪ್ರತಿಭಟನಾ ಸ್ಥಳಕ್ಕೆ ಕರೆತಂದರು.



> **ಮಳೆ ನಡುವೆ ಉದ್ವಿಗ್ನತೆ**
> ಮಳೆ ತೀವ್ರಗೊಂಡ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಮಹಾನಗರ ಪಾಲಿಕೆ ಒಳಗೆ ತೆರಳುವುದಾಗಿ ತಿಳಿಸಿದಾಗ, ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಸುಮಾರು 15ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು. ನಂತರ ಬಿಡುಗಡೆಗೊಳಿಸಿದರು.

> **ಮಹಾಪೌರರ ಭೇಟಿ, ಚರ್ಚೆಯ ಭರವಸೆ**
> ಪ್ರತಿಭಟನೆ ನಡೆಯುತ್ತಿದ್ದ ಸ್ಥಳಕ್ಕೆ ಮಹಾಪೌರರು ಹಾಗೂ ಉಪಮಹಾಪೌರರು ಆಗಮಿಸಿ ಪ್ರತಿಭಟನಾಕಾರರ ಮನವಿಯನ್ನು ಆಲಿಸಿದರು. ಈ ವಿಷಯವನ್ನು ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



ನಗರಸೇವಕರ ಮನವೊಲಿಕೆ ವಿಫಲ: ಪ್ರತಿಭಟನಾಕಾರರನ್ನು ಮನವೊಲಿಸಲು ಬಿಜೆಪಿ ನಗರಸೇವಕ ರಾಜಶೇಖರ್ ಡೋಣಿ, ಕಾಂಗ್ರೆಸ್ ನಗರಸೇವಕ ಅಜೀಂ ಪಟವೇಗಾರ ಹಾಗೂ ನಾಮ ನಿರ್ದೇಶಿತ ಸದಸ್ಯ ರಮೇಶ್ ಸೊಂಟಕ್ಕೆ ಆಗಮಿಸಿದರು. ಮಹಾಪೌರರು ನಗರಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗೆ ಪತ್ರ ಬರೆಯಲಿದ್ದು, ಅವರ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆದರೆ ಪ್ರತಿಭಟನಾಕಾರರು, 2005 ರಲ್ಲಿಯೂ ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿದ್ದಾಗ ಎಂಇಎಸ್ ತಮ್ಮ ನಿಲುವು ಮಂಡಿಸಿತ್ತು. ಈಗಲೂ ಮಹಾನಗರ ಪಾಲಿಕೆಗೆ ನಿರ್ಣಯ ಕೈಗೊಳ್ಳುವ ಅಧಿಕಾರವಿದೆ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಪಾಲಿಕೆ ಸ್ಪಷ್ಟ ನಿರ್ಣಯ ಕೈಗೊಳ್ಳಬೇಕು ಎಂದು ಪಟ್ಟು ಹಿಡಿದರು.

ಕಿರುಸುದ್ದಿ

ಉಪನೋಂದಣಾಧಿಕಾರಿ ಅಮಾನತಿಗೆ ಶಿಫಾರಸು

ಬೆಳಗಾವಿ: ಭೂ ನೋಂದಣಿ ವಂಚನೆ ಪ್ರಕರಣವೊಂದರಲ್ಲಿ ಬೆಳಗಾವಿ ದಕ್ಷಿಣ ಉಪನೋಂದಣಾಧಿಕಾರಿ ಅಮಾನತು ಮಾಡುವಂತೆ ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಶಿಫಾರಸು ಮಾಡಿದ್ದಾರೆ. ನಕಲಿ ದಾಖಲೆಗಳು ಮತ್ತು ನಕಲಿ ಸಹಿಗಳನ್ನು ಬಳಸಿ ಆಸ್ತಿ ನೋಂದಣಿ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.2026ರ ಏಪ್ರಿಲ್ 24ರಂದು ಅಂಕಲಗಿ ಗ್ರಾಮದಲ್ಲಿರುವ 9 ಎಕರೆ 33 ಗುಂಟೆ ಜಮೀನನ್ನು 39 ವರ್ಷಗಳ ಹಿಂದೆ ಮೃತಪಟ್ಟಿದ್ದರೆಂದು ಹೇಳಲಾಗಿರುವ ವ್ಯಕ್ತಿ ಹೆಸರಿನಲ್ಲಿ ನೋಂದಣಿ ಮಾಡಲಾಗಿತ್ತು. ಇದೇ ಮೃತ ವ್ಯಕ್ತಿಗೆ ಸಂಬಂಧಿಸಿದ ಮತ್ತೊಂದು ಸಮಾನ ಪ್ರಕರಣವನ್ನು ಈ ಹಿಂದೆ ನ್ಯಾಯಾಲಯದ ಸೂಚನೆ ಬಳಿಕ ರದ್ದುಪಡಿಸಲಾಗಿತ್ತು. ಇದೀಗ ಜಿಲ್ಲಾಧಿಕಾರಿಗಳು ಎಫ್ಐಆರ್ ದಾಖಲಿಸಲು ಸೂಚನೆ ನೀಡಿದ್ದು, ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಾಖಲೆ ಪರಿಶೀಲನೆ ಮತ್ತು ಭದ್ರತಾ ಕ್ರಮಗಳಲ್ಲಿ ಗಂಭೀರ ನಿರ್ಲಕ್ಷ್ಯ ನಡೆದಿದೆ ಎಂದು ಉಲ್ಲೇಖಿಸಿ, ಅಮಾನತಿಗೆ ಶಿಫಾರಸು ಮಾಡಿದ್ದಾರೆ.



ಪ್ರವಾಸಿ ಮಂದಿರ ಸಮೀಪ ಕಾಳಿ ನದಿಯ ದಂಡೆಯಲ್ಲಿ ಮೊಟ್ಟೆಗಳ ಪೋಷಣೆ

40 ಮರಿಗೆ ಜನ್ಮ ನೀಡಿದ ಮೊಸಳೆ!



ದಾಂಡೇಲಿ: ಕಳೆದ ಎರಡು ತಿಂಗಳ ನಗರದ ಪ್ರವಾಸಿ ಮಂದಿರದ ಹತ್ತಿರ ಕಾಳಿ ನದಿಯ ದಂಡೆಯಲ್ಲಿ ಗವಿಯಾಕಾರದ ಸ್ಥಳವನ್ನು ಮಾಡಿಕೊಂಡು ಬೃಹತ್ ಗಾತ್ರದ ಮೊಸಳೆಯೊಂದು ನಲವತ್ತಕ್ಕೂ ಹೆಚ್ಚು ಮೊಟ್ಟೆಗಳನ್ನು ಇಟ್ಟಿದೆ. ಇದೀಗ ಆ ಮೊಟ್ಟೆಗಳು ಒಡೆದು ಮರಿಗಳಾಗಿ ಹೊರ ಬಂದಿವೆ. ನದಿ ದಂಡೆಯ ಪ್ರದೇಶದಲ್ಲಿ ಈ ಮೊಸಳೆಯ ಮರಿಗಳು ಓಡಾಟ ನಡೆಸಿವೆ.

ಕೇವಲ ಒಂದು ಮೊಸಳೆ ಸರಿ ಸುಮಾರು 40 ಮರಿಗಳಿಗೆ ಜನ್ಮ ನೀಡಿದರೆ ನದಿಯಲ್ಲಿ ಸಾವಿರ ಸಂಖ್ಯೆಯಲ್ಲಿರುವ ಮೊಸಳೆಗಳು ಇನ್ನೆಷ್ಟು ಮರಿಗಳಿಗೆ ಜನ್ಮ ನೀಡಬಹುದು. ಮುಂದೊಂದು ದಿನ ಕಾಳಿ ನದಿ ಸಂಪೂರ್ಣ ಮೊಸಳೆಗಳ ಕೈವಶವಾಗಲಿದೆ. ಭವಿಷ್ಯದ ದಿನಗಳಲ್ಲಿ ಜಲ ಸಾಹಸ ಕ್ರೀಡೆಗೂ ಆತಂಕವನ್ನು ತಂದೊಡ್ಡುವ ದಿನ ದೂರವಿಲ್ಲ ಎಂಬ ಮಾತು ಚರ್ಚೆಯಲ್ಲಿದೆ. ಈ ನಿಟ್ಟಿನಲ್ಲಿ ಮೊಸಳೆಗಳ ನಿಯಂತ್ರಣಕ್ಕೆ ಸಂಬಂಧಪಟ್ಟ ಇಲಾಖೆಯವರು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ತುಂಗಭದ್ರಾ ನದಿಯಲ್ಲಿ ಮುಳುಗಿ ಬಾಲಕ ಸಾವು

ವಿಜಯನಗರ: ಹಂಪಿ ವಿರೂಪಾಕ್ಷ ದೇವಸ್ಥಾನದ ತುಂಗಭದ್ರಾ ನದಿ ಸ್ನಾನಘಟ್ಟದಲ್ಲಿ ಈಜಲು ತೆರಳಿದ್ದ ಬಾಲಕನೊಬ್ಬ ನದಿಯಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.



ಹುಬ್ಬಳ್ಳಿ ನಿವಾಸಿ ಹರೀಶ್(16) ಮೃತ ಬಾಲಕ. ಇತ್ತೀಚೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ. 82 ರಷ್ಟು ಅಂಕ ಗಳಿಸಿದ್ದ ಹರೀಶ್, ಡಿಪ್ಲೋಮಾ ಪ್ರವೇಶ ಪಡೆದಿದ್ದ. ಈ ನಡುವೆ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಇಬ್ಬರು ಸ್ನೇಹಿತರೊಂದಿಗೆ ಹಂಪಿಯಲ್ಲಿರುವ ಅಜ್ಜಿ ಮನೆಗೆ ಬಂದಿದ್ದ. ಹಂಪಿ ಸುತ್ತಾಡುವ ವೇಳೆ ಹರೀಶ್ ಸ್ನಾನ ಮಟ್ಟದಲ್ಲಿ ಈಜಲು ತೆರಳಿದ್ದರೆ, ಇನ್ನಿಬ್ಬರು ದಡದಲ್ಲಿಯೇ ನಿಂತು ಕೈಕಾಲು ತೊಳೆದುಕೊಂಡಿದ್ದರು. ನದಿಯಲ್ಲಿ ಈಜುತ್ತಿದ್ದ ಹರೀಶ್ ನೋಡನೋಡುತ್ತಿದ್ದಂತೆ ನೀರಿನ ಸೆಳೆತಕ್ಕೆ ಸಿಲುಕಿ, ಮೃತಪಟ್ಟಿದ್ದಾನೆ ಎಂದು ತಿಳಿದು ಬಂದಿದೆ.

ಈ ಕುರಿತು ಸುದ್ದಿ ತಿಳಿಯುತ್ತಿದ್ದಂತೆ ಸ್ಥಳೀಯ ಪೊಲೀಸರು, ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಸ್ಥಳೀಯರು ಈಜಿ ಮೃತದೇಹವನ್ನು ಹೊರತೆಗೆದಿದ್ದಾರೆ. ಈ ಕುರಿತು ಹಂಪಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿರತೆ ಪ್ರತ್ಯಕ್ಷ: ಜನರಲ್ಲಿ ಆತಂಕ

ಜಮಖಂಡಿ: ತಾಲೂಕಿನ ಹಿಪ್ಪರಗಿ ಗ್ರಾಮದ ಹೊಳೆಮಠದ ಜಮೀನಿನಲ್ಲಿ ಮಂಗಳವಾರ ತಡರಾತ್ರಿ ಚಿರತೆ ಪ್ರತ್ಯಕ್ಷವಾಗಿದ್ದು, ತೋಟದ ವಸತಿ ಸೇರಿ ಗ್ರಾಮದ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ತಡರಾತ್ರಿ ಚಿರತೆಯೊಂದು ಎಮ್ಮೆಯ ಕರುವಿನ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಜನರು ಸೇರಿದ್ದರಿಂದ ಓಡಿ ಹೋಗಿದೆ. ವಿಷಯ ತಿಳಿದು ಅರಣ್ಯ ಇಲಾಖೆಯ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ಬೋನ್ ಹಾಕುವುದಾಗಿ ತಿಳಿಸಿದ್ದಾರೆ. ಸುತ್ತಲೂ ಕಬ್ಬಿನ ಬೆಳೆಯಿದ್ದು, ಕಬ್ಬಿನ ಬೆಳೆಯಲ್ಲಿ ಅವಿತಿರುವ ಶಂಕೆ ವ್ಯಕ್ತಪಡಿಸಿದ್ದಾರೆ. ಕೂಡಲೇ ಚಿರತೆ ಸೆರೆ ಹಿಡಿಯಲು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಂದೆ ಹತ್ಯೆಗೆ ಯತ್ನ

ಹುಬ್ಬಳ್ಳಿ: ತಾಯಿಯ ಮೇಲೆ ತಂದೆ ಸಂಶಯಪಡುತ್ತಿದ್ದ ಕಾರಣಕ್ಕೆ ತಾಯಿ ಸೇರಿ ಇಬ್ಬರ ಮಕ್ಕಳು ತಂದೆಯ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ ಘಟನೆ ಬೈರಿದೇವರಕೊಪ್ಪದಲ್ಲಿ ನಡೆದಿದೆ. ನಿಂಗಪ್ಪ ಕುರುಬರ ಎಂಬುವರು ಗಂಭೀರ ಗಾಯಗೊಂಡಿದ್ದು, ಆತನ ಪತ್ನಿ ಶೋಭಾ, ಮಕ್ಕಳಾದ ಮನು ಹಾಗೂ ಮೇಘಾ ಎಂಬುವರು ಹಲ್ಲೆ ನಡೆಸಿದ್ದಾರೆ. ತಂದೆ ನಿಂಗಪ್ಪ ತಾಯಿ ಮೇಲೆ ಸಂಶಯ ಪಡುತ್ತಿದ್ದು, ಮಂಗಳವಾರು ಇದೇ ವಿಚಾರಕ್ಕೆ ಜಗಳ ತೆಗೆದಾಗ ಈ ಮೂವರು ಸೇರಿಕೊಂಡು ಸುತ್ತಿಗೆಯಿಂದ ತಲೆ ಹಾಗೂ ಮುಖಕ್ಕೆ ಹೊಡೆದಿದ್ದಾರೆ. ಇದರಿಂದ ನಿಂಗಪ್ಪ ಗಂಭೀರವಾಗಿ ಗಾಯಗೊಂಡಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ನವನಗರ ಠಾಣೆಯಲ್ಲಿ ಪ್ರಕರಣ ದಾಖಲು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಸಿಪಿಐ ರಂಗನಾಥ ವರ್ಗಾವಣೆ



ಮುಂಡಗೋಡ: ಕಳೆದ ಎರಡು ವರ್ಷಗಳಿಂದ ಮುಂಡಗೋಡನಲ್ಲಿ ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದ ರಂಗನಾಥ ನೀಲಮ್ಮನವರ ಅವರು ವರ್ಗಾವಣೆಗೊಂಡಿದ್ದಾರೆ. ಇವರ ಸ್ಥಾನಕ್ಕೆ ಪೊಲೀಸ್ ಇನ್ಸ್ಪೆಕ್ಟರ್ ರಮೇಶ ಹಾನಪುರ ಎಂಬವರನ್ನು ನೇಮಕ ಮಾಡಿ ರಾಜ್ಯ ಪೊಲೀಸ್ ಇಲಾಖೆಯ ಡೈರೆಕ್ಟರ್ ಜನರಲ್ ಹಾಗೂ ಇನ್ಸ್ಪೆಕ್ಟರ್ ಜನರಲ್ ಆಪ್ ಪೊಲೀಸ್ ಆದೇಶ ಹೊರಡಿಸಿದ್ದಾರೆ. ಸಿಪಿಐ ರಂಗನಾಥ ನೀಲಮ್ಮನವರನ್ನು ಮಂಗಳೂರು ಸಿ ಸಿಆರ್ ಬಿಗೆ ವರ್ಗಾವಣೆ ಮಾಡಿದ್ದಾರೆ.

ಆಗಿ ರಮೇಶ ಹಾನಪುರ ಅವರು ಯಲ್ಲಾಪುರ ತಾಲೂಕಿನಲ್ಲಿ ಸಿಪಿಐ ಆಗಿ ಕಾರ್ಯನಿರ್ವಹಿಸಿ ಇತ್ತೀಚೆಗೆ ಮಂಗಳೂರು ಸಿಸಿಆರ್ ಬಿಗೆ ವರ್ಗಾವಣೆ ಆಗಿದ್ದರು. ಇದೀಗ ಮುಂಡಗೋಡ ಸಿಪಿಐ ಆಗಿ ರಮೇಶ ನೇಮಕ ಮಾಡಿ ಪೊಲೀಸ್ ಇಲಾಖೆಯ ಡೈರೆಕ್ಟರ್ ಜನರಲ್ ಹಾಗೂ ಇನ್ಸಪೆಕ್ಟರ್ ಜನರಲ್ ಆಪ್ ಪೊಲೀಸ್ ಆದೇಶ ಹೊರಡಿಸಿದ್ದಾರೆ.

ಡಾ. ಜಿ.ಡಿ. ಭಟ್ಟ ನೇಮಕ



ಕುಮಟಾ: ಕುಮಟಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಜಿ.ಡಿ. ಭಟ್ಟ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಶಿಕ್ಷಣ ನಿಖಾಯದ ತಜ್ಞ ಸಮಿತಿಯ ಸದಸ್ಯರಾಗಿ ಎರಡು ವರ್ಷದ ಅವಧಿಗೆ ನೇಮಕ ಮಾಡಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಜೆ.ಡಿ. ಭಟ್ ಅವರು ಈ ನೇಮಕಾತಿ ಆದೇಶ ಹೊರಡಿಸಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಡಾ. ಜಿ.ಡಿ. ಭಟ್ ಅವರು ಸಲ್ಲಿಸಿರುವ ಸೇವೆ, ಅನುಭವ ಮತ್ತು ಶೈಕ್ಷಣಿಕ ಕೊಡುಗೆಯನ್ನು ಪರಿಗಣಿಸಿ ಈ ಗೌರವಯುತ ಸ್ಥಾನ ನೀಡಲಾಗಿದೆ ಎಂದು ತಿಳಿದುಬಂದಿದೆ. ಅವರ ನೇಮಕಾತಿಗೆ ಶಿಕ್ಷಣ ವಲಯದ ಗಣ್ಯರು, ಕಾಲೇಜಿನ ಆಡಳಿತ ಮಂಡಳಿ, ಸಹೋದ್ಯೋಗಿಗಳು ಹಾಗೂ ಹಳೆ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಸೋರಿಕೆ ತಡೆಗೆ ವಿಫಲ



ಬನವಾಸಿ: ಪುರಾತನ ದೇಗುಲ ಬನವಾಸಿ ಮಧುಕೇಶ್ವರ ದೇವಸ್ಥಾನ ಸೋರಿಕೆ ತಡೆಗಟ್ಟುವಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಿಫಲವಾಗಿದ್ದು, ಆ ಕುರಿತು ಪ್ರತಿಭಟನೆಗೆ ಮುಂದಾದ ಬನವಾಸಿ ನೂತನ ತಾಲೂಕು ಹೋರಾಟ ಸಮಿತಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕರು ಹಾಗೂ ರಾಜ್ಯ ಪದಾಧಿಕಾರಿಯಾದ ಬಿ. ಶಿವಾಜಿ ಹೇಳಿದ್ದಾರೆ.

ಎರಡು ಸಾವಿರ ವರ್ಷಗಳಿಗೂ ಹೆಚ್ಚು ಇತಿಹಾಸ ಇರುವ ಅಪರೂಪದ ಸುಂದರ ದೇವಸ್ಥಾನ ಬನವಾಸಿ ಮಧುಕೇಶ್ವರ ದೇವಸ್ಥಾನ. ಸೋರಿಕೆ ಆರಂಭವಾಗಿ ಹನ್ನೆರಡು ವರ್ಷ ಆದರೂ ಅದಕ್ಕೆ ಸೂಕ್ತ ಪರಿಹಾರ, ದುರಸ್ತಿ ಕಾರ್ಯ ಇಲಾಖೆ ಮಾಡದೇ ಇರುವದು ಬೇಸರದ ಸಂಗತಿ. ಅದನ್ನ ಅಧಿಕಾರಿಗಳು ಅರಿತು ಮಾಡಬೇಕಿತ್ತು, ಅದಕ್ಕೆ ಬದಲಾಗಿ ಹೋರಾಟ ಮಾಡುವ ಪರಿಸ್ಥಿತಿ ಬಂದಿದೆ ಎಂದು ತಿಳಿಸಿದ ಅವರು, ನೂತನ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ ಎಫ್ ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಇವರ ಪ್ರಯತ್ನದ ಹಿಂದೆ ಸದಾ ಬೆಂಗಾವಲಾಗಿ ದಲಿತ ಸಂಘರ್ಷ ಸಮಿತಿ ಕಾರ್ಯ ಮಾಡಲಿದೆ ಎಂದಿದ್ದಾರೆ. ನಮ್ಮ ಸಂಘಟನೆ ಯಿಂದ ನೂರಾರು ಕಾರ್ಯಕರ್ತರು ದೇವಸ್ಥಾನ ಉಳಿಸುವ ನಿಟ್ಟಿನಲ್ಲಿ ಬೆಂಬಲಿಸಿದ್ದಾರೆ ಎಂದಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61342	71899
ಬಿಳಿಗೋಟು	25299	37300
ಕೆಂಪುಗೋಟು	32458	37619
ಬೆಟ್ಟೆ	40299	50699
ರಾಶಿ	50899	55099
ಚಾಲಿ	44599	48603
ಬಿ.ಕಾಳುಮೆಣಸು	82000	82000



ಸಿದ್ದಾಪುರ: ತಾಲೂಕಿನಾದ್ಯಂತ ಬಿದ್ದ ಬಾರೀ ಗಾಳಿ ಮಳೆಯಿಂದಾಗಿ ಹತ್ತಾರು ಕಡೆಗಳಲ್ಲಿ ವಿದ್ಯುತ್ ತಂತಿಯ ಮೇಲೆ ಮರ ಬಿದ್ದು ನೂರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಅನೇಕ ಕಡೆ ಪರಿವರ್ತಕಗಳು ಹಾಳಾಗಿವೆ. ಹೆಸ್ಕಾಂ ಸಿಬ್ಬಂದಿ ಲೈನ್‌ಗಳನ್ನು ಸರಿಪಡಿಸಲು ಹೆಣಗುತ್ತಿದ್ದಾರೆ. ತಾಲೂಕಿನ ಹಾರ್ಸಿಕಟ್ಟಾ, ಮುತ್ತಿಗೆ ಸೇರಿದಂತೆ ಅನೇಕ ಭಾಗಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ.

ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ

ದಾಂಡೇಲಿ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಇದರ ದಾಂಡೇಲಿ ತಾಲೂಕು ಘಟಕಕ್ಕೆ ಅಧ್ಯಕ್ಷ, ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಆಯ್ಕೆಗೆ ಚುನಾವಣೆಯನ್ನು ಮೇ 24ರಂದು ನಡೆಯಬೇಕಿತ್ತು. ಆದರೆ ಚುನಾವಣೆಯಿಲ್ಲದೇ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಸಹಾಯಕ ಚುನಾವಣಾಧಿಕಾರಿ ಎಸ್.ಜಿ.ಬಿರಾದಾರ ಅವರು ಘೋಷಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿರುವ ಎಸ್.ಜಿ.ಬಿರಾದಾರ ಅವರು ಚುನಾವಣೆಗಾಗಿ ಸಲ್ಲಿಸಲಾಗಿದ್ದ ನಾಮಪತ್ರಗಳನ್ನು ಮೇ 7ರಂದು ಅಭ್ಯರ್ಥಿಗಳ ಸಮಕ್ಷಮದಲ್ಲಿ ಪರಿಶೀಲನೆ ನಡೆಸಿ, ಊರ್ಜಿತಗೊಂಡ ಮತ್ತು ಅನುರ್ಜಿತಗೊಂಡ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸಲಾಗಿತ್ತು. ಅಧ್ಯಕ್ಷರಾಗಿ ಸಿದ್ದಪ್ಪ ಕುರುಗುಂದ ಮತ್ತು ಸದಸ್ಯರುಗಳಾಗಿ ಗಂಗಯ್ಯ ರುದ್ರಯ್ಯ ಹಿರೇಮಠ, ಶಂಕ್ರಯ್ಯ ಕು ಹಿರೇಮಠ, ರುದ್ರಪ್ಪ ತೋಟಗೇರ, ಪ್ರಶಂತ ಪಾಟೀಲ, ಶರಣಬಸಪ್ಪ ರಾಜೂರ, ನಿಂಗರಾಜ ಮೊದಗಿ, ದುಂಡಪ್ಪ ಬೆಣ್ಣಿ, ಅಶ್ವಿನಕುಮಾರ ಝುಟ್ಟಿ, ಶಿವನಗೌಡ ಗಂಗನಗೌಡ್ರ, ಶಂಕರಯ್ಯ ಜಡೆಹಿರೇಮಠ, ಚನ್ನಬಸಪ್ಪ ಮುರಗೋಡ, ಮಲ್ಲಿಕಾರ್ಜುನ ಗಾಳಪ್ಪನವರ, ಬಸನಗೌಡ ಪಾಟೀಲ, ದ್ರಾಕ್ಷಾಯಣಿ ಅಂಕಲಗಿ, ಗೀತಾ ಝುಟ್ಟಿ, ಮೈತ್ರಾ ಜಿಗಳಿ, ದೀಪಾ ಪಾಟೀಲ, ಜ್ಯೋತಿ ಸವದತ್ತಿಮಠ, ಸವಿತಾ ಮುಂಗರವಾಡಿ, ಸುಜಾತಾ ಗಡದ ಅವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ತಿಳಿಸಿದ್ದಾರೆ.



ದಾಂಡೇಲಿ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾಂಡೇಲಿ ತಾಲೂಕು ಘಟಕಕ್ಕೆ ಅಧ್ಯಕ್ಷ, ಕಾರ್ಯನಿರ್ವಾಹಕ ಸಮಿತಿ ಸದಸ್ಯರ ಅಯ್ಕೆಗೆ ಚುನಾವಣೆಯನ್ನು ಮೇ 24ರಂದು ನಡೆಯಬೇಕಿತ್ತು. ಆದರೆ ಚುನಾವಣೆಯಿಲ್ಲದೇ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಸಹಾಯಕ ಚುನಾವಣಾಧಿಕಾರಿ ಎಸ್.ಜಿ.ಬಿರಾದಾರ ಅವರು ಘೋಷಿಸಿದ್ದಾರೆ.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ | ಜಿಲ್ಲಾಧಿಕಾರಿ ನಿರ್ದೇಶನ

ಗುಡ್ಡ ಕುಸಿತಕ್ಕೆ ಮುನ್ನೆಚ್ಚರಿಕೆ ವಹಿಸಿ

ಕಾರವಾರ: ಪ್ರಸಕ್ತ ಸಾಲಿನ ಮುಂಗಾರು ಅವಧಿಯಲ್ಲಿ ಜಿಲ್ಲೆಯಲ್ಲಿ ಗುಡ್ಡ ಕುಸಿತ ಮತ್ತು ನೆರೆಯಿಂದ ಯಾವುದೇ ಅನಾಹುತಗಳಾಗದಂತೆ ಅಗತ್ಯವಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಈ ಅವಧಿಯಲ್ಲಿ ಕಂಡುಬರುವ ಸಮಸ್ಯೆಗಳನ್ನು ಎದುರಿಸಲು ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಸನ್ನದ್ದರಾಗಿರುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ನಿರ್ದೇಶನ ನೀಡಿದರು.

ಅವರು ಬುಧವಾರ, ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಮುಂಗಾರು ಸಿದ್ದತೆ ಕುರಿತು ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಳೆಗಾಲದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ ಎಲ್ಲಾ ತಹಶೀಲ್ದಾರ ಕಚೇರಿಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ 24★7 ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ತೆರೆಯುವಂತೆ ಸೂಚಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿ ಕಚೇರಿಯಲ್ಲಿನ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರದಲ್ಲಿ ಪೊಲೀಸ್, ಅಗ್ನಿಶಾಮಕ, ಅರಣ್ಯ, ಹೆಸ್ಕಾಂ, ಬಿ.ಎಸ್.ಎನ್.ಎಲ್ ಕಚೇರಿಯ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸುವಂತೆ ತಿಳಿಸಿದರು.

ರಾಜ್ಯ ವಿಪತ್ತು ಉಪಶಮನ ನಿಧಿ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಪಂ.ರಾಜ್ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತಕ್ಷಣ ಕಾರ್ಯಾದೇಶ ನೀಡಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚಿಸಿದ ಅವರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಜಿಲ್ಲೆಯಲ್ಲಿ ಕೈಗೊಂಡಿರುವ ರಸ್ತೆ ಕಾಮಗಾರಿಗಳನ್ನು ಈ ತಿಂಗಳೊಳಗೆ ಮುಕ್ತಾಯಗೊಳಿಸುವಂತೆ ಹಾಗೂ ರಸ್ತೆಗಳ ಪಕ್ಕದಲ್ಲಿ ಚರಂಡಿ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಹಾಗೂ ಮಳೆ ನೀರು ರಸ್ತೆಯಲ್ಲಿ ನಿಲ್ಲದಂತೆ ಎಚ್ಚರವಹಿಸಬೇಕು, ಹೆದ್ದಾರಿಯಲ್ಲಿನ ಅಪಾಯಕಾರಿ ಪ್ರದೇಶಗಳಲ್ಲಿ ಸೂಕ್ತ ಎಚ್ಚರಿಕೆ ಫಲಕ, ಬ್ಯಾರಿಕೇಡ್ ಸೇರಿದಂತೆ ಅಗತ್ಯ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದಂತೆ ಡ್ರಜ್ಜಿಂಗ್ ಕೈಗೊಳ್ಳಲಾಗುವುದು, ಅಪಾಯಕಾರಿ ಸ್ಥಳಗಳಲ್ಲಿ ನೋ ಪಾರ್ಕಿಂಗ್ ಝೋನ್ ಮಾಡಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಈಗಾಗಲೇ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಪಾಯಕಾರಿಯಾಗಿ ಕಂಡುಬಂದಿರುವ 1,780 ಮರಗಳನ್ನು ಗುರುತಿಸಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ವರದಿ ನೀಡಿದ್ದು, ಅರಣ್ಯ ಇಲಾಖೆ ವತಿಯಿಂದ ಈ ಮರಗಳನ್ನು ಪರಿಶೀಲಿಸಿ, ಶೀಘ್ರದಲ್ಲಿ ಅವುಗಳನ್ನು ತೆರವುಗೊಳಿಸುವ ಅಥವಾ ಕೊಂಬೆಗಳನ್ನು ಕತ್ತರಿಸುವ ಕಾರ್ಯವನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಸಾರ್ವಜನಿಕರು ಯಾವುದೇ ವಿಪತ್ತು ಸಂದರ್ಭದಲ್ಲಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರದಿರುವ ತುರ್ತು ಕಾರ್ಯಾಚರಣೆ ಕೇಂದ್ರದ ಸಹಾಯವಾಣಿ ಸಂಖ್ಯೆ 94835 11015 ನ್ನು 24★7 ಸಂಪರ್ಕಿಸಿ ಅಗತ್ಯ ನೆರವು ಪಡೆಯಬಹುದು ಎಂದ ಅವರು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ತೆರದಿರುವ ತಾಲೂಕು ಸಹಾಯವಾಣಿ ಸಂಖ್ಯೆಯ ವಿವರಗಳನ್ನು ಸಾರ್ವಜನಿಕರ ಮಾಹಿತಿಗೆ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಉಪ ವಿಭಾಗಾಧಿಕಾರಿ ಶ್ರವಣ ಕುಮಾರ್, ಜಿಪಂ ಉಪ ಕಾರ್ಯದರ್ಶಿ ಅಲ್ಲಾ ಭಕ್ಷ್, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ವರ್ಚುವಲ್ ಮೂಲಕ ಜಿಪಂ ಸಿಇಓ ಡಾ.ದಿಲೀಷ್ ಶಶಿ, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು, ತಾಪಂ ಕಾರ್ಯ ನಿರ್ವಹಣಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಭಾಗವಹಿಸಿದ್ದರು.



ತಹಶೀಲ್ದಾರರಿಗೆ ಸೂಚನೆ

ಪ್ರಸ್ತುತ ಜಿಲ್ಲೆಯಲ್ಲಿರುವ ಮಳೆ ಮಾಪನ ಯಂತ್ರಗಳ ದುರಸ್ತಿ, ಬದಲಾವಣೆ, ಸ್ಥಳಾಂತರ ಕಾರ್ಯವನ್ನು ಕೈಗೊಳ್ಳುವ ಕುರಿತಂತೆ ರಾಜ್ಯ ಮಟ್ಟದಲ್ಲಿ ಈಗಾಗಲೇ ಟೆಂಡರ್ ಆಗಿದ್ದು, ಜಿಲ್ಲೆಗೆ ಹಂಚಿಕೆಯಾಗಿರುವ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸಿ, ಎಲ್ಲಾ ಮಳೆ ಮಾಪನ ಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು ಎಂದು ಎಲ್ಲಾ ತಹಶೀಲ್ದಾರ್ ಗಳಿಗೆ ಸೂಚನೆ ನೀಡಿದರು.

- ಜಿಲ್ಲೆಯ ಶಾಲೆ, ಅಂಗನವಾಡಿ, ಕಾಲೇಜುಗಳ ವ್ಯಾಪ್ತಿಯಲ್ಲಿನ ಅಪಾಯಕಾರಿ ಮರಗಳು ಮತ್ತು ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ

ಬೃಹತ್ ಯೋಜನೆಗಳ ವಿಳಂಬಕ್ಕೆ ಕಾರಣ ನೀಡಿ

ಹಳಿಯಾಳ: ಕಾಳಿನದಿ ಏತ ನೀರಾವರಿ ಯೋಜನೆಯ ಮೂಲಕ ತಾಲೂಕಿನ ಕೆರೆ ಬಾಂದಾರ ತುಂಬಿಸುವ ಯೋಜನೆ, ಕಾಳಿ ನದಿ ಬಹುಗ್ರಾಮ ಶುದ್ಧ ಕುಡಿಯುವ ನೀರಿನ ಯೋಜನೆ, ಅಮೃತ್ 2.0 ಯೋಜನೆ ಹಾಗೂ ಪಟ್ಟಣದ ನಿರಂತರ ನೀರು ಪೂರೈಕೆ ಮತ್ತು ಒಳಚರಂಡಿ ಕಾಮಗಾರಿಗಳ ಕುರಿತು ತಾಲೂಕು ಮತ್ತು ಜಿಲ್ಲಾಡಳಿತ ಸ್ಪಷ್ಟ ಮಾಹಿತಿ ನೀಡುತ್ತಿಲ್ಲ ಎಂದು ಕಬ್ಬು ಬೆಳೆಗಾರರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ನಾಗೇಂದ್ರ ಜಿವೋಜಿ ಆರೋಪಿಸಿದರು.

ಪಟ್ಟಣದ ಮರಾಠಾ ಭವನದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮಾರ್ಚ್ ತಿಂಗಳಲ್ಲಿ ಪಾದಯಾತ್ರೆ ನಡೆಸಿ ಜನಜಾಗೃತಿ ಮೂಡಿಸಲಾಗಿತ್ತು. ನಂತರ ಮಾರ್ಚ್ 16ರಂದು ಹಳಿಯಾಳ ಬಂದ್ ನಡೆಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಎಪ್ರಿಲ್ 2 ರ ಸಮಯಾವಕಾಶ ಪಡೆದು ಶೀಘ್ರದಲ್ಲೇ ಯೋಜನೆಗಳ ಕಾಮಗಾರಿ ಆರಂಭವಾಗುತ್ತದೆ ಎಂದು ಭರವಸೆ ನೀಡಿದ್ದರು. ಪ್ರತಿಭಟನೆ ನಡೆದು ಸುಮಾರು ಎರಡು ತಿಂಗಳು ಕಳೆದಿದ್ದರೂ ಯಾವುದೇ ಮಹತ್ವದ ಪ್ರಗತಿ ಕಾಣಿಸಿಲ್ಲ ಎಂದು ಆರೋಪಿಸಿದರು.

ಕಾಮಗಾರಿಗಳ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು.

> ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ನೀಡಲು ಶಾಸಕರು ವಿಶೇಷ ಸಭೆ ಕರೆದು ಯೋಜನೆಗಳ ಪ್ರಗತಿ, ವಿಳಂಬಕ್ಕೆ ಕಾರಣಗಳು ಹಾಗೂ ಮುಂದಿನ ಕಾರ್ಯಯೋಜನೆ ಕುರಿತು ವಿವರಿಸಬೇಕು.
>
> ■ ನಾಗೇಂದ್ರ ಜಿವೋಜಿ, ಕಬ್ಬು ಬೆಳೆಗಾರರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ

ಕಾಳಿನದಿ ನೀರಾವರಿ ಯೋಜನೆ ಪೂರ್ಣಗೊಳ್ಳುವ ಮುನ್ನವೇ ಪೈಪುಗಳು ಹಾನಿಗೊಳಗಾಗಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿ. ಈ ಕುರಿತು ಹೊಸದಿಗಂತ ಪತ್ರಿಕೆಯು ಚಿತ್ರ ಸಹಿತ ವಿಶೇಷ ವರದಿ ಪ್ರಕಟಿಸಿತ್ತು. ಕಳಪೆ ಕಾಮಗಾರಿ ಕುರಿತು ಹಲವು ಬಾರಿ ದೂರುಗಳು ಬಂದಿದ್ದರೂ ಇದುವರೆಗೆ ಯಾವುದೇ ಗುತ್ತಿಗೆದಾರರ ವಿರುದ್ಧ ಅಥವಾ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳದಿರುವುದು ಅನುಮಾನಕ್ಕೆ ಕಾರಣವಾಗಿದೆ. ರೈತ ಮುಖಂಡರಾದ ಸಾತೇರಿ ಗೋಡೆಮನಿ, ಬೆಳಗಾಂವಕರ, ಕೆಂಚಣ್ಣನವರ, ಬಳಿರಾಮ ಮೋರೆ, ಚಂದ್ರಕಾಂತ ಲಕ್ಕನಗೌಡ್ರ, ಮಹೇಶ ಪಾಟೀಕರ, ಜೈಪಾಲ ಚಿತ್ತರಗಿ, ಶಾಂತಾರಾಮ ಸೂರ್ಯವಂಶಿ, ಮಂಜುನಾಥ ಶಿಂದೆ, ಗೋವಿಂದ ಗುಮ್ಮಾಳೆ, ತುಕಾರಾಮ್ ಕೋಲೆಕರ ಇತರರು ಇದ್ದರು.



ನಾಯಕರ ಮಾತಿನಲ್ಲಿ ಸತ್ಯಾಂಶವಿಲ್ಲ: ನರೇಗಲ್

ಬನವಾಸಿ: ಬಿಜೆಪಿ ರೈತ ಮೋರ್ಚಾದಿಂದ ಶಿರಸಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಬಿಜೆಪಿಯ ಬನವಾಸಿ ಮಂಡಲದ ಅಧ್ಯಕ್ಷ ರಮೇಶ ನಾಯ್ಕ ಹಾಗೂ ಇನ್ನಿತರ ಬಿಜೆಪಿ ನಾಯಕರ ಮಾತಿನಲ್ಲಿ ಯಾವುದೇ ರೀತಿಯ ಸತ್ಯಾಂಶವಿಲ್ಲ. ಈ ಪ್ರತಿಭಟನೆ ರೈತರ ಅನುಕೂಲಕ್ಕಾಗಿ ಅಲ್ಲ, ಕೇವಲ ತಮ್ಮ ರಾಜಕೀಯ ಲಾಭಕ್ಕಾಗಿ ಮಾಡಲಾಗಿದೆ ಎಂದು ಬನವಾಸಿ ಗ್ರಾಪಂ ಮಾಜಿ ಉಪಾಧ್ಯಕ್ಷ ಸಿದ್ದು ನರೇಗಲ್ ಹೇಳಿದರು.

ಅವರು ಬುಧವಾರ ಪತ್ರಿಕಾ ಪ್ರಕಟಣೆ ನೀಡಿ, ಕಡಗೋಡು ಗ್ರೀಡ್ ಕಾಮಗಾರಿ ಪೂರ್ಣಗೊಂಡು ಐದು ವರ್ಷ ಕಳೆದರು ಪೂರ್ಣ ಪ್ರಮಾಣದ ವಿದ್ಯುತ್ ಪೂರೈಕೆಯಾಗಿಲ್ಲ, ಶಿರಸಿ ಪೂರ್ವ ಭಾಗದ ಜನರಿಗೆ ನಿರಂತರ ತಾರತಮ್ಯ ಎಸಗಲಾಗುತ್ತಿದೆ. ಇದಕ್ಕೆ ಸ್ಥಳೀಯ ಶಾಸಕರ ಆಡಳಿತ ವೈಫಲ್ಯ ಎಂದು ಹೇಳಿಕೆ ನೀಡಿರುವುದು ಹಾಸ್ಯಸ್ಪದವಾಗಿದೆ.

ಗ್ರೀಡ್ ಕಾಮಗಾರಿ ವಿಳಂಬವಾಗಲು ಕಾರಣ ಏನು ಎಂಬುದು ಈ ಭಾಗದ ರೈತರಿಗೆ ತಿಳಿದಿದೆ. ತಮ್ಮ ಪ್ರಚಾರದ ಲಾಭಕ್ಕಾಗಿ ಬೇಕಾಬಿಟ್ಟಿ ಹೇಳಿಕೆ ನೀಡಿ ಜನರ ಹಾದಿ ತಪ್ಪಿಸುವ ಕೆಲಸ ಮಾಡುತ್ತಿರುವುದು ಬಿಜೆಪಿಗರಿಗೆ ಶೋಭೆ ತರುವುದಿಲ್ಲ. ಇಂತಹ ಆಧಾರವಿಲ್ಲದ ಹೇಳಿಕೆಯನ್ನು ನಂಬುವಷ್ಟು ಮೂರ್ಖರು ಯಾರಿಲ್ಲ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಇದೇ ಪ್ರತಿಭಟನೆಯನ್ನು ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ನಡೆಸಿದ್ದರೆ ಈ ಹೋರಾಟ ರೈತರಪರವಾಗಿ ಮಾಡುತ್ತಿದ್ದಾರೆ ಎನ್ನಬಹುದಾಗಿತ್ತು. ಆದರೆ ಮಳೆಗಾಲ ಆರಂಭವಾಗಿ ವೋಲ್ಟೇಜ್ ಇರುವಾಗ ಪ್ರತಿಭಟಿಸುತ್ತಿರುವುದು ಮೂರ್ಖತನದ ಪರಮಾವಧಿಯಾಗಿದೆ. ಇಷ್ಟೆಲ್ಲ ಪ್ರಚಾರದ ದೃಷ್ಟಿಯಿಂದ ಮಾತನಾಡುವ, ಪ್ರತಿಭಟಿಸುವ ಬಿಜೆಪಿಯ ಮುಖಂಡರು ಎರಡು ವಿದ್ಯುತ್ ಕಂಬವನ್ನು ಹಾಕಲು ಜಾಗ ನೀಡದೇ ನ್ಯಾಯಲಯದಲ್ಲಿ ಪ್ರಕರಣ ದಾಖಲಿಸಿರುವವರ ಮನವೊಲಿಸುವ ಕಾರ್ಯ ಮಾಡಲಿ. ಶಾಸಕರು ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸಿ ಕೊನೆಯದಾಗಿ ಕಂಬ ಹಾಕಲು ಜಾಗ ನೀಡಲು ಮುಂದೆ ಬಂದು ಪರಿಹಾರ ಹಣ ಕಡಿಮೆಯಾದರೇ ತಾನು ತನ್ನ ಸ್ವಂತ ಹಣ ನೀಡುವುದಾಗಿ ಸಹ ಹೇಳಿರುವುದು ಈ ಭಾಗದ ರೈತರಿಗೆ ತಿಳಿದಿದೆ.

ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವುದು ಕ್ಷೇತ್ರದ ಜನತೆಗೆ ಗೊತ್ತಿದೆ. ವರದಾ ನದಿಗೆ ಅಡ್ಡಲಾಗಿ ಅನೇಕ ಚೆಕ್ ಡ್ಯಾಂಗಳನ್ನು ನಿರ್ಮಿಸಿರುವುದರಿಂದ ಬನವಾಸಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ಎಷ್ಟು ಅನುಕೂಲವಾಗಿದೆ ಎಂಬುದನ್ನು ತಿಳಿದು ಮಾತನಾಡುವುದು ಉತ್ತಮ. ಪ್ರಚಾರದ ಭರಟೆಯಲ್ಲಿ ಅರ್ಥವಿಲ್ಲದೇ ಮಾತನಾಡಿದರೇ ಜನರು ಮುಂದಿನ ದಿನಗಳಲ್ಲಿ ಸರಿಯಾಗಿ ಬುದ್ದಿ ಕಲಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದಲಿ: ಸ್ವರ್ಣವಲ್ಲೀ ಶ್ರೀಗಳು

ಯಲ್ಲಾಪುರ: ಸಂಸ್ಥೆಗೆ 75ವರ್ಷವಾದರೆ ಅದು ಯೌವನವಿದ್ದಂತೆ ಬಲಿಷ್ಠವಾಗಿರುತ್ತದೆ. ಅದೇ ಮನುಷ್ಯನಿಗೆ 75 ವಯಸ್ಸು ಆದರೆ ದುರ್ಬಲನಾಗುತ್ತಾನೆ. ವಜ್ರ ಮಹೋತ್ಸವ ಸಂಭ್ರಮದಲ್ಲಿರುವ ಎಲ್‌ಎಸ್‌ಎಂಪಿ ಸಂಘ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಸೋಂದಾ ಸ್ವರ್ಣವಲ್ಲೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಅವರು ಪಟ್ಟಣದಲ್ಲಿ ಯಲ್ಲಾಪುರ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಸಂಘದ ವಜ್ರಮಹೋತ್ಸವ ಮತ್ತು ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಸೊಸೈಟಿಯ ಭದ್ರತಾ ಕೊಠಡಿಯನ್ನು ಉದ್ಘಾಟಿಸಿ, ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿ ಅಡಿಕೆಗೆ ಎಲೆಚುಕ್ಕೆ ರೋಗ ಸೇರಿದಂತೆ ನಾನಾ ರೋಗಬಾಧೆ ಹಾಗೂ ವಿವಿಧ ಕಾರಣಗಳಿಂದ ಈವರ್ಷ ಅಡಿಕೆ ಬೆಳೆ ಬಹಳ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಸಹಕಾರಿ ಸಂಘಗಳು ಎಚ್ಚರಿಕೆ ಹೆಜ್ಜೆ ಇಡಬೇಕು.

ಪ್ರಸ್ತುತ ಕೃಷಿಕ್ಷೇತ್ರಕ್ಕೆ ಸಹಕಾರಿಕ್ಷೇತ್ರಕ್ಕೆ ಅನೇಕ ಸವಾಲುಗಳು ಎದುರಾಗುತ್ತಿವೆ. ಸವಾಲುಗಳನ್ನು ಎದುರಿಸಿ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಸಹಕಾರಿ ಸಂಸ್ಥೆಗಳು ಉಳಿಯಬೇಕು, ಬೆಳೆಯಬೇಕು ತನ್ಮೂಲಕ ರೈತರಿಗೆ ಒಳಿತಾಗಬೇಕು. ಸಂಸ್ಥೆಯ ಜವಾಬ್ದಾರಿ ಇರುವವರು ಹೆಚ್ಚು ವಿವೇಚನೆಯಿಂದ ಕೆಲಸ ನಿರ್ವಹಿಸಬೇಕು ಎಂದರು.



ಶಾಸಕ ಶಿವರಾಮ ಹೆಬ್ಬಾರ್ ಮಾತನಾಡಿ, ಎಲ್‌ಎಸ್‌ಎಂಪಿ ಸೊಸೈಟಿಯ ನೂತನ ಕಟ್ಟಡ ನಿರ್ಮಾಣವಾಗಿರುವುದು ಮತ್ತು ಸೊಸೈಟಿಯು ವಿವಿಧ ಸೌಲಭ್ಯ ಒದಗಿಸಿರುವುದು ರೈತರಿಗೆ ಬಹಳ ಅನುಕೂಲ ಆಗಿದೆ ಎಂದರು. ಎಲ್ ಪಿ ಭಟ್ ಗುಂಡಕಲ್, ನಾರಾಯಣ ಭಟ್ಟ ಮೊಟ್ಟೆಗದ್ದೆ, ವೆಂಕಟ್ರಮಣ ಭಟ್ಟ ಗೇರಗದ್ದೆ, ತಿಮ್ಮಣ್ಣ ಭಟ್ಟ ಜಡ್ಡಿಗದ್ದೆ, ಕೃಷ್ಣ ಆಚಾರಿ, ವಿಶ್ವನಾಥ ಪಾಠಣಕರ್, ಗಣಪತಿ ಶೇಟ್, ನಾರಾಯಣ ಸಿದ್ದಿ, ಮಾದೇವ ನಾಯ್ಕ ಕೊಲ್ಲಕ್ಕಿಪಾಲ ಇತರರು ಇದ್ದರು. ಸಂಘದ ಅಧ್ಯಕ್ಷ ನಾಗರಾಜ ಕವಡಿಕೇರಿ ಸ್ವಾಗತಿಸಿದರು. ನಿರ್ದೇಶಕ ಸುಬ್ರಾಯ ಭಟ್ಟ ನಿರ್ವಹಿಸಿದರು. ಗೋಪಾಲಕೃಷ್ಣ ಭಟ್ಟ ವಂದಿಸಿದರು.

ಗ್ರಿಡ್ ನಿರ್ಮಾಣ ಕಾರ್ಯಕ್ಕೆ ಸಾಥ್ ನೀಡಲಿ: ಕಾಂಗ್ರೆಸ್ ಮುಖಂಡ ದೊಡ್ಮನಿ

ಬನವಾಸಿ: ಬನವಾಸಿ ಭಾಗದ ರೈತರ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಶಾಸಕ ಶಿವರಾಮ ಹೆಬ್ಬಾರ್ ಅವರು ಗ್ರಿಡ್ ನಿರ್ಮಾಣಕ್ಕಾಗಿ ನಡೆಸುತ್ತಿರುವ ನಿರಂತರ ಹೋರಾಟ ಮತ್ತು ಪ್ರಯತ್ನಗಳು ಶ್ಲಾಘನೀಯ. ಆದರೆ, ಈ ಅಭಿವೃದ್ಧಿ ಕಾರ್ಯಕ್ಕೆ ಸಾಥ್ ನೀಡುವ ಬದಲು ಬಿಜೆಪಿಯವರು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿರುವುದು ಅವರ ಸಂಕುಚಿತ ಮನೋಭಾವವನ್ನು ತೋರಿಸುತ್ತದೆ ಎಂದು ಬನವಾಸಿ ಭಾಗದ ಹಿರಿಯ ಕಾಂಗ್ರೆಸ್ ಮುಖಂಡ ದ್ಯಾಮಣ್ಣ ದೊಡ್ಮನಿ ವಾಗ್ದಾಳಿ ನಡೆಸಿದ್ದಾರೆ.

ಬುಧವಾರ ಪ್ರಕಟಣೆ ನೀಡಿರುವ ಅವರು, ಬಿಜೆಪಿಯ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ ನೇತೃತ್ವದಲ್ಲಿ ಗ್ರಿಡ್ ನಿರ್ಮಾಣಕ್ಕಾಗಿ ಪ್ರತಿಭಟನೆ ನಡೆಸಲಾಗಿದೆ. ಆದರೆ ಅದನ್ನು ತರುವಲ್ಲಿ ಹಾಗೂ ಅದರ ಅನುಷ್ಠಾನಕ್ಕೆ ಇದ್ದಂತಹ ಸಮಸ್ಯೆ ಬಗೆಹರಿಸುವಲ್ಲಿ ಶಾಸಕ ಹೆಬ್ಬಾರ್ ಅವರ ಶ್ರಮವನ್ನು ಬಿಜೆಪಿ ನಾಯಕರೇ ಬಳಿಯೇ ಕೇಳಿ ತಿಳಿದುಕೊಳ್ಳಲಿ ಎಂದು ಸಲಹೆ ನೀಡಿದರು. ಗ್ರಿಡ್ ನಿರ್ಮಾಣವಾದರೆ ಬನವಾಸಿ ಭಾಗದ ನೂರಾರು ಹಳ್ಳಿಗಳ ವಿದ್ಯುತ್ ಸಮಸ್ಯೆ ಪರಿಹಾರವಾಗುತ್ತದೆ. ಕೇವಲ 3 ರೈತರು ಒಪ್ಪದ ಕಾರಣ ಅವರ ಮನವೊಲಿಸುವ ಕಾರ್ಯ ಆಗುತ್ತಿದೆ. ಇದೆಲ್ಲವೂ ತಿಳಿದು ರಾಜಕೀಯ ಮಾಡಲು ಬಿಜೆಪಿ ಹಾಗೂ ಅನಂತಮೂರ್ತಿ ಹೆಗಡೆ ಹೋರಾಟ ನಡೆಸುತ್ತಿದ್ದಾರೆ ಎಂದು ಟೀಕಿಸಿದರು. ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿರುವ ಅನಂತ ಮೂರ್ತಿ ಅವರಿಗೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪುರಾತತ್ವ ಇಲಾಖೆಯ ನಿರ್ಲಕ್ಷ್ಯ ಕಣ್ಣಿಗೆ ಕಾಣುತ್ತಿಲ್ಲ. ಕಳೆದ ಹತ್ತು ವರ್ಷಗಳಿಂದ ಬನವಾಸಿಯ ಐತಿಹಾಸಿಕ ಮಧುಕೇಶ್ವರ ದೇವಸ್ಥಾನ ಸೋರುತ್ತಿದ್ದರು. ಯಾವುದೇ ಪ್ರತಿಕ್ರಿಯೆ ನೀಡಲು ಮುಂದಾಗುತ್ತಿಲ್ಲ. ಹಾವೇರಿ-ಶಿರಸಿ ರಾಜ್ಯ ಹೆದ್ದಾರಿಯ ಅವ್ಯವಸ್ಥೆ ಅನಂತಮೂರ್ತಿ ಅವರಿಗೆ ಕಾಣುತ್ತಿಲ್ಲವೇ ಎಂದು ದಾಮಣ್ಣ ದೊಡ್ಮನಿ ಹೇಳಿದರು.

ಭಟ್ಕಳ ಹಲಸು, ಹಣ್ಣಿನ ಮೇಳ ನಾಳೆಯಿಂದ

ಭಟ್ಕಳ: ಸ್ಪಂದನಾ ಚಾರಿಟೆಬಲ್ ಟ್ರಸ್ಟ್, ರಂಜನ ಇಂಡೇನ್ ಭಟ್ಕಳ, ಬೆನಕ ಇವೆಂಟ್ಸ್ ಕುಂದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಮೇ 15ರಿಂದ 18 ರವರೆಗೆ ತಾಲೂಕಿನ ಮಣ್ಕುಳಿಯಲ್ಲಿರುವ ಶ್ರೀ ರಾಘವೇಂದ್ರ ಮಠ ಸಭಾಭವನದಲ್ಲಿ ಬೃಹತ್ ಹಲಸು ಮತ್ತು ಹಣ್ಣಿನ ಮೇಳ ಆಯೋಜಿಸಲಾಗಿದೆ ಎಂದು ರಂಜನ್ ಇಂಡೇನ್ ಏಜೆನ್ಸಿ ಮಾಲಕಿ ಶಿವಾನಿ ಶಾಂತರಾಮ ಮಾಹಿತಿ ನೀಡಿದರು.

ತಾಲೂಕಿನ ಖಾಸಗಿ ಹೊಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಸಾರ್ವಜನಿಕರ ಸಹಕಾರದೊಂದಿಗೆ ಹಲಸು ಮೇಳವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಲಾಗಿತ್ತು. ಈ ವರ್ಷ ಕಳೆದ ವರ್ಷಕ್ಕಿಂತಲೂ ಆಕರ್ಷಕವಾಗಿ ಮೇಳವನ್ನು ನಡೆಸಲಾಗುತ್ತದೆ. ತುಮಕೂರು ಹಾಗೂ ಪುದುಚೇರಿಯಿಂದ ಆಗಮಿಸುವ ಬೃಹತ್ ಆಕಾರದ ಹಲಸು ಹಾಗೂ ಚಂದ್ರ ಹಲಸು ಈ ವರ್ಷದ ಮೇಳದ ವಿಶೇಷವಾಗಿರುತ್ತದೆ. ಹಲಸಿನ ಬಗೆಬಗೆಯ ಖಾದ್ಯಗಳು, ಇಳಕಲ್ ಸಿರೆಗಳು, ಚೆನ್ನಪಟ್ಟಣ ಬೊಂಬೆಗಳು ಸೇರಿದಂತೆ ರಾಜ್ಯದ ವಿವಿಧ ಮೂಲೆಗಳಿಂದ ಉತ್ಪನ್ನಗಳು ಹಾಗೂ ಮಾರಾಟಗಾರರು ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸ್ಪಂದನಾ ಚಾರಿಟೆಬಲ್ ಟ್ರಸ್ಟನ ಉಪಾಧ್ಯಕ್ಷ ಭವಾನಿಶಂಕರ ನಾಯ್ಕ ಮಾತನಾಡಿ, ಸ್ಥಳಿಯ ರೈತರನ್ನು ಉತ್ತೇಜಿಸುವ ಉದ್ದೇಶದಿಂದ ಇಂತಹ ಮೇಳವನ್ನು ಆಯೋಜಿಸಲಾಗುತ್ತಿದ್ದು ಕಳೆದ ಬಾರಿ ನಿರೀಕ್ಷೆಗೂ ಮೀರಿ ಜನರು ಆಗಮಿಸಿದ್ದರು ಈ ಬಾರಿಯೂ ಮೇಳ ಯಶಸ್ವಿಯಾಗುತ್ತದೆ ಎಂದರು. ಬೆನಕಾ ಇವೆಂಟ್ಸ್ ಮಾಲಕ ಗಣೇಶ ಶೆಟ್ಟಿ ಮಾತನಾಡಿ ಕಳೆದ ಸಲ ಕಾರವಾರ, ಹಾಗೂ ಮುಂಬೈನಿಂದ ಕೂಡ ಮೇಳಕ್ಕೆ ಜನರು ಆಗಮಿಸಿದ್ದರು. ಈ ಮೇಳದಲ್ಲಿ ಮೂರು ಹಲಸಿನ ಸ್ಟಾಲ್‌ಗಳು, ಅಂಕೋಲಾದ ಕರಿ ಈಶಾಡ್ ಮಾವು, ಲಿಚಿ ಹಣ್ಣು, ಹಲಸಿನ ಸಾಪ್ಟಿ, ಹಲಸಿನ ಬಿರಿಯಾನಿ ಸೇರಿದಂತೆ ಆಯ್ದ ವಸ್ತುಗಳಿಗೆ ಮಾತ್ರ ಜಾಗವನ್ನು ಕಲ್ಪಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಪಾಂಡುರಂಗ ನಾಯ್ಕ, ಶಾಂತರಾಮ ಭಟ್ಕಳ, ಪ್ರಸಾದ ಮುತ್ತಿತರರು ಇದ್ದರು.



ಮೇಳದ ವಿಶೇಷ

ತುಮಕೂರು ಹಾಗೂ ಪುದುಚೇರಿಯಿಂದ ಆಗಮಿಸುವ ಬೃಹತ್ ಆಕಾರದ ಹಲಸು ಹಾಗೂ ಚಂದ್ರ ಹಲಸು

ಅಕ್ಷರ ಪ್ರೀತಿಯ ನಂಟು, ಸ್ಮರಣೆಯೇ ಸಾಂತ್ವನ ಕೃತಿ ಲೋಕಾರ್ಪಣೆ

ಅಂಕೋಲಾ: ಸಾಹಿತ್ಯ ಸಾರಸ್ವತಲೋಕಕ್ಕೆ ಹೊನ್ನಮ್ಮನಾಯಕರವರು ತಮ್ಮ ಪ್ರತಿಭಾ ಶಾಲಿಯಾದ ತಿಳುವಳಿಕೆಯ ಮೂಲಕ ಹಾಲಿ ನಡೆಯುವ ವಿದ್ಯಾಮಾನವನ್ನು ತಿಳಿದುಕೊಂಡು ಅತ್ಯುತ್ತಮ ಕೃತಿಗಳನ್ನು ಹೊರ ತಂದಿದ್ದಾರೆ. ಎರಡು ಕೃತಿಗಳ ತಲೆಬರಹಗಳು ಇವರ ವಿಶೇಷ ಪ್ರತಿಭೆಗೆ ಸಾಕ್ಷಿಯಾಗಿವೆ ಎಂದು ಜಿಸಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ ಕೆ.ವಿ.ನಾಯಕ್ ಹೇಳಿದರು

ಕರ್ನಾಟಕ ಸಂಘ ಅಂಕೋಲಾ ಮತ್ತು ಹೊನ್ನಮ್ಮ ನಾಯಕ ಕುಟುಂಬದ ಸಹಯೋಗದಲ್ಲಿ ಹೊನ್ನಮ್ಮ ನಾಯಕರವರು ರಚಿಸಿದ ಎರಡು ಕೃತಿಗಳಾದ ಅಕ್ಷರ ಪ್ರೀತಿಯ ನಂಟು ಮತ್ತು ಸ್ಮರಣೆಯೇ ಸಾಂತ್ವನ ಕೃತಿಗಳ ಲೋಕಾರ್ಪಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾವ್ಯಕ್ಕೆ ಮೂಲ ಶಬ್ದ ಶಬ್ದಕ್ಕೆ ಮೂಲ ಅಕ್ಷರ. ಅಕ್ಷರ ಸಮೂಹಕ್ಕೆ ಶಬ್ದ ಎನ್ನುತ್ತಾರೆ. ಅಕ್ಷರ ಪ್ರೀತಿಯನ್ನುಂಟು ಮತ್ತು ಸಾಹಿತ್ಯದ ನಂಟು ಇಲ್ಲಿದೆ. ತನ್ನವರ ಕುರಿತಾಗಿ ಬರೆಯುವಾಗ ಅಕ್ಷರ ಪ್ರೀತಿ ಕಂಡುಬರುತ್ತದೆ. ಸಾಧ್ವಿ ಧರ್ಮದ ಪ್ರತೀಕವಾಗಿ ಸ್ಮರಣೆ ಸಾಂತ್ವನ ಮೂಡಿಬಂದಿದೆ ಎಂದರು.

ಹಿರಿಯಸಾಹಿತಿಶಾಂತರಾಮ್ ನಾಯಕಹಿಚ್ಕಡ, ಮುಖ್ಯ ಅತಿಥಿಯಾಗಿ ಡಾ. ರಾಮಕೃಷ್ಣಗುಂದಿ ಮಾತನಾಡಿದರು. ಕೃತಿಗಳ ಅವಲೋಕನ ನಾಗರಿಕ ವಾರಪತ್ರಿಕೆಯ ಸಂಪಾದಕ ಕೃಷ್ಣಮೂರ್ತಿ ಹೆಬ್ಬಾರ, ವಿಶ್ರಾಂತ ಶಿಕ್ಷಕ ಬಾಲಚಂದ್ರ ನಾಯಕ ಪ್ರಾರ್ಥಸಿದರು. ನಿವೃತ್ತ ಶಿಕ್ಷಕ ಸುಖದ ನಾಯಕ ಸ್ವಾಗತಿಸಿ, ಪರಿಚಯಿಸಿದರು.

ನಿವೃತ್ತ ಉಪನ್ಯಾಸಕ ಶ್ರೀಧರ ನಾಯಕ ನಿರ್ವಹಿಸಿದರು. ಸುಭಾಷ ಕಾರೆಬೈಲ್ ವಂದಿಸಿದರು. ಸುಜಿತ್ ನಾಯಕ, ಕರ್ನಾಟಕಸಂಘದಪದಾಧಿಕಾರಿಗಳು ಸದಸ್ಯರು. ಹೊನ್ನಮ್ಮ ನಾಯಕ್, ಕುಟುಂಬದವರು ಉಪಸ್ಥಿತರಿದ್ದರು.



> ನನ್ನ ಆಸೆಗೆ ನೀರೆರೆದು ಪುಸ್ತಕ ಹೊರಬರಲು ಕಾರಣರಾದ ನನ್ನವರೆಲ್ಲರಿಗೂ ಎದೆಯಾಳದ ವಂದನೆಗಳು. ನಮ್ಮವರನ್ನೆಲ್ಲ ಸ್ಮರಿಸಿ ಅವರ ನೆನಪಿನಲ್ಲಿ ಈ ಲೇಖನ ಹೊರ ಬಂದಿದೆ. ಬರೆದು ಹಗುರಾಗಬೇಕು. ಕೃತಿ ಹೊರಬರಲು ಸಹಕರಿಸಿದ ಸರ್ವರಿಗೂ ನಾನು ಆಭಾರಿ. ನನ್ನ ಅಂತರಾಳದ ಭಾವನೆಗಳನ್ನು ತೆರೆದಿಟ್ಟಿದ್ದೇನೆ. ಏನೇ ತಪ್ಪುಗಳಿದ್ದರೂ ನಿಮ್ಮ ಮಡಿಲಲ್ಲಿಟ್ಟುಕೊಂಡು ಈ ಕೃತಿಯನ್ನು ತಪ್ಪದೆ ಓದಿ.
>
> ■ ಹೊನ್ನಮ್ಮಾ ನಾಯಕ ಕೃತಿಕಾರರು.

ಬಸ್ ವೇಳಾ ಪಟ್ಟಿ ಬದಲಾವಣೆ: ಜನರಲ್ಲಿ ಹರ್ಷ

ಸಿದ್ದಾಪುರ: ಸಿದ್ದಾಪುರ ಬಸ್ ನಿಲ್ದಾಣದಿಂದ ವಾಜಗದ್ದೆ, ನಾಣಿಕಟ್ಟಾ ಮಾರ್ಗವಾಗಿ ಶಿರಸಿಗೆ ಸಂಚರಿಸುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದ್ದು, ಬೆಳಗ್ಗೆ 9.30ಕ್ಕೆ ಇದ್ದ ಸಮಯವನ್ನು 9ಗಂಟೆಗೆ ಮಾರ್ಪಡಿಸಿ ಸಂಸ್ಥೆ ಅಧಿಕೃತ ಆದೇಶ ಹೊರಡಿಸಿದೆ. ಈ ನಿರ್ಧಾರದಿಂದ ಕಳೆದ ಆರು ವರ್ಷಗಳಿಂದ ಪ್ರಯಾಣಿಕರು ಅನುಭವಿಸುತ್ತಿದ್ದ ತೊಂದರೆಗೆ ಕೊನೆಗೂ ಪರಿಹಾರ ಸಿಕ್ಕಂತಾಗಿದೆ. ಸುಮಾರು 20 ವರ್ಷಗಳಿಂದ ಈ ಬಸ್ ಬೆಳಗ್ಗೆ 8.45ಕ್ಕೆ ಸರಿಯಾಗಿ ಸಂಚರಿಸುತ್ತಿತ್ತು. ಆದರೆ, ಕೊರೋನಾ ಸಾಂಕ್ರಾಮಿಕದ ಸಮಯದಲ್ಲಿ ಜಾರಿಗೆ ತಂದ ಮಾರ್ಗ ಮತ್ತು ಸಮಯ ಬದಲಾವಣೆಯ ನಿಯಮಗಳಿಂದಾಗಿ, ಈ ಬಸ್‌ನ ಸಮಯವನ್ನು 9.30ಕ್ಕೆ ಮುಂದೂಡಲಾಗಿತ್ತು. ಈ ಬದಲಾವಣೆಯಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿತ್ತು. ಅಂದು ಹಿರಿಯ ಅಧಿಕಾರಿಗಳು ಕೆಲವೇ ತಿಂಗಳಲ್ಲಿ ಸಮಯವನ್ನು ಸರಿಪಡಿಸುವ ಭರವಸೆ ನೀಡಿದ್ದರೂ, ಅದು ಜಾರಿಯಾಗಿರಲಿಲ್ಲ. ವರ್ಷಗಟ್ಟಲೆ ಕಳೆದರೂ ಯಾವುದೇ ಸ್ಪಂದನೆ ಸಿಗದ ಕಾರಣ ಸಾರ್ವಜನಿಕರು ಇದರ ಆಸೆಯನ್ನೇ ಕೈಬಿಟ್ಟಿದ್ದರು. ಆದರೆ, ಸಾರ್ವಜನಿಕರ ನಿರಂತರ ಒತ್ತಡ ಮತ್ತು ಹೋರಾಟದ ಫಲವಾಗಿ ಸಾರಿಗೆ ಸಂಸ್ಥೆ ಈಗ ಎಚ್ಚೆತ್ತುಕೊಂಡು ಸಮಯ ಬದಲಾವಣೆ ಮಾಡಿದೆ. ವಿಶೇಷವಾಗಿ ಸಿದ್ದಾಪುರದಿಂದ ಕೊಲಸಿರ್ಸಿ, ಬಿದ್ರಕಾನ, ಮುತ್ತಿಗೆ, ಕವಲಕೊಪ್ಪ ಹಾಗೂ ಹಾರ್ಸಿಕಟ್ಟಾ ಕಡೆಗೆ ತೆರಳುವ ಶಿಕ್ಷಕರು ಈವರೆಗೆ ಅನಿವಾರ್ಯವಾಗಿ ಖಾಸಗಿ ವಾಹನಗಳನ್ನು ಅವಲಂಬಿಸಬೇಕಿತ್ತು. ಬಸ್ 9.30ಕ್ಕೆ ಬಿಡುತ್ತಿದ್ದರಿಂದ ವಾಜಗದ್ದೆ ಭಾಗದ ಜನರಿಗೆ ಶಿರಸಿ ಹಾಗೂ ಸಿದ್ದಾಪುರಕ್ಕೆ ತೆರಳಲು ವಿಳಂಬವಾಗುತ್ತಿತ್ತು. ಈಗ ಸಮಯ ಬದಲಾವಣೆಯಿಂದ ಶಾಲಾ ಮಕ್ಕಳು ಹಾಗೂ ನಾಣಿಕಟ್ಟಾ ಸರ್ಕಾರಿ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ತರಗತಿಗಳಿಗೆ ಹಾಜರಾಗಲು ಅನುಕೂಲವಾಗಲಿದೆ. ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಬೇಡಿಕೆಗೆ ಸ್ಪಂದಿಸಿ ವೇಳಾಪಟ್ಟಿ ಪರಿಷ್ಕರಿಸಿದ ಉತ್ತರ ಕನ್ನಡ ವಿಭಾಗದ ಸಾರಿಗೆ ಅಧಿಕಾರಿಗಳಿಗೆ ಬಿದ್ರಕಾನ, ಮುತ್ತಿಗೆ, ಹಾರ್ಸಿಕಟ್ಟಾ ಹಾಗೂ ವಾಜಗದ್ದೆ ಗ್ರಾಮಸ್ಥರು ಪತ್ರಿಕಾ ಪ್ರಕಟಣೆಯಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ.

ಕಿರುಸುದ್ದಿ

ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನ

ಹಾವೇರಿ: ರೇಷ್ಮೆ, ಹತ್ತಿ ಮತ್ತು ಉಣ್ಣೆ ಕೈಮಗ್ಗ ಉತ್ಪಾದನೆಗಳ ಅಭಿವೃದ್ಧಿಗಾಗಿ ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ, ಶ್ರೇಷ್ಠತೆ, ತಾಂತ್ರಿಕತೆ, ಉತ್ಕೃಷ್ಟತೆಯ ಉತ್ಪನ್ನ ತಯಾರಿಸಿದ ಕೈಮಗ್ಗ ನೇಕಾರರಿಂದ ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ರಾಷ್ಟ್ರೀಯ ಕೈಮಗ್ಗ ದಿನಾಚರಣೆ (ಆಗಸ್ಟ್ 7) ರಂದು ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ನಗದು ಬಹುಮಾನ, ಒಂದು ನೆನಪಿನ ಕಾಣಿಕೆ, ಒಂದು ಶಾಲು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಕೈಮಗ್ಗ ನೇಕಾರರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು, ಕನಿಷ್ಠ 30ವರ್ಷ ಪೂರೈಸಿರಬೇಕು. ಕೈಮಗ್ಗ ಉತ್ಪಾದನೆಗಳ ಅಭಿವೃದ್ಧಿಗಾಗಿ ಕೈಮಗ್ಗ ನೇಯ್ಗೆಯ ಅಸಾಧಾರಣ ಕೌಶಲ್ಯದಲ್ಲಿ ಸುಮಾರು 10 ವರ್ಷಗಳ ಅನುಭವ ಇರಬೇಕು. ಉತ್ಪನ್ನದ ಮಾದರಿ (ಸ್ಯಾಂಪಲ್) ಸ್ವತಃ ಅರ್ಜಿದಾರರೆ ತಯಾರಿಸಿದ ಉತ್ಪನ್ನವೇ ಆಗಿರಬೇಕು. ಅರ್ಹ ನೇಕಾರರು ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ಮೇ 30ರೊಳಗಾಗಿ ಉಪನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಜಿ.ಪಂ. ಹಾವೇರಿ ಸಿ, ಬ್ಲಾಕ್ ಕೊಠಡಿ ಸ:43 ದೇವಗಿರಿ ಹಾವೇರಿ ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹಾವೇರಿ: ತಾಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ಸೇರಿದ 16 ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಬಾಲಕ ಮತ್ತು ಬಾಲಕಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಒಂದು ವಸತಿ ಶಾಲೆ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಹಾಗೂ ಮೆಟ್ರಿಕ್ ಪೂರ್ವ ಬಾಲಕರ ಮತ್ತು ಬಾಲಕೀಯರ ವಿದ್ಯಾರ್ಥಿ ನಿಲಯದಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಮತ್ತು ಮೆಟ್ರಿಕ್ ನಂತರದ ಬಾಲಕ, ಬಾಲಕೀಯರ ವಸತಿ ನಿಲಯಗಳಿಗೆ ಎಸ್ಸೆಸ್ಸೆಲ್ಸಿ ನಂತರದ ತರಗತಿಗಳ ವಿವಿಧ ಕೋರ್ಸಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಇತರೇ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುವುದು. ಅರ್ಜಿ ಸಲ್ಲಿಸಲು SATS ID, ವಿದ್ಯಾರ್ಥಿ ಮತ್ತು ತಂದೆ-ತಾಯಿಯ ಆಧಾರ ಕಾರ್ಡ, ಆರ್‌ಡಿ ನಂಬರ್ ಇರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕಳೆದ ವರ್ಷದ ಅಂಕಪಟ್ಟಿ, ಕಾಲೇಜ ರಜಿಸ್ಟರ್ ನಂಬರ, ಬ್ಯಾಂಕ್ ಪಾಸ್‌ಬುಕ್ ಮತ್ತು ಪಾಸ್ ಪೋರ್ಟ್ ಸೈಜ್ ಕಲರ್ ಫೋಟೋ ಅವಶ್ಯವಿರುತ್ತದೆ. ಮಿಸಲಾತಿ ಆಧಾರದ ಮೇಲೆ ಅರ್ಹ ವಿದ್ಯಾರ್ಥಿಗಳ ಆಯ್ಕೆ ಮಾಡಲಾಗುವುದು. ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಸಲ್ಲಿಸಿದ ಅರ್ಜಿಗಳನ್ನು ಮೇರಿಟ್ ಆಧಾರದ ಮೇಲೆ ಆದ್ಯತೆಯನ್ನು ನೀಡಲಾಗುವುದು. ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://swdhmis.karnataka.gov.inರಲ್ಲಿ ಆನ್‌ಲೈನ್ ಮೂಲಕ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಜೂ.30ರೊಳಗಾಗಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯುಗಳಿಗೆ ಜು.31ರೊಳಗೆ ಅರ್ಜಿ ಸಲ್ಲಿಸಬೇಕು. ಆನ್‌ಲೈನಲ್ಲಿ ಸಲ್ಲಿಸಿದ ಅರ್ಜಿಗಳನ್ನು ಸಹಾಯಕ ನಿರ್ದೇಶಕರು (ಗ್ರೇಡ್-1) ಸಮಾಜ ಕಲ್ಯಾಣ ಇಲಾಖೆ, ಹಾವೇರಿ ಅವರ ಕಚೇರಿಗೆ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಆಂನೇಜಯ ಹುಲ್ಲಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಶಾಲೆ ಮುಚ್ಚದಿರಿ

ಹುಬ್ಬಳ್ಳಿ: ಕೇಂದ್ರ ಸ್ಥಾನ ಗುರುತಿಸಿ ಅಲ್ಲೊಂದು ಸುಸಜ್ಜಿತ ಶಾಲೆ ತೆರೆದು ಅದರ ಸುತ್ತಲೂ ಇರುವ ಹತ್ತಾರು ಗ್ರಾಮೀಣ ಪ್ರದೇಶದ ಕನ್ನಡ ಶಾಲೆಗಳನ್ನು ಮುಚ್ಚುವ ರಾಜ್ಯ ಸರ್ಕಾರದ ವ್ಯವಸ್ಥೆ ಖಂಡನೀಯ ಎಂದು ಚಿಂತನ ವೇದಿಕೆ ಹೇಳಿದೆ. ಹಾವೇರಿ ಜಿಲ್ಲೆಯೊಂದರಲ್ಲಿ ಸುಮಾರು 60ಕ್ಕೂ ಹೆಚ್ಚು ಕನ್ನಡ ಗ್ರಾಮೀಣ ಪ್ರದೇಶದ ಶಾಲೆಗಳ ಮೇಲೆ ಚಪ್ಪಡಿ ಎಳೆದು ಕೇಂದ್ರ ಸ್ಥಾನದಲ್ಲಿ ಒಂದು ಮಾದರಿಯ ಶಾಲೆ ಆರಂಭಿಸಲು ವ್ಯವಸ್ಥಿತ ಹುನ್ನಾರವನ್ನು ತಕ್ಷಣ ರಾಜ್ಯ ಸರ್ಕಾರ ಕೈ ಬಿಡುವಂತೆ ವೇದಿಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಇಮೇಲ್ ಮೂಲಕ ಮನವಿ ಮಾಡಿದೆ. ಇನ್ನು ರಾಜ್ಯದ ಎಷ್ಟು ಶಾಲೆಗಳು ಮುಚ್ಚಲಿವೆ ಎಂದು ಆತಂಕ ವ್ಯಕ್ತಪಡಿಸಿದೆ. ಹೀಗೆ ಗ್ರಾಮೀಣ ಶಾಲೆಗಳು ಮುಚ್ಚುವುದರಿಂದ ಅಲ್ಲಿರುವ ಕಟ್ಟದ ಶಾಲೆಯ ಆಸ್ತಿ ಯಾರದೋ ಕೈ ಸೇರುತ್ತದೆ. ಇದೆಲ್ಲ ಜೊತೆ ಗ್ರಾಮೀಣ ಪ್ರದೇಶದ ಮಕ್ಕಳು ಅತಂತ್ರ ಸ್ಥಿತಿ ಸೇರುವ ಧಾರುಣ ಸ್ಥಿತಿಯಲ್ಲಿ ಕೊರಗಬೇಕಿದೆ. ತಕ್ಷಣ ಮೊದಲಿದ್ದ ವ್ಯವಸ್ಥೆ ಉಳಿಸುವಂತೆ ವೇದಿಕೆಯ ಕೃಷ್ಣಮೂರ್ತಿ ಕುಲಕರ್ಣಿ, ಪ್ರೊ. ಡಿ.ಡಿ.ಮುತಾಲಿಕ ದೇಸಾಯಿ, ಚನ್ನಬಸಪ್ಪ ಧಾರವಾಡಶೆಟ್ರು ಒತ್ತಾಯಿಸಿದ್ದಾರೆ.



ರಾಣೆಬೆನ್ನೂರ: ನಗರದ ಬಿ.ಎ.ಜಿ.ಎಸ್.ಎಸ್ ಮಹಿಳಾ ಮಹಾವಿದ್ಯಾಲಯದಲ್ಲಿ ನಡೆದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡಿಗೆ ಸಮಾರಂಭದಲ್ಲಿ ಸುಮತಿ ಜಯಪ್ಪ ಮಾತನಾಡಿದರು.

ಗ್ರಾಪಂಗೆ ಅಧಿಕಾರಿ ದಲ್ಜೀತ್ ಕುಮಾರ ಭೇಟಿ

ಬ್ಯಾಡಗಿ: ತಾಲೂಕಿನ ಮೋಟೆಬೆನ್ನೂರು ಗ್ರಾಪಂ ಹಾಗೂ ಬ್ಯಾಡಗಿ ತಾಪಂಗೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಲ್ಜೀತ್‌ಕುಮಾರ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಗ್ರಾಪಂನಿಂದ ಕರ ವಸೂಲಿ, ನರೇಗಾ ಯೋಜನೆಯಡಿ ಗುರಿಗೆ ಅನುಗುಣವಾಗಿ ಮಾನವ ದಿನಗಳನ್ನು ಸೃಜಿಸಲು ತಿಳಿಸಿದರು. ನರೇಗಾದಡಿ ಮುಂದುವರೆದ ಕಾಮಗಾರಿಗಳ ಬಗ್ಗೆ ಮಾಹಿತಿಯನ್ನು ಪಡೆದು ವಿಳಂಬವಿಲ್ಲದೆ ಕಾಮಗಾರಿಗಳನ್ನು ಎಂಐಎಸ್ ತಂತ್ರಾಂಶದಲ್ಲಿ ಮುಕ್ತಾಯಗೊಳಿಸಲು ಸೂಚಿಸಿದರು. ಈ ವೇಳೆ ಸ್ವಚ್ಛ ಭಾರತ ಮಿಷನ್, ಜಲ ಜೀವನ್, ಮಿಷನ್ ವಸತಿ ಯೋಜನೆಗಳು, ಇ -ಸ್ವತ್ತು ಸಕಾಲ, ವರ್ಗ 1 ಹಾಗೂ 15ನೇ ಹಣಕಾಸಿನ ಪ್ರಗತಿ ಅನುಷ್ಠಾನದ ಕುರಿತು ಮಾಹಿತಿ ಪಡೆದು ತ್ವರಿತವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಪೂರ್ಣಗೊಳಿಸಲು ಸೂಚಿಸಿದರು. ಬ್ಯಾಡಗಿ ತಾಲೂಕು ಪಂಚಾಯತ್ ಕಾರ್ಯಾಲಯಕ್ಕೆ ಆಕಸ್ಮಿಕ ಭೇಟಿ ನೀಡಿ ಕಡತಗಳ ಪರಿಶೀಲನೆ ಮಾಡಿದರು. ನಂತರ ಕಚೇರಿ ಸಿಬ್ಬಂದಿ ಜೊತೆ ಇಲಾಖೆಯ ಯೋಜನೆಗಳ ಅನುಷ್ಠಾನದ ಪ್ರಗತಿ ಕುರಿತು ಮಾಹಿತಿ ಪಡೆದರು. ಜಿಪಂಯ ಉಪಕಾರ್ಯದರ್ಶಿ ಡಾ. ಪುನೀತ್, ಕಾರ್ಯ ನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ್ ಕೆಎಂ, ಸಹಾಯಕ ನಿರ್ದೇಶಕರ ಎಂ ಎ.ಅಗಸರ, ನಾಗರಾಜ್ ಹಡಗಲಿ (ಪಂ ರಾಜ್ ನಿರ್ದೇಶಕರು) ತಾಪಂ ವ್ಯವಸ್ಥಾಪಕರಾದ ಪ್ರಕಾಶ್ ಹಿರೇಮಠ, ತಾಂತ್ರಿಕ ಸಂಯೋಜಕ ಸಂತೋಷ್ ನಾಯ್ಕ, ಎಂಐ ಸಂಯೋಜಕರಾದ ಸಿದ್ದಲಿಂಗಮ್ಮ ಸಿರಿಗೇರಿ, ಟಿಐಇಸಿ ಅಕ್ಷಯ್ ದೇಶಪಾಂಡೆ ಗ್ರಾಮ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಲ್ಲೇಶಪ್ಪ, ತಾಪಂ ಸಿಬ್ಬಂದಿ ಉಪಸ್ಥಿತಿರಿದ್ದರು.



ಬ್ಯಾಡಗಿ: ತಾಲೂಕಿನ ಮೋಟೆಬೆನ್ನೂರು ಗ್ರಾಪಂ ಹಾಗೂ ಬ್ಯಾಡಗಿ ತಾಪಂಗೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಲ್ಜೀತ್ ಕುಮಾರ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕರ ವಸೂಲಿ, ನರೇಗಾ ಯೋಜನೆಯಡಿ ಗುರಿಗೆ ಅನುಗುಣವಾಗಿ ಮಾನವ ದಿನಗಳನ್ನು ಸೃಜಿಸಲು ತಿಳಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ

ಹಾವೇರಿ: ಎಫ್‌ಐಡಿ ಇಲ್ಲದೇ ರೈತರಿಗೆ ಯೂರಿಯಾ ಗೊಬ್ಬರ ಪೂರೈಕೆ, ಬಿತ್ತನೆ ಬೀಜ ವಿತರಣೆ ಹಾಗೂ ಹಗಲು ಹೊತ್ತಿನಲ್ಲಿ ರೈತರಿಗೆ 7 ತಾಸು ವಿದ್ಯುತ್ ಪೂರೈಕೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕದ ರೈತ ಮುಖಂಡರು ಬುಧವಾರ ನಗರದ ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರೈತ ಸಂಘ ಹಾಗೂ ಹಸಿರುಸೇನೆ ಜಿಲ್ಲಾ ಕಾರ್ಯಾಧ್ಯಕ್ಷ ಶಿವಬಸವಪ್ಪ ಗೋವಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತಿ ನಿತ್ಯ ಹೊಸ ಹೊಸ ಕಾನೂನು ಜಾರಿಗೆ ತರುತ್ತಿದ್ದು, ಈ ಕಾನೂನುಗಳಿಂದ ರೈತರು ಹಾಗೂ ರೈತ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ. ಯೂರಿಯಾ ಗೊಬ್ಬರ, ಬಿತ್ತನೆ ಬೀಜ ವಿತರಣೆಗೆ ಎಫ್.ಐ.ಡಿ., ಆಧಾರ ಕಾರ್ಡ, ಬ್ಯಾಂಕ ಪಾಸ್, ಫೋಟೊ, ಉತಾರ ಹೀಗೆ ಅನೇಕ ದಾಖಲೆಗಳನ್ನು ಪೂರೈಸಲು ತಿಳಿಸಿದ್ದಾರೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ. ಈ ಕೂಡಲೇ ಇಂತಹ ಬಿಗಿಯಾದ ಕಾನೂನುಗಳನ್ನು ಹಿಂಪಡೆದು, ಈ ಹಿಂದೆ ಇದ್ದ ಮಾದರಿಯಲ್ಲಿಯೇ ಗೊಬ್ಬರ, ಬೀಜ ಪೂರೈಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಡಿಸಿ ಕಚೇರಿ ಎದುರು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂಘದ ತಾಲೂಕಾ ಪ್ರಧಾನ ಕಾರ್ಯದರ್ಶಿ ಶಿವಯೋಗಿ ಹೊಸಗೌಡ್ರ ಮಾತನಾಡಿ, ಹಾವೇರಿ ಶಹರದಲ್ಲಿ ಒಳಚರಂಡಿ, ರಸ್ತೆ, ಚರಂಡಿ ಹದಿಗೆಟ್ಟಿವೆ, ನಗರಸಭೆಯವರು ಆದಷ್ಟು ಬೇಗನೇ ಕಾಮಗಾರಿ ಪ್ರಾರಂಭಿಸಬೇಕು. ಬ್ಯಾಂಕಿನಿಂದ ದಬ್ಬಾಳಿಕೆ ಮಾಡಿ ಸಾಲ ವಸೂಲಿ ಮಾಡುತ್ತಿದ್ದು, ಇದನ್ನು ತಕ್ಷಣವೇ ನಿಲ್ಲಿಸಬೇಕು. ನಮ್ಮ ಹೊಲ ನಮ್ಮ ದಾರಿ, ಸರಿಯಾಗಿ ಗ್ರಾಮ ಪಂಚಾಯತಿಯಿಂದ ದಾರಿ ಮಾಡಿಸಿಕೊಡಬೇಕು. ಹಾವೇರಿ ತಾಲೂಕನಲ್ಲಿ ಬೆಳೆವಿಮೆ ಹಾಗೂ ಬೆಳೆ ಹಾನಿ ಬಹಳಷ್ಟು ರೈತರಿಗೆ ಅನ್ಯಾಯವಾಗಿರುತ್ತದೆ ತಕ್ಷಣ ಸರಿಪಡಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ರೈತ ಮುಖಂಡರಾದ ರಾಜು ತರ್ಲಗಟ್ಟ, ಸುರೇಶ ಚಲವಾದಿ, ಚನ್ನಪ್ಪ ಮರಡೂರ, ಪಕ್ಕೀರಗೌಡ ಗಾಜಿಗೌಡ್ರ, ಸಿದ್ದನಗೌಡ ಗಡೆಪ್ಪಗೌಡ್ರ, ನಾಗರಾಜ ವಿಭೂತಿ, ಪರಮೇಶ ನರಗುಂದ, ಶಿವಯೋಗಿ ಬೆನ್ನೂರ, ಬಾಬುಸಾಬ ಲಿಂಗದಹಳ್ಳಿ, ಜಾಫರ್ ಸಾಬ್, ರೆಹಮಾನ್‌ಸಾಬ್ ತಟ್ಟಿಮನಿ, ಇಸ್ಹಾಕ್‌ಸಾಬ್, ಗುಡ್ಡಪ್ಪ ಸತ್ಯಪ್ಪನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



> ತೋಟಗಾರಿಕೆ ಇಲಾಖೆಯಿಂದ ಎಸ್ಸಿ, ಎಸ್ಟಿ ಅನುದಾನದಡಿಯಲ್ಲಿ ಸಹಾಯಧನ ನೀಡುತ್ತಿಲ್ಲ ತಕ್ಷಣ ಗ್ರಾಂಟ್ ಬಿಡುಗಡೆ ಮಾಡಬೇಕು. ಚಿರತೆ, ಚಿಗರಿ ಹಾವಳಿಯಿಂದ ರೈತರ ಪ್ರಾಣಹಾನಿ, ರೈತರ ಬೆಳೆಯನ್ನು ರಕ್ಷಣೆ ಮಾಡಲು ಅರಣ್ಯ ಇಲಾಖೆಯವರು ರೈತರ ಪರವಾಗಿ ಜಾಗೃತರಾಗಿರಬೇಕು.
>
> ■ ಭುವನೇಶ್ವರ ಶಿಡ್ಲಾಪುರ, ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ತನಿಖೆಗೆ ಎಸ್‌ಎಫ್‌ಐ ಆಗ್ರಹ

ಹಾವೇರಿ: ನೀಟ್ ಯುಜಿ-2026 ಪ್ರಶ್ನೆಪತ್ರಿಕೆ ಸೋರಿಕೆ ತನಿಖೆಗೆ ಆಗ್ರಹಿಸಿ, ನೀಟ್ ಪರೀಕ್ಷೆ ರದ್ದುಗೊಳಿಸಲು ಹಾಗೂ ಎನ್‌ಟಿಎ ಸಂಸ್ಥೆಯ ಮೇಲೆ ಕ್ರಮಕೈಗೊಳ್ಳಲು ಒತ್ತಾಯಿಸಿ ಎಸ್‌ಎಫ್‌ಐ ಪದಾಧಿಕಾರಿಗಳು ಬುಧವಾರ ನಗರದ ಮೈಲಾರ ಮಹಾದೇವಪ್ಪ ವೃತ್ತದ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಬಸವರಾಜ ಎಸ್., ಮಾತನಾಡಿ, ದೇಶದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇತರೆ ಕೋರ್ಸ್‌ಗಳಿಗೆ ಪ್ರವೇಶಪಡೆಯಲು ರಾಷ್ಟ್ರಮಟ್ಟದಲ್ಲಿ ನಡೆಸುವ ನೀಟ್ ಪರೀಕ್ಷೆಯು ಮೇ 3ರಂದು ನಡೆಸಿದ್ದು, ಇದೀಗ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ನೀಟ್ ಯುಜಿ 2026 ಪರೀಕ್ಷೆ ರದ್ದುಗೊಳಿಸಲಾಗಿದೆ. ನ್ಯಾಷನಲ್ ಟೆಸ್ಟ್ ಏಜೆನ್ಸಿ (ಎನ್‌ಟಿಎ) ಪರೀಕ್ಷೆಯ ನಡವಳಿಕೆಯ ಬಗ್ಗೆ ಹಾಗೂ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಪಾರದರ್ಶಕತೆಯನ್ನು ಪ್ರಶ್ನಿಸುವ ಹಲವಾರು ದೂರುಗಳು ದೇಶಾದ್ಯಂತ ಬರುತ್ತಿವೆ. ಪ್ರವೇಶವನ್ನು ನಡೆಸಲು ಅಸಮರ್ಥ ಮತ್ತು ಅನರ್ಹವಾಗಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ದೂರಿದರು.

ವರದಿಗಳ ಪ್ರಕಾರ, ಒಟ್ಟು 720 ಅಂಕಗಳಲ್ಲಿ ಸುಮಾರು 600 ಅಂಕಗಳ ಪ್ರಶ್ನೆಗಳು ಸೋರಿಕೆಯಾಗಿದ್ದು, ಇದು ಪರೀಕ್ಷೆಯ ಪಾವಿತ್ರ್ಯತೆಗೆ ಧಕ್ಕೆ ತಂದಿದೆ. ಪರೀಕ್ಷೆಯ 180 ಪ್ರಶ್ನೆಗಳಲ್ಲಿ ಸುಮಾರು 15 ಪ್ರಶ್ನೆಗಳನ್ನು ಸಂಭಾವ್ಯ ಪ್ರಶ್ನೆ ಪತ್ರಿಕೆಯ ಹೆಸರಿನಲ್ಲಿ ಮೊದಲೇ ವಿತರಿಸಲಾಗಿತ್ತು ಮತ್ತು ರಸಾಯನಶಾಸ್ತ್ರ ವಿಭಾಗದ ಸುಮಾರು 120 ಪ್ರಶ್ನೆಗಳು ಇದ್ದಕ್ಕಿದ್ದಂತೆ ಸೋರಿಕೆಯಾಗಿವೆ.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಇದರಲ್ಲಿ ಭಾಗಿಯಾದವರ ತನಿಖೆಗೆ ಈ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ಸಮಿತಿಯನ್ನು ರಚನೆ ಮಾಡಿ ತನಿಖೆ ಮಾಡಬೇಕು. ಎನ್‌ಟಿಎ ರದ್ದು ಪಡಿಸಿ ಕ್ರಮ ಕೂಗೊಳ್ಳಬೇಕೆಂದು ಆಗ್ರಹಿಸಿದರು.

ಎಸ್‌ಎಫ್‌ಐ ಮುಖಂಡ ಅರುಣ್ ನಾಗವತ್ ಮಾತನಾಡಿ, ಬಡಕುಟುಂಬದ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಹತೆ ಪಡೆಯಲು ವಂಚಿತರಾಗುತ್ತಿದ್ದಾರೆ. ಕೂಡಲೇ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆಯನ್ನು ನಡೆಸಬೇಕು. ಎನ್‌ಟಿಎಯನ್ನು ರದ್ದುಪಡಿಸಲು ಮತ್ತು ಈವರೆಗಿನ ಎಲ್ಲಾ ಹಗರಣಗಳನ್ನು ಸೂಕ್ತ ತನಿಖೆ ನಡೆಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಮುಖಂಡರಾದ ಕೃಷ್ಣಾ ನಾಯ್ಕ, ರಘು ಅಂಗಡಿ, ಶಶಿಕಲಾ ದೊಡ್ಡಮನಿ, ನಂದ ಎಚ್., ಸಿಂಚನ ಮಲ್ಲಣ್ಣನವರ, ಶಶಿಕಲಾ ಎಂ, ಸರಸ್ವತಿ ತಳವಾರ, ಲಲಿತಾ ಪೂಜಾರ, ತೇಜಸ್ವಿನಿ ಮಳಾಪುರ, ಭಾಗ್ಯಶ್ರೀ ಪಾಟೀಲ, ದೀಕ್ಷಾ ಬಂಕಾಪುರ ಮನೋಜ ಚೌಡಮ್ಮನವರ್, ನಂಜುಂಡಿ ಸುಡಂಬಿ ಮತ್ತಿತರರು ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಶ್ರೀನಿವಾಸ ಮಾನೆ ಚಾಲನೆ

ಹಾನಗಲ್ಲ: ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗಳ ಜೊತೆಗೆ ಗ್ರಾಮಗಳ ಒಳಗಿನ ರಸ್ತೆಗಳ ಅಭಿವೃದ್ಧಿಗೆ ಗಮನ ನೀಡಲಾಗಿದೆ. ಮೊದಲ ಬಾರಿಗೆ ಹೆಚ್ಚು ರಸ್ತೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹಳೆ ಶಿಂಗಾಪುರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 5 ಲಕ್ಷರೂ.ವೆಚ್ಚದಲ್ಲಿ ಅಭಿವೃದ್ಧಿಕಾಮಗಾರಿಗಳಿಗೆ ಚಾಲನೆ ನೀಡಿ, 2023-24 ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ 5 ಲಕ್ಷ ರೂ. ದಲ್ಲಿ ನಿರ್ಮಿಸಿದ ಬಸ್ ತಂಗುದಾಣ ಉದ್ಘಾಟಿಸಿದ ಅವರು, ಪ್ರತಿಯೊಂದು ಕುಟುಂಬಗಳ ಆರ್ಥಿಕ ಸ್ಥಿತಿಗತಿ ಸುಧಾರಿಸುವ ನಿಟ್ಟಿನಲ್ಲಿ ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತರಲಾಗಿದೆ. ಕುಟುಂಬವೊಂದಕ್ಕೆ ಪ್ರತಿ ತಿಂಗಳು ಕನಿಷ್ಟ 4 ರಿಂದ 5 ಸಾವಿರ ಆರ್ಥಿಕ ನೆರವು ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ಲಭಿಸುತ್ತಿದೆ. ಗ್ಯಾರಂಟಿ ಯೋಜನೆಗಳ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಹೆಚ್ಚಿಸಲು ರಾಜ್ಯ ಸರ್ಕಾರದ ಒತ್ತು ನೀಡಿದೆ. ತಾಲೂಕಿನ ಪ್ರತಿ ಗ್ರಾಪಂಗಳಿಗೆ 50 ಲಕ್ಷರಿಂದ ಒಂದು ಕೋಟಿವರೆಗೆ ಅನುದಾನ ಒದಗಿಸಲಾಗಿದೆ ಎಂದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಭರಮಣ್ಣ ಶಿವೂರ, ನಾಗಪ್ಪ ಸಣ್ಣಮನಿ, ಗಿರಿಮಲ್ಲಪ್ಪ ಸಣ್ಣಮನಿ, ಶಿವಾನಂದಪ್ಪ ಬನ್ನಿಹಳ್ಳಿ, ಮಹೇಶ ಹೆಡಮೇಸ್ತ್ರಿ, ಯಲ್ಲಪ್ಪ ಸಣ್ಣಮನಿ, ಮಲ್ಲೇಶ ಹಾಲಣ್ಣನವರ, ಬಸನಗೌಡ ನೀಲನಗೌಡ್ರ, ಶಂಕ್ರಪ್ಪ ದಾನಪ್ಪನವರ, ಬಾಬು ನಿಕ್ಕಂ, ಬಸವರಾಜ ಡುಮ್ಮನವರ ಸೇರಿದಂತೆ ಇನ್ನೂ ಹಲವರು ಇದ್ದರು.



ಶಿಬಿರದ ಸದುಪಯೋಗಪಡಿಸಿಕೊಳ್ಳಿ: ಉಪ್ಪಾರ

ಬ್ಯಾಡಗಿ: ಮನುಷ್ಯನು ತನ್ನ ಒತ್ತಡದ ಜೀವನ ನಡೆಸುವಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕುಎಂದುರೋಟರಿಕ್ಲಬ್ಬಿನ ಮಾಜಿ ಅಧ್ಯಕ್ಷ ಮಾಜಿ ಅಸಿಸ್ಟೆಂಟ್ ಗವರ್ನರ್ ಮಂಜುನಾಥ್ ಉಪ್ಪಾರ್ ಹೇಳಿದರು.

ಪಟ್ಟಣದ ಕದರಮಂಡಲಗಿ ರಸ್ತೆಯ ಸ್ನೇಹ ಸದನದಲ್ಲಿ ರೋಟರಿ ಕ್ಲಬ್ ಬ್ಯಾಡಗಿ ಹಾಗೂ ಶಂಕರ್ ಕಣ್ಣಿನ ಆಸ್ಪತ್ರೆ ಶಿವಮೊಗ್ಗ ಇವರ ಆಶ್ರಯದಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಕಣ್ಣು ಮನುಷ್ಯನಿಗೆ ಅತ್ಯಮೂಲ್ಯ ಮನುಷ್ಯನು ತನ್ನ ಒತ್ತಡ ಜೀವನದಲ್ಲಿ ಆರೋಗ್ಯದ ಕಡೆಗೆ ಹೆಚ್ಚು ಒತ್ತು ಕೊಡಬೇಕೆಂದು ಹೇಳಿದರು. ಪ್ರತಿ ತಿಂಗಳು ನಡೆಯುವ ಉಚಿತ ಕಣ್ಣಿನ ಶಿಬಿರಗಳಿಂದ ತಾಲೂಕಿನಲ್ಲಿ ಸಾವಿರಾರು ಬಡ ಕುಟುಂಬಗಳಿಗೆ ಸಹಕಾರಿಯಾಗಿದೆ. ಮುಂದಿನ ದಿನಗಳಲ್ಲಿ ಬ್ಯಾಡಗಿ ಪಟ್ಟಣದ ಸಾರ್ವಜನಿಕರು ಮತ್ತು ತಾಲೂಕಿನ ಎಲ್ಲಾ ಗ್ರಾಮಗಳ ಸಾರ್ವಜನಿಕರು ಈ ಶಿಬಿರದ ಸದಪಯೋಗವನ್ನು ಇನ್ನೂ ಹೆಚ್ಚು ಪಡೆದುಕೊಳ್ಳಬೇಕೆಂದು ಹೇಳಿದರು.

ಮಾಜಿ ಸೈನಿಕ ಎಂಡಿ ಚಿಕ್ಕಣ್ಣನವರ ಮಾತನಾಡಿ, ಶಿಬಿರದಲ್ಲಿ ಒಟ್ಟು 104 ಜನರುತಪಾಸಣೆಮಾಡಿಸಲಾಯಿತು 12 ಜನರಿಗೆ ಕನ್ನಡಕದ ಶಿಫಾರಸು ಮಾಡಲಾಯಿತು ಮತ್ತು 73 ಜನ ಶಿಬಿರಾರ್ಥಿಗಳು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಿ ಮೊದಲ ಹಂತದಲ್ಲಿ 45 ಜನ ಹಾಗೂ ಎರಡನೇ ಹಂತದಲ್ಲ 28 ಜನರನ್ನು ಶಿವಮೊಗ್ಗದ ಕಣ್ಣಿನ ಆಸ್ಪತ್ರೆಗೆ ಕಳುಹಿಸಲಾಗುವುದು ಎಂದು ಹೇಳಿದರು.



ಈ ಸಂದರ್ಭದಲ್ಲಿ ಸ್ನೇಹ ಸದನದ ಸಿಬ್ಬಂದಿ ಮಲ್ಲಿಕಾರ್ಜುನ್ ರೋಟರಿ ಕ್ಲಬ್ ಅಧ್ಯಕ್ಷ ಅನಿಲ್ ಬೋಡ್ಡಪಾಟಿ, ಜಂಟಿ ಕಾರ್ಯದರ್ಶಿ ಕಿರಣ್ ಮಾಳೆನಹಳ್ಳಿ, ನೇತ್ರ ಪರೀಕ್ಷಕ ಡಾ. ರಿಷಿಕೇಶ್, ಪೂಜಾ, ಸುನಿಲ್, ರವಿಕುಮಾರ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿ ಇದ್ದರು.

ಭಾರೀ ಮಳೆ ಗಾಳಿಗೆ ಧರೆಗುರುಳಿದ ಮರ: ವಿದ್ಯುತ್ ಕಡಿತ

ಹಾವೇರಿ: ನಗರ ಸೇರಿದಂತೆ ಜಿಲ್ಲೆಯ ವಿವಿಧಡೆ ಬುಧವಾರ ಸಂಜೆ ಕೆಲಕಾಲ ಮಳೆಯಾಗಿದ್ದು, ವಾತಾವರಣ ತಂಪಾಯಿತು. ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಬಿರು ಬಿಸಿಲಿನಿಂದ ಕೂಡಿದ್ದ ವಾತಾವಣ ಏಕಾಏಕಿ ಮೋಡ ಕವಿತು ಸಂಜೆ ಕೆಲಕಾಲ ಗುಡುಗು, ಗಾಳಿಯೊಂದಿಗೆ ಜಿಲ್ಲೆಯ ಕೆಲವು ಭಾಗದಲ್ಲಿ ಮಳೆಯಾಗಿದೆ. ಸ್ಥಳೀಯ ವಿದ್ಯಾನಗರ ಪೂರ್ವಭಾಗದಲ್ಲಿ ಗಾಳಿ, ಮಳೆಗೆ ಮರವೊಂದು ಧರೆಗೆ ಉರುಳಿ ಬಿದಿದ್ದು, ನಗರದಲ್ಲಿ ಕೆಲಕಾಲ ವಿದ್ಯುತ್ ವ್ಯತ್ಯಯ ಉಂಟಾಯಿತು. ಇನ್ನೂಳಿದಂತೆ ಜಿಲ್ಲೆಯ ಹಾನಗಲ್ಲ, ಶಿಗ್ಗಾವಿ, ಬ್ಯಾಡಗಿ, ರಾಣೆಬೆನ್ನೂರ, ಹಿರೇಕೆರೂರು, ರಟ್ಟೀಹಳ್ಳಿ, ಸವಣೂರು ತಾಲೂಕಿನ ವಿವಿಧಡೆ ಮಳೆಯಾಗಿದೆ.



ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರ: ರಸ್ತೆ ಕಾಮಗಾರಿ ಪ್ರಯುಕ್ತ ನಗರದ 220ಕೆವಿ ಉಪಕೇಂದ್ರದಿಂದ ಹೊರಡುವ ಎಫ್-3 ರಾಜೇಶ್ವರಿ ನಗರ ಮತ್ತು ಎಫ್-4 ಮೃತ್ಯುಂಜಯ ನಗರ ಫೀಡರ್ ಗಳಿಗೆ ಸಂಬಂಧಿಸಿದ ಉಮಾಶಂಕರ ನಗರ, ರಾಜೇಶ್ವರಿ ನಗರ, ಗೌರಿಶಂಕರ ನಗರ, ಈಶ್ವರ ನಗರ ಪ್ರದೇಶಗಳಿಗೆ ಮೇ 15ರಂದು ಬೆ.10 ರಿಂದ ಸಂಜೆ.6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಗ್ರಾಹಕರು ಸಹರಿಸಬೇಕೆಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ನಾಲ್ಕು ಪೊಲೀಸ್ ಶ್ವಾನಗಳಿಗೆ ಏರ್ ಕೂಲರ್ ವ್ಯವಸ್ಥೆ

ಹಾವೇರಿ: ಇತ್ತೀಚಿನ ದಿನಗಳಲ್ಲಿ ತಾಪಮಾನ ಹೆಚ್ಚಳದ ಬೆನ್ನಲ್ಲೇ ಪೊಲೀಸ್ ಇಲಾಖೆಯ ಶ್ವಾನದಳದ ನಾಯಿಗಳ ಆರೋಗ್ಯ ನಿರ್ವಹಣೆ ಹಿನ್ನೆಲೆಯಲ್ಲಿ ನಾಲ್ಕು ಶ್ವಾನಗಳಿಗೆ ಏರ್‌ಕೂಲರ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಧಿಕ ಉಷ್ಣಾಂಶದಿಂದ ಬಳಲುತ್ತಿದ್ದ ಪೊಲೀಸ್ ಶ್ವಾನಗಳು ಏರ್‌ಕೂಲರ್ ವ್ಯವಸ್ಥೆ ಬಳಿಕ ಖುಷಿಯ ಭಾವನೆ ವ್ಯಕ್ತಪಡಿಸಿವೆ. ಕೂಲರ್ ಅಳವಡಿಕೆ ಬಳಿಕ ಶ್ವಾನದಳ ವಿಭಾಗಕ್ಕೆ ಬುಧವಾರ ಖುದ್ದಾಗಿ ಹಾವೇರಿ ಎಸ್ಪಿ ಯಶೋದಾ ವಂಟಗೋಡಿ ಭೇಟಿ ನೀಡಿ, ಶ್ವಾನಗಳ ಆರೋಗ್ಯದ ಬಗ್ಗೆ ಪರಿಶೀಲನೆ ನಡೆಸಿದರು.

ನಂತರ ಮಾಧ್ಯಮಗಳ ಜತೆಗೆ ಮಾತನಾಡಿ, ಬಿಸಿಲಿನ ತೀವ್ರತೆ, ಸೆಕೆಯಿಂದ ಮಾನವರೇ ರಕ್ಷಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ. ಇಂಥ ತಾಪಮಾನದಿಂದ ಪೊಲೀಸ್ ಇಲಾಖೆಯಲ್ಲಿ ವಿವಿಧ ತನಿಖೆಯ ಪ್ರಮುಖ ತಪಾಸಣಾ ತಂಡವೇ ಎನಿಸಿರುವ ತರಬೇತಾದ ಶ್ವಾನದಳ ಬಿಸಿಲ ಹೊಡೆತಕ್ಕೆ ಕಂಗಾಲಾಗಿವೆ. ಇದರ ಪರಿಣಾಮದಿಂದಾಗಿ ಶ್ವಾನಗಳಲ್ಲಿ ನಿರ್ಜಲೀಕರಣ, ಕೋಪಗೊಳ್ಳುವುದು, ತೀವ್ರವಾದ ಆಯಾಸ ಮತ್ತು ನಿಷ್ಕ್ರಿಯತೆ ಕಂಡು ಬರುತ್ತಿತ್ತು. ಕೆಲವೊಮ್ಮೆ ಕೋಪದಿಂದ ನಿರ್ವಾಹಕರ ಮೇಲೆ ಎರಗುವುದು, ಆಹಾರ ತ್ಯಜಿಸುವುದು ಕಂಡು ಬಂದ ಹಿನ್ನೆಲೆಯಲ್ಲಿ ಅವುಗಳಿಗೆ ಗೃಹ ಇಲಾಖೆಯಿಂದ ಶ್ವಾನಗಳಿರುವ ಕೊಠಡಿಗಳಿಗೆ ಏರ್ ಕೂಲರ್ ವ್ಯವಸ್ಥೆ ಮಾಡಲಾಗಿದೆ.



ಇಲ್ಲಿಯ ಸಶಸ್ತ್ರ ಪೊಲೀಸ್ ಮೀಸಲು ಪಡೆ ಕಟ್ಟಡದ ಪ್ರತ್ಯೇಕವಾದ ನಾಲ್ಕು ಕೊಠಡಿಗಳಲ್ಲಿ ಏರ್ ಕೂಲರ್ ಅಳವಡಿಸಲಾಗಿದೆ. ಅಪರಾಧ ಪತ್ತೆಗೆ ಎಂದು ಎರಡು ಮತ್ತು ಬಾಂಬ್ ಪತ್ತೆಗೆ ಎರಡು ಶ್ವಾನಗಳಿದ್ದು ಅವುಗಳಿಗೆ ಈಗ ಕೂಲರ್ ಸೌಲಭ್ಯ ಕಲ್ಪಿಸಲಾಗಿದೆ. ಬೇಸಿಗೆಯ ತಾಪಕ್ಕೆ ಶ್ವಾನಗಳು ಬಳಲದಂತೆ ಪೊಲೀಸ್ ಇಲಾಖೆ ಅಗತ್ಯ ಮುನ್ನೆಚ್ಚರಿಕೆ ಕೈಗೊಂಡಿದೆ.

ಸಾನ್ಸಾ, ಕೈರಾ, ಪಾರು, ಆರ್ಯ ಸೇರಿದಂತೆ ಒಟ್ಟು ನಾಲ್ಕು ಶ್ವಾನಗಳಿಗೆ ಇದೀಗ ಬಿಸಿಲಿನ ತಾಪದಿಂದ ದೊಡ್ಡಮಟ್ಟದ ರಿಲೀಫ್ ಸಿಕ್ಕಿದೆ. ಕೊಠಡಿಯ ಉಷ್ಣಾಂಶ ಕಡಿಮೆಯಾದ ಹಿನ್ನೆಲೆ ಅವುಗಳ ಆಟ-ಚಿನ್ನಾಟ ಸಂತಸ ಮೂಡಿಸುವಂತಿದೆ. ಇದರೊಂದಿಗೆ ಪಶುವೈದ್ಯರ ಸಲಹೆ ಮೇರೆಗೆ ಶ್ವಾನಗಳಿಗೆ ನೀಡುವ ಊಟದ ಪದ್ಧತಿಯಲ್ಲೂ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಲಾಗಿದೆ. ಆರೋಗ್ಯ ತಪಾಸಣೆ ಕೂಡ ನಿಯಮಿತವಾಗಿ ನಡೆಸಿ, ಪ್ರತ್ಯೇಕವಾಗಿ ನಾಲ್ಕು ಕೂಲರ್ ಅಳವಡಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕರ್ತವ್ಯದಲ್ಲಿ ಸದಾ ವ್ಾಂಂಚ್ೂಣಿಯಾಲ್ಲಿರ್ಾವ ಪೊಲೀಸ್ ಶ್ವಾನಗಳಿಗೆ ಈಗ ಕೂಲ್ ಕೇರ್ ಸಿಕ್ಕಿದೆ. ಬಿಸಿಲಿನ ಮಧ್ಯೆಯೂ ಶ್ವಾನಗಳ ಸೇವೆ ನಿರಂತರವಾಗಿರಲು ಇಲಾಖೆ ಹೊಸ ಹೆಜ್ಜೆ ಇಟ್ಟಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಎಫ್‌ಐಡಿ ಕಡ್ಡಾಯ ಖಂಡಿಸಿ ಪ್ರತಿಭಟನೆ

ಹಾವೇರಿ: ರಾಜ್ಯ ಸರ್ಕಾರ ರೈತರಿಗೆ ಎಫ್‌ಐಡಿ ಕಡ್ಡಾಯಗೊಳಿಸಿ, ರಸಗೊಬ್ಬರ ವಿತರಣೆಗೆ ಮುಂದಾಗಿದ್ದನ್ನು ಖಂಡಿಸಿ ಹಳೆಯ ಮಾದರಿಯಲ್ಲಿಯೇ ರಸಗೊಬ್ಬರ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಅಖಿಲ ಕರ್ನಾಟಕ ರೈತ ಸಂಘದ ಜಿಲ್ಲಾ ಘಟಕದಿಂದ ಬುಧವಾರ ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಪ್ರತಿಭಟಿಸಲಾಯಿತು.

ನಗರದ ತೇರು ಬೀದಿ ಆಂಜನೇಯ ದೇವಸ್ಥಾನದಿಂದ ಆರಂಭಗೊಂಡ ರೈತರ ಪ್ರತಿಭಟನಾ ಮೆರವಣಿಗೆ ಪಿ.ಬಿ.ರೋಡ್, ಮೈಲಾರ ಮಹದೇವಪ್ಪ ಸರ್ಕಲ್ ಮೂಲಕ ಮಹಾತ್ಮಾ ಗಾಂಧಿ ವೃತ್ತಕ್ಕೆ ಬಂದು ಸಮಾವೇಶಗೊಂಡಿತು. ಈ ವೇಳೆ ರೈತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಅಖಿಲ ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಹನುಮಂತಪ್ಪ ದೀವಿಗಿಹಳ್ಳಿ ಮಾತನಾಡಿ, ರಾಜ್ಯ ಸರ್ಕಾರ ಮುಂಗಾರು ಮಳೆ ಆರಂಭಗೊಳ್ಳುವ ಮುನ್ನವೇ ರಸಗೊಬ್ಬರ ನೀಡುವಲ್ಲಿ ವಿಫಲವಾಗಿದೆ. ಈ ಮಧ್ಯೆ ಎಫ್‌ಐಡಿ ಮೂಲಕ ರೈತರಿಗೆ ಗೊಬ್ಬರ ವಿತರಣೆಗೆ ಮುಂದಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಕೂಡಲೇ ಎಫ್‌ಐಡಿ ಮೂಲಕ ಗೊಬ್ಬರ ವಿತರಣೆ ಬಂದ್ ಮಾಡಿ, ಹಳೆಯ ಮಾದರಿಯಲ್ಲಿಯೇ ರೈತರಿಗೆ ರಸಗೊಬ್ಬರ ವಿತರಣೆಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಜಿಲ್ಲೆಯಲ್ಲಿ ಮೂರು ತಲೆಮಾರುಗಳಿಂದ ಅರಣ್ಯ ಭೂಮಿ, ಬಗರ್ ಹುಕುಂ, ಇತರೆ ಸರ್ಕಾರಿ ಜಮೀನು ಸಾಗುವಳಿ ಮಾಡಿದ ಸಾವಿರಾರು ಕುಟುಂಬಗಳಿದ್ದು, ಅನೇಕ ರೈತರ ಹೆಸರಿಗೆ ಇನ್ನೂ ಜಮೀನು ಹಕ್ಕಪತ್ರ ವಿತರಿಸಿಲ್ಲ, ಅಲ್ಲದೇ ಸರ್ಕಾರ ಇವರಿಗೆ ಯಾವುದೇ ಸಾಲ ಸೌಲಭ್ಯ ನೀಡಿಲ್ಲ, ಈಗ ಸರ್ಕಾರ ಎಫ್‌ಐಡಿ ಮೂಲಕ ರಸಗೊಬ್ಬರ ನೀಡಲು ಮುಂದಾಗಿದೆ. ಹಕ್ಕುಪತ್ರ ನೀಡದ ರೈತರಿಗೆ ಈಗ ರಸಗೊಬ್ಬರ ಸಿಗದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಹಳೆಯ ಮಾದರಿಯಲ್ಲಿಯೇ ರಸಗೊಬ್ಬರ ವಿತರಣೆ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ 38 ಗ್ರಾಮ ಪಂಚಾಯಿತಿಗಳ ರೈತರಿಗೆ ಮಾತ್ರ ಬೆಳೆವಿಮೆ ಹಣ ಬಂದಿದೆ. ಜಿಲ್ಲೆಯ ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ರೈತರು ಬೆಳೆ ವಿಮೆ ತುಂಬಿದ್ದರೂ ಪರಿಹಾರ ಬಂದಿಲ್ಲ, ಈ ಕೂಡಲೇ ಬೆಳೆವಿಮೆ ಹಣ ನೀಡಲು ಕ್ರಮಕೈಗೊಳ್ಳಬೇಕು. ಕಳೆದ ಏಪ್ರಿಲ್ ತಿಂಗಳಲ್ಲಿ ಜಿಲ್ಲೆಯಲ್ಲಿ ಸುರಿದ ಆಲಿಕಲ್ಲು ಮಳೆಗೆ ತೋಟಗಾರಿಕೆ ಬೆಳೆಗಳಾದ ಎಲೆಬಳ್ಳಿ, ಕಲ್ಲಂಗಡಿ, ದಾಳಿಂಬೆ ಸೇರಿದಂತೆ ವಿವಿಧ ಬೆಳೆಗಳು ಹಾನಿಯಾಗಿದ್ದು, ಈ ಕೂಡಲೇ ರೈತರಿಗೆ ಪರಿಹಾರ ವಿತರಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಬಿ.ಡಿ. ಪಾಟೀಲ, ಚಂದ್ರಶೇಖರ ಮಾನೇರ, ಗಂಗಮ್ಮ ಅಣ್ಣಿಗೇರಿ, ಪಾರ್ವತಿ ಈಳಿಗೇರ, ಶಿವಪ್ಪ ಹಲಗೇರಿ, ಚನ್ನಮ್ಮ ಸಾತೇನಹಳ್ಳಿ, ಅಶೋಕ ಶಿಡಗನಾಳ, ಕನಗೌಡ ಕನಗೌಡ್ರ, ಗೀತಾ ಹಿರೇಕೆರೂರು, ಪುಟ್ಟಪ್ಪ ಬೆಂಚಿಹಳ್ಳಿ, ಲೋಕಪ್ಪ ಮುಚಡಿ, ರಾಮಪ್ಪ ಹೊಸಳ್ಳಿ, ಹಾಲಪ್ಪ ಚಾಡರ್ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಉದ್ಯೋಗ ಮೇಳ ಇಂದು

◆**ಬೆಳಗಾವಿ:** ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಪದವಿ ಕಾಲೇಜು ಆವರಣದಲ್ಲಿರುವ ಸರ್ಕಾರಿ ಸರ್ದಾರ ಹೈಸ್ಕೂಲ್ ಆವರಣದಲ್ಲಿ ಮೇ 14ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ.ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಹಾಗೂ ಯಾವುದೇ ಪದವೀಧರ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಬೆಂಗಳೂರಿನಿಂದ ಹಾಗೂ ಬೆಳಗಾವಿಯಿಂದ ಟಾಟಾ ಎಲೆಕ್ಟ್ರಾನಿಕ್ಸ್, ಫಾಕ್ಸ್ಕಾನ್, ಅಡೆಕೋ, ಏಕ್ವಸ್, ಐಸಿಐಸಿಐ ಬ್ಯಾಂಕ್, ಮುತ್ತೂಟ್ ಫೈನಾನ್ಸ್, ಕ್ವೆಸ್ ಮುಂತಾದವು ಸೇರಿ 30ಕ್ಕೂ ಹೆಚ್ಚು ಖ್ಯಾತ ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳುತ್ತಿವೆ.ಹೆಚ್ಚಿನ ಮಾಹಿತಿಗಾಗಿ ಡಾ. ಶಂಶುದ್ದೀನ್ ನದಾಫ್ ಪ್ಲೇಸ್ಮೆಂಟ್ ಸೆಲ್ ಸಂಯೋಜಕರನ್ನು ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜ ಬೆಳಗಾವಿ ಇವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಅರ್ಜಿ ಆಹ್ವಾನ

◆**ಹುಕ್ಕೇರಿ:** ರಾಜ್ಯ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ವತಿಯಿಂದ ''ಪ್ರತಿಭಾ ಪುರಸ್ಕಾರ''ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸರ್ಕಾರಿ ನೌಕರರ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕಾ ಅಧ್ಯಕ್ಷ ಅವಿನಾಶ ಹೊಳ್ಳೆಪ್ಪಗೋಳ ತಿಳಿಸಿದ್ದಾರೆ..



ಸರ್ಕಾರಿ ನೌಕರರ ಮಕ್ಕಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ 90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ತಂದೆ-ತಾಯಿ ಕರ್ನಾಟಕ ರಾಜ್ಯ ಸರ್ಕಾರಿ ಕಾಯಂ ನೌಕರರಾಗಿರಬೇಕು. ಅರ್ಹ ವಿದ್ಯಾರ್ಥಿಗಳು ಮೇ 25ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ವೇಳೆ ಸಂಘ ನಿಗದಿಪಡಿಸಿದ ನಮೂನೆಯಲ್ಲಿ ಜಿಲ್ಲಾ ಅಥವಾ ತಾಲೂಕು ಶಾಖೆಯ ಅಧ್ಯಕ್ಷರ ರುಜು ಮತ್ತು ಮೊಹರು ಹಾಕಿಸಿ ದೃಢೀಕರಿಸಿ ಅಪ್‌ಲೋಡ್ ಮಾಡುವುದು ಕಡ್ಡಾಯ ಎಂದು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

◆**ಸಂಕೇಶ್ವರ** : ರಾಜ್ಯ ಮಟ್ಟದ ಕೋಳಿ ಸಮಾಜ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಂದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೋಳಿ-ಬೆಸ್ತ ಸಮಾಜದ ಹುಕ್ಕೇರಿ ತಾಲೂಕಾ ಅಧ್ಯಕ್ಷ ಕಿಶೋರ ಶಿರಗೆ ಹೇಳಿದರು.



ಚಿಕ್ಕೋಡಿ ವಿಭಾಗ ಕೋಳಿ ಸಮಾಜ ಸಂಘ, ಚಿಕ್ಕೋಡಿ ಮತ್ತು ವ್ಯಾಸ ಮಹರ್ಷಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು. ಮೇ 30ರೊಳಗಾಗಿ ಸ್ವ ವಿವರಗಳೊಂದಿಗೆ ಎರಡು ಭಾವ ಚಿತ್ರ, ಅಂಕಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರಗಳನ್ನೊಳಗೊಂಡ ಅರ್ಜಿಯನ್ನು ಎಸ್. ಕೆ. ಹೊಳೆಪ್ಪನವರ ತಾಪಂ ಕಚೇರಿ ಸಮೀಪ, ಬಸವನಗರ ಅಥಣಿ, ಜಿಲ್ಲಾ ಬೆಳಗಾವಿ 591304 ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ನೇರವಾಗಿ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ ವ್ಯಾಸ ಮಹರ್ಷಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಧ್ಯಕ್ಷ ಕಿಶೋರ ನಾ. ಶಿರಗೆ ದೂ: 9448863655ಗೆ ಸಂಪರ್ಕಿಸಿ ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ

◆**ಬೆಳಗಾವಿ** :ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮದಲಭಾವಿ ಗ್ರಾಮದ ಶಿವಾನಂದ ಬಸವಂತಪ್ಪಾ ಸಂಗಮ್ಮನವರ(35)ಕಾಣೆ ಕುರಿತು ತಿಲಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಾಣೆಯಾದ ವ್ಯಕ್ತಿ ಕಂಡು ಬಂದಲ್ಲಿ ತಿಲಕವಾಡಿ ಪೊಲೀಸ್ ಠಾಣೆ ದೂ: 9743729003, 8494834783 ಗೆ ಸಂಪರ್ಕಿಸಲು ತಿಲಕವಾಡಿ ಪೊಲೀಸ್ ಠಾಣೆ ಪಿಎಸ್‌ಐಚ್‌ಒ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಬೆಳಗಾವಿ: ನಗರದಲ್ಲಿರುವ ಕಪಿಲೇಶ್ವರ ದೇವಸ್ಥಾನದಲ್ಲಿರುವ ಹಿಂದಿನ ಕಪಿಲನಾಥ ಹೊಂಡ ಅಪಾಯಕಾರಿ ಹಂತದಲ್ಲಿದ್ದು, ಅದರಲ್ಲಿ ಆಗಾಗ ಸಾವು ನೋವುಗಳ ದುರ್ಘಟನೆ ಸಂಭವಿಸುತ್ತಿರುವುದರಿಂದ ಮೇ 8ರಿಂದ ಮುಂದಿನ ಆದೇಶದ ವರೆಗೆ ಕಪಿಲನಾಥ ಹೊಂಡಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದು ನಗರದ ಪೊಲೀಸ್ ಕಮಿಷನರ್ ಬೊರಸೆ ಆದೇಶ ಹೊರಡಿಸಿದ್ದಾರೆ.

ಯರಗಟ್ಟಿಯಲ್ಲಿ ಇಂದು ಕ್ರಿಕೆಟ್ ಟೂರ್ನಿ ಆರಂಭ

◆**ಯರಗಟ್ಟಿ:** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮಾದರಿಯಲ್ಲಿ ಯರಗಟ್ಟಿಯಲ್ಲಿ ವಿಶ್ವಾಸಣ್ಣಾ ಅಭಿಮಾನಿ ಬಳಗದ ವತಿಯಿಂದ ವಿಶ್ವಾಸಣ್ಣಾ ಟ್ರೋಫಿ-2026' ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ.

ಐಪಿಎಲ್ ಮಾದರಿ ಹರಾಜು ಪ್ರಕ್ರಿಯೆ, ತಂಡಗಳ ರಚನೆ, ಜರ್ಸಿ ವಿನ್ಯಾಸ ಹಾಗೂ ಪಂದ್ಯಗಳ ವೇಳಾಪಟ್ಟಿ ಟೂರ್ನಿಗೆ ಮತ್ತಷ್ಟು ವಿಶೇಷತೆ ತಂದಿದೆ. ಪ್ರತಿ ತಂಡದಲ್ಲೂ ಯರಗಟ್ಟಿ ತಾಲೂಕಿನ ಅತ್ಯುತ್ತಮ ಆಟಗಾರರು ಸ್ಥಾನ ಪಡೆದಿದ್ದು, ಪಂದ್ಯಗಳು ರೋಚಕ ಹಂತ ತಲುಪಿವೆ. ಕ್ರೀಡಾಂಗಣದಲ್ಲಿ ಅಭಿಮಾನಿಗಳ ಉತ್ಸಾಹ, ಆಟಗಾರರ ಜಿದ್ದಾಜಿದ್ದಿನ ಆಟ ಹಾಗೂ ತಂಡಗಳ ಮಧ್ಯೆ ಪೈಪೋಟಿ ಟೂರ್ನಿಯ ಮೆರುಗು ಹೆಚ್ಚಿಸಿದೆ.

ಗ್ರಾಮೀಣ ಭಾಗದಲ್ಲಿ ಇಂತಹ ಕ್ರೀಡಾಕೂಟಗಳು ಆಯೋಜನೆಯಾಗುತ್ತಿರುವುದು ಸಂತಸದ ಸಂಗತಿ. ಯುವಕರಲ್ಲಿ ಶಿಸ್ತು, ಆರೋಗ್ಯಕರ ಸ್ಪರ್ಧೆ ಹಾಗೂ ನಾಯಕತ್ವ ಗುಣ ಬೆಳೆಸಲು ಕ್ರೀಡೆ ಉತ್ತಮವಾಗಿದೆ. ಐಪಿಎಲ್ ಮಾದರಿಯಲ್ಲಿ ಈ ಟ್ರೋಫಿ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ. ತಾಲೂಕಿನ ಯುವ ಪ್ರತಿಭೆಗಳಿಗೆ ಸದಾ ನನ್ನ ಪ್ರೋತ್ಸಾಹ ಮತ್ತು ಬೆಂಬಲ ಸದಾ ಕಾಲ ಇರುತ್ತದೆ ಎಂದು ಸವದತ್ತಿ ಯಲ್ಲಮ್ಮ ಮತಕ್ಷೇತ್ರ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಮತ್ತು ಶಾಸಕ ವಿಶ್ವಾಸ ವೈದ್ಯ ಹೇಳಿದರು.



ರಾಯಬಾಗ: ಇಲ್ಲಿಯ ಲಕ್ಷ್ಮೀದೇವಿ ಜಾತ್ರೆ ನಿಮಿತ್ತ ಬಾಗಿ ಸೋಶಿಯಲ್ ಕ್ಲಬ್, ರಾಯಬಾಗ ಸೈಕ್ಲಿಂಗ್ ಕ್ಲಬ್, ಜಾತ್ರಾ ಸಮಿತಿ ಸಹಯೋಗದೊಂದಿಗೆ ಆಯೋಜಿಸಲಾದ ಸೈಕಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಜಮಖಂಡಿ ತಾಲೂಕಿನ ಕುಂಬಾರಹಳ್ಳ ಗ್ರಾಮದ ಬಸವರಾಜ ತೇರದಾಳಗೆ ಭಾಗಿ ಸೋಶಿಯಲ್ ಕ್ಲಬ್‌ನಿಂದ 25000 ರೂ. ನಗದು ಬಹುಮಾನ, ಪ್ರಶಸ್ತಿ ವಿತರಿಸಲಾಯಿತು. ಸೋಶಿಯಲ್ ಕ್ಲಬ್‌ನ ಅಧ್ಯಕ್ಷ ರಾಜು ಅಳಾಜ, ಸೈಕ್ಲಿಂಗ್ ಕ್ಲಬ್ ಸದಸ್ಯ ಮಹದೇವ ಧರ್ಮಟ್ಟಿ, ತುಕಾರಾಮ ವಾಲಿಕರ್, ಬಾಳು ಮಾಂಗ, ಪಪಂ ಮಾಜಿ ಅಧ್ಯಕ್ಷ ಸಂತೋಷ ಮೇತ್ರಿ, ಲಕ್ಷ್ಮಣ ಪೂಜೇರಿ, ನಂದು ದೇಸಾಯಿ, ಸಮಿತಿ ಸದಸ್ಯರುಗಳು ಇದ್ದರು.

ಶಾಸಕ ಆಸೀಫ್ ಸ್ಥಳೀಯ ನಿವಾಸಿಗಳೊಂದಿಗೆ ನೇರ ಸಂವಾದ

ಉದ್ಯಾನವನ ಅಭಿವೃದ್ಧಿಗೆ ಚಾಲನೆ

◆**ಬೆಳಗಾವಿ:** ಇಲ್ಲಿನ ಶ್ರೀನಗರ ಭಾಗದ ನಿವಾಸಿಗಳಿಗೆ ಶೀಘ್ರದಲ್ಲೇ ಸುಸಜ್ಜಿತ ಉದ್ಯಾನವನ ಲೋಕಾರ್ಪಣೆಯಾಗಲಿದ್ದು, ಕ್ಷೇತ್ರದ ಜನತೆಯ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಶಾಸಕ ಆಸೀಫ್ ಸೇಠ್ ಅವರು ಬುಧವಾರ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ಸ್ಥಳೀಯರ ಕುಂದು-ಕೊರತೆಗಳನ್ನು ಆಲಿಸಿದರು.

ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಅಚ್ಚುಕಟ್ಟಾಗಿ ಕೆಲಸ ಮಾಡುತ್ತೇನೆ ಎಂದು ಪ್ರತಿಜ್ಞಾ ಮಾಡಿದರು.

ಶ್ರೀನಗರ ಉದ್ಯಾನವನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಧಿಕೃತವಾಗಿ ಚಾಲನೆ ನೀಡಿದರು. ಉದ್ಯಾನವನವನ್ನು ಆಧುನೀಕರಿಸುವ ಮತ್ತು ಸಾರ್ವಜನಿಕರಿಗೆ ಉತ್ತಮ ಮನರಂಜನಾ ಸ್ಥಳ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಉದ್ಯಾನವನದ ಅಭಿವೃದ್ಧಿ ನಕ್ಷೆ ಪರಿಶೀಲಿಸಿ, ಗುಣಮಟ್ಟದ ಕಾಮಗಾರಿಗೆ ಮಾಡುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಶಾಸಕ ಆಸೀಫ್ ಸೇಠ್



ಅವರು ಸ್ಥಳೀಯ ನಿವಾಸಿಗಳೊಂದಿಗೆ ನೇರ ಸಂವಾದ ನಡೆಸಿದರು. ನಿವಾಸಿಗಳು ಉದ್ಯಾನವನದಲ್ಲಿ ಉತ್ತಮ ದೀಪ ಅಳವಡಿಕೆ, ಆಸನ ವ್ಯವಸ್ಥೆ, ಹಸಿರೀಕರಣ ಮತ್ತು ನಡಿಗೆ ಪಥದ ಅಗತ್ಯತೆಗಳ ಬಗ್ಗೆ, ಶಾಸಕರಿಗೆ ಮಾಹಿತಿ ನೀಡಿದರು. ಸಾರ್ವಜನಿಕರ ಪ್ರತಿಯೊಂದು ಸಲಹೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ ಶಾಸಕರು, ಜನರ ಬೇಡಿಕೆಗಳಿಗೆ ಅನುಗುಣವಾಗಿಯೇ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಸ್ಥಳೀಯ ಮುಖಂಡರು, ಮಹಾನಗರ ಪಾಲಿಕೆ ಅಧಿಕಾರಿಗಳು, ಶ್ರೀನಗರದ ನೂರಾರು ನಿವಾಸಿಗಳು, ಸೇರಿದಂತೆ ಇತರರು ಇದ್ದರು.

ನಾಮಫಲಕ ಅಳವಡಿಕೆ

◆**ಬೆಳಗಾವಿ:** ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಾಕನೂರು ಘಾಟಾದಲ್ಲಿ ದಾರಿ ತಿಳಿಯದೆ ಪರದಾಡುತ್ತಿದ್ದ ಪ್ರಯಾಣಿಕರ ಗೊಂದಲಕ್ಕೆ ಈಗ ತೆರೆ ಬಿದ್ದಿದೆ. ನಾಮಫಲಕ ಇಲ್ಲದ ಸಮಸ್ಯೆ ಅರಿತು ಬಿಜೆಪಿ ಮುಖಂಡ ಧನಂಜಯ ಜಾಧವ ತಕ್ಷಣವೇ ಸ್ಪಂದಿಸಿ ಸಾರ್ವಜನಿಕರಿಗೆ ಮಾದರಿಯಾಗಿದ್ದಾರೆ.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಾಕನೂರು ಗ್ರಾಮದ ಶ್ರೀಮಹಾಲಕ್ಷ್ಮಿ ಜಾತ್ರಾ ಮಹೋತ್ಸವವು ಮುಕ್ತಾಯದ ಹಂತಕ್ಕೆ ತಲುಪಿದೆ. ಆದರೆ, ಬಾಕನೂರು ಮತ್ತು ಬಡಸ ಗ್ರಾಮದ ಘಾಟಾದಲ್ಲಿ (ತಿರುವು) ಗ್ರಾಮಕ್ಕೆ ಹೋಗಲು ದಾರಿ ತೋರಿಸುವ ಯಾವುದೇ ನಾಮಫಲಕ ಇರಲಿಲ್ಲ. ಇದರಿಂದಾಗಿ ಜಾತ್ರೆಗೆ ಬರುವ ನಂಟರು, ಭಕ್ತಾದಿಗಳು ಹಾಗೂ ಪ್ರಯಾಣಿಕರು ಬಾಕನೂರಿಗೆ ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬ ಗೊಂದಲಕ್ಕೊಳಗಾಗುತ್ತಿದ್ದರು.

ಇತ್ತೀಚೆಗೆ ಬಿಜೆಪಿ ಬೆಳಗಾವಿ ಗ್ರಾಮೀಣ ಮಾಜಿ ಮಂಡಲ ಅಧ್ಯಕ್ಷ ಧನಂಜಯ ಜಾಧವ ಮಹಾಲಕ್ಷ್ಮೀಯ ದರ್ಶನಕ್ಕಾಗಿ ಗ್ರಾಮಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಕಾರ್ಯಕರ್ತರು ಈ ಸಮಸ್ಯೆ ಅವರ ಗಮನಕ್ಕೆ ತಂದರು. ಸಮಸ್ಯೆಯ ತೀವ್ರತೆ ಮತ್ತು ನಾಮಫಲಕದ ಅಗತ್ಯತೆ ಮನಗಂಡ ಧನಂಜಯ ಜಾಧವ ತಕ್ಷಣವೇ ತಮ್ಮ ಸ್ವಂತ ಖರ್ಚಿನಲ್ಲಿ ಬಾಕನೂರು ಮತ್ತು ಬಡಸ ಗ್ರಾಮಗಳಿಗೆ ಹೋಗುವ ದಾರಿ ಸೂಚಿಸುವ ಕಾಯಂ ನಾಮಫಲಕ ಅಳವಡಿಸಿಕೊಟ್ಟಿದ್ದಾರೆ.

ನಾಮಫಲಕ ಅಳವಡಿಕೆಯಿಂದಾಗಿ ಗ್ರಾಮಸ್ಥರು ಮತ್ತು ಭಕ್ತಾದಿಗಳು ಸಂತಸ ವ್ಯಕ್ತಪಡಿಸಿದ್ದು, ಧನಂಜಯ ಜಾಧವ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಈ ನಾಮಫಲಕದ ಉದ್ಘಾಟನಾ ಸಮಾರಂಭದಲ್ಲಿ ಕೆ.ಡಿ.ಪಾಟೀಲ, ಸಂದೀಪ ಗೋಡ್ಸೆ, ಕೆ.ಎನ್.ಪಾಟೀಲ, ನಾಮದೇವ ಗೋಡೆ, ಪ್ರಹ್ಲಾದ ಗುರವ, ಸಂಜಯ ಪಾಟೀಲ, ಗೋಪಾಲ ಗಾವಡೆ, ನಿಂಗು ಗಾವಡೆ, ದೀಪಕ ನಾಯ, ಸಂಭಾಜಿ ನಾಯ, ಚೇತನ್ ಪಾಟೀಲ, ಗೋಪಾಳ್ ಪಾಟೀಲ, ಬಾಳು ಚಂದಿಲ್ಕರ್, ಪ್ರಕಾಶ ಸುತಾರ, ಕಲ್ಲಪ್ಪ ಕಾಂಬಳೆ, ಅನಿಲ ಪಾಟೀಲ, ಪರಶುರಾಮ ಪಾಟೀಲ ಬಡಸ, ಬಾಕನೂರು ಮತ್ತು ಬೆಳವಟ್ಟಿ ಗ್ರಾಮಗಳ ಪ್ರಮುಖ ಕಾರ್ಯಕರ್ತರು ಹಾಗೂ ಮುಖಂಡರು ಸೇರಿದಂತೆ ಇತರರು ಇದ್ದರು.



ದಾಂಪತ್ಯ ಇಬ್ಬರು ವ್ಯಕ್ತಿಗಳ ಬಂಧವಲ್ಲ: ಶ್ರೀಗಳು

◆**ಬೆಳಗಾವಿ:** ನಂಬಿಕೆ, ಗೌರವ, ಹೊಂದಾಣಿಕೆ ಮತ್ತು ತ್ಯಾಗದ ಬುನಾದಿ ಮೇಲೆ ದಾಂಪತ್ಯ ಜೀವನ ನಡೆಸಿದರೆ, ಅದು ಆದರ್ಶಮಯವಾಗಿರುತ್ತದೆ. ದಾಂಪತ್ಯ ಕೇವಲ ಇಬ್ಬರು ವ್ಯಕ್ತಿಗಳ ಬಂಧವಲ್ಲ, ಬದಲಾಗಿ ಎರಡು ಮನಸ್ಸುಗಳ ಸಮ್ಮಿಲನವಾಗಿದ್ದು, ಸಾರ್ಥಕ ಬದುಕಿಗೆ ಮತ್ತು ದಂಪತಿಗಳ ಏಳಿಗೆಗೆ ಅದು ಕಾರಣವಾಗುತ್ತದೆ. ಸತಿಪತಿಗಳೊಂದಾದ ಭಕ್ತಿ ಹಿತವಾಗಿದ್ದು, ಶಿವಂಗೆ ಎಂಬ ಶರಣರ ವಾಣಿಯಂತೆ ದಂಪತಿಗಳು ಪರಸ್ಪರ ಅನ್ಯೋನ್ಯತೆಯಿಂದ ಬದುಕಿದರೆ ಅದು ಪರಮಾತ್ಮನಿಗೂ ಪ್ರಿಯವಾಗುತ್ತದೆ ಎಂದು ಕಾರಂಜಿ ಮಠದ ಗುರುಸಿದ್ಧ ಶ್ರೀಗಳು ಅಭಿಪ್ರಾಯಪಟ್ಟರು.



ಹಲಗೇಕರಗೆ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ

◆**ಬೆಳಗಾವಿ:** ರಮಾಬಾಯಿ ಅಂಬೇಡ್ಕರ್ ಸೋಶಿಯಲ್ ವೆಲಫೇರ್ ಫೌಂಡೇಷನ್ ವತಿಯಿಂದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಭಗವಾನ್ ಗೌತಮ ಬುದ್ಧ ಜಯಂತಿ ಮಹೋತ್ಸವ ಅಂಗವಾಗಿ ಆಯೋಜಿಸಲಾದ ಭವ್ಯ ಸಮಾರಂಭದಲ್ಲಿ ಸಮಾಜ ಸೇವಕ ಆಕಾಶ ರುದ್ರಪ್ಪ ಹಲಗೇಕರಗೆ ಡಾ.ಬಿ.ಆರ್.ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಸಮಾಜ ಸೇವೆ, ಯುವಜನರಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯ, ಬಡ ಹಾಗೂ ಹಿಂದುಳಿದ ವರ್ಗದ ಜನರಿಗೆ ನೆರವು, ಶಿಕ್ಷಣ ಪ್ರೋತ್ಸಾಹ, ಮಾನವೀಯ ಮೌಲ್ಯಗಳ ಬೆಳೆಸುವಿಕೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಆಕಾಶ ಹಲಗೇಕರ ಹಲವು ವರ್ಷಗಳಿಂದ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಯುವಕರಿಗೆ ಮಾರ್ಗದರ್ಶನ, ಅಗತ್ಯವಿರುವ ವಿದ್ಯಾರ್ಥಿಗಳಿಗೆ ಸಹಾಯಧನ, ರಕ್ತದಾನ ಶಿಬಿರ, ಉಚಿತ ಕಣ್ಣಿನ ಶಿಬಿರ, ಆರೋಗ್ಯ ಶಿಬಿರ,ಪರಿಸರ ಜಾಗೃತಿ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ಐಕ್ಯತೆ ಬಲಪಡಿಸುವ ವಿವಿಧ ಕಾರ್ಯಗಳ ಮೂಲಕ ಜನಮನ ಗೆದ್ದಿದ್ದಾರೆ. ಸಮಾಜದಲ್ಲಿ ಶಾಂತಿ, ಸಮಾನತೆ ಮತ್ತು ಸಹೋದರತ್ವದ ಮೌಲ್ಯ ಬೆಳೆಸುವ ನಿಟ್ಟಿನಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ವೇಳೆ ಪಾಲಿಕೆ ಮೇಯರ್ ಪ್ರೀತಿ ಕಾಮಕರ, ಉಪಮೇಯರ್ ಹಣಮಂತ ಕೊಂಗಾಳಿ, ಪಾಲಿಕೆ ಉಪ ಆಯುಕ್ತ ಉದಯಕುಮಾರ ತಳವಾರ, ಪರುಶುರಾಮ ಗೋ. ಮಂಗಣ್ಣವರ, ಅಧ್ಯಕ್ಷ ಮಂಗಲ.ಪ. ಮಂಗಣ್ಣವರ, ಉಪಾಧ್ಯಕ್ಷ ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ವಿಜೇತರಿಗೆ ಅಭಿನಂದನೆ ಸಲ್ಲಿಸಿದರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಆಕಾಶ ರುದ್ರಪ್ಪ ಹಲಗೇಕರ ಮಾತನಾಡಿ, ಈ ಗೌರವವು ನನ್ನೊಬ್ಬರ ಸಾಧನೆಯಲ್ಲ, ಸಮಾಜ ಸೇವೆಯಲ್ಲಿ ನನ್ನೊಂದಿಗೆ ಕೈಜೋಡಿಸಿದ ಪ್ರತಿಯೊಬ್ಬರ ಪ್ರೋತ್ಸಾಹ ಮತ್ತು ಆಶೀರ್ವಾದದ ಫಲವಾಗಿದೆ. ಮುಂದಿನ ದಿನಗಳಲ್ಲಿಯೂ ಸಮಾಜದ ಅಭಿವೃದ್ಧಿಗಾಗಿ ಇನ್ನಷ್ಟು ಸೇವೆ ಮಾಡುವ ಸಂಕಲ್ಪ ಹೊಂದಿದ್ದೇನೆ ಎಂದರು.



ಯುವಕರನ್ನು ದೇಶ ಕಟ್ಟಲು ಪ್ರೇರೇಪಿಸಿ: ಪ್ರಕಾಶ

◆**ಮೂಡಲಗಿ:** ದೇಶದ ಯಾವುದೇ ಭಾಗದಲ್ಲಿ ನೈಸರ್ಗಿಕ ಅಥವಾ ಮಾನವ ವಿಪತ್ತುಗಳಿಗೆ ಬಲಿಯಾದವರನ್ನು ರಕ್ಷಿಸಲು ಮತ್ತು ಪರಿಹಾರ ನೀಡಲು ಮಾನವೀಯತೆಯ ನೆಲೆಯಲ್ಲಿ ಎಲ್ಲರೂ ಒಗ್ಗೂಡಬೇಕು ಎಂದು ಆಂಗ್ಲ ಭಾಷಾ ಪ್ರಾಧ್ಯಾಪಕ ಪ್ರೊ.ಪ್ರಕಾಶ ಚೌಡಕಿ ಹೇಳಿದರು.

ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆ ಕಲಾ, ವಾಣಿಜ್ಯಹಾಗೂ ಬಿಸಿಎ ಮಹಾವಿದ್ಯಾಲಯದ ಯುವ ರೆಡ್ ಕ್ರಾಸ್ ಸಂಘಟಕದ ಆಶ್ರಯದಲ್ಲಿ ಏರ್ಪಡಿಸಿದ ವಿಶ್ವ ರೆಡ್ ಕ್ರಾಸ್ ದಿನಾಚರಣೆಯಲ್ಲಿ ಮಾತನಾಡಿ,ಇಂದಿನ ಯುವಶಕ್ತಿ ಮೊಬೈಲ್‌ಎಂಬ ಮಾಂತ್ರಿಕ ಯಂತ್ರ‌ಆಳುತ್ತಿದ್ದು, ಶಾಲಾ-ಕಾಲೇಜುಗಳು ಯುವ ರೆಡ್ ಕ್ರಾಸ್, ಎನ್‌ಎಸ್‌ಎಸ್, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸ್ವಯಂ ಸೇವಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ಮೂಲಕ ಸಮಾಜ ಹಾಗೂ ದೇಶಕಟ್ಟಲು ಪ್ರೇರೇಪಿಸಬೇಕು ಎಂದರು.

ಕಾಲೇಜಿ ಆಡಳಿತಾಧಿಕಾರಿ ಡಾ.ಎಸ್.ಎಲ್.ಚಿತ್ರಗಾರ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯುದ್ಧಗಳು ಮನುಕುಲದ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತವೆ. ಅಂತಹ ಸಂದರ್ಭಗಳಲ್ಲಿ ಯುವಜನತೆ ವಿಶ್ವ ರೆಡ್



ಕ್ರಾಸ್ ಸಂಸ್ಥೆಗಳೊಂದಿಗೆ ಕೈಜೋಡಿಸಬೇಕು ಎಂದರು. ಯುವ ರೆಡ್ ಕಾಸ್ ಸಂಘಟಕದ ಘಟಕಾಧಿಕಾರಿ ಪ್ರೊ.ಕೆ.ಪಿ.ಡೋಣಿ ಮಾತನಾಡಿದರು. ಈ ವೇಳೆ ಡಾ.ಪವನ ಕುಮಾರ್ಕೆ, ವೇದಾ ದೇಶಪಾಂಡೆ, ಸವಿತಾ ಕೊತ್ತಲ, ಪ್ರೀತಿ ಬೆಳಗಲಿ, ಎಸ್.ಸ್ಕುಲಿಗೋಡ, ಎಸ್.ಎಸ್.ಹಿರೇಮಠ, ಭಾರತಿ ತಳವಾರ, ಎಸ್ವಿ ಕಾಂಬಳೆ, ಎನ್.ಸಿ.ಭರಮ್ಮ, ಪ್ರತಿಭಾ ಪಂಡ್ರೊಳಿ, ವೆಂಕಟೇಶ ಪಾಟೀಲ ಮುಂತಾದವರು ಉಪಸ್ಥಿತರಿದ್ದರು. ಲೋಕೇಶ ಹಿಡಕಲ ಸ್ವಾಗತಿಸಿದರು. ಸುನಂದಾ ಅಂಗಡಿ ನಿರೂಪಿಸಿದರು. ಎ.ಎಸ್.ಮಿಶಿನಾಯಕ ವಂದಿಸಿದರು.

ಕಲೆ, ಭಕ್ತಿಯ ಸಂಗಮವೇ ನಾಟಕ: ಶಾಸಕ ವಿಶ್ವಾಸ ವೈದ್ಯ

◆**ಯರಗಟ್ಟಿ** : ನಾಟಕ ಮತ್ತು ಕಲೆಗಳು ನಮ್ಮ ಗ್ರಾಮೀಣ ಸಂಸ್ಕೃತಿಯ ಜೀವಾಳ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಇಂತಹ ಕಲಾ ಪ್ರಕಾರಗಳು ಜನರಲ್ಲಿ ಜಾಗೃತಿ ಮೂಡಿಸುತ್ತವೆ. ಹೇಮರೆಡ್ಡಿ ಮಲ್ಲಮ್ಮನವರ ತತ್ವ ಆದರ್ಶಗಳು ನಮ್ಮೆಲ್ಲರಿಗೂ ಸದಾ ಪ್ರೇರಣೆಯಾಗಿರಲಿ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ರೈನಾಪೂರೆ ಗ್ರಾಮದಲ್ಲಿ ಮಂಗಳವಾರ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ 604ನೇ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡಿದ ಹಸಿರು ಬಳೆ ಎಂಬ ಸಾಮಾಜಿಕ ನಾಟಕದ ಉದ್ಘಾಟಿಸಿ ಮಾತನಾಡಿದರು.

ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನವರ ಮಾತನಾಡಿ, ಗ್ರಾಮೀಣ ಭಾಗದಲ್ಲಿ ನಾಟಕವು ಕೇವಲ ಮನರಂಜನೆಯಲ್ಲ, ಅದು ಕಲೆ, ಸಂಸ್ಕೃತಿ ಮತ್ತು ಬದುಕಿನ ಅವಿಭಾಜ್ಯ ಅಂಗವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಂಗಕಲೆಗೆ ಆಟೀ ಹೆಚ್ಚಿನ ಪ್ರೋತ್ಸಾಹ ಮತ್ತು ಗೌರವವಿದೆ. ಜಾನಪದ ಮತ್ತು ಪರಂಪರೆ ಬಯಲಾಟ, ದೊಡ್ಡಾಟ, ಯಕ್ಷಗಾನ, ಶ್ರೀಕೃಷ್ಣ ಪಾರಿಜಾತ ಮುಂತಾದವು ಗ್ರಾಮೀಣ ಭಾಗದ ವಿಶಿಷ್ಟ ನಾಟಕ ಪ್ರಕಾರಗಳಾಗಿವೆ. ಗ್ರಾಮೀಣದಲ್ಲಿ ನಡೆಯುವ ಜಾತ್ರೆಗಳು, ದೇವಸ್ಥಾನದ ಉತ್ಸವಗಳ ಸಂದರ್ಭದಲ್ಲಿ ರಾತ್ರಿಯಿಡೀ ನಾಟಕ ಪ್ರದರ್ಶನ



ನಡೆಯುತ್ತವೆ. ಇದು ಗ್ರಾಮೀಣ ಜನರ ಕಲಾಭಿರುಚಿ ಎತ್ತಿ ತೋರಿಸುತ್ತದೆ ಎಂದರು. ಪಿಕೆಪಿಎಸ್ ಅಧ್ಯಕ್ಷ ವಿಠ್ಠಲ ಬಂಟನೂರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ್ರಕಾಶ ವಾಲಿ, ಎಸ್.ಎಫ್.ಸಿದ್ನಾಳ, ವೆಂಕಪ್ಪ ಕಳ್ಳಿಗುದ್ದಿ, ರಾಜು ಕಳ್ಳಿಗುದ್ದಿ, ಅಶೋಕ ಹುಲಕುಂದ, ವಿಠ್ಠಲ ಹುಲಕುಂದ, ಭೀಮರಡ್ಡಿ ಸಿದ್ನಾಳ, ಯಂಕಣ್ಣಾ ಹುರಕನವರ, ಮಹಾಂತೇಶ ಪಟ್ಟಣಶೆಟ್ಟಿ, ಸುರೇಶ ಬಂಟನೂರ, ಹನುಮಂತ ಸಿದ್ನಾಳ, ಕಲ್ಲಪ್ಪ ಕಡೇಮನಿ ಗ್ರಾಮದ ಹಿರಿಯರು, ಕಲಾಭಿಮಾನಿಗಳು, ಪಕ್ಷದ ಮುಖಂಡರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ಬಯಲಾಟಗಳು ಸಂಶೋಧನಾ ಕ್ಷೇತ್ರವಾಗಲಿ: ಮೀಶಿನಾಯ್ಕ

◆**ಮೂಡಲಗಿ:** ಜನಪದ ರಂಗಭೂಮಿಯ ಬಯಲಾಟಗಳು ಇಂದು ನಿರ್ಲಕ್ಷಿತ ಕ್ಷೇತ್ರವಾಗುತ್ತಿದ್ದು, ಬೈಲಾಟಗಳ ಕುರಿತು ಹೆಚ್ಚಿನ ಸಂಶೋಧನಾ ಕಾರ್ಯಗಳು ನಡೆಯಬೇಕು ಎಂದು ಮೂಡಲಗಿ ಎಂಇಎಸ್ ಪದವಿ ಕಾಲೇಜ್ ಕನ್ನಡ ಉಪನ್ಯಾಸಕ ಪ್ರೊ.ಎ.ಎಸ್. ಮೀಶಿನಾಯ್ಕ ಹೇಳಿದರು.

ಪಟ್ಟಣದ ಪಾದಬೋಧ ಶ್ರೀಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಕನ್ನಡ ವಿಭಾಗದ ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳ ಯೋಜನಾ ಕಾರ್ಯ ವರದಿ ಮಂಡನೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದಿನ ಯುವ ಸಮುದಾಯ ಪಾಶ್ಚಾತ್ಯ ಸಂಸ್ಕೃತಿ ಕಡೆಗೆ ವಾಲುತ್ತಿದೆ. ಆದರೆ ನಮ್ಮ ಮೂಲ ಜನಪದ ಕಲೆ ಸಂಸ್ಕೃತಿಯಲ್ಲಿಯೇ ಸೃಜನಶೀಲ ಶಕ್ತಿವಿದೆ. ಅವುಗಳ ಕುರಿತು ಹೆಚ್ಚಿನ ಅಧ್ಯಯನ ವಿದ್ಯಾರ್ಥಿ ದೆಸೆಯಲ್ಲಿ ನಡೆಯಬೇಕು ಎಂದರು.



ಸಣ್ಣಾಟಗಳು, ಬೇಂದ್ರೆ, ಕಂಬಾರ, ಫ.ಗು.ಹಳಕಟ್ಟಿ, ಎಂ.ಎಸ್.ದಾಸ್ಯಾಳ ಹಾಗೂ ಚನ್ನಬಸವಣ್ಣನವರ ಕುರಿತು ವಿದ್ಯಾರ್ಥಿಗಳು ಸಿದ್ಧಪಡಿಸಿದ ಯೋಜನಾ ವರದಿಗಳು ಅಧ್ಯಯನಕ್ಕೆ ಯೋಗ್ಯವಾಗಿದ್ದು,ಅಲ್ಲಿಯ ಕೆಲ ಲೋಪದೋಷಗಳನ್ನು ತಿದ್ದುಪಡಿ ಮಾಡಲು ಸಲಹೆ ನೀಡಿದರು.

ರಂಗಭೂಮಿ ಚಿಂತಕ ಡಾ.ರಾಜು ಕಂಬಾರಮಾತನಾಡಿ, ಜನಪದಕಲೆಗಳ ಸಂಗಮವಾಗಿರುವ ಬಯಲಾಟಗಳು ಇಂದು ಸಂಪೂರ್ಣವಾಗಿ ನಶಿಸಿ ಹೋಗುತ್ತಿವೆ. ಅವುಗಳ ಪ್ರದರ್ಶನ ಕೂಡ ಕಡಿಮೆಯಾಗುತ್ತಿವೆ. ಮುಂದೆ ಶ್ರೀಕೃಷ್ಣ ಪಾರಿಜಾತ, ಸಂಗ್ಯಾ ಬಾಳ್ಯಾ ಕುರುಕ್ಷೇತ್ರದಂತಹ ಸಣ್ಣಾಟ, ದೊಡ್ಡಾಟ, ಬಯಲಾಟಗಳು ನೋಡಲು ಸಾಧ್ಯವಾಗುವುದಿಲ್ಲ. ಪದವಿ ಹಂತದಲ್ಲೇ ಜನಪದ ರಂಗಭೂಮಿಯ-ಬಯಲಾಟಗಳ ಕುರಿತು ಪದವಿ ಹಂತದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಿದರೆ ಮುಂದಿನ ದಿನಗಳಲ್ಲಿ ಯುವ ಸಮುದಾಯದಿಂದ ಬಯಲಾಟ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆಯಬಹುದಾಗಿದ್ದು, ನಮ್ಮ ಬಯಲಾಟಗಳನ್ನು ಈ ನಿಟ್ಟಿನಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಬಸಪ್ಪ.ಎಸ್.ಹೆಬ್ಬಾಳ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತು ಇಂದಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡಿಸಬೇಕಾಗಿದೆ. ಸಣ್ಣಾಟಗಳ ಕುರಿತು ವಿದ್ಯಾರ್ಥಿಗಳು ಯೋಜನಾ ಕಾರ್ಯ ವರದಿ ಸಿದ್ಧಪಡಿಸಿದ್ದು, ಹೆಮ್ಮೆಯ ವಿಷಯ ಎಂದರು. ಕನ್ನಡ ವಿಭಾಗದ ಡಾ.ಹಾಲಪ್ಪ ಮಡಿವಾಳ, ಪ್ರೊ. ಸುರೇಶ ಉಂದಗೆ, ಪ್ರೊ.ಶ್ರೀನಾಥ ಕಾಂಬಳೆ, ಯೋಜನಾ ವರದಿ ಸಿದ್ಧಪಡಿಸಿದ ವಿದ್ಯಾರ್ಥಿಗಳು ಇದ್ದರು. ಸಂಶೋಧನಾ ಮಾರ್ಗದರ್ಶಕ ಡಾ.ರಾಜು ಕಂಬಾರ ಸಣ್ಣಾಟಗಳ ಹಾಡು ಹಾಡಿ ವಿದ್ಯಾರ್ಥಿಗಳನ್ನು ತಣಿಸಿದರು. ಕನ್ನಡ ವಿಭಾಗದ ಪ್ರೊ. ಶಿವಕುಮಾರ ಕೋಡಿಹಾಳ ಸ್ವಾಗತಿಸಿ, ನಿರೂಪಿಸಿದರು. ಪ್ರೊ.ಶಿವಾನಂದ ಚಂಡಿಕೆ ವಂದಿಸಿದರು.

ರಸ್ತೆ ಕಾಮಗಾರಿಗೆ ಭೂಮಿ ಪೂಜೆ



◆**ಬೆಳಗಾವಿ:** ಗ್ರಾಮೀಣ ಕ್ಷೇತ್ರದ ರಣಕುಂಡೆ ಗ್ರಾಮದೊಳಗಿನ ರಸ್ತೆಗಳ ನಿರ್ಮಾಣದ ಕಾಮಗಾರಿಗೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಹಾಗೂ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಸೇರಿ ಬುಧವಾರ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿಶೇಷ ಪ್ರಯತ್ನದಿಂದ ಮಂಜೂರಾಗಿರುವ ಸುಮಾರು 71 ಲಕ್ಷ ರೂ. ಅನುದಾನದಲ್ಲಿ ರಸ್ತೆಗಳು ನಿರ್ಮಾಣಗೊಳ್ಳಲಿವೆ. ನಿಗದಿತ ಸಮಯದಲ್ಲಿ ಗುಣಮಟ್ಟದ ರಸ್ತೆ ನಿರ್ಮಿಸಿ, ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮೃಣಾಲ ಹೆಬ್ಬಾಳ್ಕರ್ ಗುತ್ತಿಗೆದಾರರಿಗೆ ಸೂಚಿಸಿದರು. ಗ್ರಾಮೀಣ ಕ್ಷೇತ್ರದಲ್ಲಿ ರಸ್ತೆ ಸೇರಿದಂತೆ ಮೂಲಭೂತ ಸೌಕರ್ಯಗಳ ಸುಧಾರಣೆಯ ಕ್ರಾಂತಿ ನಡೆಯುತ್ತಿದ್ದು, ಜನರ ನೆಮ್ಮದಿಯ ಜೀವನವೇ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಗುರಿಯಾಗಿದೆ ಎಂದರು. ಈ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಭರಮಣ್ಣ ಪಾಟೀಲ, ವಸಂತ ತಹಶೀಲ್ದಾರ್, ನೂರ್ ದಶಕೆಲ್ದಾರ್, ನಿಂಗಪ್ಪ ಪಾಟೀಲ, ಬಾಬಾಜಾನ್ ಸಯ್ಯದ್, ಸಿದ್ದರಾಮ ಪಾಟೀಲ, ಬಾಳೇಶ ಜಾಂಬೋಟಿ, ನಿಯಾಜ ಬುಖಾರಿ, ಗುಂಡು ಜಾಂಬೋಟಿ, ರಾಮಲಿಂಗ ಮೋರೆ, ರವಳು ಪಾಟೀಲ, ಯಲ್ಲಪ್ಪ ಕಾಂಬಳೆ, ಮಾರುತಿ ಕೊಳೆಕರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಯೋಗ ಮಹೋತ್ಸವ

◆**ಚಿಕ್ಕೋಡಿ:** ಪಟ್ಟಣದ ಕೆಎಲ್‌ಇ ಆಯುರ್ವೇದ ವೈದ್ಯಕೀಯ ಕಾಲೇಜು ಆವರಣದಲ್ಲಿ ಆಯುಷ್ ಸಚಿವಾಲಯ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಆರೋಗ್ಯ ಸಂಸ್ಥೆ ಸಹಯೋಗದಲ್ಲಿ ಬುಧವಾರ ಯೋಗ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತು.

ಚಿಕ್ಕೋಡಿಯ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮವನ್ನು ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರಿನ ಉಪಾಧ್ಯಕ್ಷ ಜಗದೀಶ ಕವಟಗಿಮಠ ಉದ್ಘಾಟಿಸಿದರು. ಆಯುರ್ವೇದ ಕಾಲೇಜ್ ಪ್ರಾಚಾರ್ಯ ಕಿರಣಕುಮಾರ ಮುತ್ನಾಳೆ ಅಧ್ಯಕ್ಷತೆ ವಹಿಸಿದರು. 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ವಿಶೇಷ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡರು. ಯೋಗ ವಿಭಾಗದ ಮುಖ್ಯಸ್ಥ ಸಂತೋಷ ಶಿವಣ್ಣವರ ಸೇರಿದಂತೆ ಯೋಗಪಟುಗಳು ವಿವಿಧ ಆಸನ, ಪ್ರಾಣಾಯಾಮ ಹೇಳಿಕೊಟ್ಟರು. ಯೋಗ ವಿಭಾಗದ ಮುಖ್ಯಸ್ಥ ಸಂತೋಷ ಶಿವಣ್ಣವರ, ನಿಂಗಪ್ಪ ಪೂಜಾರಿ, ಸುಧೀಂದ್ರ ಹೊನವಾಡ, ರವಿ ಮಡಿವಾಳರ ಇತರರು ಇದ್ದರು.



ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ: ಕಾಗವಾಡ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಂ. ಕ್ರೀಚ್ ಕಾರ್ಯಕರ್ತೆಯರ, ಅಂಗನವಾಡಿ ಕಂ. ಕ್ರೀಚ್ ಸಹಾಯಕಿಯರ ಹೊಸದಾಗಿ ಪ್ರಾರಂಭಿಸುವ ಅಂಗನವಾಡಿ ಕಂ. ಕ್ರೀಚ್ ಕೇಂದ್ರಗಳ ಹುದ್ದೆ ಗೌರವಧನದ ಆಧಾರದ ಮೇಲೆ ಗುರುತಿಸಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಿಂದ ಪಡೆದುಕೊಂಡು ಮೇ 25 ಸಂಜೆ 5.30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾಗವಾಡ ತಾಲೂಕು ದೂ: 08338-264977 ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕಾಗವಾಡ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಗಾಳಿ ಸಹಿತ ಧಾರಾಕಾರ ಮಳೆ

ಗೋಕಾಕ: ದಿನದಿಂದ ದಿನಕ್ಕೆ ಹೆಚ್ಚುತ್ತಿರು ತಾಪಮಾನಕ್ಕೆ ಕೆಂಡವಾದ ಗೋಕಾಕ ನಗರಕ್ಕೆ ಬುಧವಾರ ಸಂಜೆ ಸುಮಾರು 1ಗಂಟೆಗೂ ಹೆಚ್ಚು ಕಾಲ ಧಾರಾಕಾರ ಗಾಳಿ ಮಳೆ ಸುರಿದಿದೆ. ನಗರದ ಪ್ರವೇಶದಲ್ಲಿರುವ ಶಿವಾಜಿ ವೃತ್ತದಲ್ಲಿ



ಗಾಳಿ ಸಹಿತ ಧಾರಾಕಾರ ಮಳೆಗೆ ರಸ್ತೆ ಡಿವೈಡರಗೆ ಅಳವಡಿಸಿದ ಬೃಹತ್ ಜಾಹಿರಾತು ಫಲಕ ಮುರಿದು ಬಿದ್ದಿದೆ. ಜಾರಹಿರಾತು ಫಲಕ ಮುರಿದ ಪರಿಣಾಮ ಅದರ ಪಕ್ಕದಲ್ಲೆ ಇದ್ದ 33ಕೆವಿ ವಿದ್ಯುತ್ ಕಂಬಕ್ಕೆ ಹಾನಿಯುಂಟಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಗೋಕಾಕ ನಗರ ಅಷ್ಟೇಯಲ್ಲದೆ ತಾಲೂಕಿನ ವಿವಿಧೆಡೆ ಭರ್ಜರಿ ಮಳೆ ಸುರಿದಿದ್ದು, ಕೆಲವೆಡೆ ಮರಗಳು ಧರೆಗುರುಳಿವೆ. ಬಿಸಿಲಿನ ಬೇಗೆಯಿಂದ ತತ್ತರಿಸಿದ ಜನತೆಗೆ ಮಳೆ ತಂಪೆರೆದಿದೆ.

ಅಧ್ಯಕ್ಷರಾಗಿ ಚನ್ನಬಸಪ್ಪ ಆಯ್ಕೆ

ಬೈಲಹೊಂಗಲ: ನಗರದ ನ್ಯಾಯವಾದಿಗಳ ಸಂಘದ ಆಡಳಿತ ಮಂಡಳಿ ಚುನಾವಣೆ ಜರುಗಿದ್ದು, ಅಧ್ಯಕ್ಷರಾಗಿ ಚನ್ನಬಸಪ್ಪ ಹನಮಂತಪ್ಪ ಹೊಸಮನಿ, ಉಪಾಧ್ಯಕ್ಷರಾಗಿ ಶಿವಪ್ರಕಾಶ ವೀರಯ್ಯ ಹಿರೇಮಠ, ಪ್ರಧಾನ ಕಾರ್ಯದರ್ಶಿಯಾಗಿ ಈರಪ್ಪ ಬಸಪ್ಪ ಮೇಟಿ ಅವಿರೋಧವಾಗಿ ಆಯ್ಕೆಯಾದರು.





ಸಂಘದ ಎರಡು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ನಡೆದ ಅವಿರೋಧ ಆಯ್ಕೆ ಪ್ರಕ್ರೀಯೆಗೆ ನಾಮ ಪತ್ರ ಸಲ್ಲಿಸಿದ ನ್ಯಾಯವಾದಿಗಳು ತಮ್ಮ ನಾಮ ಪತ್ರ ಹಿಂಪಡೆದ ಹಿನ್ನಲೆಯಲ್ಲಿ ಖಜಾಂಚಿ ಸ್ಥಾನ ಹೊರತುಪಡಿಸಿ ಎಲ್ಲ ಹುದ್ದೆಗಳಿಗೆ ಅವಿರೋಧ ಆಯ್ಕೆ ಜರುಗಿತು. ಸಹ ಕಾರ್ಯದರ್ಶಿಯಾಗಿ ವಿಜಯಕುಮಾರ ಬಾಳಪ್ಪ ಅಲಸಂದಿ, ಆಡಳಿತ ಮಂಡಳಿಗೆ ಸಂಜೀವ ಫಕ್ಕೀರಪ್ಪ ಜುಮೇತ್ರಿ, ಸುರೇಶ ಬಾಬು ಬೋಳಶೆಟ್ಟಿ, ರುದ್ರಗೌಡ ಸೋಮನಗೌಡ ಗೌಡರ, ರವಿ ಶಿದರಾಯಿ ಸಿದ್ದನಗೌಡರ, ಸಂತೋಷ ಬಸವಣ್ಣೆಪ್ಪ ಲದ್ದಿಗಟ್ಟಿ, ಆಡಳಿತ ಮಂಡಳಿ (ಮಹಿಳಾ ಮೀಸಲು) ಸ್ಥಾನಕ್ಕೆ ಲಕ್ಷ್ಮೀ ಶಂಕರೆಪ್ಪ ಭಾಂವಿಹಾಳ, ಪೂಜಾ ಈಶ್ವರ ದುಮಾಲೆ, ಸೀಮಾ ಹುಸೇನಸಾಬ ಮಾಲದಾರ ಆಯ್ಕೆಯಾದರು. ಖಜಾಂಚಿ ಸ್ಥಾನಕ್ಕೆ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಪ್ರೇಮಾ ಬಸವಣ್ಣೆಪ್ಪ ಬಡಿಗೇರ ಆಯ್ಕೆಯಾದರು. ಮುಖ್ಯ ಚುನಾವಣಾಧಿಕಾರಿಯಾಗಿ ಎಸ್.ವಾಯ್.ಪಾಟೀಲ ಸಹಾಯಕರಾಗಿ ಎಸ್.ವಿ.ಸಿದಮನಿ, ದೀಪಕ ಸಂಗೊಳ್ಳಿ, ಎಂ.ವಿ.ಕಾಜಗಾರ, ಬಿ.ಬಿ.ದೋತರದ ಕಾರ್ಯನಿರ್ವಹಿಸಿದರು.

ಯುವಕ ಆತ್ಮಹತ್ಯೆ

ಸಂಕೇಶ್ವರ: ಸ್ಥಳೀಯ ಹನುಮಾನ ನಗರದ ಯುವಕ ಅಜಯ ತಮ್ಮಣ್ಣ ಬೋರಗಲ್ಲಿ (32) ಸಮೀಪದ ಕಮತನೂರ ಗ್ರಾಮದ ಹೊರವಲಯದ ಜಮೀನಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.



ಮೃತ ಯುವಕನಿಗೆ ಕಳೆದ 3-4 ವರ್ಷಗಳಿಂದ ಹೊಟ್ಟೆ ನೋವಿನ ಸಮಸ್ಯೆಯಿಂದ ಬಳಲುತ್ತಿದ್ದ, ಆಸ್ಪತ್ರೆಗಳಿಗೆ ಚಿಕಿತ್ಸೆ ಪಡೆದರು ಸಹ, ಹೊಟ್ಟೆ ನೋವು ಸರಿ ಹೋಗದ ಕಾರಣ ಯುವಕ ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದು ಬಂದಿದೆ. ಈ ಪ್ರಕರಣವು ಸಂಕೇಶ್ವರ ಪೋಲಿಸ ಠಾಣೆಯಲ್ಲಿ ದಾಖಲಾಗಿದೆ.



ಬೈಲಹೊಂಗಲ: ನಗರದ ಟಿಪ್ಪುಸುಲ್ತಾನ್ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದ ಹಣ ಅವಧಿ ಪೂರ್ಣಗೊಂಡಿದ್ದರೂ ಮರಳಿ ನೀಡದಿರುವುದನ್ನು ಖಂಡಿಸಿ ನೊಂದ ಕುಟುಂಬಸ್ಥರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಬುಧವಾರ ಉಪವಿಭಾಗಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕು ಮಟ್ಟದ ಜಾನಪದ ಜಾತ್ರೆ, ನಾಟಕ ಉತ್ಸವ

ಬೆಳಗಾವಿ: ಇಂತಹ ಸಂಸ್ಕೃತಿಕ ಕಾರ್ಯಕ್ರಮಗಳು ನಡೆಸುವುದರಿಂದ ಹಲವಾರು ಕಲಾವದರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಅವರ ಜೀವನಕ್ಕೂ ಒಂದು ದಾರಿಯಾದಂತೆ ಆಗುತ್ತದೆ ಎಂದು ಸಂಸ್ಥೆ ಅಧ್ಯಕ್ಷ ಶೆಟ್ಟೆಪ್ಪ ಕಾಡಪ್ಪ ಮಾದರ ಹೇಳಿದರು.

ಯರಗಟ್ಟಿ ಸ್ವಾಮಿ ವಿವೇಕಾನಂದ ಯುವ ಸಾಹಿತ್ಯ ಸಾಂಸ್ಕೃತಿಕ ಸಂಘ, ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ ಕೆ. ಚಂದರಗಿ ಗ್ರಾಮದಲ್ಲಿ ತಾಲೂಕಾ ಮಟ್ಟದ ಜಾನಪದ ಜಾತ್ರೆ ಮತ್ತು ನಾಟಕ ಉತ್ಸವದಲ್ಲಿ ಮಾತನಾಡಿದರು.

ಗ್ರಾಪಂ ಅಧ್ಯಕ್ಷ ಮಾರುತಿ ಕಳ್ಳಿಗುದ್ದಿ ಉದ್ಘಾಟಿಸಿದರು. ಉಮೇಶ ಮೊಶೆಪ್ಪ ವೆಂಕಟಾಪೂರ ಅಧ್ಯಕ್ಷತೆ ವಹಿಸಿದರು. ಜಾನಪದ ಸಂಗೀತ, ಸೋಬಾನ ಪದ, ಬಿಸುವಕಲ್ಲಿನ ಪದ, ಚರ್ಮವಾದ್ಯ, ಕೋಲಾಟ, ಜಾನಪದ ನೃತ್ಯ, ಕರಡಿ ಮಜಲು, ಡೊಳ್ಳಿನ ಪದಗಳು, ಹಂತಿ ಪದಗಳು, ಸಂಗ್ಯಾ-ಬಾಳ್ಯಾ ಸಣ್ಣಾಟ ಹಾಗೂ ಭಜನಾ ಪದಗಳು ಜರುಗಿದವು.

ರಮೇಶ ಬಸಪ್ಪ ಕತ್ತಿ, ಸಂತೋಷ ಅವಜಪ್ಪಗೋಳ, ಯಮನವ್ವ ಜೋಕಾನಟ್ಟಿ, ರುದ್ರಪ್ಪ ಮಾದರ, ಶಾಂತವ್ವ ದ್ಯಾಮಪ್ಪ ನಾಗನ್ನವರ, ರುದ್ರಪ್ಪ ಮಾದರ, ರೂಪಾ ಸುತಾರ, ಶ್ರೀಕಾಂತ ದುಂಡಯ್ಯಾ ಹಿರೇಮಠ, ಕೆಂಪಣ್ಣಾ ರಾಮಪ್ಪ ಕತ್ತಿ, ಲಕ್ಷ್ಮಣ ರಾಮಪ್ಪ ಅಕ್ಕಿಸಾಗರ ಉಪಸ್ಥಿತರಿದ್ದರು. ಯಮನವ್ವ ಜೋಕಾನಟ್ಟಿ ಸ್ವಾಗತಿಸಿದರು, ಅಕ್ಕಮಹಾದೇವಿ ಮಾದರ ವಂದಿಸಿದರು.



ಬೆಳಗಾವಿ: ಯರಗಟ್ಟಿ ಸ್ವಾಮಿ ವಿವೇಕಾನಂದ ಯುವ ಸಾಹಿತ್ಯ ಸಾಂಸ್ಕೃತಿಕ ಸಂಘ, ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ ಕೆ. ಚಂದರಗಿ ಗ್ರಾಮದಲ್ಲಿ ತಾಲೂಕಾ ಮಟ್ಟದ ಜಾನಪದ ಜಾತ್ರೆ ಮತ್ತು ನಾಟಕ ಉತ್ಸವ ಜರುಗಿತು.

ಸ್ವಚ್ಛತಾ ಅಭಿಯಾನ | ಜಿಪಂ ಉಪಕಾರ್ಯದರ್ಶಿ ಬಸವರಾಜ ಹೇಳಿಕೆ

ಬಯಲು ಶೌಚಮುಕ್ತ ಗ್ರಾಮಕ್ಕೆ ಸಂಕಲ್ಪ ಮಾಡಿ

ಬೆಳಗಾವಿ: ಗ್ರಾಮೀಣಪ್ರದೇಶದಲ್ಲಿಪ್ರತಿಯೊಬ್ಬ ನಿವಾಸಿ ಶೌಚಗೃಹ ಬಳಸುವ ಮೂಲಕ ಬಯಲು ಶೌಚಮುಕ್ತ ಗ್ರಾಮಗಳನ್ನಾಗಿಸಲು ಸಂಕಲ್ಪ ಮಾಡಬೇಕು ಎಂದು ಜಿಪಂ ಉಪಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ತಿಳಿಸಿದರು.

ಖಾನಾಪುರ ತಾಲೂಕಿನ ರಾಮಗುರವಾಡಿ, ನಿಟ್ಟೂರು, ನಾಗರಗಾಳಿ, ಬೀಜಗರ್ಣಿ, ನಂದಗಡ ಬೀಟಿ, ಹಲಸಿ, ಹಲಗಾ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಕರ ವಸೂಲಾತಿ, ಸ್ವಚ್ಛತಾ ಅಭಿಯಾನಕ್ಕೆ ಅವರು ಮಾತನಾಡಿ, ಹಳ್ಳಿಗಳ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರ, ರಾಜ್ಯ ಸರ್ಕಾರ ಜಾರಿಗೊಳಿಸಿರುವ ಸ್ವಚ್ಛ ಭಾರತ ಮಿಷನ್‌ನಂತಹ ಯೋಜನೆಗಳಿಗೆ ಸಾರ್ವಜನಿಕರು



ಕೈಜೋಡಿಸಬೇಕು. ಪ್ರತಿಯೊಬ್ಬರೂ ತಮ್ಮ ಪ್ರದೇಶಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಗ್ರಾಮೀಣ ಪ್ರದೇಶಗಳಿಗೆ ಸಕಲ ಸೌಕರ್ಯ ಕಲ್ಪಿಸುತ್ತಿದ್ದು, ಗ್ರಾಪಂಗಳಿಗೆ ತೆರಿಗೆ ಕಟ್ಟಬೇಕು ಎಂದರು.

ಖಾನಾಪುರ ತಾಪಂ ರಮೇಶ ಮೇತ್ರಿ, ಎಡಿ ರೂಪಾಲಿ ಬಡಕುಂದ್ರಿ, ವಿಜಯ ಖೋತ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಲೈಫ್ ಜಾಕೆಟ್ ವಿತರಣೆ

ರಾಯಬಾಗ: ಮೀನುಗಾರಿಕೆ ಇಲಾಖೆಯಿಂದ ಎಸ್‌ಸಿಪಿ, ಟಿಎಸ್‌ಪಿ ಗಿರಿಜನ ಉಪಯೋಜನೆಯಡಿ ಆಯ್ಕೆಯಾದ ಮೀನುಗಾರಿಕೆ ಮಾಡುವ ಫಲಾನುಭವಿಗಳಿಗೆ ಶಾಸಕ ಡಿ.ಎಂ.ಐಹೊಳೆ ಪಟ್ಟಣದ ಶಾಸಕರ ಗೃಹ ಕಚೇರಿಯಲ್ಲಿ ಹರಿಗೋಲ ಮತ್ತು ಮೀನುಗಾರಿಕೆ ಸಲಕರಣೆ ಹಾಗೂ ಲೈಫ್ ಜಾಕೆಟ್‌ಗಳನ್ನು ವಿತರಿಸಿದರು.



ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಎಂ.ಬಿ.ಪೂಜಾರಿ, ಸಹಾಯಕ ಸಂಜು ಬಂಡಿ, ಸದಾಶಿವ ಹಳಿಂಗಳಿ, ಬಸವರಾಜ ಡೋಣವಾಡೆ, ಅನೀಲ ಹಂಜೆ, ಮಹೇಶ ಕರಮಡಿ, ವಿನೋದ ಹೀರೆಮಠ, ಸಂಜೀವ ಮೈಶಾಳೆ, ಮಾರುತಿ ಮಾಂಗ, ಫಲಾನುಭವಿಗಳಾದ ಸವಿತಾ ಅಸೋದೆ, ಮಾಲಾ ಅಸೋದೆ, ಸುಶೀಲಾ ಬೇಡರ, ಕೀರ್ತಿ ಬೇಡರ ಇದ್ದರು.

ಸಿಬ್ಬಂದಿ ನೇಮಕಾತಿಗೆ ಶೀಘ್ರ ಕ್ರಮಕೈಗೊಳ್ಳಿ

ಗೋಕಾಕ: ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸಿಕೊಡಲು ಅಗತ್ಯವಿರುವ ಸಿಬ್ಬಂದಿಗಳನ್ನು ಈ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ಕೌಜಲಗಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇತ್ತೀಚಿಗೆ ಆರೋಗ್ಯ ಇಲಾಖಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ತಕ್ಷಣವೇ ಕ್ರಮವನ್ನು ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು.

ಕೌಜಲಗಿ, ಸುತ್ತಮುತ್ತಲಿನ ಹಳ್ಳಿಗಳಿಗೆ ಅನುಕೂಲವಾಗಲು ಸುಸಜ್ಜಿತ ಆಸ್ಪತ್ರೆ ನಿರ್ಮಿಸಲಾಗಿದೆ. ಆದರೆ, ಈ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯಿರುವುದರಿಂದ ರೋಗಿಳಿಗೆ ಗುಣಮಟ್ಟದ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೂಡಲೇ ಆರೋಗ್ಯಾಧಿಕಾರಿಗಳು ರೋಗಿಗಳಿಗೆ ಅಗತ್ಯವಿರುವ ಸೇವೆ ಕಲ್ಪಿಸಲು ಮುಂದಾಗಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೌಜಲಗಿ ಮತ್ತು ಸುತ್ತಲಿನ ಹಳ್ಳಿಗಳ ನಾಗರಿಕರಿಗೆ ಅನುಕೂಲವಾಗಲು ಇಲಾಖೆಯು ಮುಂದೆ ಬರಬೇಕು.ಆಸ್ಪತ್ರೆ ನಿರ್ಮಾಣವಾಗಿ 10 ತಿಂಗಳು ಗತಿಸಿದರೂ ಇದುವರೆಗೂ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿ ನೇಮಕಾತಿ ಆಗಿಲ್ಲ, ನಾಗರಿಕರಿಗೆ ಸೌಲಭ್ಯ ನೀಡದಿದ್ದಲ್ಲಿ ಆಸ್ಪತ್ರೆ ಮಾಡಿ ಏನೂ ಪ್ರಯೋಜನವೆಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಶೀಘ್ರವಾಗಿ ಖಾಲಿಯಿರುವ ಸ್ಥಾನಗಳಿಗೆ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಬೇಕು. ಗುತ್ತಿಗೆ ಆಧಾರದ ಮೇಲೆಯಾದರೂ ನೇಮಕಾತಿ ಮಾಡಿ. ಅತೀ ದೊಡ್ಡ ಆರೋಗ್ಯ ಕೇಂದ್ರವಿದ್ದರೂ ಒಂದಿಬ್ಬರು ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ. ಇದರಿಂದ ನಾಗರಿಕರಿಗೆ ತುಂಬ ತೊಂದರೆಯಾಗುತ್ತಿದೆ. ಹೆರಿಗೆ ಮತ್ತು ಪ್ರಸೂತಿ ತಜ್ಞರು ಹಾಗೂ ಚಿಕ್ಕ ಮಕ್ಕಳ ತಜ್ಞರು, ತಜ್ಞ ವೈದ್ಯರು, ಸ್ಟಾಫ್ ನರ್ಸ್, ಪ್ರಯೋಗಾಲಯ ತಂತ್ರಜ್ಞ ಸೇರಿದಂತೆ ಹಲವು ಸ್ಥಾನಗಳು ಖಾಲಿಯಿವೆ. ಆಯುಷ್ಯ ವೈದ್ಯರು ಸೇರಿದಂತೆ ಇಬ್ಬರು ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಸಮುದಾಯ ಆರೋಗ್ಯ ಕೇಂದ್ರದಂತಹ ದೊಡ್ಡ ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ನೇಮಕಕ್ಕೆ ಚುರುಕು ಮುಟ್ಟಿಸಲು ಅಧಿಕಾರಿಗಳು ಮುತುವರ್ಜಿ ವಹಿಸಲು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಆಸ್ಪತ್ರೆಯ ಸ್ಥಿತಿ-ಗತಿ ಕುರಿತು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ತಾಲೂಕು ಆರೋಗ್ಯಾಧಿಕಾರಿ ಡಾ. ಮುತ್ತಣ್ಣ ಕೊಪ್ಪದ ಸೇರಿದಂತೆ ಇಲಾಖೆಯ ಮತ್ತಿತರರು ಉಪಸ್ಥಿತರಿದ್ದರು.



ಠೇವಣಿ ಹಣ ಮರುಪಾವತಿ ವಿಳಂಬ: ಪ್ರತಿಭಟನೆ

ಬೈಲಹೊಂಗಲ: ನಗರದ ಟಿಪ್ಪುಸುಲ್ತಾನ್ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದ ಹಣ ಅವಧಿ ಪೂರ್ಣಗೊಂಡಿದ್ದರೂ ಮರಳಿ ನೀಡದಿರುವುದನ್ನು ಖಂಡಿಸಿ ನೊಂದ ಕುಟುಂಬಸ್ಥರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಬುಧವಾರ ಉಪವಿಭಾಗಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಇದಕ್ಕೂ ಮುನ್ನ ಇದೇ ವಿಚಾರವಾಗಿ ಎಸಿ ಕಚೇರಿ ಎದುರು ಅಹೋರಾತ್ರಿ ಧರಣಿ ನಡೆಸಲಾಗಿತ್ತು. ಆಗ ಉಪವಿಭಾಗಾಧಿಕಾರಿ ಪ್ರವೀಣ ಜೈನ್ ಅವರು ಸಮಸ್ಯೆಯನ್ನು ಶೀಘ್ರ ಪರಿಹರಿಸುವ ಭರವಸೆ ನೀಡಿದ್ದರಿಂದ ಹೋರಾಟ ತಾತ್ಕಾಲಿಕವಾಗಿ ಹಿಂಪಡೆಯಲಾಗಿತು. ಆದರೆ ಭರವಸೆ ಈಡೇರದ ಹಿನ್ನಲೆಯಲ್ಲಿ ಮತ್ತೆ ಪ್ರತಿಭಟನೆ ತೀವ್ರಗೊಂಡಿತು.

ಸಮಾಜ ಸೇವಕ ರಫೀಕ ಬಡೇಘರ ಹಾಗೂ ಕಿತ್ತೂರು ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ ಮಾತನಾಡಿ, ಅಧಿಕಾರಿಗಳು ನೀಡಿದ ಭರವಸೆ ಕೇವಲ ಮಾತಿನಲ್ಲೇ ಉಳಿದಿದೆ. ಸಮಸ್ಯೆ ಪರಿಹಾರಕ್ಕೆ ಯಾವುದೇ ಕ್ರಮ ಕೈಗೊಳ್ಳದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಆರೋಪಿಸಿದರು.

ನೊಂದ ಕುಟುಂಬದ ಸದಸ್ಯ ಇಮ್ತಿಯಾಜ ಸುತಗಟ್ಟಿ ಅವರ ಮನೆ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ಕುಟುಂಬದವರು ಜೀವ ಭಯದಲ್ಲೇ ದಿನ ಕಳೆಯುತ್ತಿದ್ದಾರೆ. ಮನೆ ನಿರ್ಮಾಣಕ್ಕಾಗಿ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದ ಹಣವನ್ನು ಹಿಂತಿರುಗಿಸಬೇಕೆಂದು ಹಲವು ಬಾರಿ ಮನವಿ ಮಾಡಿದರೂ ಸ್ಪಂದನೆ ಸಿಕ್ಕಿಲ್ಲ ಎಂದು ಕುಟುಂಬಸ್ಥರು ಅಳಲು ತೋಡಿಕೊಂಡರು.

ಜಿಲ್ಲಾ ರೈತ ಮುಖಂಡರಾದ ಅಪ್ಪಾಸಾಹೇಬ ಲಕ್ಕುಂಡಿ ಹಾಗೂ ಆನಂದಗೌಡ ಪಾಟೀಲ ಮಾತನಾಡಿ, ಸಂಕಷ್ಟದಲ್ಲಿರುವ ಕುಟುಂಬಕ್ಕೆ ನೆರವಾಗುವ ಬದಲು ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದರು.

ಸೊಸೈಟಿಯಿಂದ ಹಣ ವಾಪಸ್ಸು ನೀಡುವಂತೆ ನ್ಯಾಯಾಲಯ ಆದೇಶಿಸಿದ್ದರೂ ಅದನ್ನು ಪಾಲಿಸಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಪ್ರತಿಭಟನೆ ವೇಳೆ ಉಪವಿಭಾಗಾಧಿಕಾರಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಎಚ್.ಎನ್.ಶಿರಹಟ್ಟಿ ಹಾಗೂ ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಪ್ರತಿಭಟನಾಕಾರರ ಮನವಿ ಆಲಿಸಿ, ಸಮಸ್ಯೆ ಪರಿಹಾರಕ್ಕೆ ತಕ್ಷಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಹಿನ್ನಲೆಯಲ್ಲಿ ಪ್ರತಿಭಟನೆ ಹಿಂಪಡೆಯಲಾಯಿತು. ಆದರೂ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಅರೆಬೆತ್ತಲೆ ಪ್ರತಿಭಟನೆ ನಡೆಸುವುದಾಗಿ ಹೋರಾಟಗಾರರು ಎಚ್ಚರಿಕೆ ನೀಡಿದರು.

ಸುಭಾನಿ ನದಾಫ, ಮಾರುತಿ ಕೊಂಡೂರ, ರಫೀಕ ನಾಯಕ, ರಫೀಕ ದೇಶನೂರ, ಪುರಕಾನ ಶಿರಸಂಗಿ, ಸೋಯೆಬ ಸಂಗೊಳ್ಳಿ, ಅಭಿಷೇಕ ಕಲಾಲ, ಗೋಪಿ ಪವಾರ, ಫಾರೂಕ ಸುತಗಟ್ಟಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಉಚಿತ ಶಿಕ್ಷಣ, ಪುಸ್ತಕ, ಸಮವಸ್ತ್ರ ವಿತರಣೆ

ಮೂಡಲಗಿ: ಸಮೀಪದ ಕಲ್ಲೋಳಿ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಒಂದರಿಂದ ಹತ್ತನೇ ತರಗತಿಯವರೆಗೆ ಉಚಿತ ಶಿಕ್ಷಣ ನೀಡಲು ಪುಸ್ತಕ, ಸಮವಸ್ತ್ರ, ನೋಟಬುಕ್ ಸಾಕ್ಷರತೆಗೆ ಅವಶ್ಯ ಇರುವ ಸರ್ಕಾರ ನೀಡುವಂತೆ ಒಳ್ಳೆಯ ಗುಣಮಟ್ಟದ ಮೂಲ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿದ್ದೇವೆ ಎಂದು ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಮೇಶ ಬೆಳಕೂಡ ಹೇಳಿದರು.

ವಿದ್ಯಾರ್ಥಿಗಳಿಗೆ ನೋಟಬುಕ್ ಬ್ಯಾಗ್ ವಿತರಿಸಿ ಮಾತನಾಡಿದರು.

ಕಾರ್ಯದರ್ಶಿ ಡಾ.ಭೋಜರಾಜ ಬೆಳಕೂಡ ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ, ಪ್ರಥಮ ಡಿಗ್ರಿ ಪ್ರಥಮ ವರ್ಷದಲ್ಲಿ ಪ್ರವೇಶ ಪಡೆದುಕೊಂಡವರಿಗೆ ಒಂದು ಸಾವಿರ ರೂ. ಉಚಿತ ಗಿಫ್ಟ್, ಒಂದು ಕಾಲೇಜ್ ಬ್ಯಾಗ್ ಆರು ವಿಷಯಗಳಿಗೆ ಆರು ನೋಟ್‌ಬುಕ್ ಉಚಿತವಾಗಿ ನೀಡುವುದರೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವದಾಗಿ ಹೇಳಿದರು.



ಆಧುನಿಕ ತಂತ್ರಜ್ಞಾನ ಸ್ಮಾರ್ಟ್ ಬೋರ್ಡ್‌ನಲ್ಲಿ ಬೋಧನೆ ಮಾಡುವ ಮೂಲಕ ಸಾಫ್ಟ್‌ವೇರ್ ತಂತ್ರಜ್ಞಾನ ಮೂಲಕ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪಾಲಕರಿಗೆ ಪ್ರತಿ ದಿನ ಗೈರು, ಹಾಜರ್ ಮಾಹಿತಿ ನೀಡಿ, ಇಡೀ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಮಗ್ರ ಮಾಹಿತಿ ಕಳಿಸುವುದುಂಟು, ಈ ವ್ಯವಸ್ಥೆ ಸಾಮಾನ್ಯವಾಗಿ ಸುತ್ತಲಿನ ಗ್ರಾಮಗಳ ಜನರಿಗೆ ಅತೀ ಮೆಚ್ಚುಗೆ ಆಗಿದೆ ಎಂದು ಆಡಳಿತಾಧಿಕಾರಿ ಪ್ರಕಾಶ ಗರಗಟ್ಟಿ ತಿಳಿಸಿದಾರೆ.

ಧರ್ಮಗಳ ಸಾಮರಸ್ಯದ ಬಾಳ್ವೆ ಅಡಕ: ಪ್ರೊ.ಬಸವರಾಜ

ಧಾರವಾಡ: ಕನ್ನಡ ನಾಡಿನಲ್ಲಿ ಹಲವಾರು ಧರ್ಮಗಳು ಸಾಮರಸ್ಯದ ಬಾಳ್ವೆಯ ಅರಿವು ಮತ್ತು ಅನುಭಾವ ನೀಡಿದ್ದಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಬಸವರಾಜ ಕಲ್ಗುಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಪೀಠವು ಕವಿವಿ ಸುವರ್ಣ ಮಹೋತ್ಸವ ಭವನದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಎಂಬ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ಸಾಮರಸ್ಯ ಹೊಂದಿದ ಜೀವನ ನಡೆಸಲು ಅನೇಕ ಧರ್ಮಗಳು ತಾತ್ವಿಕ ಚಿಂತನೆ ಹೊಂದಿವೆ. ಜೈನ ಮತ್ತು ಬೌದ್ಧ ಧರ್ಮಗಳು ಕನ್ನಡ ನಾಡಿನಲ್ಲಿ ಸಮರಸದ ಬಾಳ್ವೆಯ ಅರಿವು ನೀಡಿದವು. ಅಲ್ಲಮ ಮತ್ತು ಮುಧುರ ಚೆನ್ನರ ಜ್ಞಾನ-ಅರಿವಿನ ಸಾಮರಸ್ಯ ವಿಶೇಷ ಸಂದೇಶ ನೀಡಿವೆ. ಕೇರಳದಲ್ಲಿ ನಾರಾಯಣ ಗುರು ಅವರು ಅದ್ವೈತ ಸಿದ್ಧಾಂತ ಬಳಸಿ ನಡೆಸಿದ ಆಂದೋಲನ ಮತ್ತು ಕ್ರಾಂತಿಯ ಅಮಾನವೀಯ ಕೃತ್ಯವನ್ನೂ ಸ್ಮರಿಸಿದರು.

ಕವಿವಿ ಪ್ರಭಾರ ಕುಲಸಚಿವ ಪ್ರೊ.ಎ.ಎಚ್.ಆಗಡಿ ಮಾತನಾಡಿ, 12ನೇ ಶತಮಾನದಲ್ಲಿ ವಚನಕಾರರು ತಮ್ಮ ವಚನಗಳ ಮೂಲಕ ಸತ್ಯ, ಕಾಯಕ ಸೇರಿದಂತೆ ಜೀವನದ ಸಂದೇಶ ಮೌಲ್ಯಗಳನ್ನು ಹಾಗೂ ಸೌಹಾರ್ದತೆ ಸಂದೇಶ ನೀಡಿದ್ದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್ ಮಾತನಾಡಿ, ಭಾರತದ



ವಿಭಿನ್ನ ಪರಂಪರೆಗಳು ಮನುಷ್ಯನಲ್ಲಿ ಅನುಭಾವ ಬೆಳೆಸುವಲ್ಲಿ ಸಹಕಾರಿಯಾಗಿವೆ. ಮನುಷ್ಯನಲ್ಲಿ ಸಹಬಾಳ್ವೆ ನಡೆಸಲು ಅನೇಕ ಮಹಾತ್ಮರು ವಚನಗಳ ದಾರಿದೀಪ ಎಂದರು.

ಪ್ರಾಧ್ಯಾಪಕಿ ಡಾ.ಜಯದೇವಿ ಜಂಗಮಶೆಟ್ಟಿ ವಚನ ಸಂಗೀತ ನಡೆಸಿಕೊಟ್ಟರು. ಡಾ. ಎ.ಎಂ.ಕಡಕೋಳ, ಡಾ.ನಿಜಲಿಂಗಪ್ಪ ಮಟ್ಟಿಹಾಳ, ಡಾ.ವೀರಣ್ಣ ರಾಜೂರ, ಡಾ. ಕೆ.ಆರ್.ದುರ್ಗಾದಾಸ, ಡಾ.ಈರಣ್ಣ ಇಂಜನಗೇರಿ, ಪ್ರೊ. ಶಿರಾಳಶೆಟ್ಟಿ ಅನೇಕರು ಪಾಲ್ಗೊಂಡಿದ್ದರು. ಅನುಭಾವದ ಪರಿಕಲ್ಪನೆ ಮತ್ತು ಪರಂಪರೆ ಕುರಿತು ಪ್ರೊ. ಬಸವರಾಜ ಕಲ್ಗುಡಿ, ದಾಸ ಸಾಹಿತ್ಯದಲ್ಲಿ ಅನುಭಾವ ಕುರಿತು ಡಾ.ಅವಿನಾಶ ಕವಿ ಹಾಗೂ ಪ್ರಾಧ್ಯಾಪಕಿ ಡಾ.ಗೀತಾ ವಸಂತ, ತಳಸಮುದಾಯದ ಸಾಹಿತ್ಯದಲ್ಲಿ ಅನುಭಾವ ಕುರಿತು ಪ್ರೊ. ವೆಂಕಟಗಿರಿ ದಳವಾಯಿ ವಿಷಯ ಮಂಡಿಸಿದರು.

ಗಾಂಧೀಜಿ ತತ್ವ ಜೀವನದಲ್ಲಿ ಅನುಸರಿಸಿ: ಬೇಗಂ

ಚನ್ನಮ್ಮನ ಕಿತ್ತೂರು: ಗಾಂಧೀಜಿಯ ತತ್ವಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅನುಕರಣೆ ಮಾಡಿಕೊಳ್ಳುವುದು ಇಂದಿನ ಸಮಾಜದ ಬಹುಮುಖ್ಯ ಅವಶ್ಯಕತೆಯಾಗಿದೆ ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸಂಚಾಲಕಿ ಡಾ. ಅಭೀದಾ ಬೇಗಂ ಹೇಳಿದರು.

ಕಿನಾವಿವ ಸಂಘದ ಕಲಾ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದ ಕನ್ನಡ ವಿಭಾಗ, ರಾಷ್ಟ್ರೀಯ ಸೇವಾ ಯೋಜನೆ ಕೋಶ, ಬೆಂಗಳೂರಿನ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರಿನ ಯುವಜನ ಸೇವಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಇಂದಿನ ಯುವಜನತೆಗೆ ಗಾಂಧೀ ವಿಚಾರಧಾರೆಗಳು ಎಂಬ ವಿಷಯದ ಕುರಿತು ಒಂದು ದಿನದ ರಾಜ್ಯ ಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ ಅವರ ತತ್ವಗಳನ್ನು ನಮ್ಮ ದೈನಂದಿನ ಜೀವನದಲ್ಲಿ ನಾವು ಅಳವಡಿಕೊಂಡು ನಮ್ಮನ್ನು ನಾವು ಸುಧಾರಿಸಿಕೊಂಡರೆ ಈಡೀ ಸಮಾಜವನ್ನೇ ಸುಧಾರಿಸಲು ಸಾಧ್ಯ. ಸಮಯ ಪಾಲನೆ, ಕರ್ತವ್ಯನಿಷ್ಠೆ, ಯಾರಿಗೂ ಅನ್ಯಾಯವಾಗದೇ ನಾವು ನಡೆದಕೊಳ್ಳಬೇಕು ಎಂದು ಹೇಳಿದರು.

ಕಿನಾವಿವ ಸಂಘದ ಹಿರಿಯ ನಿರ್ದೇಶಕ ಜೆ. ವ್ಹಿ. ವಸ್ತ್ರದ ಮಾತನಾಡಿ ಗಾಂಧೀ ಎಂಬುದು ಇಡೀ ಪ್ರಪಂಚಕ್ಕೆ ಒಂದು ಆದರ್ಶ ಹಾಗೂ ಪ್ರೇರಣಾದಾಯಕ ಶಕ್ತಿಯಾಗಿದೆ. ಗಾಂಧೀಜೀಯವರ ಬದುಕು ನಮಗೆಲ್ಲ ಪ್ರೇರಣಾದಾಯಕವಾಗಿದೆ ಎಂದು ಹೇಳಿದರು.

ಡಾ. ಹೊನ್ನರಾಜು ಪ್ರಾಸ್ತಾವಿಕ ಮಾತನಾಡಿದರು. ಕಿನಾವಿವ ಸಂಘದ ಚೇರಮನ್ನರಾದ ಶಂಕರ ಎಸ್ ವಳಸಂಗ, ವಾಯಿಸ್-ಚೇರಮನ್ನ ಜಗದೀಶ ಬಿ ಘಟ್ನಟ್ಟಿ ಐಕ್ಯೂಎಸಿ ಕೋ-ಆರ್ಡಿನೇಟರ್



ರವಿ ಹವಿನಾಳೆ ವೇದಿಕೆಯಲ್ಲಿದ್ದರು.

ಪ್ರಾಚಾರ್ಯ ನಾಗರಾಜ ಎಚ್.ಕೆ ಸ್ವಾಗತಿಸಿದರು, ರಮ್ಯಾ ನಾಗಲಾಪೂರ ಮತ್ತು ಸಂಗಡಿಗರು ಗಾಂಧೀ ಭಜನೆ, ಪಿ.ಬಿ.ಹೊನ್ನಪ್ಪನವರ ವಂದಿಸಿದರು, ಸಿ.ಎಮ್.ಗರಗದ ನಿರೂಪಿಸಿದರು.

ನಂತರ ಎರಡನೆ ಗೋಷ್ಠಿಯಲ್ಲಿ ತಾಂತ್ರೀಕ ಗೋಷ್ಠಿ ನಡೆಯಿತು ಗೋಷ್ಠಿಯಲ್ಲಿ ಡಾ. ಶಿವಾನಂದ ಶೆಟ್ಟರ, ಡಾ. ಸಂಚಾಲಕಿ ಅಭೀದಾ ಬೇಗಂ, ಪ್ರೋ ಎ ಕೆ ಕರೆಪ್ಪನವರ ಮಾತನಾಡಿದರು. ಮೂರನೆಯ ಗೋಷ್ಠಿಯಲ್ಲಿ ವಿವಿಧ ಮಹಾವಿದ್ಯಾಲಯಗಳಿಂದ ಭಾಗವಹಿಸಿದ್ದ ಸ್ವಯಂ ಸೇವಕರಿಗೆ ರಸಪ್ರಶ್ನೆ ವಿಜೇತರಾಗಿ ಪ್ರಥಮ ಸ್ಥಾನ ಪಡೆದ ಗುರುಪ್ರಸಾದ ಕೋರಿ, ಅಲೋಕ ಪಾಟೀಲ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡ ಬಸವರಾಜು ಹಿರೇಮಠ, ಮತ್ತು ಉಮೇಶ ಚಬ್ಬಿ ತಂಡಗಳಿಗೆ ನಗದು ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಪ್ರಾಚಾರ್ಯ ನಾಗರಾಜ ಎಚ್ ಕೆ ಮಾತನಾಡಿದರು, ಗೀತಾ ಲಂಗೋಟಿ ನಿರೂಪಿಸಿದರು, ಡಾ. ಸಂಗೀತಾ ತೋಲಗಿ ವಂದಿಸಿದರು.

ರಕ್ತದಾನ ಅರಿವು ಮೂಡಿಸಿ

ಮೂಡಲಗಿ: ಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಪ್ರಸ್ತುತ ದಿನಗಳಲ್ಲಿ ಯುವಕರಿಗೆ ಅದರಲ್ಲೂ ಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಗೆ ಅಪಘಾತ ಸುರಕ್ಷಿತ, ರಕ್ತದಾನ ಅರಿವು ಮೂಡಿಸುವದು ಅವಶ್ಯಕತೆ ಇದೆ ಎಂದು ಬಸವೇಶ್ವರ ಶಿಕ್ಷಣ ಸಂಸ್ಥೆ ಆಡಳಿತ ಅಧಿಕಾರಿ ಪ್ರಕಾಶ ಗರಗಟ್ಟಿ ಹೇಳಿದರು.

ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ರೆಡ್ ಕ್ರಾಸ್‌ನಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಚಾರ್ಯ ಡಾ.ಸಂಗಮೇಶ ಹೂಗಾರ ರೆಡ್ ಕ್ರಾಸ್ ಮಹತ್ವದ ಬಗ್ಗೆ ಮಾಹಿತಿ ನೀಡಿದರು ಪಪೂ ಮಹಾವಿದ್ಯಾಲಯದ ಪ್ರಾಚಾರ್ಯ ವಿ.ಜಿ.ಕಟ್ಟಿಮನಿ, ಉಪನ್ಯಾಸಕಿ ವಿದ್ಯಾ ಬಡಿಗೇರ್, ಉಪನ್ಯಾಸಕಿ ಲಕ್ಷ್ಮೀ ಬೂದಿಹಾಳ ಉಪಸ್ಥಿತರಿದ್ದರು.

ಉಪನ್ಯಾಸಕ ಲಕ್ಕಪ್ಪ ಕುಮರೇಶಿಯವರು ಸ್ವಾಗತಿಸಿದರು. ವಿದ್ಯಾರ್ಥಿನಿ ಸವಿತಾ ಕೊಡ್ಲಿ ನಿರೂಪಿಸಿದರು. ಗುರುಖಡಕ ಭಾವೀಸರ್ವ ವಂದಿಸಿದರು.



ರಸ್ತೆ ಕಾಮಗಾರಿಗೆ ಪಾಟೀಲ ಚಾಲನೆ



ಚಿಕ್ಕೋಡಿ: ತಾಲೂಕಿನ ಮನೂಚಿವಾಡಿ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಬಿಡುಗೆಯಾದ 1 ಕೋಟಿ ರೂ. ಮೊತ್ತದಲ್ಲಿ ರಸ್ತೆ ಕಾಮಗಾರಿಗೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸತೀಶ ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಸತೀಶ ಪಾಟೀಲ ಮಾತನಾಡಿ, ಗಣೇಶ ಹುಕ್ಕೇರಿ ಹಾಗೂ ಪ್ರಕಾಶ ಹುಕ್ಕೇರಿ ಅವರ ಜನಪ್ರಿಯ ಕೆಲಸಗಳು ಕ್ಷೇತ್ರದ ಜನರ ಮನ ಗೆದ್ದಿವೆ. ಇಂತಹ ಕ್ರಿಯಾಶೀಲ ಜನಪ್ರತಿನಿಧಿಗಳ ಬೆಂಬಲದಿಂದ ಗ್ರಾಮ ಸರ್ವಾಂಗೀಣ ಅಭಿವೃದ್ಧಿಯಾಗುವುದು ಸಾಧ್ಯವಿದೆ ಎಂದು ಹೇಳಿದರು.

ಖಡಕಲಾಟದ ಅಪ್ಪನವರ ಮಠದ ಶಿವಬಸವ ಸ್ವಾಮೀಜಿ ಸಾನ್ನಿಧ್ಯವಹಿಸಿ ಮಾತನಾಡಿ, ರಸ್ತೆಗಳು ಗ್ರಾಮದ ಅಭಿವೃದ್ಧಿಯ ನಾಡಿಮಿಡಿತವಿದ್ದಂತೆ, ರೈತರು ತಮ್ಮ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ಉತ್ತಮ ರಸ್ತೆಗಳ ಅವಶ್ಯಕತೆ ಇದೆ. ರಸ್ತೆ ಕಾಮಗಾರಿ ಗುಣಮಟ್ಟದಿಂದ ಕೂಡಿ ಸಾರ್ವಜನಿಕರಿಗೆ ಶೀಘ್ರ ಲಭ್ಯವಾಗುವಂತಾಗಲಿ ಎಂದರು.

ಸ್ಥಳೀಯ ಮುಖಂಡರಾದ ಸತೀಶ ಪಾಟೀಲ, ಧರ್ಮಾ ಖೋತ, ಶರದ ಖೋತ, ಕಿರಣ ಖೋತ, ರಾಹುಲ ಜಾಧವ, ಪ್ರವೀಣ ಪಾಟೀಲ, ದಿಲೀಪ ಪಾಟೀಲ, ಗೌತಮ ಕಾವಡಕರ, ವಿಜಯ ಖೋತ ಇತರರು ಇದ್ದರು.

ಅರ್ಜಿ ಆಹ್ವಾನ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ 1ನೇ ತರಗತಿಗೆ ಪ್ರವೇಶ ಕೋರಿ ಅರ್ಜಿ ಆಹ್ವಾನಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ರಾಮತೀರ್ಥ ನಗರ ಬೆಳಗಾವಿ ಹಾಗೂ ಡಾ.ಬಿ ಆರ್ ಅಂಬೇಡ್ಕರ ವಸತಿ ಶಾಲೆ ನೆಹರು ನಗರ ಬೆಳಗಾವಿ ನೀಲಯಗಳಲ್ಲಿ ಖಾಲಿ ಇರುವ 1ನೇ ತರಗತಿಯ ಸ್ಥಳಗಳಿಗೆ ಮಾತ್ರ ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡಿ ಪ್ರವೇಶ ನೀಡಲಾಗುವುದು.

ಆಸಕ್ತರು ಅರ್ಜಿ ನಿಗಧಿತ ನಮೂನೆಯಲ್ಲಿ ಪಡೆದು ಮೇ 25 ರೊಳಗಾಗಿ ಸಹಾಯಕ ನಿರ್ದೇಶಕರು (ಗ್ರೇಡ-1) ಸಮಾಜ ಕಲ್ಯಾಣ ಇಲಾಖೆ ನೆಹರು ನಗರ ಬೆಳಗಾವಿ ಇವರಿಗೆ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ-1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರು ಸುದ್ದಿ

ಬನಹಟ್ಟಿ ವೃತ್ತ ನಿರೀಕ್ಷಕರಾಗಿ ರಾಜು ಪಾಟೀಲ

ರಬಕವಿ-ಬನಹಟ್ಟಿ: ರಬಕವಿ-ಬನಹಟ್ಟಿ, ಮಹಾಲಿಂಗಪೂರ, ತೇರದಾಳ ವಲಯ ಪೊಲೀಸ್ ಅಧಿಕಾರಿಯಾಗಿ ರಾಜು ಪಾಟೀಲ ನೇಮಕಗೊಂಡಿದ್ದಾರೆ. ಕಳೆದ 2017ರಲ್ಲಿ ಬನಹಟ್ಟಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದರು. ಇದೀಗ ಇದೇ ಠಾಣೆಗೆ ಸಿಪಿಐ ಆಗಿ ಸೇವೆ ಸಲ್ಲಿಸುತ್ತಿರುವದು ವಿಶೇಷ.

ಇಂದು ಅಮರೇಶ್ವರ ಶ್ರೀಗಳ ಪುಣ್ಯಸ್ಮರಣೆ

ಗುಳೇದಗುಡ್ಡ: ಸಮೀಪದ ಅಮರೇಶ್ವರ ಬೃಹನ್ಮಠದ ಅಮರೇಶ್ವರ ಜನಕಲ್ಯಾಣ ಪ್ರತಿಷ್ಠಾನದ ವತಿಯಿಂದ ಮೇ 14ರಂದು ಅಮರೇಶ್ವರ ಮಹಾಸ್ವಾಮಿಗಳು 57ನೇ ಪುಣ್ಯಸ್ಮರಣೆ, ಬಸಯ್ಯ ಸ್ವಾಮೀಗಳು, ಲಕ್ಷ್ಮೀಬಾಯಿ ಅಮ್ಮನವರ ಸಂಸ್ಮರಣೋತ್ಸವ ಕಾರ್ಯಕ್ರಮ, ಅಮರ ಆದರ್ಶ ದಂಪತಿ ಸತ್ಕಾರ, ಅಮರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಅಮರೇಶ್ವರ ಶ್ರೀಗಳ 57ನೇ ಪುಣ್ಯಸ್ಮರಣೆ, ಬಸಯ್ಯ ಸ್ವಾಮೀಗಳು, ಲಕ್ಷ್ಮೀಬಾಯಿ ಅಮ್ಮನವರ ಸಂಸ್ಮರಣೋತ್ಸವ ಕಾರ್ಯಕ್ರಮ ನಡೆಯಲಿದೆ. ಮೆ 14ರಂದು ಬೆಳಿಗ್ಗೆ 6ಗಂಟೆಗೆ ಅಮರೇಶ್ವರ ಮಹಾಸ್ವಾಮಿಗಳ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚಣೆ, ಮಹಾಮಂಗಳಾರತಿ ನಡೆಯಲಿದ್ದು, ವಿನಯಕುಮಾರ ಶಾಸ್ತ್ರೀ, ಕಾಶಿನಾಥ ಶಾಸ್ತ್ರೀಗಳ, ವಿಜಯಕುಮಾರ ಶಾಸ್ತ್ರೀಗಳು, ಗುರುಸಿದ್ದಯ್ಯ ಹಿರೇಮಠ, ಮಲ್ಲಿಕಾರ್ಜುನ ಶಾಸ್ತ್ರೀಗಳು ಪೌರೋಹಿತ್ಯ ವಹಿಸುವರು. ಬೆಳಗ್ಗೆ 8 ಗಂಟೆಗೆ ಪೀಠಾಧ್ಯಕ್ಷ ಡಾ.ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳಿಂದ ವಿಶ್ವ ಶಾಂತಿಗಾಗಿ ಮಹಾಮೃತ್ಯುಂಜಯ ಹೋಮ ನಡೆಯಲಿದೆ. ನಂತರ ಅಮರ ಆದರ್ಶ ದಂಪತಿಗಳಿಗೆ ಸತ್ಕಾರ ಸಮಾರಂಭ, ಬೀಳಗಿಯ ಆಶುಕವಿ ಸಿದ್ದಪ್ಪ ಬಿದರಿ ಅವರಿಗೆ ಅಮರಶ್ವರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾಶಿ ಪೀಠದ ಜ. ಡಾ.ಚಂದ್ರಶೇಖರ ಶೀವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ ವಹಿಸುವರು. ಕೆರೂರು ಚರಂತಿಮಠದ ಡಾ.ಶಿವಕುಮಾರ ಶ್ರೀಗಳು ಅಧ್ಯಕ್ಷತೆ ವಹಿಸುವರು. ಹೊಳೆಹುಚ್ಚೇಶ್ವರ ಶ್ರೀಗಳು, ಒಪ್ಪತ್ತೇಶ್ವರ ಶ್ರೀಗಳು, ಕಾಶಿನಾಥ ಶ್ರೀಗಳು,ಗಂಗಾವತಿಯ ಕೊಟ್ಟೂರು ಶ್ರೀಗಳು, ಟೀಕಿನಮಠದ ಮಲ್ಲಿಕಾರ್ಜುನ ಶ್ರೀಗಳು, ವರರುದ್ರಮುನಿ ಶ್ರೀಗಳು, ಗುರುಸಿದ್ದ ಪಟ್ಟದಾರ್ಯ ಶ್ರೀಗಳು, ದಿಗಂದರೇಶ್ವರ ಶ್ರೀಗಳು, ಅಯ್ಯಪ್ಪಯ್ಯ ಸ್ವಾಮಿಗಳು ಷಡಕ್ಷರಿಮಠ ಸಮ್ಮುಖ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಮುಖಂಡರಾದ ಹೊಳಬಸು ಶೆಟ್ಟರ, ಸಂಜಯ ಬರಗುಂಡಿ, ಮಹಾಂತೇಶ ಮಮದಾಪೂರ, ಎಂ.ಬಿ.ಹಂಗರಗಿ, ಕುಮಾರಗೌಡ ಜನಾಲಿ, ಸಂಜೀವ ಕಾರಕೂನ ಸೇರಿದಂತೆ ಇತರರು ಆಗಮಿಸುವರು ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಬಸಟೆಪ್ಪಾ ಮುರನಾಳ

ಗುಳೇದಗುಡ್ಡ: ಪಟ್ಟಣದ ಕುರುಹಿನಶೆಟ್ಟಿ ಸಮಾಜದ ಹಿರಿಯರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಸಟೆಪ್ಪಾ ಶಿವಯೋಗೆಪ್ಪಾ ಮುರನಾಳ (84) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗ ಇದ್ದಾರೆ.

ಶಿವಾನಂದ ಹೆಗಡಿ

ಜಮಖಂಡಿ: ನಗರದ ಕೋಷ್ಟಿ ಗಲ್ಲಿಯ ಬನಶಂಕರಿ ದೇವಸ್ಥಾನದ ಹತ್ತಿರದ ನಿವಾಸಿ ಸ್ನೇಹಜೀವಿ ಶಿವಾನಂದ ಬಸಪ್ಪ ಹೆಗಡಿ(54) ನಿಧನರಾದಾರು. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಬೀಳಗಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ-1ರಲ್ಲಿ ತಾಲೂಕು ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ ಆದಾಪುರ, ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವಾಜಿ ನಾಯಕ, ತಾಲೂಕು ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಜಗದೀಶ ಖೋತ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಎ.ಎತ್ತಿನಮನಿ ಅವರನ್ನು ಜಿಲ್ಲಾ ಪಂಚಾಯತಿ ಸಿಇಒ ಶಶಿಧರ ಕುರೇರ ಸನ್ಮಾನಿಸಿದರು. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಅಜಿತ ಮನ್ನಿಕೇರಿ ಅಧಿಕಾರಿಗಳು ಉಪಸ್ಥಿತರಿದ್ದರು.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಜಮಖಂಡಿ: 2026-27ನೇ ಸಾಲಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಶೇ.75%ರಷ್ಟು ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇ 25ರಲ್ಲಿ ಖಾಲಿ ಇರುವ ಸ್ಥಳಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ಪೂರ್ವ 5ರಿಂದ 10ನೇ ತರಗತಿ ವರೆಗೆ, ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಸತಿ ನಿಲಯಗಳಲ್ಲಿ ಖಾಲಿ ಇರುವ ಸ್ಥಳಗಳಿಗೆ (ಮೆಟ್ರಿಕ್ ಪೂರ್ವ 5 ರಿಂದ 10ನೇ ತರಗತಿಯ ಪ.ಜಾ, ಪ.ಪಂ ರೂ. 2.50 ಲಕ್ಷ ಆದಾಯ ಮಿತಿ ಹಾಗೂ ಪ್ರವರ್ಗ-1 ರೂ. 1.00 ಲಕ್ಷ, ಪ್ರವರ್ಗ-2ಎ, 2ಬಿ, 3ಎ, 3ಬಿ ರೂ. 44500 ಆದಾಯ ಮಿತಿ ಮತ್ತು ಮೆಟ್ರಿಕ್ ನಂತರದ ಪ.ಜಾ/ಪ.ಪಂ ರೂ. 2.50 ಲಕ್ಷ ಹಾಗೂ ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ರೂ. 1 ಲಕ್ಷ ಆದಾಯ ಮಿತಿ ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಕಾರಣ ಇಲಾಖೆಯ ವೆಬ್‌ಸೈಟ್ ನಂಬರ್ https://swdhmis.karnataka.gov.in ಗೆ ಭೇಟಿ ನೀಡಿ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ (2026-27) ಲಿಂಕ್‌ನ್ನು ಕ್ಲಿಕ್ ಮಾಡಿ ವಿದ್ಯಾರ್ಥಿಯ ಖಾತೆಯನ್ನು ಸೃಜಿಸಿಕೊಂಡು ನಂತರ ವಿದ್ಯಾರ್ಥಿ ಲಾಗಿನ್‌ನಲ್ಲಿ ಅರ್ಜಿ ಸಲ್ಲಿಸುವುದು. ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಗೆ ಅರ್ಜಿ ಸಲ್ಲಿಸಲು ಜೂ.30ರಂದು ಕೊನೆಯ ದಿನವಾಗಿದೆ. ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಅರ್ಜಿ ಸಲ್ಲಿಸಲು ಜುಲೈ 31ರಂದು ಕೊನೆಯ ದಿನವಾಗಿದೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಸ್ವೀಕೃತಿ ಪ್ರತಿಯೊಂದಿಗೆ ಈ ಕೆಳಕಂಡ ಅಗತ್ಯ ದಾಖಲಾತಿಗಳನ್ನು ದೃಢೀಕರಿಸಿ ಲಗತ್ತಿಸಿ ನೇರವಾಗಿ ಪ್ರವೇಶ ಬಯಸುವ ವಸತಿ ನಿಲಯಗಳಿಗೆ ಸಲ್ಲಿಸಲು ಕೋರಲಾಗಿದೆ.

ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮದಲ್ಲಿ ತಾಯಮ್ಮ ದೇವಿಯ 10ನೇ ವರ್ಷದ ಜಾತ್ರೆಯ ನಿಮಿತ್ತ ಬುಧವಾರ ಸಂಜೆ ಗ್ರಾಮದೇವತೆ ತಾಯಮ್ಮದೇವಿ ರಥೋತ್ಸವ ಅದ್ದೂರಿಯಾಗಿ ಜರುಗಿತು. ರಥೋತ್ಸವದಲ್ಲಿ ಪಕದೂರುಗಳಿಂದ ಸಾವಿರಾರು ಭಕ್ತರು ಪಾಲ್ಗೊಂಡು ಭಂಡಾರ ಎರಚುತ್ತಾ ಬೆಂಡೂ ಬೆತ್ತಾಸ ತೂರುತ್ತಾ ಸಂಭ್ರಮದಿಂದ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.



ಸಂತ್ರಸ್ತರಿಗೆ ಪರಿಹಾರ ವಿತರಣೆ: ಜೆಟಿಪಾ

ಬೀಳಗಿ: ಸಿಎಂ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗಲಿರುವ ನೀರಾವರಿ ಭೂಮಿಗೆ 40, ಒಣ ಬೇಸಾಯ ಭೂಮಿಗೆ 30 ಲಕ್ಷ ಎಕರೆಗೆ ಪರಿಹಾರ ನಿಗದಿ ಮಾಡಿ ಸಂತ್ರಸ್ತರಿಗೆ ಪರಿಹಾರ ವಿತರಿಸಲಾಗುತ್ತಿದೆ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು, ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಟಕ್ಕಳಕಿ ತೋಟದ ವಸ್ತಿ ಗ್ರಾಮದಲ್ಲಿ ಜಿಲ್ಲಾ ಪಂಚಾಯತ ಬಾಗಲಕೋಟೆ, ಪಂಚಾಯತ ರಾಜ್ ಇಂಜನೀಯರಿಂಗ್ ಉಪ ವಿಭಾಗ ಬೀಳಗಿ ವತಿಯಿಂದ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಸಿ.ಎಂ.ಐ.ಡಿ.ಪಿ) 50 ಲಕ್ಷ ರೂ. ಅನುದಾನದಲ್ಲಿ ರಾಷ್ಟ್ರೀಯ ಹೆದ್ದಾರಿ-218ರಿಂದ ಟಕ್ಕಳಕಿ ತೋಟದ ವಸ್ತಿ ಕೂಡುವ ರಸ್ತೆ ಡಾಂಬರೀಕರಣ ಕಾಮಗಾರಿ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ರಸ್ತೆ ಡಾಂಬರೀಕರಣ ಕಾಮಗಾರಿಯು ಯೋಜನಾ ವರದಿ ಪ್ರಕಾರ ಗುಣಮಟ್ಟದ ಕೆಲಸವಾಗಬೇಕು. ಕಾಲಮಿತಿಯಲ್ಲಿ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ಬೇಸಿಗೆ ಬಿಸಿಲು ಹೆಚ್ಚಿದ್ದು, ಮತಕ್ಷೇತ್ರದ ಯಾವ ಹಳ್ಳಿಗೂ ಕುಡಿಯುವ ನೀರಿನ ತೊಂದರೆಯಾಗದಂತೆ



ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟು ನಿಟ್ಟಿನ ಆದೇಶ ನೀಡಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದರೆ ಕೂಡಲೆ ಗಮನಕ್ಕೆ ತರಬೇಕೆಂದು ಹೇಳಿದರು.

ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ತಾಲೂಕಾಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ಬಸಯ್ಯಸ್ವಾಮಿ ಹಿರೇಮಠ, ತಾಪಂ ಮಾಜಿ ಅಧ್ಯಕ್ಷ ಶ್ರೀಶೈಲ ಸೂಳಿಕೇರಿ, ಜಿಪಂ ಮಾಜಿ ಸದಸ್ಯ ಹನಮಂತ ಕಾಖಂಡಕಿ, ಜಿಪಂ ಮಾಜಿ ಅಧ್ಯಕ್ಷ ಯಮುನಪ್ಪ ರೊಳ್ಳಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಹಾದೇವಪ್ಪ ಸೂಳಿಕೇರಿ, ಕೊರ್ತಿ ಗ್ರಾಪಂ ಮಾಜಿ ಅಧ್ಯಕ್ಷ ಶಂಕ್ರೆಪ್ಪ ಬಾಲಗೊಂಡ, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸದಸ್ಯ ಹನಮಂತ ಸೂಳಿಕೇರಿ, ಪರುತಪ್ಪ ಉಗ್ರಾಣ, ಸಿದ್ದು ಸಾರಾವಾರಿ, ಬಸವರಾಜ ಹಳ್ಳದಮನಿ, ಭೀಮಪ್ಪ ತೋಳಮಟ್ಟಿ, ಬಸಪ್ಪ ಬಾಲಗೊಂಡ, ಶಿವಪುತ್ರಪ್ಪ ಗಾಣಗೇರ, ಚಂದ್ರಶೇಖರ ಚೋಪ್ಡಾ, ಮುಂಡಲೀಕ ಮಾದರ, ಈಶ್ವರ ಮಾದರ, ಸಂಗಪ್ಪ ಗುಳೇದ, ನಿಂಗಪ್ಪ ಮನಗೂಳಿ, ಪಂಚಾಯತ ರಾಜ್ ಇಂಜನೀಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಗೋವಿಂದಪ್ಪ ಅಳ್ಳಿಕಟ್ಟಿ ಮತ್ತಿತರಿದ್ದರು.

ಬೇಸಿಗೆ ಉಚಿತ ಶಿಬಿರಕ್ಕೆ ಡಿಸಿ ಚಾಲನೆ

ಬಾಗಲಕೋಟೆ: ನವನಗರದ ಜಿಲ್ಲಾ ಬಾಲಭವನದಲ್ಲಿ 5ರಿಂದ 16 ವರ್ಷದ ಮಕ್ಕಳಿಗೆ ಹಮ್ಮಿಕೊಂಡ ಸೃಜನಾತ್ಮಕ ಹಾಗೂ ಕ್ರೀಯಾತ್ಮಕ ಚಟುವಟಿಕೆಗಳ ಉಚಿತ ಬೇಸಿಗೆ ಶಿಬಿರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಬುಧವಾರ ಚಾಲನೆ ನೀಡಿದರು.

ಕರ್ನಾಟಕರಾಜ್ಯ ಬಾಲಭವನಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡ 15 ದಿನಗಳ ಉಚಿತ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಶಿಬಿರದಲ್ಲಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು ಇದರ ಸದುಪಯೋಗವನ್ನು ಮಕ್ಕಳು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆವಹಿಸಿದ್ದಮಹಿಳಾಮತ್ತುಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಪ್ರಭಾಕರ ಮಾತನಾಡಿ ಮಕ್ಕಳಲ್ಲಿನ ಪ್ರತಿಭೆ ಅನಾವರಣಗೊಳಿಸುವುದು, ಆತ್ಮವಿಶ್ವಾಸ ಹೆಚ್ಚಿಸುವುದು ಹಾಗೂ ತಂಡದ ಮನೋಭಾವ ಬೆಳೆಸುವ ಉದ್ದೇಶದಿಂದ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ 15 ದಿನಗಳ ಉಚಿತ ತರಬೇತಿ ನೀಡಲಾಗುತ್ತದೆ. ಈ ಅವಧಿಯಲ್ಲಿ ಮಕ್ಕಳಿಗೆ ಚಿತ್ರಕಲೆ, ಕರಕುಶಲ, ಜೇಡಿ ಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ ಮತ್ತು ಯೋಗ, ಕರಾಟೆ, ವಿವಿಧ ಚಟುವಟಿಕೆಗಳನ್ನು ಹೇಳಿಕೊಡಲಾಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ಮಂಜುನಾಥ ಪರಸನ್ನವರ ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಕ್ಕಳ ಬೇಸಿಗೆಯನ್ನು ಸ'ದ'ುಪ'ಯೋ'ಗ'ಪ'ಡಿಸಿಕೊ'ಳ'್ಳ'ುವ ಉದ್ದೇಶದಿಂದ 5 ರಿಂದ 16 ವರ್ಷದ ಮಕ್ಕಳಿಗಾಗಿ ಸೃಜನಾತ್ಮಕ ಹಾಗೂ ಕ್ರೀಯಾತ್ಮಕ ಚಟುವಟಿಕೆಗಳನ್ನು ಒಳಗೊಂಡ ವಿಶೇಷ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ ಎಂದರು ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಮೇಶ ಸೂಳಿಕೇರಿ, ಸಂಪನ್ಮೂಲ ವ್ಯಕ್ತಿಗಳಾದ ಪದ್ಮಾವತಿ ತಳ್ಳಿಕೇರಿ, ಭವಾನಿ ಕಂಬಾರ, ಸಂಸ್ಕೃತಿ ಕಾಂಬಳೆ ಹಾಗೂ ಇಲಾಖೆಯ ಸುರೇಶ ಹುಲಮನಿ, ಕಮಲಾಕ್ಷಿ ಚವ್ಹಾಣ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಇಂದಿನಿಂದ ಲಕ್ಕವ್ವ ಜಾತ್ರೆ

ರಬಕವಿ-ಬನಹಟ್ಟಿ: ಮೇ 14ರಂದು ಗುರುವಾರದಿಂದ ಭಾನುವಾರದವರೆಗೆ ಸಮೀಪದ ಆಸಂಗಿ ಗ್ರಾಮದಲ್ಲಿ ಲಕ್ಕವ್ವದೇವಿ ಜಾತ್ರೆ, ಹಾಗೂ ಹನುಮಾನದೇವರ ಓಕುಳಿ ಜರುಗಲಿದೆಯೆಂದು ದೇವಸ್ಥಾನ ಕಮಿಟಿ ಅಧ್ಯಕ್ಷ ಯಮುನಪ್ಪ ಪದ್ದಿ ತಿಳಿಸಿದ್ದಾರೆ. ಗುರುವಾರ ಸಂಜೆ 4 ಗಂಟೆಗೆ ಕೊಂಡ ಪೂಜೆಯೊಂದಿಗೆ ನೀರೋಕಳಿ ಹಾಗೂ ರಾತ್ರಿ 10ಕ್ಕೆ ಚೌಡಕಿ ಪದಗಳಿವೆ. ಮೇ 15ರಂದು ಬೆಳಿಗ್ಗೆ 6ಕ್ಕೆ ಲಕ್ಕವ್ವದೇವಿ ಹಾಗೂ ಪಾದುಕೆ ಪೂಜೆ ಹಾಗೂ ಹನುಮಾನ ದೇವರ ಅಭಿಷೇಕ. ಸಂಜೆ 4ಕ್ಕೆ ದೇವಿಗೆ ಉಡಿ ತುಂಬುವದು ಸಂಜೆ 5ಕ್ಕೆ ನೀರೋಕಳಿ. ರಾತ್ರಿ 10ಕ್ಕೆ 'ರೈತರ ಸೇವಕ ನಮ್ಮೂರ ನಾಯಕ ನಾಟಕವಿದೆ. ಮೇ 16ರಂದು ಸಂಜೆ 6ಕ್ಕೆ ಸ್ತಬ್ಧ ಚಿತ್ರಗಳ ಮೆರವಣಿಗೆ ಹಾಗೂ ರಾತ್ರಿ 10ಕ್ಕೆ 'ತಾಳಿ ಇಲ್ಲದೆ ತಾಯಿ? ನಾಟಕವಿದೆ. ಮೇ 17ರಂದು ಭಾನುವಾರ ಸಂಜೆ 4ಕ್ಕೆ ಹಾಲೋಕಳಿಯಿದ್ದು, ರಾತ್ರಿ 10ಕ್ಕೆ 'ಹಳ್ಳಿ ಹುಲಿ ಕೊಟ್ಟ ಬೆಳ್ಳಿ ಕಾಲುಂಗುರ ನಾಟಕವಿದೆ.

ಸಮನ್ವಯತೆಯಿಂದ ಅಧಿಕಾರಿಗಳು ಕೆಲಸ ಮಾಡಿ

ವಿಜಯಪುರ: ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಕರ್ನಾಟಕದ ಪ್ರಾಚೀನ ಹಸ್ತ ಪ್ರತಿಗಳ ಸಮೀಕ್ಷೆಯಡಿ ಡಿಜಟಲೀಕರಣ ನಡೆಯಲಿದ್ದು, ಸಮೀಕ್ಷೆಯ ಸಮರ್ಪಕ ಜಾರಿಗೆ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ನಡೆದ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ದೇಶದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಹಾಗೂ ಐತಿಹಾಸಿಕ ದಾಖಲೆಗಳನ್ನು ಸಂರಕ್ಷಿಸಿ ಡಿಜಿಟಲೀಕರಣ ಮಾಡುವ ಕೆಲಸ ನಡೆಯುತ್ತಿದೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಶಾಶ್ವತವಾಗಿ ಉಳಿಸುವುದರ ಜೊತೆಗೆ ಸಾರ್ವಜನಿಕರಿಗೆ ಒಂದೇ ರಾಷ್ಟ್ರೀಯ ವೇದಿಕೆ ಮೂಲಕ ಪ್ರವೇಶ ಕಲ್ಪಿಸುವುದಾಗಿದೆ ಎಂದರು.

ಈ ಯೋಜನೆಯಡಿ ಹಸ್ತಪ್ರತಿಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನ ಮತ್ತು ಮೊಬೈಲ್ ಪ್ರಕಟಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿರುವ ಅಪ್ಲಿಕೇಷನ್ ಮೂಲಕ ದೇಶದಾದ್ಯಂತ ಇರುವ ಹಸ್ತಪ್ರತಿಗಳ ಮಾಹಿತಿಯನ್ನು ಅಪ್ ಲೋಡ್ ಮಾಡಿ ರಾಷ್ಟ್ರೀಯ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಹಂಚಿಕೊಳ್ಳುವ ಯೋಜನೆ ರೂಪಿಸಲಾಗಿದೆ ಎಂದರು. ದಾಖಲೀಕರಣ ಮತ್ತು ಪಟ್ಟಿ ಮಾಡುವಿಕೆ ಕಾರ್ಯಗಳಿಗೆ ಸಹಾಯ, ಸ್ಥಳೀಯ ಸಂಸ್ಥೆಗಳು ಹಾಗೂ ಸಂರಕ್ಷಕರಲ್ಲಿ ಜಾಗೃತಿ ಮೂಡಿಸುವಿಕೆ, ನಿಯಮಿತ ಪ್ರಗತಿ ವರದಿ ಸಲ್ಲಿಕೆಯಾಗಬೇಕು ಎಂದರು. ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಅರವಿಂದ ಹೂಗಾರ ಮಾತನಾಡಿದರು.

ಈ ಯೋಜನೆಗೆ ಜಿಲ್ಲೆಯಲ್ಲಿ ಸಂಯೋಜಕರಾಗಿ ಕೃಷ್ಣಕೋಲಾರ ಕುಲಕರ್ಣಿ (9342018470), ಪಂ.ಪ್ರದ್ಯುಮ್ನಾಚಾರ್ಯ ಪೂಜಾರ (998630108), ಡಾ: ವೇದನಿಧಿ ಆಚಾರ್ಯ (9480312408), ಪಂ. ಸಂಜೀವಾಚಾರ್ಯ ಮದಭಾವಿ (9449183869) ಸಂಪರ್ಕಿಸಿ ಅಗತ್ಯ ದಾಖಲೆ ಒದಗಿಸಬಹುದಾಗಿದೆ ಎಂದು ಎಡಿಸಿ ಡಾ.ಔದ್ರಾಮ ತಿಳಿಸಿದರು.



ನೂತನ ಸಮುದಾಯ ಭವನ ಲೋಕಾರ್ಪಣೆ ನಾಳೆ

ಬೀಳಗಿ: ಪಟ್ಟಣದ ಕಂಬಾರ ಓಣಿಯಲ್ಲಿರುವ ಜೀರ್ಣೋದ್ಧಾರಗೊಂಡಹುಸೇನಪೀರ ದೇವಸ್ಥಾನ ಹಾಗೂ ನೂತನ ಸಮುದಾಯ ಭವನದ ಲೋಕಾರ್ಪಣೆ ಕಾರ್ಯಕ್ರಮ ಮೇ 15ರಂದು ಬೆಳಗ್ಗೆ 10:30 ಗಂಟೆಗೆ ನಡೆಯಲಿದೆ ಎಂದು ವಿಶ್ರಾಂತ ಶಿಕ್ಷಕ ಶಿವಾನಂದ ಯಾಳವಾರಮಠ ಹೇಳಿದರು.

ಪಟ್ಟಣದ ಕಂಬಾರ ಓಣಿಯಲ್ಲಿರುವ ಹುಸೇನಪೀರ ದೇವಸ್ಥಾನದಲ್ಲಿ ಹುಸೇನಪೀರ ದೇವಸ್ಥಾನ ಹಾಗೂ ಸಮುದಾಯ ಭವನದ ಲೋಕಾರ್ಪಣೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿ, ನೂತನ ಸಮುದಾಯ ಭವನದಲ್ಲಿ ಹೋಮ-ಹವನ, ದೇವಸ್ಥಾನದಲ್ಲಿ ಧಾರ್ಮಿಕ ವಿಧಿಗಳು ಜರುಗಿದರೆ,



ಹಜರತಬಾಬಾಮುನಿದರ್ಗಾದಿಂದಹುಸೇನಪೀರ ದೇವಸ್ಥಾನದವರೆಗೆ ಜುಮ್ಮರ ಮೆರವಣಿಗೆ ಸಕಲ ವಾದ್ಯ ವೈಭವಗಳೊಂದಿಗೆ ಜರುಗಲಿದೆ ಎಂದು ತಿಳಿಸಿದರು.

ಸಮಾರಂಭದ ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಬೀಳಗಿ-ಹಲಗಲಿ ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮಿಗಳು, ಸೋಮಪ್ಪಯ್ಯನಮಠದ ಚನ್ನಬಸವಸ್ವಾಮಿಗಳು, ಬೀಳಗಿ-ಕಾತರಕಿ ಹುಚ್ಚಪ್ಪಯ್ಯನಮಠದ ಸಿದ್ದಯ್ಯ ಸ್ವಾಮಿಗಳು, ಅನ್ನಪೂರ್ಣೇಶ್ವರಿ ಬೃಹನ್ಮಠದ ಶಿವಾನಂದ ದೇವರು, ತೆಲಂಗಾಣ ರಾಜ್ಯದ ಜಗದ್ಗುರು ಆಶ್ರಮದ ವಿಶ್ವಶಾಂತಿ ಹಾಗೂ ಭಾವೈಕ್ಯ ಪ್ರವಚನಕಾರ ಸೂಫಿ ಸಯ್ಯದಬಾಷಾ ಸಾಹೇಬರು ಆಗಮಿಸುವರೆಂದು ತಿಳಿಸಿದರು.

ಹುಸೇನಪೀರ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಂಗಪ್ಪ ಅವಟಿ, ಸದಸ್ಯರಾದ ಶ್ರೀಶೈಲ ದಳವಾಯಿ, ಗಣಪತಿ ಬುಡ್ಡರ, ಗುರಪ್ಪ ಕುಂಬಾರ, ಲಕ್ಷ್ಮಣ ದಳವಾಯಿ, ಶ್ರೀಶೈಲ ಉಪ್ಪಾರ, ಶಂಕರ ಬುಡ್ಡರ, ಗಂಗಪ್ಪ ಕುಂಬಾರ, ಪರಶು ಮೂಲಿಮನಿ ಮತ್ತಿತರಿದ್ದರು.

ತ್ರೀ ಸ್ಟಾರ್ ಹೋಟೆಲ್ ಕಟ್ಟಡ ಶೀಘ್ರ ಪೂರ್ಣಗೊಳಿಸಲು ಸೂಚನೆ

ವಿಜಯಪುರ: ನಗರ ಹೊರ ವಲಯದ ಭೂತನಾಳ ಕೆರೆ ಬಳಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ಮಿಸಲಾಗುತ್ತಿರುವ ತ್ರಿ-ಸ್ಟಾರ್ ಹೋಟೆಲ್ ಕಟ್ಟಡಕ್ಕೆ ಜಿಲ್ಲಾಧಿಕಾರಿಗಳಾದ ಡಾ.ಆನಂದ ಕೆ.ಅವರು ಬುಧವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

2019ನೇ ಸಾಲಿನಲ್ಲಿ ರಾಜ್ಯಾದಂತ 04 ಸ್ಥಳಗಳಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ತ್ರೀ-ಸ್ಟಾರ್ ಹೋಟೇಲ್ ಮಂಜೂರಾಗಿವೆ. ಈ ಪೈಕಿ ನಗರದ ಹೊರವಲಯದ ಬೂತನಾಳ ಕೆರೆ ಪಕ್ಕದಲ್ಲಿ 5 ಎಕರೆ ಜಮೀನಿನಲ್ಲಿ ತ್ರೀ-ಸ್ಟಾರ್ ಹೋಟೆಲ್ ಕಟ್ಟಡವನ್ನು ಮೆ.ರೈಟ್ಸ್ ಸಂಸ್ಥೆಯ ಮೂಲಕ ಅಂದಾಜು ಮೊತ್ತ 20 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಪ್ರಸ್ತುತ



ಅಂತಿಮ ಹಂತದಲ್ಲಿರುವ ಕಾಮಗಾರಿಯ ಕಂಪೌಂಡ ವಾಲ್ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಪೂರ್ಣಗೊಳಿಸಲು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗೆ ಅವರು ಸೂಚಿಸಿದರು.

ಈ ಹೋಟೆಲ್ ಯೋಜನೆಗೆ ವಿದ್ಯುತ್ ಸಂಪರ್ಕ ವ್ಯವಸ್ಥೆ, ಲಿಫ್ಟ್ ವ್ಯವಸ್ಥೆ ಕಾರ್ಯಾಚರಣೆ ಮತ್ತು ನೀರಿನ ಸೌಲಭ್ಯ ಒದಗಿಸಲು ಕ್ರಮ ವಹಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಅರವಿಂದ ಹೂಗಾರ ಅವರಿಗೆ ಸೂಚಿಸಿದರು.


ಅಲ್ಲದೇ ಬಾಕಿ ಇರುವ ಫರ್ನಿಚರ್ ವ್ಯವಸ್ಥೆ, ಸ್ವಿಮಿಂಗ್ ಪೂಲ್ ನಿರ್ಮಾಣ, ಗಾರ್ಡನಿಂಗ್ ವ್ಯವಸ್ಥೆ ಕಲ್ಪಿಸಲು ಸೂಕ್ತವಾದ ಪ್ರಸ್ತಾವನೆ ತಯಾರಿಸಿ ಆಯುಕ್ತರು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಲು ಸೂಚಿಸಿದರು.

ವಿಜಯಪುರ ತಹಶೀಲ್ದಾರ್ ಪ್ರಶಾಂತ ಚನ್ನಗೊಂಡ, ಕಂದಾಯ ನಿರೀಕ್ಷಕ ಸಂತೋಷ ಪಾಟಕ್, ಸರ್ವೇಯರ್ ಕಾತ್ರಾಳ, ಕಂದಾಯ ನೀರಿಕ್ಷಕರು, ಮಹಾಲ್ ಬಾಗಾಯತ್ ಗ್ರಾಮ ಆಡಳಿತಾಧಿಕಾರಿಗಳು, ಅಧಿಕಾರಿಗಳಾದ ಬಿ.ಎಚ್. ಕುಡಪಲಿ, ರೈಟ್ಸ್ ಸಂಸ್ಥೆಯ ಇಂಜಿನಿಯರ್ ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

ಮಹೇಶವಾಡಗಿ ಸೇತುವೆ ಕಾಮಗಾರಿ ವಿಳಂಬ
ಮೇ 19ರಂದು ರಬಕವಿ ಬಂದ್‌ಗೆ ಕರೆ

ರಬಕವಿ-ಬನಹಟ್ಟಿ: ಅಥಣಿ ಹಾಗೂ ರಬಕವಿ-ಬನಹಟ್ಟಿ ತಾಲೂಕಿನ ಬೆಸುಗೆಗೆ 2017ರಲ್ಲಿ ಕಾರ್ಯಾರಂಭಗೊಂಡ ಮಹೇಶವಾಡಗಿ ಸೇತುವೆ ಕಾಮಗಾರಿಯು 10 ವರ್ಷಗಳಾದರೂ ಪೂರ್ಣಗೊಳ್ಳದೆ ಇನ್ನೂ ನೆನೆಗುದಿಗೆ ಬಿದ್ದಿರುವ ಹಿನ್ನಲೆ ಮತ್ತೊಮ್ಮೆ ಕಾಮಗಾರಿ ವಿಳಂಬ ವಿರುದ್ಧ ರಬಕವಿ ಬಂದ್ ಕರೆಯನ್ನು ಮೇ 19 ರಂದು ಮಂಗಳವಾರ ನಡೆಸಲಾಗುವುದೆಂದು ಮಹಾದೇವ ಧೂಪದಾಳ ತಿಳಿಸಿದ್ದಾರೆ.

ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಾಕವೆಲ್ ಬಳಿ ನಿರ್ಮಾಣವಾಗುತ್ತಿರುವ ಕಾರ್ಯಕ್ಕೆ ಪ್ರಸಕ್ತ ಬೇಸುಗೆ ದಿನಗಳು ಸಹಕಾರಿಯಾಗಿವೆ. ನದಿಯೊಳಗಿನ 7 ಮತ್ತು 8 ನಂಬರ್‌ಗಳ ಪಿಲ್ಲರ್ ಕಾರ್ಯಗಳು ಇನ್ನೂ ನಡೆದಿಲ್ಲ, ನೀರಿಲ್ಲದ ಕಾರಣ ಇದೀಗ




ತಿಂಗಳಾಂತ್ಯದೊಳಗೆ ನದಿಯೊಳಗಿನ ಸಂಪೂರ್ಣ ಕಾರ್ಯಕ್ಕೆ ಅವಕಾಶವಿದೆ. ಇದಕ್ಕೆ ತೀವ್ರ ವಿಳಂಬದ ಹಿನ್ನಲೆಯಲ್ಲಿ ಸರ್ಕಾರ ಹಾಗೂ ಅಧಿಕಾರಿಗಳ ತಂಡ ಕಾರಣವಾಗಿದೆಯೆಂದು ಬೇಸರ ವ್ಯಕ್ತಪಡಿಸಿದರು.

ರಾಮಣ್ಣ ಹುಲಕುಂದ ಮಾತನಾಡಿ, ಕಳೆದ ಡಿಸೆಂಬರ್ ತಿಂಗಳಲ್ಲಿ ಸತ್ಯಾಗ್ರಹ ಹೋರಾಟದ ಮೂಲಕ ಎಚ್ಚರಿಕೆ ನೀಡಲಾಗಿತ್ತು. ಅದರನ್ವಯ ಸಚಿವರ ನೇತೃತ್ವದಲ್ಲಿ 45 ಕೋಟಿ ರೂ.ಗಳ ಕಾಮಗಾರಿಗೆ ಹೆಚ್ಚುವರಿಯಾಗಿ 10 ಕೋಟಿ ರೂ.ಗಳಿಂದ ಒಟ್ಟು 55 ಕೋಟಿ ರೂ.ಗಳ ಸೇತುವೆ ಕಾಮಗಾರಿಗೆ ವೇಗ ಹೆಚ್ಚಿಸುವ ಭರವಸೆ ನೀಡಿದ್ದರು. ಅಲ್ಲದೆ ಬರುವ ಡಿಸೆಂಬರ್ ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸುವ ಭರವಸೆಯನ್ನೂ ನೀಡಿದ್ದರು. ಇದೀಗ ಸತ್ಯಾಗ್ರಹದ ನಂತರ ಕನಿಷ್ಠ ಬೆಳವಣಿಗೆಯೂ ಕಾಣದೆ ಕೇವಲ ಭರವಸೆಗೆ ಮಾತ್ರ ಸೀಮಿತವಾಗಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು. ಧರೆಪ್ಪ ಉಳ್ಳಾಗಡ್ಡಿ, ಬಸವರಾಜ ತೆಗ್ಗಿ, ಮಾರುತಿ ನಾಯಕ, ಬಾಗಲಕೋಟ, ಸಂಜಯ ತೆಗ್ಗಿ, ಸಂಗಮೇಶ ಮಡಿವಾಳ, ಸಂಗಮೇಶ ಪಾಟೀಲ, ಪ್ರವೀಣ ಹಜಾರೆ ಸೇರಿದಂತೆ ಅನೇಕರಿದ್ದರು.

ಅಕ್ರಮ ನೀರು ಬಳಕೆ: ಕ್ರಮಕ್ಕೆ ಆಗ್ರಹ

ವಿಜಯಪುರ: ಜಿಗಜಿವಣಗಿ ಕೆರೆಯಲ್ಲಿ ಮಹಾರಾಷ್ಟ್ರ ಭಾಗದ ಕೆಲವರು ಅಕ್ರಮವಾಗಿ ನೀರು ಬಳಕೆ ಮಾಡುತ್ತಿದ್ದು ಕೂಡಲೇ ಅದನ್ನು ನಿಲ್ಲಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೆಆರ್‌ಎಸ್ ಪಕ್ಷದ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಈ ಸಮಸ್ಯೆ ಕುರಿತು ವಿವರಣೆ ನೀಡಿದ ಪಕ್ಷದ ಪ್ರಮುಖರು, ಜಿಗಜೇವಣಿ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುವ ಜಿಗಜೇವಣಿ ಗ್ರಾಮದ ಕೆರೆಯಲ್ಲಿರುವ ನೀರನ್ನು ಮಹಾರಾಷ್ಟ್ರದ ಜನರು ಪೈಪ್‌ಲೈನ ಮಾಡಿಕೊಂಡು ಅವರ ಕೃಷಿ ಭೂಮಿಗಳಿಗೆ ದಿನ ಬಳಿಕೆಗೆ ಉಪಯೋಗಿಸುತ್ತಿದ್ದು. ಈಗ ಕೆರೆಯಲ್ಲಿ ಶೇ.20ರಷ್ಟು ನೀರು ಮಾತ್ರ ಉಳಿದಿದೆ. ಇದರಿಂದ ನಮ್ಮ ಗ್ರಾಮದಲ್ಲಿರುವ ದನ ಕರಗಳಿಗೆ ಹಾಗೂ ದಿನಬಳಿಕೆಗೆ




ಉಪಯೋಗಿಸಲು ನೀರು ಇಲ್ಲದಂತಾಗಿದೆ. ಆದಕಾರಣ ಅಕ್ರಮವಾಗಿ ಅಳವಡಿಸಿದ ಪೈಪಲೈನ್‌ಗಳನ್ನು ವಶಪಡಿಸಿ ಕೊಂಡು ಗ್ರಾಮದ ಜನರು ಕೆರೆಯ ನೀರನ್ನು ಉಪಯೋಗಿಸುವಂತಾಗಬೇಕು. ಕೂಡಲೇ ಈ ವಿಷಯ ಗಂಭೀರವಾಗಿ ಪರಿಗಣಿಸಿ ಅಕ್ರಮ ಬಳಕೆ ತಡೆಯಬೇಕು ಎಂದು ಒತ್ತಾಯಿಸಿದರು.

ನಗರ ಘಟಕದ ಅಧ್ಯಕ್ಷ ವಿಕ್ರಮ ವಾಘಮೋರೆ, ಶಿದ್ರಾಯ ಬಿರಾದಾರ, ಸೋಮನಿಂಗ ಬಿರಾದಾರ, ಸುಖದೇವ ಬಿರಾದಾರ, ಶ್ರೀಶೈಲ ಬಿರಾದಾರ, ದತ್ತು ಬಡಿಗೇರ, ಅಮಸಿದ್ದ ಬಿರಾದಾರ, ಮಾಸಿದ್ದ ಜುಟ್ಟಗೊಂಡ, ರೇವಣಸಿದ್ದ ಜಲ್ಲಿ ಉಪಸ್ಥಿತರಿದ್ದರು.

ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ

ಬೀಳಗಿ: ಕಾಂಕ್ರೀಟ್ ರಸ್ತೆ ಕಾಮಗಾರಿಯು ಯೋಜನಾ ವರದಿ ಪ್ರಕಾರ ಗುಣಮಟ್ಟದ ಕೆಲಸವಾಗಬೇಕು. ಕಾಲಮಿತಿಯಲ್ಲಿ ಕೆಲಸ ಪೂರ್ಣಗೊಳಿಸಬೇಕು. ಬೇಸಿಗೆ ಬಿಸಿಲು ಹೆಚ್ಚಿರುವುದರಿಂದ ಸರಿಯಾಗಿ ಕ್ಯೂರಿಂಗ್ ಮಾಡಬೇಕು ಎಂದು ಗುತ್ತಿಗೆದಾರರಿಗೆ ಕಿವಿಮಾತು ಹೇಳಿ, ಕಳಪೆ ಕಾಮಗಾರಿಯಾಗದಂತೆ ನಿಗಾವಹಿಸಬೇಕೆಂದು ಎಇಇ ಅವರಿಗೆ ಶಾಸಕರು ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ ತಾಕೀತು ಮಾಡಿದರು.

ತಾಲೂಕಿನ ಮುತ್ತಲದಿನ್ನಿ ಎಲ್.ಟಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಲೆಕ್ಕ ಶಿರ್ಷಿಕೆ: 2025-26ನೇ ಸಾಲಿನ 4059-80-051-0-60 ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ 422 ಪರಿಶಿಷ್ಟ ಜಾತಿ ಉಪಯೋಜನೆಯ ಕಾಮಗಾರಿಗಳ ಅಡಿಯಲ್ಲಿ ಅಂದಾಜು 1 ಕೋಟಿ



ರೂ. ವೆಚ್ಚದಲ್ಲಿ ಮುತ್ತಲದಿನ್ನಿ ಎಲ್.ಟಿ. ಪ.ಜಾ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಹಾಗೂ ಪೇವರ್ಸ ಅಳವಡಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಗ್ರಾಮಸ್ಥರು ಮುಂದೆ ನಿಂತುಕೊಂಡು ಕೆಲಸ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ತಾಲೂಕಾಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ಬ್ಲಾಕ್ ಕಾಂಗ್ರೆಸ್ ಕಮೀಟಿ ಅಧ್ಯಕ್ಷ ಹನಮಂತ ಕಾಖಂಡಕಿ, ತಾಪಂ ಮಾಜಿ ಅಧ್ಯಕ್ಷ ಶ್ರೀಶೈಲ ಸೂಳಿಕೇರಿ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸದಸ್ಯ ಶ್ರೀಶೈಲ ಅಂಟೀನ, ಜಿಪಂ ಮಾಜಿ ಅಧ್ಯಕ್ಷ ಯಮನಪ್ಪ ರೊಳ್ಳಿ, ಹೆಗ್ಗೂರ ಗ್ರಾಪಂ ಮಾಜಿ ಅಧ್ಯಕ್ಷೆ ರೇಣುಕಾ ಪವಾರ, ಸಿದ್ದು ಸಾರಾವಾರಿ, ಬಸವರಾಜ ಹಳ್ಳದಮನಿ, ಪ್ರಕಾಶ ನಾಯಕ, ಮುಂಡಲೀಕ ನಾಯಕ, ಮಂಜುನಾಥ ನಾಯಕ, ಯಮನಪ್ಪ ನಾಯಕ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಂಜುನಾಥ ತೆಗ್ಗಿ, ಹೆಗ್ಗೂರ ಗ್ರಾಪಂ ಪಿಡಿಒ ರಮೇಶ ಮೇಲನಾಡ, ಕಾರ್ಯದರ್ಶಿ ದಯಾನಂದ ಮಾದರ, ಗುತ್ತಿಗೆದಾರ ಅಶೋಕ ದೊಡಮನಿ ಮತ್ತಿತರಿದ್ದರು.

ಕಿರುಸುದ್ದಿ

ಇವಿ ವೆಹಿಕಲ್‌ಗಳಿಗೆ ತೆರಿಗೆ ರಿಯಾಯತಿ ಮಾಡಿ

ವಿಜಯಪುರ: ಪೆಟ್ರೋಲ್-ಡಿಸ್ಟೆಲ್ ಕೊರತೆಯ ಈಗಿನ ಪರಿಸ್ಥಿತಿ ಸರಿದೂಗಿಸುವ ನಿಟ್ಟಿನಲ್ಲಿ ಇಲೆಕ್ಟ್ರಿಕಲ್ ವಾಹನಗಳಿಗೆ ರಾಜ್ಯ ಸರ್ಕಾರ ಸಂಪೂರ್ಣ ತೆರಿಗೆ ಮುಕ್ತವಾಗಿಸಬೇಕು ಎಂದು ಹೋರಾಟಗಾರ ರಾಘವ ಅಣ್ಣಿಗೇರಿ ಹೇಳಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗಳಿಗೆ ಲಿಖಿತ ಪತ್ರ ರವಾನಿಸಿರುವ ಅಣ್ಣಿಗೇರಿ, ವಿದ್ಯುತ್ ಚಾಲಿತ ವಾಹನಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ನಡೆಯಬೇಕಿದೆ, ಇಲೆಕ್ಟ್ರಿಕಲ್ ವಾಹನಗಳಿಗೆ ರಸ್ತೆ ತೆರಿಗೆ ವಿಧಿಸುವುದನ್ನು ನಿಲ್ಲಿಸಿದರೇ ಪೆಟ್ರೋಲ್, ಡೀಸೆಲ್ ನಿಯಂತ್ರಣದಲ್ಲಿಡಬಹುದು.. ಭಾರತದಲ್ಲಿಯೇ ಕರ್ನಾಟಕವು ಅತಿ ಹೆಚ್ಚು ತೆರಿಗೆಯನ್ನು ವಿದ್ಯುತ್ ಚಾಲಿತ ದ್ವಿಚಕ್ರ ಹಾಗೂ ಕಾರುಗಳಿಗೆ ವಿಧಿಸುತ್ತಿರುವುದು ದುರ್ದೈವದ ಸಂಗತಿ ಎಂದು ಅವರು ಹೇಳಿದ್ದಾರೆ. ಮಧ್ಯಪ್ರಾಚ್ಯದ ಯುದ್ಧವು ದಿನದಿಂದ ದಿನಕ್ಕೆ ಘೋರವಾಗುತ್ತಿದ್ದು, ಜನತೆ ಡಿಸೈಲ್ ಹಾಗೂ ಪೆಟ್ರೋಲ್ ವಾಹನಗಳನ್ನು ಉಪಯೋಗಿಸುವುದನ್ನು ಕಡಿಮೆ ಮಾಡಬೇಕೆಂದರೆ ಸರಕಾರವು ವಿದ್ಯುತ್ ಚಾಲಿತ ವಾಹನಗಳನ್ನು ಸಂಪೂರ್ಣ ತೆರಿಗೆ ಮುಕ್ತ ಮಾಡಬೇಕು. ಮುಖ್ಯಮಂತ್ರಿಗಳು ಸಹ ರಾಜ್ಯದಲ್ಲಿ ಈ ಪ್ರಯೋಗ ಮಾಡಬೇಕಾಗಿರುವುದು ಇಂದಿನ ಅಗತ್ಯತೆಯಾಗಿದೆ, ಈ ಕ್ರಮದಿಂದಾಗಿ ಡಿಸೈಲ್ ಹಾಗೂ ಪೆಟ್ರೋಲ್ ಉಳಿತಾಯವಾಗುವುದರೊಂದಿಗೆ ವಿಷಕಾರಿ ಹೊಗೆ ಮುಕ್ತ ಪರಿಸರವು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

ನೀಟ್ ಉಚಿತ ತರಬೇತಿ

ಸಿಂದಗಿ: ಮೇ 3ರಂದು ನಡೆದ ನೀಟ್ ಪರೀಕ್ಷೆ ಲೀಕ್ ಆಗಿರುವುದರಿಂದ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದಿಂದ ಅಧಿಕೃತವಾಗಿ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುವದರಿಂದ 23 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ. ಅದರಂತೆ ವಿಜಯಪುರ ಜಿಲ್ಲೆ ಹಾಗೂ ಸಿಂದಗಿ ತಾಲೂಕಿನ ಸಾವಿರಾರು ವಿದ್ಯಾರ್ಥಿಗಳು ಇದರಿಂದ ತೊಂದರೆಯನ್ನು ಅನುಭವಿಸಿರುತ್ತಾರೆ. ಆದ್ದರಿಂದ 2026ರ ನೀಟ್ ಪರೀಕ್ಷಾ ತಯಾರಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸುವರ್ಣ ಅವಕಾಶ ಮುಂದಿನ ಪರೀಕ್ಷಾ ದಿನಾಂಕದವರೆಗೂ ಕಾಲೇಜಿನ ಮತ್ತು ಹೊರಗಿನ ವಿದ್ಯಾರ್ಥಿಳಿಗೆ ಉಚಿತವಾಗಿ ಗ್ರಾಂಡ್ ಟೆಸ್ಟ್ ಮತ್ತು ತರಬೇತಿಗಳಿಗೆ ಯಾವುದೇ ಕಾಲೇಜಿನ ರೆಗುಲರ್ ಹಾಗೂ ಲಾಂಗಟರ್ಮ್ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಬರೆಯಬಹುದು. ಪರೀಕ್ಷೆಗಳು ಸಂಪೂರ್ಣ ಉಚಿತವಾಗಿರುತ್ತವೆ. ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗಿ ತಮ್ಮ ತಯಾರಿ ಮುಂದುವರಿಸಬಹುದಾಗಿದೆ ಎಂದು ಎಲೈಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಎಂ.ಎಂ.ಅಸಂತಾಪುರ, ಪ್ರಾಚಾರ್ಯ ಐ.ಎ ಜುಮ್ಮನಾಳ ತಿಳಸಿದ್ದಾರೆ.

ನಿತ್ಯ ರಾತ್ರಿ ಬಸ್ ಓಡಾಟ

ಬಸವನಬಾಗೇವಾಡಿ: ಬಸವನಬಾಗೇವಾಡಿ ಪ್ರವಾಸಿ ತಾಣವಾಗಿದ್ದರಿಂದ ಸಂಜೆ ನಂತರ ಕೊಲ್ಹಾರ, ನಿಡಗುಂದಿ, ದೇವರಹಿಪ್ಪರಗಿ ತಾಲೂಕುಗಳಿಗೆ ತೆರಳಲು ಹಾಗೂ ಪಟ್ಟಣಕ್ಕೆ ರಾತ್ರಿ ಬರಲು ವಿಕಲಚೇತನರು, ರೈತರು ಮಹಿಳೆಯರು, ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರು ಸುಮಾರು ವರ್ಷಗಳಿಂದ ಬಸ್ಸಿನ ತೊಂದರೆಯನ್ನು ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ವಿಜಯಪುರ ಜಿಲ್ಲಾ ಬಸ್ ಘಟಕದ ಮುಖ್ಯವ್ಯವಸ್ಥಾಪಕರು ಸೇರಿ ಬಸವನಬಾಗೇವಾಡಿ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು. ಕರವೇ ಕಾರ್ಯಕರ್ತರ ಹೋರಾಟದ ಮೇ 5ರಿಂದ ರಾತ್ರಿ 8 ಗಂಟೆಗೆ ಮೂರು ತಾಲೂಕುಗಳಿಂದ ಪಟ್ಟಣಕ್ಕೆ ಬಸ್‌ಗಳ ಓಡಾಟ ಪ್ರಾರಂಭವಾಗಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಅವಳಿ ಜಿಲ್ಲಾ ಉಸ್ತುವಾರಿ ಅಶೋಕ ಹಾರಿವಾಳ ತಿಳಿಸಿದ್ದಾರೆ. ಕರವೇ ಮನವಿಗೆ ಸ್ಪಂದಿಸಿದ ಸಿಬ್ಬಂದಿ ವರ್ಗದವರಿಗೆ ಧನ್ಯವಾದ ತಿಳಿಸಿದ್ದಾರೆ.

ಮೇ 16ಕ್ಕೆ ಕಾರ್ಯಾಗಾರ

ವಿಜಯಪುರ: ತೊಗರಿ ಬೆಳೆಯಲ್ಲಿ ಇಳುವರಿಯನ್ನು ವೈಜ್ಞಾನಿಕ ಕ್ರಮಗಳ ಮೂಲಕ ಹೆಚ್ಚಿಸಲು, ಕೃಷಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಒಂದು ದಿನದ ತಾಂತ್ರಿಕ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ.

ಬರುವ ಮೇ 16ರಂದು ಬೆಳಗ್ಗೆ 9 ರಿಂದ ಸಂಜೆ 4.30ರವರೆಗೆ ವಿಜಯಪುರದ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ಸುಧಾರಿತ ಉತ್ಪಾದನಾ ತಾಂತ್ರಿಕತೆ, ಸಮಗ್ರ ಕೀಟ ನಿರ್ವಹಣೆ, ರೋಗಬಾಧೆ ಹರಡದಂತೆ ಸಮಗ್ರ ರೋಗ ನಿರ್ವಹಣಾ ಕ್ರಮಗಳ ಕುರಿತಾಗಿ ಕಾರ್ಯಗಾರದಲ್ಲಿ ಕೃಷಿ ವಿಜ್ಞಾನಿಗಳು ರೈತರಿಗೆ ಪ್ರಮುಖ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ.

ಈ ಕಾರ್ಯಗಾರವನ್ನು ಜಿಲ್ಲಾಧಿಕಾರಿ ಡಾ. ಆನಂದ ಕೆ ಅವರು ಉದ್ಘಾಟಿಸಲಿದ್ದು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಜಿಲ್ಲೆಯ ತೊಗರಿ ಬೆಳೆಗಾರರು ಈ ಕಾರ್ಯಗಾರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತಜ್ಞರಿಂದ ಉಪಯುಕ್ತ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಪಾಟೀಲ ತಿಳಿಸಿದ್ದಾರೆ.



ಲಕ್ಷ್ಮೇಶ್ವರ: ತಾಲೂಕಿನ ಯಳವತ್ತಿ ಗ್ರಾಮದ ಆರಾಧ್ಯದೈವ ಗುಂಡೇಶ್ವರ ದೇವಸ್ಥಾನದ ಜಾತ್ರಾಮಹೋತ್ಸವದ ಅಂಗವಾಗಿ ವಿಜೃಂಭಣೆಯಿಂದ ರಥೋತ್ಸವ ನೆರವೇರಿತು. ಹಣ್ಣು-ಕಾಯಿ ನೈವೇದ್ಯ ಮಾಡಿಸಿಕೊಂಡು ಬಳಿಕ ರಥಕ್ಕೆ ಉಡಿ ತುಂಬಿ, ಹೊಸ ವಸ್ತ್ರಾಭರಣಗಳನ್ನಿರಿಸಿ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಲಾಯಿತು.

ಚಡಚಣದಲ್ಲಿ ಶೀಘ್ರವೇ ಮದ್ಯವರ್ಜನ ಶಿಬಿರ

ಚಡಚಣ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ ಟ್ರಸ್ಟ್) ವತಿಯಿಂದ ಚಡಚಣದಲ್ಲಿ ಹಮ್ಮಿಕೊಳ್ಳಲಿರುವ ಮದ್ಯವರ್ಜನ ಶಿಬಿರದ ಯಶಸ್ವಿ ಅನುಷ್ಠಾನಕ್ಕಾಗಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಪಟ್ಟಣ ಪಂಚಾಯತಿ ಅಧ್ಯಕ್ಷ ಮಲ್ಲಿಕಾರ್ಜುನ ದೋತ್ರೆ ಹಾಗೂ ಸಭೆಯಲ್ಲಿದ್ದ ಎಲ್ಲಾ ಗಣ್ಯರು ಜಂಟಿಯಾಗಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಚಡಚಣದಲ್ಲಿ ಮದ್ಯವರ್ಜನ ಶಿಬಿರ ನಡೆಸಲು ಗಣ್ಯರು ಹಾಗೂ ಸಂಘಟನೆಯ ಪದಾಧಿಕಾರಿಗಳು ಸರ್ವಾನುಮತದ ಒಪ್ಪಿಗೆ ಸೂಚಿಸಿದರು. ಯೋಜನಾಧಿಕಾರಿ ನಟರಾಜ್ ಎಲ್.ಎಂ., ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿ ಶಿಬಿರದ ಪಾತ್ರದ ಬಗ್ಗೆ ವಿವರಿಸಿದರು. ಕಲ್ಬುರ್ಗಿ ಪ್ರಾದೇಶಿಕ ವಿಭಾಗದ ಜನ ಜಾಗೃತಿ ಯೋಜನಾಧಿಕಾರಿಗಳಾದ ರಾಜೇಶ್ ಕೆ.ಅವರು ಶಿಬಿರದ ಸಂಪೂರ್ಣ ರೂಪರೇಗೆಗಳು, ನಿಯಮಗಳು ಮತ್ತು ಶಿಬಿರಾರ್ಥಿಗಳಿಗೆ ನೀಡಲಾಗುವ ಸೌಲಭ್ಯಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ದೇವೆಂದ್ರಪ್ಪ ಗೌಡ ಪಾಟೀಲ, ಪ್ರಕಾಶಗೌಡ ಪಾಟೀಲ, ಗಂಗಾಧರ ಪಾವಲೆ, ಬಾಬುಗೌಡ ಬಿರಾದಾರ, ಚೇತನ ನಿರಾಳೆ, ಬಾಲಾಜಿ ಗಾಡಿ ವಡ್ಡರ, ಮಹೇಶ ಪಾಟೀಲ, ಬಸವರಾಜ ಬಂಡರಕವಟೆ, ರಾಜು ಕೋಳಿ, ಮಹಾದೇವ ಬನಸೋಡೆ, ಮುರ್ತುಜ ನದಾಫ್, ಫಿರೋಜ್ ಪಠಾಣ,ಮನೋಜ ಪಾಟೀಲ, ಕೆ.ಪಿ.ಬೋಳೆಗಾಂವ (ಶಿಕ್ಷಕರು) ಮತ್ತು ಕಾಶಿಬಾಯಿ ವಾಲಿಕಾರ, ಜಿಲ್ಲಾ ಜನ ಜಾಗೃತಿ ವೇದಿಕೆಯ ಉಪಾಧ್ಯಕ್ಷ ರುದ್ರಪ್ಪ ಪೂಜಾರಿ ಹಾಗೂ ಸದಸ್ಯರಾದ ಶಿವಣ್ಣ ಪಾಂಡೆ ಉಪಸ್ಥಿತರಿದ್ದರು.



ಚಡಚಣ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ ಟ್ರಸ್ಟ್) ವತಿಯಿಂದ ಚಡಚಣದಲ್ಲಿ ಹಮ್ಮಿಕೊಳ್ಳಲಿರುವ ಮದ್ಯವರ್ಜನ ಶಿಬಿರದ ಯಶಸ್ವಿ ಅನುಷ್ಠಾನಕ್ಕಾಗಿ ಪೂರ್ವಭಾವಿ ಸಭೆ ನಡೆಯಿತು. ಪಟ್ಟಣ ಪಂಚಾಯತಿ ಅಧ್ಯಕ್ಷ ಮಲ್ಲಿಕಾರ್ಜುನ ದೋತ್ರೆ, ಸಂಘದ ವಲಯ ಮೇಲ್ವಿಚಾರಕರಾದ ಶಿವಯ್ಯ ಹಿರೇಮಠ, ಸೇವಾ ಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

ಜಲ ಸಂಗ್ರಹಗಾರ ನಿರ್ಮಾಣ ಸ್ಥಳಕ್ಕೆ ಡಿಸಿ ಡಾ.ಆನಂದ ಕೆ. ಭೇಟಿ

ಭೂಮಿ ಹಸ್ತಾಂತರಕ್ಕೆ ಭರವಸೆ

ವಿಜಯಪುರ: ಬೇಸಿಗೆ ದಿನಗಳಲ್ಲಿ ಜನ-ಜಾನುವಾರುಗಳನ್ನು ನೀರಿನ ತಾಪತ್ರಯದಿಂದ ಪಾರು ಮಾಡಬೇಕು ಎಂಬ ದೂರದೃಷ್ಟಿಯೊಂದಿಗೆ ತಿಕೋಟಾ ತಾಲೂಕಿನ ಬಾಬಾನಗರದಲ್ಲಿ ನಿರ್ಮಾಣಗೊಳ್ಳಲಿರುವ ಜಲ ಸಂಗ್ರಹಗಾರ ನಿರ್ಮಾಣ ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಕರ್ನಾಟಕ ನೀರಾವರಿ ನಿಗಮದಿಂದ 600 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಈ ಬೃಹತ್ ಜಲ ಸಂಗ್ರಹಗಾರ 0.70 ಟಿಎಂಸಿ ನೀರಿನ ಸಾಮರ್ಥ್ಯ ಹೊಂದಿದ್ದು, ಬಾಬಾನಗರ ಸೇರಿದಂತೆ ಸುತ್ತಲಿನ ಹಳ್ಳಿಗಳ ಜನತೆಗೆ ಬಿರು ಬೇಸಿಗೆಯಲ್ಲಿ ಜನ ಹಾಗೂ ಜಾನುವಾರುಗಳು ನೀರಿಗಾಗಿ ಪರದಾಡಬಾರದು ಎಂದು ಕನಸು ಕಂಡ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರು ಈ ಜಲಸಂಗ್ರಹಗಾರ ನಿರ್ಮಾಣಕ್ಕೆ ಡಿಪಿಆರ್ ಸಿದ್ದಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದು ಕರ್ನಾಟಕ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಅಂಬಣ್ಣ ಹರಳಯ್ಯ ಅವರು, ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಜಿಲ್ಲೆಯ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ತುಬಚಿ-ಬಬಲೇಶ್ವರ ಬೃಹತ್ ನೀರಾವರಿ ಯೋಜನೆಯಡಿ ಈ



ಬೃಹತ್ ಜಲಸಂಗ್ರಹಗಾರಕ್ಕೆ ನೀರು ಸರಬರಾಜು ಮಾಡಲಾಗುವುದು ಎಂದು ಅಂಬಣ್ಣ ಹರಳಯ್ಯ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಈ ಬೃಹತ್ ಜಲಸಂಗ್ರಹಗಾರ ನಿರ್ಮಾಣಕ್ಕೆ 545 ಎಕರೆ ಜಮೀನಿನ ಅವಶ್ಯಕತೆಯಿದೆ. ಹಾಗಾಗಿ ನಿರ್ಮಾಣವಾಗಲಿರುವ ಜಲ ಸಂಗ್ರಹಗಾರದ ಸುತ್ತಲಿರುವ ಸರ್ಕಾರಿ ಜಮೀನನ್ನು ಇದೇ ವೇಳೆ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಸರ್ಕಾರಿ ಜಮೀನನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು,ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಗತ್ಯ ಸೂಚನೆ ನೀಡಿದರು.

ಇದಕ್ಕೂ ಮುನ್ನ ಜಿಲ್ಲಾಧಿಕಾರಿಗಳಾದ ಡಾ.ಆನಂದ ಕೆ.ಅವರು ತಿಕೋಟಾ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿದರು. ಭೇಟಿ ವೇಳೆ ಬಾಕಿಯಿರುವ ಕಡತಗಳನ್ನು ಪರಿಶೀಲಿಸಿ, ಬೇಗ ಕಡತಗಳನ್ನು ವಿಲೇವಾರಿ ಮಾಡಬೇಕು ಎಂದು ತಹಶೀಲ್ದಾರ್ ಅವರಿಗೆ ಸೂಚಿಸಿದರು.

ಸಮುದಾಯ ಆರೋಗ್ಯಕ್ಕೆ ಕೇಂದ್ರಕ್ಕೆ ಭೇಟಿ ನಂತರ ಜಿಲ್ಲಾಧಿಕಾರಿಗಳು ತಿಕೋಟಾದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಯೋಗಕ್ಷೇಮ ವಿಚಾರಿಸಿದರು. ಬಳಿಕ ಔಷಧಾಲಯಗಳನ್ನು ಪರಿಶೀಲಿಸಿದರು.

ತಿಕೋಟಾ ತಹಸೀಲ್ದಾರ್ ಸುರೇಶ ಚಾವಲರ, ಕರ್ನಾಟಕ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಅಂಬಣ್ಣ ಹರಳಯ್ಯ, ಸಣ್ಣ ನೀರಾವರಿ ಇಲಾಖೆಯ ಎಇಇ ವಿಜಯ ವಸ್ತ್ರದ, ಅಧಿಕಾರಿಗಳು ಇದ್ದರು.

ಹೊಸ ಬಡಾವಣೆಗಳಿಗೆ ಸೌಕರ್ಯದ ಕೊರತೆ

ರವೀಂದ್ರ, ನಂದೆಪ್ಪನವರ

ಮುದ್ದೇಬಿಹಾಳ: ತಾಲೂಕು ಕೇಂದ್ರದ ನಾಲ್ಕು ದಿಕ್ಕಿನಲ್ಲಿ ದಿನದಿಂದ ದಿನಕ್ಕೆ ಹಲವಾರು ಬಡಾವಣೆಗಳು, ಪರವಾನಗಿ ಇಲ್ಲದ ಅನಧಿಕೃತ ನಿವೇಶನಗಳು, ಹೊಸ ಕಟ್ಟಡಗಳು ನಿರ್ಮಾಣವಾಗುತ್ತಿದ್ದು, ಹೊಸ ಬಡಾವಣೆಗಳಲ್ಲಿ ರಸ್ತೆ, ಚರಂಡಿ, ಬೀದಿ ದೀಪ ಹಾಗೂ ಇನ್ನಿತರ ಮೂಲ ಸೌಕರ್ಯಗಳ ಕೊರತೆಯಿಂದ ಹೊಸ ಬಡಾವಣೆ ಜನ ಸಾರ್ವಜನಿಕರು ಪರದಾಡುವಂತಾಗಿ, ಅಭಿವೃದ್ಧಿಗೆ ಹಣಕಾಸಿನ ನೆರವು ಬೇಡಿಕೆ ಹೆಚ್ಚಿದೆ. ಊರಿನಲ್ಲಿ ಎರಡು ಹುಡುಕೋ ಬಡಾವಣೆಗಳು ನಿರ್ಮಾಣವಾಗಿವೆ ಮೊದಲಿನ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ ಕೆಟ್ಟು ಹೋಗಿದ್ದು ಮುಖ್ಯ ಚರಂಡಿಗೆ ಸಂಪರ್ಕ ಹೊಂದಿಲ್ಲ, ಇದರಿಂದ ಇಡೀ ಪ್ರದೇಶವೇ ಕೊಳಚೆ ಗುಂಡಿಯಾಗಿದೆ. ಇಲ್ಲಿಂದ ಮುಂದೆ ಟಾಪ್ ಇನ್ ಟೌನ್ ಮಂಗಲ ಭವನದ ನಂತರ ಸಾವಿರಾರು ಮನೆಗಳು ನಿರ್ಮಾಣವಾಗುತ್ತಿವೆ. ಎರಡನೇ ಹುಡುಕೊ ಬಡಾವಣೆ ಇನ್ನೂ ಉದ್ಘಾಟನೆಯಾಗಿಲ್ಲ, ಈ ಬಡಾವಣೆಗಳ ಒಳಚರಂಡಿ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಪೂರೈಕೆ ಈ ಬಡಾವಣೆಗಳು ಹೊಂದಿಲ್ಲ, ಕಚ್ಚಾ ಸಂಪರ್ಕ ರಸ್ತೆ ಮಳೆಗಾಲದಲ್ಲಿ ಈ ಪ್ರದೇಶ ನಡುಗಡ್ಡೆಯಾಗಿ ಪರಿವರ್ತನೆಯಾಗುತ್ತದೆ. ಮನೆಗಳ ಚರಂಡಿ ನೀರು ಸಂಪರ್ಕ ವ್ಯವಸ್ಥೆಯೇ ಇಲ್ಲ, ಜನ ಪ್ರತಿನಿಧಿಗಳು ಅಭಿವೃದ್ಧಿಯ ನಗರ ಮುನ್ನೋಟ ಹೊಂದಿರಬೇಕು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> **ಹೊಸ ಬಡಾವಣೆಗಳ ಮೂಲಸೌಕರ್ಯ ಕುರಿತು ಪ್ರಸ್ತಾವನೆ ಕೂಡಲೇ ಟೆಂಡರ್ ಕರೆಯುವ ಹಂತದಲ್ಲಿದೆ. ಒಳಚರಂಡಿ ಸಂಪರ್ಕ ಆಗದೇ ಇರುವ (ಮಿಸ್ಸಿಂಗ್ ಲಿಂಕ್) ಭಾಗದಲ್ಲಿ ಜೋಡಣೆ ಮಾಡುವುದು. ಹೊಸ ಬಡಾವಣೆಗಳ ಒಳಚರಂಡಿ ನಿರ್ಮಾಣ, ರಸ್ತೆ ಸಂಪರ್ಕ ಯೋಜನೆ ಕೈಗೊಳ್ಳಲಾಗುವುದು.**
> ■ ಭೀಮನಗೌಡ ಬಗಲಿ, ಪುರಸಭೆ, ನಗರ ಯೋಜನಾ ವಿಭಾಗದ ಅಭಿಯಂತರ

ಕುಂಟೋಜಿ ರಸ್ತೆಯ ಬಡವರು ವಾಸಿಸುವ ಆಶ್ರಯ ಬಡಾವಣೆ ಹಾಗೂ ಮಾರುತಿ ನಗರ ಪ್ರದೇಶವಂತೂ ಯೋಜಿತ ನಿವೇಶನಗಳನ್ನು ಹೊಂದಿಲ್ಲ, ರಸ್ತೆ, ಚರಂಡಿ ವ್ಯವಸ್ಥೆ ಇಲ್ಲ, ಪುರಸಭೆ ಅಥವಾ ನಗರ ಯೋಜನಾ ಘಟಕ ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ, ಇದಕ್ಕಾಗಿ ಯಾವುದೇ ಹಣಕಾಸಿನ ಹಾಗೂ ಆಡಳಿತಾತ್ಮಕ ನಿರ್ಧಾರಗಳು ಇನ್ನೂ ಆಗಿಲ್ಲ, ನಗರ ಯೋಜನೆ ಅಡ್ಡಾದಿಡ್ಡಿ ಆಗುತ್ತಿದೆ. ಜನ ಪ್ರತಿನಿಧಿಗಳು ಭವಿಷ್ಯದ ನಗರ ನಿರ್ಮಿಸಲು ಮುಂದಾಗಬೇಕು ಎಂದು ಆಗ್ರಹ ಮಾಡಿದ್ದಾರೆ.

ನಗರದ ಸುತ್ತು ರಸ್ತೆ ನಿರ್ಮಾಣದ ಅವಶ್ಯಕತೆ ಇದ್ದು ವಿವಿಧ ಬಡಾವಣೆ, ಒಳ ಚರಂಡಿ, ರಸ್ತೆ ಸಂಪರ್ಕ ಯೋಜಿತವಾಗಿ ಆಗಬೇಕಿದೆ. ಸರಕಾರದಿಂದ ಹೊಸದಾಗಿ ನಗರ ಯೋಜನೆಗೆ ಅನುದಾನ ದೊರೆಯುವುದೇ ಎಂದು ರವಿ ಮಾಂತಣ್ಣವರ ಎಂದರು.

ಬಿಜೆಪಿಗೆ ನೀರಾವರಿ ಶ್ರೇಯಸ್ಸು: ಅಂಗಡಿ

ವಿಜಯಪುರ: ನೀರಾವರಿಗೆ ಬಿಜೆಪಿಯೇ ದೊಡ್ಡ ಕೊಡುಗೆ ನೀಡಿದೆ. ನೀರಾವರಿ ಕಾಂಗ್ರೆಸ್ ಕೊಡುಗೆ ಎಂದು ಸಚಿವ ಡಾ.ಎಂ.ಬಿ.ಪಾಟೀಲ ಹೇಳುತ್ತಿದ್ದಾರೆ. ಈ ಕುರಿತು ಬಹಿರಂಗ ಚರ್ಚೆಗೆ ಬನ್ನಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಆಹ್ವಾನ ನೀಡಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀರಾವರಿ ಎನ್ನುವ ಪರಿಕಲ್ಪನೆಯೇ ಕಾಂಗ್ರೆಸ್ ಇಲ್ಲ, ಈಗ ನೀರಾವರಿ ಎನ್ನುವ ಕಾಂಗ್ರೆಸ್ ನಾಯಕರು 50 ವರ್ಷ ಆಳ್ವಿಕೆಯಲ್ಲಿ ಮಲಗಿದ್ದರಾ? ನೀರಾವರಿ ಆರಂಭವಾಗಿದ್ದೆ ಬಿಜೆಪಿ ಕಾಲಘಟ್ಟದಲ್ಲಿ ಎಂಬುದು ಅರ್ಥೈಸಿಕೊಳ್ಳಿ, ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಕೆರೆ ತುಂಬುವ ಯೋಜನೆ ಆರಂಭವಾಗಿದ್ದು, ಇದರ ಶ್ರೇಯಸ್ಸು ಬಿಜೆಪಿಗೆ ಸೇರಬೇಕು ಎಂದರು.

ಈ ಬಗ್ಗೆ ನಾನು ದಾಖಲೆ ಸಮೇತ ಹೇಳುವೆ, ನಾವೆಲ್ಲ ನಮ್ಮ ಶಾಸಕರ, ಕಾರ್ಯಕರ್ತರ ನೇತೃತ್ವದಲ್ಲಿ ಇದನ್ನು ಸಾಬೀತು ಪಡಿಸಲು ಸಿದ್ದ, ನೀವು ಸಹ ನಿಮ್ಮ ಶಾಸಕರ ಸಮ್ಮುಖದಲ್ಲಿ ನೀರಾವರಿ ನಿಮ್ಮ ಸಾಧನೆ ಎಂದು ಸಾಬೀತುಪಡಿಸಿ ಎಂದು ಸವಾಲು ಹಾಕಿದರು.

ಬಬಲೇಶ್ವರಮತಕ್ಷೇತ್ರದ ರಸ್ತೆಗಳು ಅಧೋಗತಿಗೆ ಹೋಗಿವೆ, ವಾಹನ ಸವಾರರು ನಿತ್ಯ ತೊಂದರೆ ಎದುರಿಸುವಂತಾಗಿದೆ, ಒಂದೇ ಒಂದು ರಸ್ತೆ ಅಲ್ಲಿ ರಾಜ್ಯ ಸರ್ಕಾರ ನಿರ್ಮಿಸಿಲ್ಲ, ಒಂದರ್ಥದಲ್ಲಿ ರಾಜ್ಯ ಸರ್ಕಾರ ದಿವಾಳಿಯಾಗಿದೆ, ಗ್ಯಾರಂಟಿ ಎನ್ನುವುದು ಸಾಧನೆಯಲ್ಲ, ಕಾಂಗ್ರೆಸ್ ಕೊನೆಗಾಲ ವಿಜಯಪುರ ಜಿಲ್ಲೆಯಿಂದಲೇ ಆರಂಭವಾಗಲಿದೆ ಎಂದರು. ದೇಶದ ಪ್ರಧಾನಿ ಬಗ್ಗೆ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲರು ಹಗುರವಾಗಿ ಮಾತನಾಡಿರುವುದು ಖಂಡನಾರ್ಹ. ಮೋದಿ ಅವರು ಆಡಳಿತ ಘಟ್ಟದಲ್ಲಿ ನಮ್ಮ ದೇಶದ ಭವಿಷ್ಯ ಉಜ್ವಲವಾಗುತ್ತಿದೆ, ಇಡೀ ಪ್ರಪಂಚ ಅವರ ಆಡಳಿತ ಮೆಚ್ಚಿದೆ, ಮೋದಿ ಅವರ ಅಭಿಮಾನಿಗಳಿಗೆ ಅಂಧಭಕ್ತರು ಕರೆದಿರುವ ನೀವು ರಾಹುಲ್ ಗಾಂಧಿ ಅವರ ಅಂಧಭಕ್ತರು, ನಮ್ಮ ದೇಶದ ಘನತೆ ಹಾಳು ಮಾಡುವ ರಾಹುಲ್ ಗಾಂಧೀ ಅವರ ಅಭಿಮಾನಿಗಳಾದ ನೀವು ಅಂಧಭಕ್ತರು, ಮೋದಿ ಅವರ ಅಭಿಮಾನಿಗಳು ವಿಚಾರವಾದಿಗಳು ನಿಮ್ಮಂತಹ ಅಂಧಭಕ್ತರಲ್ಲ ಎಂದರು.

ಬಿಜೆಪಿ ಮುಖಂಡ ಶಂಕರಗೌಡ ಪಾಟೀಲ ಮಾತನಾಡಿ, ಇಂಡಿ ಶಾಸಕ ಬುದ್ದಿವಂತ, ಒಳ್ಳೆಯವರು ಎಂಬ ಭಾವನೆ ಇತ್ತು, ಆದರೆ ಪ್ರಧಾನಿ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ, ಕಾಲುವೆ ದುರಸ್ತಿ ಕೇಂದ್ರ ಸರ್ಕಾರದ ಹೊಣೆ ಎನ್ನುವುದು ಬಾಲಿಷತನದ ಹೇಳಿಕೆ ಎಂದರು. ಅಭಿವೃದ್ಧಿ ಮಾಡಿಲ್ಲ ಎಂದು ಜನತೆ ಮಾತನಾಡಿಕೊಳ್ಳುವ ಭಾರ ಸಹಿಸಿಕೊಳ್ಳದೇ ವಿವೇಚನೆ ಇಲ್ಲದೇ ಹೇಳಿಕೆ ನೀಡುವಲ್ಲಿ ತೊಡಗಿದ್ದಾರೆ ಎಂದರು.

ಬಿಜೆಪಿ ಮುಖಂಡರಾದ ಡಿ.ಜಿ. ಬಿರಾದಾರ, ಈರಣ್ಣ ರಾವೂರ ಇದ್ದರು.



ಕಸಾಪದಿಂದ ನಾಡು-ನುಡಿ, ಸಂಸ್ಕೃತಿ ರಕ್ಷಣೆ: ವಾಲಿಕಾರ

ನಿಡಗುಂದಿ: ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆಯಾಗಿದೆ. ನಾಡು ನುಡಿ ನೆಲ-ಜಲ ಕಾಪಾಡುವ ಹಾಗೂ ಸಂಸ್ಕೃತಿ-ಪರಂಪರೆ ಉಳಿಸುವ ಬೆಳೆಸುವ ಕಾರ್ಯ ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಮಣಗೂರು ಪುನರ್ವಸತಿ ಕೇಂದ್ರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದರು. ಕನ್ನಡ ಭಾಷೆಗೆ ಎರಡುನೂರು ವರ್ಷದ ಇತಿಹಾಸ ಹೊಂದಿದೆ. ಹಳೆಗನ್ನಡ. ನಡುಗನ್ನಡ ಹಾಗೂ ಹೊಸಗನ್ನಡ ವಿಷಯಗಳನ್ನಾಗಿ ನಾವು ಅಧ್ಯಯನ ಮಾಡಿದ್ದೇವೆ. ಆಂಗ್ಲ ಭಾಷೆಯ ವ್ಯಾಮೋಹದಿಂದ ಕನ್ನಡ ಸಾಹಿತ್ಯದ ಮೇಲಿರುವ ಹಂಬಲ ಕುಸಿಯುತ್ತಿದೆ. ಮಾತೃಭಾಷೆ, ಆಡಳಿತಭಾಷೆ ಕನ್ನಡವಾಗಿರುವಾಗ ನಾವೆಲ್ಲರೂ ಕನ್ನಡ ವಾತಾವರಣ ಸೃಷ್ಟಿಸೋಣ ಎಂದರು.

ವಿಜಯಪುರನಗರಘಟಕದಗೌರವಅಧ್ಯಕ್ಷರಾದಜಯಶ್ರೀಹಿರೇಮಠ ಮಾತನಾಡಿ, ಕನ್ನಡ ಭಾಷೆ ಶಾಸ್ತ್ರೀಯ ಸ್ಥಾನಮಾನ ಪಡೆದುಕೊಂಡಿದೆ. ಅತೀ ಹೆಚ್ಚಿನ ಜ್ಞಾನಪೀಠ ಪುರಸ್ಕೃತರನ್ನು ಹೊಂದಿದೆ. ನೆರೆಯ ರಾಜ್ಯಗಳ ಪ್ರಭಾವದಿಂದ ಕನ್ನಡ ಭಾಷಿಕರ ಸಂಖ್ಯೆ ಕುಸಿತಗೊಂಡಿದೆ. ಕನ್ನಡ ಅನ್ನದ



ಭಾಷೆಯಾಗಿ ಕಡ್ಡಾಯಗೊಳಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತ ಕನ್ನಡ ಉಳಿಸುವ ಬೆಳೆಸುವ ಪ್ರಾತಿನಿಧಿಕ ಸಂಸ್ಥೆಯಾಗಿದೆ ಎಂದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ನಿಡಗುಂದಿ ಅಧ್ಯಕ್ಷರಾದ ಸಂಗಮೇಶ ಕೆಂಭಾವಿ ಮಾತನಾಡಿ ಕನ್ನಡ ನಮ್ಮೆಲ್ಲರ ಉಸಿರಾಗಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ ಆಶಯದಂತೆ ಕನ್ನಡ ಸಾಹಿತ್ಯ ಬೆಳಸಬೇಕು. ಕನ್ನಡ ಭಾಷಿಕರ ಸಂಖ್ಯೆಯು ಹೆಚ್ಚಾಗಬೇಕು ಎಂದರು.

ಪದಾಧಿಕಾರಿಗಳಾದ ಶಶಿಧರ ಪಾಟೀಲ, ಚನ್ನಬಸಪ್ಪಗೌಡ ಬಿರಾದಾರ, ಮಲ್ಲಯ್ಯ ಬೂದಿಹಾಳಮಠ, ಬಸವರಾಜ ಗೌಡರ, ನಜೀರ ಗುಳೇದ ಬಸವರಾಜ ಒಂದಾಳ, ಮಲ್ಲಿಕಾರ್ಜುನ ತೊರಗಲ್ಲಮಠ ಇದ್ದರು.

ಇಲಾಖೆ ಹೆಸರಿನಲ್ಲಿ ಆಮಿಷ: ಎಚ್ಚರಿಕೆ ವಹಿಸಲು ಸಲಹೆ

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿಮಗೆ ವಿಶೇಷ ಅನುದಾನ ಮಂಜೂರಾಗಿದ್ದು, ಇಂದೇ ನಿಮ್ಮ ಖಾತೆಗೆ ಹಣ ಜಮೆ ಮಾಡಲಾಗುವುದು. ಬೇಗ ಫೋನ್ ಪೇ ಮಾಡಿ ಎಂಬ ಅಪರಿಚಿತರ ಕರೆ ನಂಬಬಾರದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಜಿಲ್ಲೆಯ ಕಲಾವಿದರಿಗೆ ಮನವಿ ಮಾಡಿದ್ದಾರೆ.

ಈ ಅಪರಿಚಿತರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೆಸರು ಬಳಸಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಅನುದಾನ ಮಂಜೂರಾಗಿದೆ ಎಂಬ ವಂಚನೆ ಕರೆ ಬಂದಾಗ ಕಲಾವಿದರು ಆ ನಂಬರ್ ಆಧರಿಸಿ ದೂರು ನೀಡಬಹುದಾಗಿದೆ ಎಂದವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕಲಾವಿದರು, ಕಲಾ ಸಂಘಟಕರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾವಿದರಿಗೆ, ಕಲಾ ಸಂಸ್ಥೆಗಳಿಗೆ ಅನುದಾನ ಮಂಜೂರಾಗಿದೆ. ಮಂಜೂರಾಗಿರುವ ಅನುದಾನವನ್ನು ತಮ್ಮ ಖಾತೆಗೆ ಜಮೆ ಮಾಡಲು ಮುಂಗಡ ಹಣವನ್ನು ಇಂದೇ ಫೋನ್ ಪೇ ಅಥವಾ ಆನ್ ಲೈನ್ ಮೂಲಕ ಪಾವತಿಸಿದಲ್ಲಿ ಇಲಾಖೆಯಿಂದ ಮಂಜೂರಾಗಿರುವ ಹಣವನ್ನು ತಮ್ಮ ಖಾತೆಗೆ ಜಮೆ ಮಾಡಲಾಗುವುದೆಂದು ಅಪರಿಚಿತರು ದೂರವಾಣಿ ಸಂಖ್ಯೆಗಳಿಂದ ಸುಳ್ಳು, ವಂಚನೆ ಕರೆ ಮಾಡಿ ಜಿಲ್ಲೆಯ ಕಲಾವಿದರಾಗಿದ್ದ ಮೋಸ ಮಾಡುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೋಜನೆಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಅರ್ಜಿ ಆಹ್ವಾನಿಸಿ ಕ್ರಮ ವಹಿಸಲಾಗುತ್ತಿದೆ ಆದರೆ ಈ ರೀತಿ ಯಾವುದೇ ಕರೆಗಳು ಇಲಾಖೆಯಿಂದ ಮಾಡುವುದಿಲ್ಲ, ಹಾಗಾಗಿ ಕಲಾವಿದರು ಕಲಾ ಸಂಘ-ಸಂಸ್ಥೆಗಳು ಈ ರೀತಿ ಯಾವುದೇ ಕರೆಗಳಿಗೆ ಸ್ಪಂದಿಸದೆ ಹಾಗೂ ಹಣದ ಆಮಿಷಕ್ಕೆ ಒಳಗಾಗದೆ ಇಂತಹ ವಂಚನೆ ಕರೆಗಳು ಬಂದಾಗ ತಕ್ಷಣ ಕಲಾವಿದರು ತಮ್ಮ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಬೇಕು ಎಂದವರು ತಿಳಿಸಿದ್ದಾರೆ. ಆಮಿಷಕ್ಕೆ ಒಳಗಾಗಿ ಹಣ ಪಾವತಿಸಿದಲ್ಲಿ ಅದಕ್ಕೆ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ ಎಂದು ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸಂಸ್ಕಾರಯುತ ಶಿಕ್ಷಣ ಬದುಕಿಗೆ ಅಡಿಪಾಯ: ಮೊಕಾಶಿ

ವಿಜಯಪುರ: ನಮ್ಮಲ್ಲಿನ ಸುಪ್ತ ಶಕ್ತಿಗಳಾದ ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಗಳು ಬದುಕಿನ ಯಶಸ್ಸಿಗೆ ಅತ್ಯಗತ್ಯ. ಗುರುಗಳು ನೀಡುವ ಅಮೂಲ್ಯವಾದ ಜ್ಞಾನ ಮತ್ತು ಆಧ್ಯಾತ್ಮಿಕ ಶಕ್ತಿಯು ನಮ್ಮ ಆತ್ಮವನ್ನು ಜಾಗೃತಗೊಳಿಸುತ್ತದೆ ಎಂದು ವಿಜಯಪುರದ ಹಿರಿಯ ವಿದ್ವಾಂಸ ಮಧ್ವಾಚಾರ ಮೊಕಾಶಿ ಅಭಿಪ್ರಾಯಪಟ್ಟರು.

ಜಿಲ್ಲೆಯ ಕನ್ನೂರಿನ ಶಾಂತಿ ಕುಟೀರ ಆಶ್ರಮದಲ್ಲಿ ಶಾಂತಿ ಕುಟೀರ ಟ್ರಸ್ಟ್, ಭಾರತೀಯ ಸುರಾಜ್ಯ ಸಂಸ್ಥೆ ಹಾಗೂ ಸಂಡೂರಿನ ಶ್ರೀಶೈಲೇಶ್ವರ ವಿದ್ಯಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಒಂದು ತಿಂಗಳ ಉಚಿತ ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಾಂತಿ ಕುಟೀರದ ಪ್ರಶಾಂತ ವಾತಾವರಣದಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರ ಹಾಗೂ ಜೀವನದ ಮೌಲ್ಯಗಳನ್ನು ಪಡೆದ ವಿದ್ಯಾರ್ಥಿಗಳೇ ಧನ್ಯರು. ಇಚ್ಚೆಗೆ ಅನುಗುಣವಾಗಿ ಕ್ರಿಯಾಶಕ್ತಿಯು ಪೂರಕವಾಗಿ ಕೆಲಸ ಮಾಡುತ್ತದೆ. ಇಲ್ಲಿ ಪಡೆದ ಜ್ಞಾನ ನಿಮ್ಮನ್ನು ಭವಿಷ್ಯದ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತದೆ ಎಂದು ಹಾರೈಸಿದರು.

ಮಹಿಳಾ ಮತ್ತು ಬಾಲ ಕಲ್ಯಾಣ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ನಿರ್ಮಲಾ ಎಚ್.ಸುರಪುರ ಮಾತನಾಡಿ, ಜೀವನದ ಅಜ್ಞಾನ ಹೋಗಲಾಡಿಸಲು ಶಿಕ್ಷಣ ಅನಿವಾರ್ಯ. ಮಕ್ಕಳು ತಾವು ಹೇಳಿದ್ದನ್ನು ಮಾಡುವುದಕ್ಕಿಂತ ಹೆಚ್ಚಾಗಿ, ನಾವು ಮಾಡಿದ್ದನ್ನು ಅನುಕರಿಸುತ್ತಾರೆ. ಆದ್ದರಿಂದ ಪಾಲಕರು ಮತ್ತು ಶಿಕ್ಷಕರು ಮಕ್ಕಳಿಗೆ ಆದರ್ಶಪ್ರಾಯವಾದ ವ್ಯಕ್ತಿತ್ವ ಮೈಗೂಡಿಸಿಕೊಳ್ಳಬೇಕು. ಮಕ್ಕಳಿಗೆ ಕೇವಲ ಪಠ್ಯವಲ್ಲದೆ, ಕ್ರೀಡೆ ಹಾಗೂ ಜೀವನ ಕೌಶಲ್ಯಗಳನ್ನು ಕಲಿಸುವ ಅಗತ್ಯವಿದೆ. ಶಿಸ್ತು ಮತ್ತು ಸಂಯಮ ಕಲಿಸುವ ಇಂತಹ ಶಿಬಿರಗಳು ಗ್ರಾಮೀಣ ಭಾಗದ ಮಕ್ಕಳಿಗೆ ಲಭಿಸುತ್ತಿರುವುದು ಶ್ಲಾಘನೀಯ ಎಂದರು.



ಏ.10ರಿಂದ ಮೇ-10ರ ವರೆಗೆ ನಡೆದ ಈ ಶಿಬಿರದ ಹಾದಿಯನ್ನು ವಿಡಿಯೋ ವರದಿಯ ಮೂಲಕ ಪ್ರದರ್ಶಿಸಲಾಯಿತು. ಶಿಬಿರದಲ್ಲಿ ಪಾಲ್ಗೊಂಡ ಎಲ್ಲಾ ಶಿಬಿರಾರ್ಥಿಗಳಿಗೆ ಉಚಿತವಾಗಿ ಬ್ಯಾಗ್, ನೋಟ್ ಪುಸ್ತಕ, ಕಂಪಾಸ್ ಬಾಕ್ಸ್, ಪೆನ್, ಪೆನ್ಸಿಲ್ ಹಾಗೂ ಸ್ಲಿಪ್ಪರ್‌ಗಳನ್ನು ವಿತರಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಎಲ್ಲಾ ಶಿಬಿರಾರ್ಥಿಗಳಿಗೂ ಆಕರ್ಷಕ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಅಧ್ಯಕ್ಷ ಓ.ಓ.ಬಿರಾದಾರ, ಗುರುಮನೆತನದ ಹಿರಿಯರಾದ ಡಾ.ಸತೀಶ ಕನ್ನೂರ, ಶಾಂತಿ ಕುಟೀರ ಟ್ರಸ್ಟ್ ಅಧ್ಯಕ್ಷ ಶ್ರೀ ಗೋವಿಂದ ಬಾಹೇತಿ, ಸದಸ್ಯೆ ಅಸ್ಮಿತಾ ಓಕ,ರಾಮರಾಜ್ಯ ಕಲಾಮೇಳದ ಅಧ್ಯಕ್ಷ ಶ್ರೀಕೃಷ್ಣ ಗುರೂಜಿ, ಶ್ರೀಶೈಲೇಶ್ವರ ವಿದ್ಯಾ ಕೇಂದ್ರದ ಕಾರ್ಯದಶಿ ಚಿದಂಬರ ಎಸ್ ನಾನಾವಟೆ, ಭಾರತೀಯ ಸುರಾಜ್ಯ ಸಂಸ್ಥೆಯ ಅಧ್ಯಕ್ಷ ಬಿ.ಬಿ.ಪೂಜಾರ ಹಾಗೂ ಶ್ರೀನಿವಾಸ ಕುಲಕರ್ಣಿ,ಆಶ್ರಮದ ನಿವಾಸಿಗಳು ಹಾಗೂ ಶಿಕ್ಷಕರು, ಶಿಬಿರಾರ್ಥಿಗಳು, ಪಾಲಕರು ಉಪಸ್ಥಿತರಿದ್ದರು.

ಗೋವುಗಳ ರಕ್ಷಣೆ ಪ್ರತಿ ರೈತನ ಕರ್ತವ್ಯ: ಶಾಸಕ ಯತ್ನಾಳ

ವಿಜಯಪುರ: ಗೋವುಗಳನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬ ರೈತನ ಕರ್ತವ್ಯ. ಕನಿಷ್ಠ ಒಂದು ಆಕಳವನ್ನಾದರೂ ಸಾಕುವ ಕೆಲಸವಾಗಬೇಕು ಎಂದು ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ತಾಲೂಕಿನ ಕಗ್ಗೋಡ ಗ್ರಾಮದಲ್ಲಿರುವ ಸಿದ್ದೇಶ್ವರ ಸಂಸ್ಥೆಯ ರಾಮನಗೌಡ ಬಾ. ಪಾಟೀಲ (ಯತ್ನಾಳ) ಗೋರಕ್ಷಾ ಕೇಂದ್ರದಲ್ಲಿ ಗೋ ಶಾಲೆ ಆಶ್ರಯದಲ್ಲಿ ಈಚೆಗೆ ನಡೆದ ಗೋ ಆಧಾರಿತ ಕೃಷಿಕರ ಚಿಂತನಾ ಸಮಾವೇಶದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗೋವು ಕಾಮಧೇನು ಕಲ್ಪವೃಕ್ಷ ಎಂಬ ಭಾವನೆಯಿಂದ ಸಾವಿರಾರು ವರ್ಷಗಳ ಹಿಂದಿನಿಂದಲೂ ನಮ್ಮ ಪೂರ್ವಜರು ಇಡೀ ಪ್ರಾಣಿಗಳಲ್ಲಿಯೇ ಗೋವಿಗೆ ಅತ್ಯುನ್ನತ ಮಹತ್ವ ಕೊಟ್ಟಿದ್ದಾರೆ. ನಾವು ಆಧುನಿಕತೆಯಲ್ಲಿ ಯಾಂತ್ರಿಕೃತ ಒಕ್ಕಲುನಕ್ಕೆ ಒಳಗಾಗಿ, ಹಸುಗಳನ್ನು ಸಾಕುವುದು ಬಹಳ ಕಡಿಮೆ ಆಗಿದೆ. ಆದರೆ, ವಿದೇಶದಲ್ಲಿ ಬೆಳಗ್ಗೆ ಆಕಳುಗಳ ಮೇಲೆ ಕೈಯಾಡಿಸಿದರೆ ಬಿಪಿ ನಾರ್ಮಲ್ ಇರುತ್ತದೆ ಅಂತ ಹಸು ಸಾಕುತ್ತಿದ್ದಾರೆ ಎಂದು ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ಗೋ ಆಧಾರಿತ ಆರ್ಥಿಕತೆ ಅಭಿವೃದ್ಧಿಪಡಿಸಲು ಹಾಗೂ ಕೃಷಿಕರು ಗೋ ಆಧಾರಿತ ಕೃಷಿ ಹಾಗೂ ಸಾವಯವ ಕೃಷಿ ಅಳವಡಿಸಿಕೊಂಡು ಆರ್ಥಿಕ ಸಬಲತೆ ಪಡೆಯುವ ದೃಷ್ಟಿಯಿಂದ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಇಲ್ಲಿ ನೀಡುವ ಅತ್ಯಮೂಲ್ಯವಾದ ಮಾಹಿತಿ ಪಡೆದುಕೊಂಡು ನಮ್ಮೆಲ್ಲರ ಆರೋಗ್ಯದ ದೃಷ್ಟಿಯಿಂದ ಹಾಗೂ ಆರ್ಥಿಕವಾಗಿ ಸಬಲವಾಗಲು ಗೋ ಆಧಾರಿತ ಕೃಷಿ, ಸಾವಯವ ಕೃಷಿ ಅಳವಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್ ಸಂಶೋದನಾ



ನಿರ್ದೇಶಕರಾದ ಡಾ.ಶಿವಪ್ರಕಾಶ ಬಿ.ವಿ ಮಾತನಾಡಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲಕುಮಾರ್ ಭಾವಿದೊಡ್ಡಿ, ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ.ಆರ್.ಎಸ್.ಪದರಾ, ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕರಾದ ಗಂಗಾಧರ ದೇಸಾಯಿ ಅವರು ಸೇರಿದಂತೆ ಸಿದ್ದೇಶ್ವರ ಸಂಸ್ಥೆ ಪದಾಧಿಕಾರಿಗಳು, ಪ್ರಗತಿಪರ ರೈತರು, ಸಾವಯವ ಕೃಷಿ ಅವಲಂಬಿತ ಸಾವಿರಾರು ಕೃಷಿಕರು ಉಪಸ್ಥಿತರಿದ್ದರು. ಸಲಹೆಗಾರರಾದ ಡಾ.ಪ್ರಾಣೇಶ ಜಹಾಗೀರದಾರ, ಗೋ ಉತ್ಪನ್ನಗಳ ತಯಾರಿಕೆ ಕುರಿತು ತಜ್ಞ ಡಾ.ಸುಧೀಂದ್ರ ದೇಶಪಾಂಡೆ ಹಾಗೂ ಸಾವಯವ ಕೃಷಿ ಕುರಿತು ಡಾ.ರವಿಂದ್ರ ಬೆಳ್ಳಿಯವರು ಮಾಹಿತಿ ನೀಡಿದರು. ರೈತರು ಗೋ ಶಾಲೆ, ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರ, ಗೋ ಉತ್ಪನ್ನಗಳ ತಯಾರಿಕೆ ಘಟಕ ಮತ್ತು ಎರೆಹುಳು ಘಟಕಗಳಿಗೆ ಭೇಟಿ ನೀಡಿ ಮಾರ್ಗದರ್ಶನ ಪಡೆದುಕೊಂಡರು.

ಕಿರುಸುದ್ದಿ

ಕುಷ್ಟಗಿಯಿಂದ ರಾಜಧಾನಿಗೆ ರೈಲು ಓಡಿಸಲು ಮನವಿ

ಕುಷ್ಟಗಿ: ಕುಷ್ಟಗಿಯಿಂದ ಹುಬ್ಬಳ್ಳಿ ಮಾರ್ಗವಾಗಿ ರಾಜಧಾನಿ ಕೇಂದ್ರ ಬೆಂಗಳೂರಿಗೆ ರೈಲು ಬಿಡಬೇಕು ಎಂದು ಸಂಸದ ರಾಜಶೇಖರ ಹಿಟ್ನಾಳ್‌ಗೆ ರೈಲ್ವೆ ಹೋರಾಟ ಸಮಿತಿ ಪದಾಧಿಕಾರಿಗಳು ಸೋಮವಾರ ಮನವಿ ಸಲ್ಲಿಸಿದರು. ರೈಲ್ವೆ ಸಮಿತಿ ಪ್ರಧಾನ ಕಾರ್ಯದರ್ಶಿ ವಿರೇಶ ಬಂಗಾರಶೆಟ್ಟರ್ ಮಾತನಾಡಿ, ಪಟ್ಟಣದಿಂದ ತಳಕಲ್ ಮಾರ್ಗವಾಗಿ ಹುಬ್ಬಳ್ಳಿ-ಬೆಂಗಳೂರಿಗೆ ಸಂಪರ್ಕ ಹೊಂದಿರುವ ರೈಲು ಸೂಪರ್ ಫಾಸ್ಟ್ ರೈಲು ಓಡಿಸಲು ಅನುಕೂಲ ಮಾಡಿಕೊಡಬೇಕು. ಈಗಾಗಲೇ ಕುಷ್ಟಗಿ ನಗರವರಗೆ ಜಂಕ್ಷನ್ ಕಾಮಗಾರಿ ಪೂರ್ಣಗೊಂಡಿದ್ದು, ಈ ಭಾಗದ ಹಲವಾರು ಪ್ರಯಾಣಿಕರು ರಾಜಧಾನಿಗೆ ತೆರಳಲು ಅನುಕೂಲವಾಗಲಿದೆ. ಪಟ್ಟಣವಲ್ಲದೇ ಸುತ್ತಮುತ್ತಲಿನ ಗಜೇಂದ್ರಗಡ, ಇಳಕಲ್, ಹುನಗುಂದ, ಯಲಬುರ್ಗಾ, ಕುಕನೂರು, ಗದಗ ಜಿಲ್ಲೆಯವರಿಗೆ ನೆರವಾಗುತ್ತಿದ್ದು, ವೈದ್ಯಕೀಯ, ಶಿಕ್ಷಣ, ಹೈಕೋರ್ಟ್, ವ್ಯಾಪರಕ್ಕಾಗಿ ರಾಜಧಾನಿ ಕೇಂದ್ರಕ್ಕೆ ಹೋಗಿ ಬರುವುದಕ್ಕೆ ಅನುಕೂಲತೆ ಸಿಗಲಿದೆ. ದಿನಗೂಲಿ ಕಾರ್ಮಿಕರು ಬೆಂಗಳೂರಿಗೆ ಬಸ್ ಮೂಲಕ ಪ್ರಯಾಣಿಸಲು ದುಬಾರಿ ವೆಚ್ಚ ಭರಿಸಬೇಕಾದ ಅನಿವಾರ್ಯತೆ ಇದೆ. ಕೂಡಲೇ ಜನ ಸಂಪರ್ಕಕ್ಕೆ ರೈಲು ತ್ವರಿತವಾಗಿ ಬಿಡಬೇಕು ಎಂದರು. ರೈಲ್ವೆ ಸಮಿತಿ ಸದಸ್ಯರಾದ ವಿರೇಶ ಕರಡಿ, ಆಂಜನೇಯ ವಾಲ್ಮೀಕಿ, ನಜೀರಸಾಬ್, ಬಸಯ್ಯ ಸಾಲಿಮಠ ಮಂಜುನಾಥ ಮಹಾಲಿಂಗಪುರ, ಶ್ರೀಧರ ಫೋರ್ಪಡೆ ಇನ್ನಿತರರಿದ್ದರು.

ಡೊನೇಷನ್ ಹಾವಳಿಗೆ ಕಡಿವಾಣ ಹಾಕಿ

ಸಿಂಧನೂರು: ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿಗೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿ ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿ ಮಂಗಳವಾರ ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ್ ಪಾರ್ವತಿ ಅವರಿಗೆ ಮನವಿ ಸಲ್ಲಿಸಿತು. ತಾಲೂಕಿನಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನವೇ ಖಾಸಗಿ ಶಾಲಾ-ಕಾಲೇಜುಗಳಲ್ಲಿ ದಾಖಲಾತಿ ಜೋರಾಗಿ ನಡೆಯುತ್ತಿದೆ.
ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) 1983ರ ಶಿಕ್ಷಣ ಕಾಯ್ದೆಗಳು ಕಾಗದಕ್ಕಷ್ಟೇ ಸೀಮಿತವಾಗಿದ್ದು,ವಾಸ್ತವದಲ್ಲಿ ಪಾಲಕರ ಜೇಬಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಕತ್ತರಿ ಹಾಕಲಾಗುತ್ತಿದೆ. ಇನ್ನೂ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಹೆಚ್ಚಿನ ಶುಲ್ಕ ವಸೂಲಿ ಮಾಡುತ್ತಿವೆ. ಡೊನೇಷನ್ ಹಾವಳಿ ತಡೆಗಟ್ಟಲು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ರಚಿಸಬೇಕು. ಇನ್ನೂ ಈ ಡೊನೇಷನ್ ಹಾವಳಿ ತಡೆಗಟ್ಟಲು ವಿಳಂಬ ನೀತಿ ಅನುಸರಿಸಿದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ರೈತರ ಜಮೀನಿಗೆ ಸುಗಮ ರಸ್ತೆ ಸಂಪರ್ಕ ಕಲ್ಪಿಸಿ

ಯಲಬುರ್ಗಾ: ತಾಲೂಕಿನ ಮಲಕಸಮುದ್ರ, ಕೆರೆಯ ಹತ್ತಿರ ಇರುವ ಹಾಗೂ ಯಲಬುರ್ಗಾ ಸೀಮಾದ ರೈತರು ತಮ್ಮ ಜಮೀನುಗಳಿಗೆ ಹೋಗಲು ಸುಗಮ ರಸ್ತೆ ಸಂಪರ್ಕ ಕಲ್ಪಿಸಿಕೊಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ (ವಾಸುದೇವ ಬಣದ) ಯಲಬುರ್ಗಾ ತಾಲೂಕಾಧ್ಯಕ್ಷ ಶರಣಬಸಪ್ಪ ದಾನಕ್ಕೆ ಒತ್ತಾಯಿಸಿದ್ದಾರೆ.
ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಯಲಬುರ್ಗಾದ ಗಣೇಶ ದೇವಸ್ಥಾನದಿಂದ ಮಲಕಸಮುದ್ರ ಕೆರೆಯವರೆಗೆ ಇರುವ ರಸ್ತೆಯನ್ನು ಸರಿಪಡಿಸಬೇಕು.



ಮಲಕಸಮುದ್ರ ಕೆರೆಯ ಪಕ್ಕದಲ್ಲಿರುವ ರಸ್ತೆಯಲ್ಲಿ ಹಾಪು ಹಾಗು ಮುಳ್ಳು ಕಂಠಿಗಳು ಸಾಕಷ್ಟು ಬೆಳೆದು ದಾರಿಯಿಲ್ಲದೆ ರೈತರು ಪರದಾಡುತ್ತಿದ್ದಾರೆ, ಸರ್ವೆ ನಂಬರ 255ರ ಮುಂದಿನ ಹೊಲಗಳಿಗೆ ಹೋಗುವ ರೈತರಿಗೆ ದಾರಿಯಿಲ್ಲದೆ ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದು, ಈ ಮಾರ್ಗವಾಗಿ ಸುಮಾರು 10 ವರ್ಷದಿಂದ ರೈತರು ಪಡ ಬಿದ್ದಿರುವ ತಮ್ಮ ಜಮೀನುಗಳಿಗೆ ಹೋಗಿ ಮುಳ್ಳು ಕಂಠಿ ಸ್ವಚ್ಛಗೊಳಿಸಿ ಬಿತ್ತನೆಗೆ ಹದಗೊಳಿಸಬೇಕಾದರೆ ಸುಗಮ ದಾರಿಯಿಲ್ಲದೆ ಪರದಾಡುವಂತಾಗಿದೆ ಎಂದರು. ಎರಡು ಎಕರೆ ಹೊಲಕ್ಕೆ ಲಕ್ಷಾಂತರ ರೂ. ಗಳನ್ನು ಖರ್ಚು ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.ಹೀಗಾಗಿ ರೈತರ ಬದುಕು ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಸಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಕೂಡಲೇ ಸುಗಮ ರಸ್ತೆ ಸಂಪರ್ಕ ಕಲ್ಪಿಸಲು ನಮ್ಮ ಹೊಲ ನಮ್ಮ ದಾರಿ ಯೋಜನೆ ಮೂಲಕ ಅಭಿವೃದ್ಧಿ ಪಡಿಸುವಂತೆ ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಮುಂದಾಗಬೇಕು. ಈ ರೈತರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಮುಂದಿನ ದಿನಮಾನದಲ್ಲಿ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದು ತಿಳಿಸಿದ್ದಾರೆ.



ಕುಷ್ಟಗಿ: ಕುಷ್ಟಗಿಯಿಂದ ಹುಬ್ಬಳ್ಳಿ ಮಾರ್ಗವಾಗಿ ರಾಜಧಾನಿ ಕೇಂದ್ರ ಬೆಂಗಳೂರಿಗೆ ರೈಲು ಬಿಡಬೇಕು ಎಂದು ಸಂಸದ ರಾಜಶೇಖರ ಹಿಟ್ನಾಳ್‌ಗೆ ರೈಲ್ವೆ ಹೋರಾಟ ಸಮಿತಿ ಪದಾಧಿಕಾರಿಗಳು ಸೋಮವಾರ ಮನವಿ ಸಲ್ಲಿಸಿದರು.

ಸಂಚಾರ ನಿಯಮ ಉಲ್ಲಂಘಿಸಿದರೆ ಕ್ರಮ

ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ಸಿಂಧನೂರು ನಗರವು ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಪ್ರಮುಖ ನಗರಗಳಲ್ಲಿ ಇದು ಒಂದು ಪ್ರಮುಖ ನಗರವಾಗಿರುವುದರಿಂದ ಈ ನಗರದಲ್ಲಿ ವಾಹನ ಸಂಚಾರ ನಿಯಮ ಉಲ್ಲಂಘನೆ ಹಾಗೂ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ.
ಡಿವೈಎಸ್ಪಿ ಚಂದ್ರಶೇಖರ ಜಿ.ನಾಯಕ ಹಾಗೂ ಪಿಐ ವೀರಾರಡ್ಡಿ,ನಗರದಲ್ಲಿ ಪ್ರಮುಖ ವೃತ್ತಗಳು ಹಾಗೂ ಜನಸಂದಣಿ ಪ್ರದೇಶಗಳಲ್ಲಿ ರೌಂಡ್ಸ್ ನಡೆಸಿ ಟ್ರಾಫಿಕ್ ನಿಯಮ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.
ನಗರದ ಸುಕಾಲಪೇಟೆ, ಗಾಂಧಿ ಸರ್ಕಲ್, ಚನ್ನಮ್ಮ ಸರ್ಕಲ್ ಇತರ ಪ್ರದೇಶಗಳಲ್ಲಿ ಸಂಚರಿಸಿ ನಿಯಮ ಉಲ್ಲಂಘನೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಡಿವೈಎಸ್ಪಿ ಎಚ್ಚರಿಕೆ ನೀಡಿದರು. ಸಿಂಧನೂರಿನಲ್ಲಿ ಈಗಾಗಲೇ 101ಸಿಸಿ ಕ್ಯಾಮರಾಗಳು ಕಾರ್ಯಾರಂಭ ಮಾಡಿದ್ದು, ಪ್ರಮುಖ ರಸ್ತೆಗಳು, ವೃತ್ತಗಳು, ವ್ಯಾಪಾರ ಪ್ರದೇಶಗಳು ಸಂಪೂರ್ಣ ನಿಗಾದಲ್ಲಿವೆ. ಪ್ರತಿ ದಿನ ನಗರದಲ್ಲಿ ಸಂಚಾರ ಮಾಡುವಂತ ವಾಹನ ಸವಾರರು ಹೆಲ್ಮೆಟ್ ಧರಿಸದಿರುವುದು, ಸೀಟ್ ಬೆಲ್ಟ್ ಹಾಕದಿರುವುದು, ನೋಪಾರ್ಕಿಂಗ್ ಪ್ರದೇಶಗಳಲ್ಲಿ ವಾಹನ ನಿಲ್ಲಿಸುವುದು. ಸಿಗ್ನಲ್ ಉಲ್ಲಂಘನೆ, ಅತಿವೇಗ ಚಾಲನೆ ಎಲ್ಲವೂ ಕ್ಯಾಮರಾದಲ್ಲಿ ಸೆರೆಯಾಗಲಿದ್ದು, ವಾಹನ ಮಾಲೀಕರ ಮನೆಗೆ ನೇರವಾಗಿ ದಂಡದ ನೋಟಿಸ್ ಕಳಿಸಲಾಗುತ್ತದೆ ಎಂದು ಡಿವೈಎಸ್ಪಿ ತಿಳಿಸಿದರು.



ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ಸಿಂಧನೂರು ನಗರವು ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಪ್ರಮುಖ ನಗರಗಳಲ್ಲಿ ಇದು ಒಂದು ಪ್ರಮುಖ ನಗರವಾಗಿರುವುದರಿಂದ ಈ ನಗರದಲ್ಲಿ ವಾಹನ ಸಂಚಾರ ನಿಯಮ ಉಲ್ಲಂಘನೆ ಹಾಗೂ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ.

ಬಾಲಕ ರಿತೇಶ್ ಮೃತಪಟ್ಟ ಪ್ರಕರಣ | ರಾಠೋಡ್ ಒತ್ತಾಯ

ನ್ಯಾಯ ಒದಗಿಸಲು ಆಗ್ರಹ

ಕಲಬುರಗಿ: ಚಿತ್ತಾಪುರ ತಾಲೂಕಿನ ಕೊಂಚೂರು ಡಿಗ್ಗಿ ತಾಂಡಾದಲ್ಲಿ ಅಕ್ರಮ ಗಣಿಗಾರಿಕೆಯಿಂದ ನಿರ್ಮಾಣಗೊಂಡಿತೆಂದು ಆರೋಪಿಸಲಾದ ನೀರಿನಿಂದ ತುಂಬಿದ ಗುಂಡಿಯಲ್ಲಿ ಬಿದ್ದು 11 ವರ್ಷದ ಬಾಲಕ ರಿತೇಶ್ ಮೃತಪಟ್ಟ ಪ್ರಕರಣಕ್ಕೆ ನ್ಯಾಯ ದೊರಕಿಸಬೇಕು ಎಂದು ಬಿಜೆಪಿ ಮುಖಂಡ ಮಣಿಕಾಂತ ರಾಠೋಡ್ ಆಗ್ರಹಿಸಿದರು.
ಬುಧವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ವೆ ನಂ. 115, 99/4 ಹಾಗೂ 99/5 ಪ್ರದೇಶಗಳಲ್ಲಿ ಹಲವು ವರ್ಷಗಳಿಂದ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಗ್ರಾಮಸ್ಥರು ಅನೇಕ ಬಾರಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಗಂಭೀರ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿದರು.
ರಿತೇಶ್ ಸಾವಿನ ಬಳಿಕ ಗ್ರಾಮಸ್ಥರು ಮತ್ತು ಮಹಿಳೆಯರು ಶಾಂತಿಯುತವಾಗಿ ನ್ಯಾಯಕ್ಕಾಗಿ ಪ್ರತಿಭಟನೆ ನಡೆಸಿದರೂ, ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಜನರ ಮೇಲೆಯೇ ಭಾರೀ ಪೊಲೀಸ್ ಪಡೆ ಬಳಸಲಾಗಿದೆ ಎಂದು ದೂರಿದರು.
ಮೇ 7ರಂದು ಬೆಳಗ್ಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ ಬಳಿಕ ಕುಟುಂಬದ ಸಂಪೂರ್ಣ ಒಪ್ಪಿಗೆಯಿಲ್ಲದೆ ಮೃತದೇಹವನ್ನು ಪೊಲೀಸರು ತೆಗೆದುಕೊಂಡು ಹೋದರೆಂದು ಆರೋಪಿಸಿದರು. ಕಾನೂನು ಎಲ್ಲರಿಗೂ ಒಂದೇ. ಬಡವರ ಧ್ವನಿಯನ್ನು ಅಡಗಿಸಲು ಪೊಲೀಸರನ್ನು ಬಳಸಿಕೊಂಡರೆ ನಾವು ಸುಮ್ಮನಿರುವುದಿಲ್ಲ. ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ಮೇಲೆ ತಕ್ಷಣ ಕ್ರಿಮಿನಲ್ ಕೇಸ್ ದಾಖಲಿಸಿ, ದೌರ್ಜನ್ಯ ಎಸಗಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.
ನ್ಯಾಯಕ್ಕಾಗಿ ಹೋರಾಟದ ಹಾದಿ: ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ವಿಶ್ರಮಿಸುವುದಿಲ್ಲ ಎಂದು ಎಚ್ಚರಿಸಿದ ಅವರು, ಈ ಹೋರಾಟವನ್ನು ರಾಜ್ಯ ಮಟ್ಟಕ್ಕೆ ಕೊಂಡೊಯ್ಯುವುದಾಗಿ ತಿಳಿಸಿದರು. ಬಾಲಕನ ಸಾವಿಗೆ ಕಾರಣವಾದ ಅಕ್ರಮ ಗಣಿಗಳನ್ನು ಶಾಶ್ವತವಾಗಿ ಮುಚ್ಚಬೇಕು. ಸಂತ್ರಸ್ತ ಕುಟುಂಬಕ್ಕೆ ಗರಿಷ್ಠ ಪರಿಹಾರ ನೀಡಬೇಕೆಂದು ಸರ್ಕಾರಕ್ಕೆ ಗಡುವು ನೀಡಿದರು.



ಜಿಲ್ಲಾ ಉಸ್ತುವಾರಿ ಮಂತ್ರಿಗಳ ಮೂಗಿನ ನೇರಕ್ಕೆ ಅಕ್ರಮಗಳು ನಡೆಯುತ್ತಿದ್ದರೂ ನೀವು ಸುಮ್ಮನೆ ಕುಳಿತಿರುವುದು ನೋಡಿದರೆ ಇದು ಅಧಿಕಾರದ ದುರುಪಯೋಗ ಎಂಬುದು ಸ್ಪಷ್ಟವಾಗುತ್ತದೆ. ಅಕ್ರಮ ಮರಳು ಗಣಿಗಾರಿಕೆಯಿಂದ ಅಧಿಕಾರಿಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಇದೊಂದು ನಾಚಿಕೆಗೇಡಿನ ಸಂಗತಿ. ಬಡವರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ.
■ ಸಿದ್ದಲಿಂಗ ಸ್ವಾಮೀಜಿ, ಶಿವಸೇನಾ ಕರ್ನಾಟಕ ರಾಜ್ಯಾಧ್ಯಕ್ಷ

ಅಧಿಕಾರಿಗಳಿಗೆ ಸೂಚನೆ

ಕೊಂಚೂರು ಡಿಗ್ಗಿ ತಾಂಡಾದಲ್ಲಿ ಬಾಲಕನ ಸಾವು ಹಾಗೂ ಗ್ರಾಮಸ್ಥರ ಮೇಲೆ ನಡೆದ ಪೊಲೀಸ್ ದೌರ್ಜನ್ಯದ ಕುರಿತು ಸಲ್ಲಿಸಲಾದ ಅರ್ಜಿಯನ್ನು ಹೈಕೋರ್ಟ್ ಕಲಬುರಗಿ ಪೀಠವು ಗಂಭೀರವಾಗಿ ಪರಿಗಣಿಸಿದೆ. ಪ್ರಕರಣದಲ್ಲಿ ಪೊಲೀಸ್ ನಡೆ ಅಮಾನವೀಯವಾಗಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ, ಕಲಬುರಗಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ವಾಡಿ ಪೊಲೀಸ್ ಠಾಣೆಯ ಪಿಎಸ್ಐ ಅವರಿಗೆ ವೈಯಕ್ತಿಕವಾಗಿ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಂತೆ ಹೈಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಿ: ಕಲ್ಲೇಶ

ಯಲಬುರ್ಗಾ: ಪ್ರತಿಯೊಬ್ಬ ಕ್ರೀಡಾಪಟುಗಳು ಕ್ರೀಡಾ ಸ್ಪರ್ಧಾ ಮನೋಭಾವ ಬೆಳೆಸಿಕೊಂಡಾಗ ಉತ್ತಮ ಕ್ರೀಡಾಪಟುವಾಗಲು ಸಾಧ್ಯ ಎಂದು ಸ್ಥಳೀಯ ಕ್ರೀಡಾಪಟು ಕಲ್ಲೇಶ ಕರಮುಡಿ ಹೇಳಿದರು.
ತಾಲೂಕಿನ ಕಲ್ಲೂರು ಗ್ರಾಮದಲ್ಲಿ ಬುಧವಾರ ಕ್ರಿಕೆಟ್ ಪ್ರೀಮಿಯರ್ ಲೀಗ್ ಸೀಸನ್-3 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಇತ್ತಿಚೆಗೆ ಯುವಕರು ಕ್ರಿಕೇಟ್‌ಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಕ್ರೀಡೆ ಯಾವುದೇ ಆಗಿರಲಿ ಕ್ರೀಡಾಪಟುಗಳು ಹೆಚ್ಚು ಆಸಕ್ತಿ ಬೆಳೆಸಿಕೊಂಡಾಗ ಕ್ರೀಡೆಯಲ್ಲಿ ಹೆಚ್ಚು ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದರು.
ಗ್ರಾಪಂ ಮಾಜಿ ಅಧ್ಯಕ್ಷ ನಾಗಯ್ಯ ಗುರುಮಠ ಕ್ರಿಕೇಟ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕ್ರೀಡೆಯಲ್ಲಿ ಸೋಲು-ಗೆಲವು ಎರಡನ್ನು ಕ್ರೀಡಾಪಟುಗಳು ಸಮಾನ ಮನಸ್ಸಿನಿಂದ ಸ್ವೀಕರಿಸುವ ಗುಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಅಂದಾಗ ಕ್ರೀಡೆ ನಮ್ಮನ್ನು ಎತ್ತರ ಸ್ಥಾನಕ್ಕೆ ಕರೆದ್ಯೊಯುತ್ತದೆ ಹೀಗಾಗಿ ಪ್ರತಿಯೊಬ್ಬರು ಕ್ರೀಡಾ ಮನೋಭಾವನೆ ಬೆಳಸಿಕೊಳ್ಳುವ ಮೂಲಕ ಉತ್ತಮ ಸಾಧನೆಗೈದು ಹೆಚ್ಚೆಚ್ಚು ಪದಕ ಪಡೆದು ದೇಶದ ಕೀರ್ತಿ ಹೆಚ್ಚಿಸುವತ್ತ ಗಮನಹರಿಸಬೇಕು ಎಂದು ಹೇಳಿದರು.
ಪ್ರಥಮ ದರ್ಜೆ ಗುತ್ತಿಗೆದಾರ ಬಸವರಾಜ ಮ್ಯಾಗೇರಿ ಮಾತನಾಡಿ, ಕ್ರೀಡೆಗೆ ಗಮನಹರಿಸಿದಂತೆ ಶಿಕ್ಷಣದ ಕಡೆಗೂ ಅಷ್ಟೇ ಕಾಳಜಿ ವಹಿಸಿ ಎರಡರಲ್ಲೂ ಉತ್ತಮ ಸಾಧನೆ ಮಾಡಿ ರಾಜ್ಯ,ಅಂತರರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡು ಗ್ರಾಮ,ತಾಲೂಕು,ಜಿಲ್ಲೆಯ ಕೀರ್ತಿಗೆ ಭಾಜನರಾಗಬೇಕು ಎಂದರು.
ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಸವರಾಜ ಮೆಣಸಿನಕಾಯಿ, ಎಸ್‌ಡಿಎಂಸಿ ಸದಸ್ಯ ವೀರೇಶ ಮೂಲಿಮನಿ, ಕ್ರೀಡಾ ಪ್ರೋತ್ಸಾಹಕ ಪ್ರಭು ಬೆಣಕಲ್, ಪೂರ್ವಿ ತಂಡದ ಮಾಲೀಕರಾದ ಕಲ್ಲಪ್ಪ ಇಳಿಗೇರ್, ತಂಡದ ಮಾಲೀಕರಾದ ಅಭಿ ತೊಂಡಿಹಾಳ, ಹುಬ್ಬಳ್ಳಿ ಟೈಗರ್ ತಂಡದ ಮಾಲೀಕರು ಹಾಗೂ ಇನ್ನುಳಿದ ಎರಡು ತಂಡದ ಮಾಲೀಕರು. ಪ್ರಕಾಶ ಕಟಿಗೆಹಳ್ಳಿ, ಮಂಜುನಾಥ ಕರಮುಡಿ, ವೀರೇಶ್ ತೋಟದ, ವಿಶ್ವನಾಥ್ ಸಂಗನಾಳಮಠ, ದೊಡ್ಡೇಶ್ ಹೂಗಾರ್, ನಿಂಗಪ್ಪ ದ್ಯಾಂಪೂರ್, ಕಲ್ಲೇಶ್ ಹೂಗಾರ, ಮುರ್ತುಜಾಸಾಬ ಸೇರಿದಂತೆ ಗ್ರಾಮಸ್ಥರು, ಕ್ರೀಡಾ ಅಭಿಮಾನಿಗಳು ಇದ್ದರು.



ಅಳತೆ ಅನುಸಾರ ನರೇಗಾ ಕೆಲಸ ನಿರ್ವಹಿಸಿ

ಮಸ್ಕಿ: ತಾಲೂಕಿನ ಮಾರಲದಿನ್ನಿ ಜಲಾಶಯದ ಹೂಳು ಎತ್ತುವ ಕಾಮಗಾರಿ ಸ್ಥಳದಲ್ಲಿ ಬುಧವಾರ ರೋಜ್‌ಗಾರ್ ದಿನ ಆಚರಿಸಲಾಯಿತು.
ಈ ವೇಳೆ ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ್ ಮಾತನಾಡಿ, ಬೇಸಿಗೆ ಹಿನ್ನೆಲೆಯಲ್ಲಿ ಹೊಲಗಳಲ್ಲಿ ಕೆಲಸ ಇಲ್ಲದೇ ಇರುವುದರಿಂದ ನರೇಗಾ ಕೆಲಸಗಳಿಗೆ ಬೇಡಿಕೆ ಹೆಚ್ಚಿದೆ. ಹೀಗಾಗಿ ಗರಿಷ್ಠ ಸಂಖ್ಯೆಯಲ್ಲಿ ಕೆಲಸ ಒದಗಿಸಲಾಗುತ್ತಿದೆ. ಕೂಲಿ ಹಣದಲ್ಲಿ ಬರುವ ಜೂನ್ ತಿಂಗಳಲ್ಲಿ ರೈತರು ತಮ್ಮ ಮಕ್ಕಳ ಶಾಲಾ ಕಾಲೇಜು ಶುಲ್ಕ, ಕೃಷಿ ಚಟುವಟಿಕೆಗಳಾದ ಬಿತ್ತನೆ ಬೀಜ, ರಸಗೊಬ್ಬರ ಖರೀದಿ, ಕಳೆ ತೆಗೆಯಲು ಅನುಕೂಲವಾಗಲಿದೆ. ನರೇಗಾ ಕೂಲಿಕಾರರು ಅಳತೆ ಅನುಸಾರ ಕೆಲಸ ನಿರ್ವಹಿಸಿ ಸಂಪೂರ್ಣ ಕೂಲಿ ಮೊತ್ತ ಪಡೆಯಬೇಕು. ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಕೂಲಿಕಾರರು ಆರೋಗ್ಯದ ಕಡೆ ಗಮನಹರಿಸಬೇಕು. ಹೀಗಾಗಿ ನರೇಗಾ ಕಾಮಗಾರಿ ಸ್ಥಳದಲ್ಲಿ ನೆರಳು, ನೀರು, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಒದಗಿಸಲಾಗುತ್ತಿದೆ. ಸರ್ಕಾರದ ಆದೇಶದಂತೆ ಎನ್‌ಎಂಎಂಎಸ್ ತಂತ್ರಾಂಶದಲ್ಲಿ ಎರಡು ಬಾರಿ ಹಾಜರಾತಿ ದಾಖಲಿಸಬೇಕು ಎಂದರು.
ಈ ವೇಳೆ ಅಡವಿಬಾವಿ (ಮಸ್ಕಿ) ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಸಂತೋಷ, ತಾಂತ್ರಿಕ ಸಂಯೋಜಕ ಸೈಮನ್ ರಿಚರ್ಡ್, ತಾಂತ್ರಿಕ ಸಹಾಯಕ ಅಭಿಯಂತರ ಅಜೀಂ ಪಾಷಾ, ಜಾವೀದ್ ಪಾಷಾ, ತಾಪಂ ಐಇಸಿ ಸಂಯೋಜಕ ಸತೀಶ್, ಬಿಎಫ್‌ಟಿ ದುರ್ಗೇಶ್, ಮೇಟಿಗಳು ಇದ್ದರು.
ಸಂತೆಕಲ್ಲೂರು: ಸಂತೆಕಲ್ಲೂರು ಗ್ರಾಪಂ ಕೂಲಿಕಾರರು ಮಾರಲದಿನ್ನಿ ಜಲಾಶಯದ ಹೂಳುತೆಗೆದ ಕಾಮಗಾರಿಯನ್ನು ಸಹಾಯಕ ನಿರ್ದೇಶಕ ಶಿವಾನಂದರಡ್ಡಿ ಪರಿಶೀಲಿಸಿದರು.
ತಾಂತ್ರಿಕ ಸಹಾಯಕ ಅಭಿಯಂತರರಾದ ಅರುಣ್ ಅವರು ಕೆಲಸದ ಅಳತೆ ಪಡೆದರು.
ಈ ವೇಳೆ ಸಂತೆಕಲ್ಲೂರು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ನಾಗರಾಜ್, ಕಾರ್ಯದರ್ಶಿ ಅಯ್ಯನಗೌಡ, ಗ್ರಾಮ ಕಾಯಕ ಮಿತ್ರರಾದ ನಿರ್ಮಲಾ, ಮೇಟಿಗಳು ಇದ್ದರು.



ಪೌರ ಕಾರ್ಮಿಕರು ಆರೋಗ್ಯದ ಕಾಳಜಿ ವಹಿಸಲಿ

ರಾಯಚೂರು: ಪೌರ ಕಾರ್ಮಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ 5 ಲಕ್ಷ ರೂ. ನಗದು ರಹಿತ ಆರೋಗ್ಯ ವಿಮಾ ಸೌಲಭ್ಯವನ್ನು ಸರ್ಕಾರ ಪೌರ ಕಾರ್ಮಿಕರಿಗೆ ನೀಡುತ್ತಿದೆ. ನಿವೃತ್ತಿ ವರೆಗೂ ಕಾರ್ಡ್ ಬಳಸಿ ಆರೋಗ್ಯ ಚಿಕಿತ್ಸೆ ಪಡೆಯಬಹುದೆಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಹೇಳಿದರು.
ಬುಧವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ರಾಯಚೂರು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನೇರ ಪಾವತಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮೆ ಕಾರ್ಡ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ರಾಜ್ಯದಲ್ಲಿ ಮುಖ್ಯಮಂತ್ರಿಗಳಿಂದ 5,744 ಪೌರ ಕಾರ್ಮಿಕರಿಗೆ ಆರೋಗ್ಯ ಕಾರ್ಡಗಳ ವಿತರಣೆ ಮಾಡಲಾಗಿದೆ. ರಾಯಚೂರು ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಸ್ವಚ್ಚತೆಯಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿದೆ. ನಮ್ಮ ತಾಯಿಯು ಬೆಂಗಳೂರಿನಲ್ಲಿ ಸ್ವೀಪರ್ ಆಗಿ ಕೆಲಸ ಮಾಡಿದ್ದಾರೆ. ಆರೋಗ್ಯ ವಿಚಾರದಲ್ಲಿ ಪೌರ ಕಾರ್ಮಿಕರು ಹೆಚ್ಚಿನ ಕಾಳಜಿ ವಹಿಸಬೇಕು. ಮುಂದಿನ ದಿನಗಳಲ್ಲಿ ಪೌರ ಕಾರ್ಮಿಕ ಅವಲಂಬಿತ ಕುಟುಂಬಕ್ಕೆ ಈ ಯೋಜನೆಯನ್ನು ವಿಸ್ತರಣೆ ಮಾಡಲಾಗುತ್ತದೆ ಎಂದರು.
ಪೌರ ಕಾರ್ಮಿಕರು ಧೈರ್ಯವಾಗಿ ಆರೋಗ್ಯ ಕಾರ್ಡ್ ಉಪಯೋಗಿಸಬಹುದಾಗಿದೆ. ಐಟಿಬಿಟಿ ಉದ್ಯೋಗಿಗಳಿಗೆ ನೀಡುವ ಸೌಲಭ್ಯಗಳನ್ನು ತಮಗೆ ನೀಡಲಾಗುತ್ತಿದೆ. ಐಪಿಡಿ ಸಾಲಪ್ಪ ವರದಿ ಪ್ರಕಾರ 36 ಅಂಶಗಳನ್ನು ಜಾರಿ ಮಾಡಲಾಗಿದೆ ಎಂದರು.
ಡಿಸಿ ಪೂವಿತಾ.ಎಸ್ ಮಾತನಾಡಿ, ಪೌರ ಕಾರ್ಮಿಕರನ್ನು ನೇರ ಪಾವತಿ ಪೌರ ಕಾರ್ಮಿಕರನ್ನಾಗಿ ಮಾಡಲು ಸರ್ಕಾರ ಹಂತ ಹಂತವಾಗಿ ಪ್ರಯತ್ನ ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯು ಬಹಳಷ್ಟು ಬದಲಾವಣೆ ಆಗಿದೆ. ಮುಂದೆಯೂ ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿ ಬದಲಾವಣೆ ಮಾಡೋಣ, ಪೌರ ಕಾರ್ಮಿಕರು ಕೆಲಸದ ಎಲ್ಲ ಸುರಕ್ಷತಾ ಸಾಮಗ್ರಿಗಳನ್ನು ಬಳಸಿಕೊಂಡು ಕೆಲಸ ಮಾಡಬೇಕು ಎಂದರು. ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ ಹಾಗೂ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕ ರವಿ.ಟಿ.ಕುಮಾರ ಮಾತನಾಡಿದರು. ಪಾಲಿಕೆ ಕಂದಾಯ ಆಯುಕ್ತ ಶರಣಪ್ಪ, ಪಾಲಿಕೆ ಸದಸ್ಯ ಕಾರ್ಯದರ್ಶಿ ಕೃಷ್ಣ ಸೇರಿದಂತೆ ಇತರರಿದ್ದರು.



ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಯೋಜಿಸಿದ್ದ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.
ಮಂಗಳವಾರಪೇಟೆ ವೀರಸಂಗಮೇಶ್ವರ ಮಹಾಸ್ವಾಮಿಗಳು, ಸೋಮವಾರಪೇಟೆ ಹಿರೇಮಠದ ಭಿನವ ರಾಚೋಟಿ ವೀರಶಿವಾಚಾರ್ಯ ಸ್ವಾಮೀಜಿ ಹಾಗೂ ಕರ್ನಾಟಕ ಸರಕಾರದ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ರಾಯಚೂರು ವಿಭಾಗೀಯ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ ಅವರು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪು?ನಮನ ಸಲ್ಲಿಸಿದರು.
ಈ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಶರಣಪ್ಪ ಸತ್ಯಂಪೇಟೆ, ಸಿಪಿಐ ಉಮೇಶ್ ಕಾಂಬಳೆ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಾ, ಸಮಾಜದ ಮುಖಂಡರಾದ ಡಾ. ಬಸವಗೌಡ ಪಾಟೀಲ, ರಾಮನಗೌಡ ಏಗನೂರು, ಶರಣಪ್ಪ ಸೇರಿದಂತೆ ಸಮಾಜ ಇತರೆ ಮುಖಂಡರು, ಸಾರ್ವಜನಿಕರಿದ್ದರು. ಇದಕ್ಕೂ ಪೂರ್ವದಲ್ಲಿ ಸಚಿವ ಡಿ.ಸುಧಾಕರ ಅವರ ನಿಧನದ ಹಿನ್ನೆಲೆಯಲ್ಲಿ ಐದು ನಿಮಿಷಗಳ ಮೌನಾಚರಣೆ ಮಾಡಲಾಯಿತು.

ಪ್ರೊ.ಬಿ.ಕೆ.ರವಿ ಪರಿಶ್ರಮ ಹಿರಿದು: ಪ್ರೊ.ಬೆಟ್ಟದೂರ

ಕೊಪ್ಪಳ: ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿಯನ್ನು ಹಾಕಿದ್ದು ಬಿ.ಕೆ.ರವಿಯವರು. ವಿಶ್ವವಿದ್ಯಾಲಯ ಸ್ಥಾಪಿಸುವಲ್ಲಿ ಅವರ ಪರಿಶ್ರಮ ಹಿರಿದು ಎಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಹಿರಿಯ ಹೋರಾಟಗಾರ ಪ್ರೊ.ಅಲ್ಲಮಪ್ರಭು ಬೆಟ್ಟದೂರ ಹೇಳಿದರು.
ಅವರು ಬುಧವಾರ ತಳಕಲ್‌ನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜ್ ಆವರಣದಲ್ಲಿರುವ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ನಡೆದ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವತಿಯಿಂದ ವಿಶ್ವವಿದ್ಯಾಲಯದ ಸಂಸ್ಥಾಪನಾ ಕುಲಪತಿ ಪ್ರೊ.ಬಿ.ಕೆ.ರವಿ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.
ಬಿ.ಕೆ.ರವಿ ಅವರು ಕೊಪ್ಪಳ ವಿಶ್ವವಿದ್ಯಾಲಯದ ಕಡೆ ಜನರನ್ನು ಕೊಂಡೊಯ್ದರು. ನಮ್ಮ ಜಿಲ್ಲೆಯ ಮಕ್ಕಳು ಪದವಿ, ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸಕ್ಕೆ ಬೇರೆ ಊರುಗಳಿಗೆ, ಜಿಲ್ಲೆಗಳಿಗೆ ಹೋಗುವ ಪರಿಸ್ಥಿತಿ ಇತ್ತು. ಆದರೆ ನಮ್ಮ ಜಿಲ್ಲೆಯ ಹೆಮ್ಮೆ ನಮ್ಮ ಕೊಪ್ಪಳ ವಿಶ್ವವಿದ್ಯಾಲಯ ಸ್ಥಾಪನೆ ನಂತರ ನಮ್ಮ ಜಿಲ್ಲೆಯ ಮಕ್ಕಳಿಗೆ ಹೆಚ್ಚಿನ ಅನುಕೂಲವಾಗಿದೆ. ಕೊಪ್ಪಳ ವಿವಿಯ ಸ್ನಾತಕೋತ್ತರ ಕೇಂದ್ರಗಳನ್ನೂ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿದ್ದು, ಸ್ಥಳೀಯವಾಗಿ ಶೈಕ್ಷಣಿಕ ಸೌಲಭ್ಯ ದೊರೆಯುವಂತಾಗಿದೆ. ಇದರ ಪ್ರಮುಖ ರೂವಾರಿ ಪ್ರೊ.ಬಿ.ಕೆ. ರವಿಯವರು ಎಂದು ಹೇಳಿದರು.
ಸನ್ಮಾನಿತರಾಗಿ ಮಾತನಾಡಿದ ಸಂಸ್ಥಾಪನಾ ಕುಲಪತಿ ಪ್ರೊ.ಬಿ.ಕೆ. ರವಿ ಅವರು, ಯಾವುದೇ ಒಂದು ವಿಶ್ವವಿದ್ಯಾಲಯ ಸಂಸ್ಥಾಪನೆ ಮಾಡಿ ಮುನ್ನಡೆಸುವುದು ಸುಲಭದ ಮಾತಲ್ಲ. ಅದರ ಹಿಂದೆ ಕಾಣದ ಕೈಗಳ ಪರಿಶ್ರಮ ಕೂಡ ಇರುತ್ತದೆ. ಕೊಪ್ಪಳ ಜನತೆ ಮತ್ತು ಜನಪ್ರತಿನಿಧಿಗಳು ವಿಶ್ವವಿದ್ಯಾಲಯ ಸಂಸ್ಥಾಪಿಸುವಲ್ಲಿ ಹಲವು ರೀತಿಯಲ್ಲಿ ಕಾರಣೀಭೂತರಾಗಿದ್ದಾರೆ ಎಂದರು.
ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ವಿವಿಯ ಪ್ರಭಾರಿ ಕುಲಪತಿಗಳಾದ ಪ್ರೊ.ಎಸ್.ಬಿ.ಡಾಣಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ, ಪಠ್ಯೇತರ ಚಟುವಟಿಕೆ, ಸಮಾಜಮುಖಿ ಕೆಲಸಗಳಲ್ಲಿಯೂ ತೊಡಗಿಕೊಳ್ಳಬೇಕು. ಶಿಕ್ಷಣವು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದ್ದು ವಿದ್ಯಾರ್ಥಿಗಳು ಸಮಾಜಕ್ಕೆ ಉತ್ತಮ ಪ್ರಜೆಯಾಗಬೇಕು ಎಂದು ಹೇಳಿದರು.
ಅಕ್ಕಮಹಾದೇವಿ ಮಹಿಳಾ ವಿವಿಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಅವರು ಅಭಿನಂದನಾ ನುಡಿಗಳನ್ನಾಡಿದರು. ಕೊಪ್ಪಳ ವಿವಿಯ ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶಕೆ., ಹಣಕಾಸು ಅಧಿಕಾರಿ ಅಮೀನಸಾಬ, ಡಾ.ಪ್ರವೀಣ್ ಪೊಲೀಸ್ ಪಾಟೀಲ, ಕೆ.ಚಂದ್ರು, ಗಂಗಾವತಿ ಪಿ.ಜಿ.ಸೆಂಟರ್ ನಿರ್ದೇಶಕ ಶಿವರಾಜ ಗುರಿಕಾರ್, ಮಾಧ್ಯಮ ಅಕಾಡೆಮಿ ಸದಸ್ಯ ಕೆ.ನಿಂಗಜ್ಜ, ಚಲನಚಿತ್ರ ಅಕಾಡೆಮಿಯ ಸದಸ್ಯೆ ಸಾವಿತ್ರಿ ಮುಜುಂದಾರ್ ಇತರರಿದ್ದರು.



ಮೊಬೈಲ್ ಗೀಳಿನಿಂದ ಯುವಜನತೆ ಭವಿಷ್ಯ ಹಾಳು

ಕುಷ್ಟಗಿ: ಜನಸಾಮಾನ್ಯರ ಬದುಕಿನಲ್ಲಿ ಬರುವ ನೋವು-ನಲಿವುಗಳು ಜಾನಪದಗಳ ಹೊರಹೊಮ್ಮಿ ತಲೆಮಾರುಗಳಿಂದ ತಲೆಮಾರಿಗೆ ಮುಂದುವರಿಯುತ್ತಿವೆ ಎಂದು ಕುಷ್ಟಗಿ ಸಿಪಿಐ ವಿಶ್ವನಾಥ ಹಿರೇಗೌಡ್ರ ಹೇಳಿದರು.
ಕುಷ್ಟಗಿಯ ಜನಜಾಗೃತಿ ಕಲಾರಂಗ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಇಲ್ಲಿನ ಬಿಜಿಎಸ್ ಪ್ಯಾರಾ ಮೆಡಿಕಲ್ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ 'ನೆಲ ಮೂಲ ಸಂಸ್ಕೃತಿ-ನಮ್ಮ ಜಾನಪದ' ಜಾನಪದ ಕಲಾ ಪ್ರಕಾರಗಳ ಪರಿಚಯ ಕರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಇಂದಿನ ಯುವಜನತೆ ಮೊಬೈಲ್ ಗೀಳಿನಿಂದ ತಮ್ಮ ಸುಂದರ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಯುವ ಸಮುದಾಯ ಒಣ ಭ್ರಮೆ, ಭ್ರಾಂತಿಗಳಿಗೆ ಒಳಗಾಗದೇ ಮುಂದಿನ ಜೀವನವನ್ನು ಸುಖಮಯವಾಗಿಸಿಕೊಳ್ಳಲು ಒಳ್ಳೆಯ ಗುರಿಗಳನ್ನು ಇಟ್ಟುಕೊಳ್ಳಬೇಕು. ಸಮಾಜದಲ್ಲಿ ನಡೆಯುವ ಅಹಿತಕರ ಘಟನೆಗಳ ಕುರಿತು ಪೊಲೀಸರಿಗೆ ಸಾರ್ವಜನಿಕರು ಮಾಹಿತಿ ನೀಡಬೇಕು ಎಂದರು.
ಜಾನಪದದಲ್ಲಿ ಲಾವಣಿ, ಗೀಗೀ ಪದಗಳು ಕುರಿತು ಉಪನ್ಯಾಸ ನೀಡಿದ ರಾಜ್ಯ ಜಾನಪದ ಅಕಾಡೆಮಿ ಸದಸ್ಯ ಡಾ.ಜೀವನಸಾಬ ಬಿನ್ನಾಳ, ನಮ್ಮ ಹಳ್ಳಿಗಳ ಸಂಸ್ಕೃತಿ ಗಟ್ಟಿಗೊಳ್ಳಬೇಕಾದರೆ ಮೂಲ ಜಾನಪದ ಗೀತೆಗಳಾದ ಕುಟ್ಟುವ ಪದ, ಬೀಸುವ ಪದ, ಕೋಲಾಟದ ಪದ, ಲಾವಣಿ, ಸೋಬಾನೆ ಹಾಡು ಇವುಗಳ ಮೂಲ ದಾಟಿ ಮತ್ತು ಶೈಲಿಗಳನ್ನು ಇಂದಿನ ಯುವ ಪೀಳಿಗೆ ಮಾಡಿಕೊಳ್ಳಬೇಕಾಗಿದೆ. ಇದರಿಂದ ನಮ್ಮ ಸಂಸ್ಕೃತಿ ಮತ್ತು ಭಾಷೆ ಗಟ್ಟಿಗೊಳ್ಳಲಿದೆ ಎಂದರು.
ಬಿಜಿಎಸ್ ಪ್ಯಾರಾ ಮೆಡಿಕಲ್ ಕಾಲೇಜು ಅಧ್ಯಕ್ಷ ಶ್ರೀಶೈಲ ವಾದಿ ಅಧ್ಯಕ್ಷತೆ ವಹಿಸಿದ್ದರು.
ಜನಜಾಗೃತಿ ಕಲಾರಂಗ ಸಂಸ್ಥೆ ಕುಷ್ಟಗಿ ಅಧ್ಯಕ್ಷ ಶರಣಪ್ಪ ವಡಿಗೇರಿ ಪ್ರಾಸ್ತಾವಿಕ ಮಾತನಾಡಿದರು.
ಗೌರವ/ಪ್ರಶಸ್ತಿ: ಕುಷ್ಟಗಿ ಸಿಪಿಐ ವಿಶ್ವನಾಥ ಹಿರೇಗೌಡ್ರ ಅವರಿಗೆ 'ಪ್ರೇರಕ ಚೇತನ' ಮತ್ತು ರಾಜ್ಯ ಜಾನಪದ ಅಕಾಡೆಮಿ ಸದಸ್ಯ ಡಾ.ಜೀವನಸಾಬ ಬಿನ್ನಾಳ ಇವರಿಗೆ 'ಜನಪದ ಚೇತನ' ಬಿರುದುಗಳನ್ನು ಸಂಸ್ಥೆಯಿಂದ ಪ್ರದಾನ ಮಾಡಿ ಸನ್ಮಾನಿಸಲಾಯಿತು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಾವಲಸಾಬ ಅತ್ತಾರ, ಮುದಕಪ್ಪ ಗಂಜ್ಯಾಳ, ನಿಂಗಪ್ಪ ಸೊಲ್ಲಾಪೂರ, ಮಲ್ಲಿಕಾರ್ಜುನ ಕುಲರ್ಣಿ ಮತ್ತು ಸಂಗಡಿಗರಿಂದ ಲಾವಣಿ, ಗೀಗೀ ಪದ ಕಾರ್ಯಕ್ರಮಗಳು ನಡೆದವು. ನಾಗರಾಳ ಗ್ರಾಮದ ಬಾಳಮ್ಮ ಯಲಬುರ್ತಿ ಹಾಗೂ ಸಂಗಡಿಗರಿಂದ ಸಂಪ್ರದಾಯದ ಪದಗಳು, ಶರಣಪ್ಪ ಬನ್ನಿಗೋಳ ಹಾಗೂ ಬಸವರಾಜ ಗಂಗನಾಳ ಹಾಗೂ ಸಂಗಡಿಗರಿಂದ ಬಯಲಾಟದ ಪದಗಳು ಕಾರ್ಯಕ್ರಮ ಪ್ರಸ್ತುತಪಡಿಸಲಾಯಿತು.
ಅಕ್ಕಮಹಾದೇವಿ ಪ್ರಾರ್ಥಿಸಿದರು ಉಪನ್ಯಾಸಕ ಕಿರಣ ಬಡಿಗೇರ ಸ್ವಾಗತಿಸಿದರು. ಚನ್ನಪ್ಪ ಭಾವಿಮನಿ ನಿರೂಪಿಸಿದರು. ಅನಿಲಕುಮಾರ ವಂದಿಸಿದರು.





ಬಳ್ಳಾರಿ: ಶಾಸಕ ನಾರಾ ಭರತ್ ರೆಡ್ಡಿ ಅವರು ಬುಧವಾರ ಬಳ್ಳಾರಿ ನಗರದ ಮೆಕ್ಕಾ ಮಸೀದಿಗೆ ಭೇಟಿ ನೀಡಿ, ಮಸೀದಿಯ ಅಭಿವೃದ್ಧಿ ಕೆಲಸಕ್ಕಾಗಿ 2.50 ಲಕ್ಷ ರೂ.ಗಳನ್ನು ವೈಯಕ್ತಿಕವಾಗಿ ದೇಣಿಗೆ ನೀಡಿದರು. ಮಹಾನಗರ ಪಾಲಿಕೆಯ ಸದಸ್ಯ ಕುಬೇರ, ವಾರ್ಡ್‌ನ ಮುಖಂಡರಾದ ಪರಶುರಾಮುಡು, ದೇವಿನಗರ ಹೊನ್ನೂರಪ್ಪ, ಹೊನ್ನಪ್ಪ, ಅರ್ಷದ್, ಸಾದಿಕ್ ಇತರರಿದ್ದರು.

ವಸತಿ ನಿಲಯಗಳ ನೋಂದಣಿಗೆ ಆದೇಶ

◆**ಬಳ್ಳಾರಿ:** ಜಿಲ್ಲೆಯಲ್ಲಿ 6 ರಿಂದ 18 ವರ್ಷದೊಳಗಿನ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸರ್ಕಾರಿ, ಸರ್ಕಾರೇತರ ಹಾಗೂ ಅನುದಾನಿತ ವಸತಿ ನಿಲಯಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಸೂಚನೆ ನೀಡಿದ್ದಾರೆ. '6ರಿಂದ 18 ವರ್ಷದೊಳಗಿನ ಮಕ್ಕಳಿಗಾಗಿ ವಿವಿಧ ಇಲಾಖೆಗಳಡಿ ಕಾರ್ಯನಿರ್ವಹಿಸುತ್ತಿರುವ ವಸತಿನಿಲಯಗಳಕಾರ್ಯವಿಧಾನಗಳಮಾರ್ಗಸೂಚಿಗಳು-2025' ಅನ್ನು ಜಾರಿಗೆ ತರಲು ಸರ್ಕಾರ ಆದೇಶಿಸಿದೆ. ಈ ಪ್ರಕಟಣೆ ಹೊರಡಿಸಿದ ದಿನದಿಂದ 2 ತಿಂಗಳೊಳಗೆ ಎಲ್ಲಾ ವಸತಿ ನಿಲಯಗಳು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಅವರು ತಿಳಿಸಿದ್ದಾರೆ. ಸರ್ಕಾರಿ ವಸತಿ ನಿಲಯಗಳು ಆಯಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಸರ್ಕಾರೇತರ ಮತ್ತು ಅನುದಾನಿತ ವಸತಿ ನಿಲಯಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಅರ್ಜಿ ಸಲ್ಲಿಸಬೇಕು. ಮಾರ್ಗಸೂಚಿ-2025 ರಲ್ಲಿ ನೀಡಲಾಗಿರುವ 'ನಮೂನೆ-1' ರಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ನಗರದ ಕಂಟೋನ್‌ಮೆಂಟ್‌ನ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.





ಸಿಂಧನೂರು: ಶಾಸಕ ಹಂಪನಗೌಡ ಬಾದರ್ಲಿ ಅವರು ಅನುದಾನದಲ್ಲಿ ತಾಲೂಕಿನ ಮುಳ್ಳೂರು ಇಜೆ ಗ್ರಾಮದಲ್ಲಿ 60 ಲಕ್ಷ ರೂಪಾಯಿ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಹಾಗೂ 30 ಲಕ್ಷ ರೂಪಾಯಿ ವೆಚ್ಚದಲ್ಲಿ ಈಶ್ವರ ದೇವಸ್ಥಾನದ ಸಮುದಾಯ ಭವನ ಕಾಮಗಾರಿಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬು ಗೌಡ ಅವರು ಭೂಮಿಪೂಜೆ ನೆರವೇರಿಸಿದರು.

ಕಿರುಸುದ್ದಿ

ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೇ 15ಕ್ಕೆ ಚುನಾವಣೆ

◆**ಕುರುಗೋಡು:** ಪಟ್ಟಣದ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮೇ 15ರಂದು ಚುನಾವಣೆ ನಡೆಸಲು ತಹಶಿಲ್ದಾರ್ ನರಸಪ್ಪ ಅಧಿಕೃತ ಆದೇಶ ಹೊರಡಿಸಿದ್ದಾರೆ. ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ, ವರ್ಗಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಿರುತ್ತದೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವ ಸಭೆ ಮೇ 15ರಂದು ಬೆಳಿಗ್ಗೆ 9 ಗಂಟೆಗೆ ಪುರಸಭೆ ಕಾರ್ಯಾಲಯದಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಬೆಳಿಗ್ಗೆ 9 ಗಂಟೆಯಿಂದ 11 ಗಂಟೆವರೆಗೆ ಸ್ವೀಕರಿಸಲಾಗುವುದು. ಬೆಳಿಗ್ಗೆ 11.15 ರಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಂದು ಬೆಳಿಗ್ಗೆ 11.30ಕ್ಕೆ ಅಭ್ಯರ್ಥಿ ನಾಮಪತ್ರ ವಾಪಾಸ್ ಪಡೆಯಬಹುದಾಗಿದೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರಿಗಿಂತ ಅಧಿಕ ಸದಸ್ಯರು ನಾಮ ಪತ್ರ ಸಲ್ಲಿಸಿದರೆ ಮಧ್ಯಾಹ್ನ 12 ಗಂಟೆಗೆ ಸದಸ್ಯರ ಸಭೆ ನಡೆಸಿ ಕೈ ಎತ್ತುವ ಮೂಲಕ ಕ್ರಮವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸಿ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮೇ 19ರಂದು ಪ್ರಗತಿ ಪರಿಶೀಲನಾ ಸಭೆ

◆**ಹೂವಿನಹಡಗಲಿ:** ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟು ಜನಾಂಗಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿವಿಧ ಯೋಜನೆಯಡಿ ಸರ್ಕಾರದ ಎಲ್ಲ ಇಲಾಖೆಗಳಿಗೆ ನೀಡಲಾಗಿರುವ ಅನುದಾನ ಸಮರ್ಪಕವಾಗಿ ವಿತರಣೆಯಾದ ಮತ್ತು ವಿಳಂಬವಾದ ಸೇರಿದಂತೆ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಮೇ 19ರಂದು ಬೆಳಗ್ಗೆ 11 ಗಂಟೆಗೆ ಜಿಪಂ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಬೆಂಗಳೂರು ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನ ಸಭೆ ಕರೆಯಲಾಗಿದೆ ಎಂದು ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆನಂದ ವೈ.ಡೊಳ್ಳಿನ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಮಾಣಿಕತೆ ಮೆರೆದ ನಿರ್ವಾಹಕ ಬಸವರಾಜ್



◆**ಕೊಟ್ಟೂರು:** ಕೊಟ್ಟೂರು-ಜಗಳೂರು ಮಾರ್ಗದಲ್ಲಿ ಸಂಚರಿಸುವ ಕೂಡ್ಲಿಗಿ ಡಿಪೋ ಕೆಕೆಆರ್‌ಟಿಸಿ ಬಸ್ ನಿರ್ವಾಹಕ ಎಂ.ಬಸವರಾಜ್ ಅವರು ಮಹಿಳೆಯೊಬ್ಬರು ಪ್ರಯಾಣದ ವೇಳೆ ಬಿಟ್ಟುಹೋಗಿದ್ದ ಪರ್ಸ್‌ನೊಂದಿಗೆ 10 ಗ್ರಾಂ, ಚಿನ್ನದ ಆಭರಣ, ಒಂದು ಸಾವಿರ ನಗದು ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ. ಕೊಟ್ಟೂರು ಮಾರ್ಗದಿಂದ ಬಸ್‌ನಲ್ಲಿ ಪ್ರಯಾಣಿಸುವಾಗ ಮೈಮರೆತು ಸೀಟಿನಲ್ಲಿ ಆಕಸ್ಮಿಕವಾಗಿ ಪರ್ಸ್‌ಅನ್ನು ಕೆಳಗಡೆ ಬಿಟ್ಟು ಉಜ್ಜಿನಿ ಗ್ರಾಮದಲ್ಲಿ ಇಳಿದಿದ್ದರು. ಕಂಡಕ್ಟರ್ ಅದನ್ನು ಕಂಡು ಅದರಲ್ಲಿನ ಚಿನ್ನದ ಆಭರಣ ಮತ್ತು 1000 ಹಣವಿರುವುದನ್ನು ಗಮನಿಸಿ ಜೋಪಾನದಿಂದ ಜಗಳೂರಿಗೆ ಆಗಮಿಸಿ ಮರಳಿ ಉಜ್ಜಿನಿ ಗ್ರಾಮಕ್ಕೆ ತೆರಳಿದ ವೇಳೆ ಪರ್ಸ್ ಕಳೆದುಕೊಂಡಿದ್ದ ಮಹಿಳೆಯನ್ನು ಗುರುತಿಸಿ ಅವರ ಆಭರಣ,ಹಣ ಒಪ್ಪಿಸಿದ್ದಾರೆ. ಇದನ್ನು ಗಮನಿಸಿದ ಸಾರ್ವಜನಿಕರು ಬಸ್ ಚಾಲಕ ಕೊಟ್ರೇಶ್, ನಿರ್ವಾಹಕ ಬಸವರಾಜ್ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಹಿಳೆಯರಿಂದ ಭಜನೆ



◆**ಕುರುಗೋಡು:** ತಾಲೂಕಿನ ಕಲ್ಲುಕಂಭ ಗ್ರಾಪಂನ ಶ್ರೀನಿವಾಸ ನಗರದಲ್ಲಿ ಮಹಿಳೆಯರಿಂದ ಶ್ರೀಆಂಜನೇಯ ಸ್ವಾಮಿ ವಾರ್ಷಿಕೋತ್ಸವ ಪ್ರಯುಕ್ತ ಮಹಿಳೆಯರಿಂದ ಮಂಗಳವಾರ ಭಜನೆ ಜರುಗಿತು. ಅಂದು ಬೆಳಿಗ್ಗೆ ದೇವಸ್ಥಾನ ಆವರಣದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದ್ದು, ಸ್ಥಳೀಯ ಮಹಿಳೆಯರು ಸೇರಿದಂತೆ ಬೆಳಗ್ಗೆಯಿಂದ ಸಂಜೆ ತನಕ ಭಜನೆ, ಹನುಮಶೋತ್ರ, ಪಠಣ, ಹರಕೆ ಸಲ್ಲಿಲಾಗಿತದ್ದು, ಸಂಜೆ ಪಲ್ಲಕೋತ್ಸವ, ಆಂಜನೇಯ ಸ್ವಾಮಿ ಅಭಿಷೇಖ, ವಿವಿಧ ಹೂ ಹಾರ ಅಲಂಕಾರ ಪೂಜೆ ಮಾಡಲಾಗಿತು. ಈ ಭಕ್ತರಿಗೆ ಪ್ರಸಾದ ಜರುಗಿತು. ಈ ವೇಳೆ ಲಕ್ಷ್ಮಿಪುರ, ಯಲ್ಲಾಪುರ, ಕಲ್ಲುಕಂಭ, ವಿವಿಧ ಕ್ಯಾಂಪಿನ ಭಕ್ತರು ಭಾಗವಹಿಸಿದ್ದರು.

ಎಂಟಿಪಿ ಅರಿವು ಮೂಡಿಸುವ ಕಾರ್ಯಾಗಾರ | ಜಿಪಂ ಸಿಇಒ ಎಚ್ಚರಿಕೆ

ಕಾಯ್ದೆ ಉಲ್ಲಂಘನೆಯಾದರೆ ಶಿಕ್ಷೆ

◆**ಯಾದಗಿರಿ:** ಖಾಸಗಿ ಆಸ್ಪತ್ರೆಗಳಲ್ಲಿ, 24 ವಾರಗಳಿಗಿಂತಹೆಚ್ಚು ದಿನತುಂಬಿರುವ ಗರ್ಭಿಣಿಯರ ಗರ್ಭಪಾತ ಮಾಡಿಸಲು ಕಡ್ಡಾಯವಾಗಿ ಜಿಲ್ಲೆಯ ವೈದ್ಯಕೀಯ ಮಂಡಳಿಯಿಂದ ಅನುಮತಿ ಪಡೆಯಬೇಕು ಎಂದು ಜಿಪಂ ಸಿಇಒ ಲವೀಶ್ ಒರಡಿಯಾ ಸೂಚಿಸಿದರು.

ನಗರದ ಯಿಮ್ಸ್ ಕಾಲೇಜು ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಮಿಷನ್, ಯಿಮ್ಸ್ ಯಾದಗಿರಿ ಹಾಗೂ ಐಪಿಎಎಸ್ ಬೆಂಗಳೂರು ತಾಂತ್ರಿಕ ಸಂಸ್ಥೆ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎಂಟಿಪಿ ಕಾಯ್ದೆ-2021 ಕುರಿತು ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಂಟಿಪಿ ಕಾಯ್ದೆ -2021ರ ಉಲ್ಲಂಘನೆಯಾದಲ್ಲಿ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಸಂಬಂಧಪಟ್ಟ ಆಸ್ಪತ್ರೆಯ ನೋಂದಣಿ ಶಾಶ್ವತವಾಗಿ ರದ್ದು ಪಡಿಸಲಾಗುತ್ತದೆ. ಖಾಸಗಿ ಆಸ್ಪತ್ರೆಯವರು ಯಾವುದೇ ಕಾರಣಕ್ಕೂ ಭ್ರೂಣ ಲಿಂಗ ಪತ್ತೆ ಕಾಯ್ದೆ ಉಲಂಘನೆ ಮಾಡುವಂತಿಲ್ಲ, ಉಲ್ಲಂಘನೆ ಮಾಡಿದಲ್ಲಿ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಖಾಸಗಿ ಆಸ್ಪತ್ರೆಯವರು ಹಾಗೂ ಸರ್ಕಾರಿ ಆಸ್ಪತ್ರೆಯ ವೈದ್ಯರು ಜಿಲ್ಲೆಯಲ್ಲಿ ಸಂಭವಿಸುವ ಶಿಶು ಮರಣ ಮತ್ತು ನಿರ್ಜೀವ ಜನನಗಳ ಗರ್ಭಪಾತದ ಮಾಹಿತಿಯನ್ನು ಕಡ್ಡಾಯವಾಗಿ ಸಂಭಂದಪಟ್ಟ ಅಧಿಕಾರಿಗಳಿಗೆ ಸಲ್ಲಿಸಬೇಕು. ಈ ವರದಿಯಿಂದ ಶಿಶು ಮರಣ ತಾಯಿ ಮರಣ ತಡೆಗಟ್ಟಲು ಎಲ್ಲ ಹಂತಗಳಲ್ಲಿ ಕ್ರಮವಹಿಸಲು ಮೂಲ ಸೌಕರ್ಯ ನೀಡಲು ಅನೂಕೂಲವಾಗುತ್ತದೆ ಎಂದರು.



> **ತಾಯಿ ಮರಣ ಶಿಶು ಮರಣ, ನಿರ್ಜೀವ ಜನನಗಳ ಗರ್ಭಪಾತದ ವರದಿಯನ್ನು ನೀಡದೇ ಇರುವ ಖಾಸಗಿ, ಸರ್ಕಾರಿ ಆಸ್ಪತ್ರೆಗಳ ಮುಖ್ಯಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು.**
> ■ ಲವೀಶ್ ಒರಡಿಯಾ, ಜಿಪಂ ಸಿಇಒ

ಈ ತರಬೇತಿಯ ಸಂಪೂರ್ಣ ಸದುಪಯೋಗ ಪಡಿಸಿಕೊಂಡು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡಲು ಎಲ್ಲ ವೈದ್ಯಾಧಿಕಾರಿ ರವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿರಿ ಡಾ.ಮಹೇಶ ಬಿರಾದಾರ ಮಾತನಾಡಿ, ವೈದ್ಯಕೀಯ ಗರ್ಭಪಾತ ಕಾಯ್ದೆ ಕುರಿತು ಜಿಲ್ಲೆಯ ಖಾಸಗಿ ಮತ್ತು ಸರ್ಕಾರಿ ವೈದ್ಯರಿಗೆ ತರಬೇತಿ ನೀಡಲಾಗುತ್ತಿದ್ದು, ತರಬೇತಿಯಲ್ಲಿ ನೀಡಲಾಗುವ ವಿಷಯಗಳನ್ನು ತಿಳಿದುಕೊಂಡು ತರಬೇತಿ ಯಶಸ್ವಿಗೊಳಿಸಿ ಕಾಯ್ದೆ ಉಲಂಘನೆಯಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಯಿಮ್ಸ್ ನಿರ್ದೇಶಕ ಡಾ.ಸಂದೀಪ ಪಾಟೀಲ, ಅಧಿಕಾರಿಗಳಾದ ಡಾ.ಮಲಪ್ಪ ಕೆ., ಡಾ.ಉಷಾ, ಡಾ.ಶಿವುಕುಮಾರ, ಪ್ರಾಧ್ಯಾಪಕರಾದ ಡಾ.ಪೂಜಾ, ದೊಡ್ಡಣ್ಣ ಗೌಡ, ಲಕ್ಷ್ಮೀ ಮುಂಡಾಸ, ಮನೋಹರ ಪಾಟೀಲ್, ಶಂಕರಾನಂದ, ಖಾಸಗಿ ಸರ್ಕಾರಿ ವೈದ್ಯರು, ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು. ತುಳಸಿರಾಮ ಚವಾಣ ವಂದಿಸಿದರು.

ವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡಿದ ಪದವಿ ವಿದ್ಯಾರ್ಥಿಗಳು

◆**ಕುರುಗೋಡು:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಿಎಸ್ಸಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಕೈಗಾರಿಕಾ ಹಾಗೂ ವೈಜ್ಞಾನಿಕ ಜ್ಞಾನ ವೃದ್ಧಿಗಾಗಿ ಕುಡಿತಿನಿಯಲ್ಲಿರುವ ಕೆಪಿಸಿಎಲ್ ತಾಪ ವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡಿದರು.

ಬಿಎಸ್ಸಿ ವಿಭಾಗದ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, ತಾಪ ವಿದ್ಯುತ್ ಸ್ಥಾವರದ ವಿವಿಧ ಘಟಕಗಳ ಕಾರ್ಯವೈಖರಿಯನ್ನು ನೇರವಾಗಿ ವೀಕ್ಷಿಸಿದರು. ಕಲ್ಲಿದ್ದಲಿನಿಂದ ವಿದ್ಯುತ್ ಉತ್ಪಾದನೆಮಾಡುವ ವಿಧಾನ, ಬಾಯ್ಲರ್, ಟರ್ಬೈನ್, ಜನರೇಟರ್, ಕೂಲಿಂಗ್ ವ್ಯವಸ್ಥೆ, ವಿದ್ಯುತ್ ಪ್ರಸರಣ ಹಾಗೂ ಪರಿಸರ ಸಂರಕ್ಷಣೆ ಕ್ರಮಗಳ ಕುರಿತು ತಾಂತ್ರಿಕ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ವಿವರವಾದ ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ಕೈಗಾರಿಕಾ ಕ್ಷೇತ್ರದ ನೈಜ ಅನುಭವ ಪಡೆದು, ಪಠ್ಯ ವಿಷಯಗಳಿಗೆ ಸಂಬಂಧಿಸಿದ ಪ್ರಾಯೋಗಿಕ ಜ್ಞಾನವನ್ನು ಅರಿತುಕೊಂಡರು. ವಿಶೇಷವಾಗಿ ವಿದ್ಯುತ್ ಉತ್ಪಾದನೆ ಪ್ರಕ್ರಿಯೆ, ಸುರಕ್ಷತಾ ಕ್ರಮಗಳು ಹಾಗೂ ಆಧುನಿಕ ತಂತ್ರಜ್ಞಾನ ಬಳಕೆಯ ಬಗ್ಗೆ ತಿಳಿದುಕೊಂಡು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿತು. ಇಂಡಸ್ಟ್ರಿಯಲ್ ಭೇಟಿಯನ್ನು ಭೌತಶಾಸ್ತ್ರ ವಿಭಾಗದ ರುದ್ರಮುನಿ ಶಾಸ್ತ್ರಿ ಯು.ಎಂ. ಅವರು ಆಯೋಜನೆ ಮಾಡಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಶಾಂತಲಾ ಮಾತನಾಡಿ, ಪಾಠದ ಜೊತೆಗೆ ಪ್ರಾತ್ಯಕ್ಷಿಕೆ ನೀಡುವುದರಿಂದ ಮಕ್ಕಳಲ್ಲಿ ಪರಿಣಾತ್ಮಕ ಶಿಕ್ಷಣ ನೀಡಲು ಸಹಕಾರಿಯಾಗಿದೆ ಎಂದರು.

ಇಂತಹ ಕೈಗಾರಿಕಾ ಭೇಟಿಗಳು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಕಾಲೇಜಿನ ಉಪನ್ಯಾಸಕ ಡಾ.ಚನ್ನ ಬಸವಯ್ಯ, ಡಾ.ಶಶಿಕಾಂತ್, ಡಾ.ಪಂಪನಗೌಡ, ಮಧುಸೂದನ್, ತಿಪ್ಪೇರುದ್ರ, ಮಂಜುನಾಥ್ ಸರ್, ಪುಷ್ಪ, ತಿಪ್ಪೇಶ್, ಮೌಲ ಹುಸೇನ್, ಭಂಗಿ ಪೂಜಾರಿ, ಗರ್ಜಪ್ಪ ಹಾಗೂ ಸಿಬ್ಬಂದಿ ಸದಸ್ಯರಿದ್ದರು. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



ನೀಟ್ ಪೇಪರ್ ಸೋರಿಕೆ ಖಂಡಿಸಿ ಪ್ರತಿಭಟನೆ

◆**ಕಲಬುರಗಿ:** ನೀಟ್ ಪರೀಕ್ಷೆಯ ಪೇಪರ್ ಸೋರಿಕೆ ಪ್ರಕರಣವನ್ನು ಖಂಡಿಸಿ ಯುವ ಕಾಂಗ್ರೆಸ್ ಕಲಬುರಗಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶಕೀಲ ಅಹ್ಮದ್ ಸರಡಗಿ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಟಯರ್‌ಗೆ ಬೆಂಕಿ ಹಚ್ಚಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಭಾರತ ರಾಷ್ಟ್ರೀಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಶ್ರೀನಿವಾಸ್ ರಾಥೋಡ್ ಮಾತನಾಡಿ,ನೀಟ್ ಪರೀಕ್ಷೆಯ ಪೇಪರ್ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಆತಂಕಕ್ಕೆ ಸಿಲುಕಿದೆ. ಕೇಂದ್ರ ಸರ್ಕಾರ ಹಾಗೂ ಪರೀಕ್ಷಾ ವ್ಯವಸ್ಥೆಯ ವೈಫಲ್ಯದಿಂದ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ. ಪಾರದರ್ಶಕ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಶಕೀಲ ಅಹ್ಮದ್ ಸರಡಗಿ, ದೇಶದ ಯುವಕರ ಕನಸುಗಳೊಂದಿಗೆ ಆಟವಾಡುವಂತಹ ಘಟನೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ, ವಿದ್ಯಾರ್ಥಿಗಳ ಶ್ರಮಕ್ಕೆ ನ್ಯಾಯ ದೊರಕಬೇಕು.ನೀಟ್ ಪರೀಕ್ಷಾ ಅವ್ಯವಸ್ಥೆ ಕುರಿತು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ಯುವ ಕಾಂಗ್ರೆಸ್ ಮುಖಂಡರಾದ ಶಿವಾನಂದ್ ಹೊನಗುಂಟಿ, ಈರಣ್ಣ ಪಾಟೀಲ್ ಜಳಕಿ, ಕಾರ್ತಿಕ್ ನಾಟೀಕರ್, ಫಾರೂಕ್ ಪಟೇಲ್ ಮುದುಬಾಳ, ವಿಘ್ನೇಶ್ವರ ಟೈಗರ್, ಪರಶುರಾಮ್ ನಾಟೀಕರ್, ಅಣವೀರಯ್ಯ ಮಠಪತಿ, ಚಂದ್ರು ಹಡಪದ್, ರಾಜು ಮಾಳಗಿ, ಪ್ರದೀಪ್ ದೊಣ್ಣೂರ್, ಅಸ್ಲಾಂ ಸಿಂದಗಿ, ಅಜ್ಜಾರ್ ಬಾದಾಲ್, ಎಸ್.ಕೆ. ಶೋಯಬ್, ಪ್ರಜ್ಞಾನಂದ ಸಂಗೊಳ್ಳಿ, ಅಸಿಮ್ ಪಟೇಲ, ಆಮೆರ್ ಮರ್ಚಂಟ್, ಖುರಂ ಕಲ್ಯಾಣಿ ಸೇರಿದಂತೆ ನೂರಾರು ಯುವ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.



ಪ್ರಧಾನಿ ಮೋದಿ ತೀರ್ಮಾನ ಸ್ವಾಗತಿಸೋಣ: ತಾಯಣ್ಣ

◆**ಬಳ್ಳಾರಿ:** ದೇಶದ ಜನರ, ದೇಶದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಚಿನ್ನ ಖರೀದಿ ಕುರಿತು ನೀಡಿದ ಹೇಳಿಕೆಗೆ, ಕಾಂಗ್ರೆಸ್‌ನವರು ರಾಜಕೀಯ ಚಟಕ್ಕಾಗಿ ಮೋದಿ ಅವರ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ, ಮೋದಿ ಅವರು ಏನೇ ತೀರ್ಮಾನ ಕೈಗೊಂಡರೂ ಅದು ದೇಶದ ಜನರ, ಅಭಿವೃದ್ಧಿ ಪೂರಕವಾಗಿಯೇ ಇರಲಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ತಿಳಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿದ ಅವರು, ಪ್ರಧಾನ ಮಂತ್ರಿ ಮೋದಿ ಅವರು ತೆಗೆದುಕೊಂಡ ಯಾವುದೇ ನಿರ್ಧಾರ, ಅದು ದೇಶದ ಅಭಿವೃದ್ಧಿಗಾಗಿ ಇರಲಿದೆ. ದೇಶದ ಜನರ ಸುಭಿಕ್ಷೆಗಾಗಿ ಇರಲಿದೆ, ಇದರಲ್ಲಿ ಅನುಮಾನವೇ ಬೇಡ, ಮೋದಿ ಅವರು ತೆಗೆದುಕೊಂಡ ತೀರ್ಮಾನವನ್ನು ನಾವೆಲ್ಲರೂ ಸ್ವಾಗತಿಸಬೇಕು, ಗೌರವಿಸಬೇಕು. ಈ ಹಿಂದೆ ಕಳೆದ 1967ರಲ್ಲಿ ಇಂದಿರಾ ಗಾಂಧಿ ಅವರು, ಚಿನ್ನ ಖರೀದಿ ಅದಷ್ಟು ಕೈಬಿಡಿ, ರಾಷ್ಟ್ರೀಯ ಶಿಸ್ತು ಎಂದು ಹೇಳಿಕೆ ನೀಡಿ ಮನವಿ ಮಾಡಿದ್ದರು ಎಂಬುದನ್ನು ಕೈನಾಯಕರು ಮರೆಯಕೂಡದು. ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ ಮಾಡಲು ಆದ್ಯತೆ ನೀಡಿ, ಒಂದು ವರ್ಷದ ವರೆಗೆ ಆದಷ್ಟು ಚಿನ್ನ, ಖರೀದಿಸುವುದನ್ನು ನಿಲ್ಲಿಸಿ, ಪೆಟ್ರೋಲ್, ಡೀಸೆಲ್, ಬಳಕೆಯನ್ನು ಕಡಿಮೆ ಮಾಡಿ, ಮೆಟ್ರೋ, ಸಾರ್ವಜನಿಕ ಸಾರಿಗೆ ಬಳಕೆ ಮಾಡಿ, ಅಡುಗೆ ಎಣ್ಣೆಯ ಬಳಕೆ ಕಡಿಮೆ ಮಾಡಿ, ರಾಸಾಯನಿಕ ರಸಗೊಬ್ಬರ ಮೇಲಿನ ಅವಲಂಬನೆ ಕಡಿಮೆ ಮಾಡಿ, ನೈಸರ್ಗಿಕ ಕೃಷಿಯತ್ತ ಮುನ್ನಡೆಯರಿ, ವಿದೇಶಿ ಬ್ರ್ಯಾಂಡ್ ಉತ್ಪನ್ನಗಳನ್ನು ಕಡಿಮೆ ಮಾಡಿ, ಸ್ವದೇಶಿ ವಸ್ತುಗಳನ್ನು ಹೆಚ್ಚು ಬಳಸಿ, ಕನಿಷ್ಠ 1 ವರ್ಷ ವಿದೇಶಿ ಪ್ರವಾಸವನ್ನು ತಪ್ಪಿಸಿ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮನವಿ ಮಾಡಿದ್ದಾರೆ, ಎಲ್ಲರೂ ದೇಶಕ್ಕಾಗಿ, ದೇಶದ ಜನರಿಗಾಗಿ ಪಾಲಿಸಬೇಕು, ಕಾಂಗ್ರೆಸ್ ನವರ ರಾಜಕೀಯ ಚಟದ ಹೇಳಿಕೆಗೆ ಕಿವಿಕೊಡಬಾರದು ಎಂದು ಮನವಿ ಮಾಡಿದ್ದಾರೆ.

ನಿಸ್ವಾರ್ಥ ಸೇವೆಯೇ ನಿಜವಾದ ಮಾನವೀಯತೆ: ದೊಡ್ಮನಿ

◆**ವಿಜಯನಗರ:** ರೆಡ್ ಕ್ರಾಸ್ ಸಂಸ್ಥೆಯು ಕೇವಲ ರಕ್ತದಾನಕ್ಕೆ ಸೀಮಿತವಾಗದೇ, ಜಗತ್ತಿನಾದ್ಯಂತ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುವ ಮೂಲಕ ಮಾನವೀಯತೆಯ ದಾರಿದೀಪವಾಗಿದೆ ಎಂದು ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಮನಿ ಹೇಳಿದರು.

ಕಮಲಾಪುರದ ಹಂಪಿ ಶ್ರೀವಿರೂಪಾಕ್ಷೇಶ್ವರ ಪದವಿ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ವಿಶ್ವ ರೆಡ್ ಕ್ರಾಸ್ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯಾಂತ್ರಿಕ ಜೀವನದಲ್ಲಿ ಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿವೆ. ಕೇವಲ ಪದವಿ ಪಡೆಯುವುದು ಶಿಕ್ಷಣದ ಗುರಿಯಾಗಬಾರದು. ರೆಡ್ ಕ್ರಾಸ್ ಸಂಸ್ಥೆಯ ಸ್ಥಾಪಕ ಹೆನ್ರಿ ಡ್ಯೂನಾಂಟ್ ಅವರ ಆಶಯದಂತೆ ವಿದ್ಯಾರ್ಥಿಗಳು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಕಾಲೇಜುಗಳಲ್ಲಿ ಕಲಿಯುವ ಮಾನವೀಯ ಮೌಲ್ಯಗಳು ಬದುಕಿನ ಪಾಠವಾಗಲಿ ಎಂದು ಹೇಳಿದರು.

ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸ್ವಪ್ನಾ ಕಟ್ಟಿ ಮಾತನಾಡಿ, ಒಬ್ಬರು ನೀಡುವ ರಕ್ತ ನಾಲ್ಕು ಜೀವಗಳನ್ನು ಉಳಿಸಬಲ್ಲದು. ಆರೋಗ್ಯವಂತ ವ್ಯಕ್ತಿ ತನ್ನ 60 ವರ್ಷದ ಜೀವಿತಾವಧಿಯಲ್ಲಿ 200 ಬಾರಿ ರಕ್ತದಾನ ಮಾಡಬಹುದು. ಇದರಿಂದ ರೋಗಿಗಳ ಪ್ರಾಣ ಉಳಿಯುವುದು ಮಾತ್ರವಲ್ಲದೆ, ರಕ್ತದಾನಿಯ ಆರೋಗ್ಯವೂ ಸುಧಾರಿಸುತ್ತದೆ ಎಂದರು.



ರೆಡ್ ಕ್ರಾಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಖಾ ಪ್ರಕಾಶ್, ಎಂ.ಸಿ. ಸದಸ್ಯೆ ಅನ್ನಪೂರ್ಣ ಸದಾಶಿವ, ಕಾಲೇಜಿನ ಪ್ರಾಚಾರ್ಯ ಬಸವರಾಜ್ ಎಮ್ಮಿಗನೂರು, ಸಾಹಿತಿ ಸೋ.ದೋ.ವಿರುಪಾಕ್ಷಗೌಡ, ಎನ್‌ಎಸ್‌ಎಸ್ ಮುಖ್ಯಸ್ಥೆ ಕೆ. ವೀಣಾ, ಉಪನ್ಯಾಸಕಿ ಡಾ.ಉಮಾ ಉಪಸ್ಥಿತರಿದ್ದರು.

ಆಶಾ ಕಾರ್ಯಕರ್ತೆಯರಿಗೆ ತರಬೇತಿ

◆**ಸುರಪುರ:** ಆಶಾಕಾರ್ಯಕರ್ತೆಯರಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಾಗಾರವನ್ನು ತಾಲೂಕಿನ ಪೇಠ ಅಮ್ಮಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಯಿತು.

ಈ ವೇಳೆ ಎಂ.ಎಂ.ರಾಯಲ್ ಮಾತನಾಡಿ, ವಿಶಿಷ್ಟಚೇತನರನ್ನು ಗುರುತಿಸಿ ಅವರಿಗೆ ಅವಶ್ಯಕತೆ ಇರುವ ಸೇವೆಗಳನ್ನು ಒದಗಿಸಿಕೊಡಬೇಕೆಂದು ಹೇಳಿದರು. ನಾಗರಾಜ್, ಆಶಾ ಕಾರ್ಯಕರ್ತೆಯರೂ ನೇರವಾಗಿ ವಿಕಲಚೇತನ ಮಕ್ಕಳ ಜೊತೆ ಸಂಪರ್ಕ ಇರುವುದರಿಂದ ಎಪಿಡಿ ಸಂಸ್ಥೆಯ ಸಿಬ್ಬಂದಿ ಜೊತೆ ಸಹಕಾರದಿಂದ ಕೆಲಸವನ್ನು ನಿರ್ವಹಿಸಬೇಕು ಎಂದು ಹೇಳಿದರು.

ಗಿರೀಶ್ ಕುಲಕರ್ಣಿ ತಾಲೂಕ ಸಂಯೋಜಕರು, ಸುರಪುರ ಇವರು ಎಪಿಡಿ ಸಂಸ್ಥೆಯ ಗುರಿ, ಉದ್ದೇಶ ಮತ್ತು ತರಬೇತಿಯ ಪ್ರಾಮುಖ್ಯತೆ ಬಗ್ಗೆ ಮಾಹಿತಿ ನೀಡಿದರು.

ತರಬೇತುದಾರರಾದ ಕುಮಾರಿ ವೈಷ್ಣವಿ ಅವರು ಅಂಗವಿಕಲತೆ ವಿಧಗಳು, ಮಗುವಿನ ಬೆಳವಣಿಗೆ ಹಂತಗಳು, ಗರ್ಭಿಣಿಯರು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಕುರಿತು ತಿಳಿದರು. ಮಾಂತೇಶ್, ಲಕ್ಷ್ಮೀ, ಹಣಮಂತ್ರಾಯ ಹಾಗೂ ಆಸ್ಪತ್ರೆಯ ಸಿಬ್ಬಂದಿ ಇದ್ದರು.



ಮಕ್ಕಳು ಕೌಶಲ ವೃದ್ಧಿಸಿಕೊಳ್ಳಲಿ: ಸವಿತಾ

◆**ಬಳ್ಳಾರಿ:** ಮಕ್ಕಳು ತಾವು ಕಲಿತ ಕಲೆಗಳನ್ನು ಮರೆಯದೆ, ವೈಯಕ್ತಿಕವಾಗಿ ನಿರಂತರವಾಗಿ ಅಭ್ಯಾಸ ಮಾಡುವ ಮೂಲಕ ತಮ್ಮ ಕೌಶಲಗಳನ್ನು ವೃದ್ಧಿಸಿಕೊಳ್ಳಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಸವಿತಾ ಸಿ. ಹೇಳಿದರು.



ನಗರದ ಪಾರ್ವತಿ ನಗರದ 2ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಕನ್ನಡ ಮಾಧ್ಯಮ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಶಾಲಾ ಶಿಕ್ಷಣ ಇಲಾಖೆ ಆಶ್ರಯದಲ್ಲಿ 5 ರಿಂದ 16 ವರ್ಷದ ಮಕ್ಕಳಿಗಾಗಿ ಆಯೋಜಿಸಿದ್ದ 15 ದಿನಗಳ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಮೂಹ ಸಂಗೀತ, ಕಸದಿಂದ ರಸ, ಕರಾಟೆ, ಯೋಗ ಇತ್ಯಾದಿಗಳ 'ಬೇಸಿಗೆ ಶಿಬಿರ'ದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳು ಶಿಬಿರದಲ್ಲಿ ಕಳೆದ 15 ದಿನಗಳ ಕಾಲ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಪಡೆದ ತರಬೇತಿಯನ್ನು ಕೇವಲ ಶಿಬಿರಕ್ಕೆ ಸೀಮಿತಗೊಳಿಸಬಾರದು. ಬದಲಾಗಿ ನಿರಂತರ ಅಭ್ಯಸಿಸುತ್ತಿರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ತ್ರಿವೇಣಿ ಪತ್ತಾರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂತಹ ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹಾಕಲು ಉತ್ತಮ ವೇದಿಕೆಯಾಗಿವೆ. ಇಲ್ಲಿ ಕಲಿತ ವಿಷಯಗಳು ಮುಂದಿನ ದಿನಗಳಲ್ಲಿ ಶಾಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಆತ್ಮವಿಶ್ವಾಸ ನೀಡುತ್ತವೆ ಎಂದು ತಿಳಿಸಿದರು.

ಶಿಬಿರದ ಅವಧಿಯಲ್ಲಿ ಮಕ್ಕಳು ಕಲಿತ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಂಗೀತ, ಯೋಗ ಹಾಗೂ ಕರಾಟೆ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ಶಿಬಿರದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಬೇಸಿಗೆ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಿದ ಮಲ್ಲಿಕಾರ್ಜುನ (ಚಿತ್ರಕಲೆ/ಕರಕುಶಲೆ), ಕವಿತಾ (ಸಂಗೀತ), ನಾಗರಾಜ ಕೆ.(ಚದುರಂಗ), ಪ್ರಕಾಶ್ (ಯೋಗ) ಹಾಗೂ ಮನೋಜ್ (ಕರಾಟೆ) ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಎಳೆನಾಗಪ್ಪ, ಶಾಲಾ ಶಿಕ್ಷಣ ಇಲಾಖೆಯ ಕೊಟ್ರೇಶ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರಾದ ವೆಂಕಟೇಶ್, ಎಫ್.ಗೌಸೀಯ, ಶಾಶಿಬಕಾ ಜಿಲ್ಲಾ ವ್ಯವಸ್ಥಾಪಕ ಜಗನ್ನಾಥ ಕೆ. ಉಪಸ್ಥಿತರಿದ್ದರು.

ಜನರ ಸಮಸ್ಯೆ ಆಲಿಸಿದ ಶಾಸಕ

◆**ಬಳ್ಳಾರಿ:** ಮೂಲಭೂತ ಸೌಕರ್ಯ ಕಲ್ಪಿಸಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಜನರಿಗೆ ಭರವಸೆ ನೀಡಿ ಕೈತೊಳೆದುಕೊಂಡರೆ ಸುಮ್ಮನಿರೋಲ್ಲ ಎಂದು ಶಾಸಕ ನಾರಾ ಭರತ್ ರೆಡ್ಡಿ ಅವರು ಖಡಕ್ ಸೂಚನೆ ನೀಡಿದರು.

ಬುಧವಾರ ಬಳ್ಳಾರಿಯ 21ನೇ ವಾರ್ಡ್‌ನ ಸಿದ್ಧಾರ್ಥ ನಗರದ ಕಾಲುವೆ ಬಳಿ ಇರುವ ಜನ ವಸತಿ ಪ್ರದೇಶಕ್ಕೆ ಭೇಟಿ ನೀಡಿ, ಜನರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

ರಸ್ತೆ, ಕುಡಿಯುವ ನೀರಿನ ಸಮಸ್ಯೆ, ಕಂಬಗಳಿಗೆ ವಿದ್ಯುತ್ ಸಂಪರ್ಕ, ಬೀದಿದೀಪ, ನೈರ್ಮಲ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲು ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಮುಖಂಡರಾದ ಚಾನಾಳ್ ಶೇಖರ್, ಪಂಪಯ್ಯ ಹಿರೇಮಠ್, ಸೋಮಣ್ಣ, ಪರಶುರಾಮು, ವಿಜಯಲಕ್ಷ್ಮೀ, ಶೇಖರ್, ಶಾಮ್, ವಾಣಿ,ಪಂಪಣ್ಣ,ಪರುಶುರಾಮುಡು, ಹೊನ್ನಪ್ಪ, ಅಧಿಕಾರಿಗಳಾದ ವೀರೇಶ್, ಶಿವರಾಜ್ ಸೇರಿದಂತೆ ಇತರರಿದ್ದರು.

